ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತಕ್ಕೆ ದಾಖಲೆ ಅಂತರದ ಜಯ

ಮುಲ್ಲನ್‌ಪುರದಲ್ಲಿ ನಡೆದ ಆಫ್ಘನ್ ವಿರುದ್ಧದ ಏಕೈಕ ಟೆಸ್ಟ್‌ನಲ್ಲಿ ಭಾರತ ಇನಿಂಗ್ಸ್ ಮತ್ತು 300 ರನ್ ಗಳಿಂದ ಗೆಲುವು ಸಾಧಿಸಿದೆ. ಇದು ಟೀಮ್ ಇಂಡಿಯಾದ ಅತೀ ದೊಡ್ಡ ಅಂತರದ ಟೆಸ್ಟ್ ಗೆಲುವಾಗಿದ್ದು, ಸ್ಪಿನ್ನರ್ ಮಾನವ್ ಸುತಾರ್ ತನ್ನ ಚೊಚ್ಚಲ ಪಂದ್ಯದಲ್ಲಿ 7 ವಿಕೆಟ್ ಪಡೆದು ತನ್ನ ಸಾಮರ್ಥ್ಯ ಮೆರೆದಿದ್ದಾರೆ.

ಸೊಂಪಾದ ಪುಟಗಳು

ಒಕ್ಕಲಿಗರ ಅಸ್ಮಿತೆ ಕದಲಿಸಲು ಕೈ ಪ್ರಯತ್ನ?
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ನೈತಿಕತೆ ಎನ್ನುವುದು ಬೇರೆಯವರಿಗೆ ನೀತಿಪಾಠವಾದರೆ ಸಾಕೆ?
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ನೀವು ಜೀವನದಲ್ಲಿ ತೆರೆದ ಮನಸ್ಸಿನಿಂದ ಹೋಗದಿದ್ದರೆ, ಅನೇಕ ಕಡೆ ಮುಚ್ಚಿದ ಬಾಗಿಲುಗಳನ್ನು ನೋಡಬೇಕಾಗಬಹುದು. ಮುಂದೇನಾಗಬಹುದು ಎಂಬುದು ಬೇರೆ. ಆದರೆ ಯಾವುದೇ ಸನ್ನಿವೇಶವನ್ನಾದರೂ ಎದುರಿಸಲು ಸಿದ್ಧರಿರಬೇಕು.

ವಕ್ರತುಂಡೋಕ್ತಿ

ಲೈಕ್ ಕೊಡದ, ಕಾಮೆಂಟ್ ಹಾಗೂ ಶೇರ್ ಮಾಡದಿರುವುದನ್ನು ವಿಂಡೋ ಶಾಪಿಂಗ್' ಎನ್ನಬಹುದು.

ಸುನೀಲ್ ಕನುಗೋಳು ಸಿಎಂ ಮುಖ್ಯ ಸಲಹೆಗಾರ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮುಖ್ಯ ಸಲಹೆಗಾರರನ್ನಾಗಿ ಸುನೀಲ್ ಕನುಗೋಳು ಅವರನ್ನು ನೇಮಿಸಲಾಗಿದೆ. ಸುನೀಲ್ ಕನುಗೋಳು ಅವರಿಗೆ ಸಂಪುಟ ದರ್ಜೆಯ ಸಚಿವರ ಸ್ಥಾನಮಾನ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಮೂರು ಬಾರಿ ನನಗೆ ಸಿಎಂ ಸ್ಥಾನ ಕೈ ತಪ್ಪಿದೆ – ಕಣ್ಣೀರಿಟ್ಟ ನೇತಾರ



ಒಂದು ಸ್ಥಾನಕ್ಕೆ ಕಾಂಗ್ರೆಸ್-ಜೆಡಿಎಸ್ ಪೈಪೋಟಿ | ತೆನೆಮರೆಯಲ್ಲಿ ತಂತ್ರ-ಪ್ರತಿತಂತ್ರಗಳ ಆಟ

ಮೇಲ್ಮನೆ ರಣಕಣ ರೋಚಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸದಸ್ಯ ಸ್ಥಾನಗಳಿಗೆ ಮತದಾನ ನಡೆಯುವುದು ಅನಿವಾರ್ಯವಾಗಲಿದೆ. ಐವರು ಅಭ್ಯರ್ಥಿಗಳನ್ನು ಕಾಂಗ್ರೆಸ್ ಸ್ಪರ್ಧೆಗಿಳಿಸಿರುವ ಹಿನ್ನೆಲೆಯಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ನಡುವೆ ತೀವ್ರ ಪೈಪೋಟಿ ಏರ್ಪಡುವ ಸಾಧ್ಯತೆಗಳು ಸ್ಪಷ್ಟವಾಗಿವೆ.

ಈ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಜೆಡಿಎಸ್ 8ನೇ ಅಭ್ಯರ್ಥಿ ಕಣಕ್ಕಿಳಿಸಿದೆ. ಈ ಮೂಲಕ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಮತ್ತೊಂದು ಸಮರಕ್ಕೆ ವೇದಿಕೆ ಅಣಿಯಾಗಿದೆ. ಜತೆಗೆ ವಿಧಾನ ಪರಿಷತ್ತಿಗೆ ಅವಿರೋಧ ಆಯ್ಕೆ ಆಗಲಿದೆ ಎಂಬ ಕಾಂಗ್ರೆಸ್‌ನ ಲೆಕ್ಕಾಚಾರಗಳು ತಲೆಕೆಳಗಾಗಿದ್ದು, ಏಳು ಸ್ಥಾನಗಳಿಗೆ 8 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಜೂ.18ರಂದು ಮೇಲ್ಮನೆ ಚುನಾವಣೆಗೆ ಮತದಾನ ನಡೆಯುವುದು ಖಾತ್ರಿಯಾಗಿದೆ. ಆದರೆ ರಾಜ್ಯಸಭೆ ಚುನಾವಣೆಗೆ ಹೆಚ್ಚುವರಿ ಅಭ್ಯರ್ಥಿಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯಾಗುತ್ತಿದೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಗೌಪ್ಯ ಮತದಾನ ನಡೆಯುವುದರಿಂದ ಅಡ್ಡ ಮತದಾನ ನಡೆಯುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ಒಂದು ಸ್ಥಾನದ ಗೆಲುವಿಗಾಗಿ ತೀವ್ರ ಪೈಪೋಟಿ ಉಂಟಾಗುವುದರಿಂದ ಶಾಸಕರಿಗೆ ಭಾರೀ ಬೇಡಿಕೆ ಉಂಟಾಗಲಿದೆ. ಒಂದು ವೇಳೆ ರಾಜ್ಯಸಭೆ ಚುನಾವಣೆಯಂತೆ ಕಾಂಗ್ರೆಸ್ 5ನೇ ಅಭ್ಯರ್ಥಿಯನ್ನು ಕಣಕ್ಕಿಳಿಸದಿದ್ದರೆ ಮೂರೂ ಪಕ್ಷಗಳ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುತ್ತಿದ್ದರು.

ಇಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು , ಜೂ.11ರಂದು ನಾಮಪತ್ರ ವಾಪಸ್ ಪಡೆಯಲು ಕಡೆಯ ದಿನವಾಗಿದೆ. ಅಂದು ಅಂತಿಮ ಕಣದಲ್ಲಿ ಉಳಿಯುವ ಅಭ್ಯರ್ಥಿಗಳನ್ನು ಪ್ರಕಟಿಸಲಾಗುತ್ತದೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿ ಉಮೇದುವಾರಿಕೆ ಹಿಂಪಡೆಯದಿದ್ದರೆ ಜೂ.18ರಂದು ಮತದಾನ ನಡೆದು ಅಂದು ಸಂಜೆ ಫಲಿತಾಂಶ ಪ್ರಕಟವಾಗಲಿದೆ.

ಮತದಾನ ಅನಿವಾರ್ಯ: ಮತದಾನ ಅನಿವಾರ್ಯವಾಗಿರುವುದರಿಂದ ಮೂರೂ ಪಕ್ಷಗಳಲ್ಲಿ ತಮ್ಮ ತಮ್ಮ ಅಭ್ಯರ್ಥಿಗಳ ಗೆಲುವಿಗೆ ಚುನಾವಣಾ ತಂತ್ರಗಾರಿಕೆಗಳು ರೂಪಿಸಲಾಗುತ್ತದೆ. ಜತೆಗೆ ತಮ್ಮ ಶಾಸಕರ ಮತಗಳು ಬೇರೆ ಪಕ್ಷದ ಅಭ್ಯರ್ಥಿಗಳಿಗೆ ದೊರೆಯಂತೆ ಮಾಡಲು ವಿಪ್ ನೀಡುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆಗಳಿವೆ. ವಿಧಾನಸಭೆಯಲ್ಲಿ ಕಾಂಗ್ರೆಸ್ ಹೊಂದಿರುವ ಶಾಸಕರ ಸಂಖ್ಯಾಬಲದ ಆಧಾರದ ಮೇಲೆ 4 ಸ್ಥಾನ ಹಾಗೂ ಬಿಜೆಪಿ ಹೊಂದಿರುವ ಶಾಸಕರ ಸಂಖ್ಯಾಬಲದ ಆಧಾರದ ಮೇಲೆ 2 ಸ್ಥಾನ ಸುಲಭವಾಗಿ ಗೆಲ್ಲಬಹುದಾಗಿದೆ. ಆದರೆ ಜೆಡಿಎಸ್ 18 ಶಾಸಕರನ್ನು ಹೊಂದಿರುವುದರಿಂದ ಸುಲಭ ವಾಗಿ ಗೆಲ್ಲಲು ಸಾಧ್ಯವಾಗುವುದಿಲ್ಲ. ಬಿಜೆಪಿಯ ಹೆಚ್ಚುವರಿ ಮತಗಳನ್ನು ಪಡೆದರೂ ಗೆಲುವಿನ ದಡ ಸೇರುವುದು ಕಷ್ಟವಾಗಲಿದೆ. ಆದರೆ ಕಾಂಗ್ರೆಸ್ ಕೂಡ 5ನೇ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಿದೆ. ಈ ಅಭ್ಯರ್ಥಿಯ ಗೆಲುವು ಸುಲಭವಲ್ಲ. ಕಾರ್ತಿಕ್ ವಿನಯ್ ಹಾಗೂ ಗೋವಿಂದರಾಜು ನಡುವೆ ಗೆಲುವಿಗೆ ಪೈಪೋಟಿ ಇದೆ.

ಯಾವ ಪಕ್ಷದಿಂದ ಯಾರ್‍ಯಾರು ಅಭ್ಯರ್ಥಿಗಳು?

ಕಾಂಗ್ರೆಸ್ ಅಭ್ಯರ್ಥಿಗಳಾಗಿ ತಿಪ್ಪಣ್ಣಪ್ಪ ಕನಕನೂರು, ಪಿ.ವಿ.ಮೋಹನ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಶಿವಣ್ಣ.ಬಿ.ಎಸ್ ಹಾಗೂ ಕಾಂಗ್ರೆಸ್‌ನ ಐದನೇ ಅಭ್ಯರ್ಥಿಯಾಗಿ ಕೆಪಿಸಿಸಿ ಖಂಜಾಚಿ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರ ಆಪ್ತ ವಿನಯ್ ಕಾರ್ತಿಕ್ ಉಮೇದುವಾರಿಕೆ ಸಲ್ಲಿಸಿದ್ದಾರೆ. ಬಿಜೆಪಿ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್, ರಘು ಕೌಟಿಲ್ಯ ಹಾಗೂ ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜ್ ಅವರು ಚುನಾವಣಾ ಸ್ಪರ್ಧೆಗಿಳಿದಿದ್ದಾರೆ. ನಾಮಪತ್ರ ಸಲ್ಲಿಕೆಗೆ ಕಡೆಯ ದಿನವಾದ ಸೋಮವಾರ ಕಾಂಗ್ರೆಸ್ ಅಭ್ಯರ್ಥಿ ವಿನಯ್ ಕಾರ್ತಿಕ್, ಬಿಜೆಪಿ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್, ರಘು ಕೌಟಿಲ್ಯ ಹಾಗೂ ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜ್‌ಅವರು ಉಮೇದುವಾರಿಕೆ ಸಲ್ಲಿಸಿದರು. ಈ ಮೊದಲು 8ನೇ ಅಭ್ಯರ್ಥಿ ನಿಲ್ಲಿಸಲು ಅಷ್ಟೇನೂ ಆಸಕ್ತಿ ತೋರದಿದ್ದ ಜೆಡಿಎಸ್, ಕಾಂಗ್ರೆಸ್‌ನ ವಿನಯ್ ಕಾರ್ತಿಕ್ ನಾಮಪತ್ರ ಸಲ್ಲಿಸುತ್ತಿದ್ದಂತೆಯ ಜೆಡಿಎಸ್‌ನಿಂದ 8ನೇ ಅಭ್ಯರ್ಥಿಯಾಗಿ ಮಾಜಿ ವಿಧಾನ ಪರಿಷತ್ ಸದಸ್ಯ ಗೋವಿಂದರಾಜು ನಾಮಪತ್ರ ಸಲ್ಲಿಸಿದರು. ಬಿಜೆಪಿ ಬೆಂಬಲದೊಂದಿಗೆ ಜೆಡಿಎಸ್ ಅಭ್ಯರ್ಥಿ ನಾಮಪತ್ರ ಸಲ್ಲಿಸಿದ್ದಾರೆ ಹಾಗಾಗಿ ವಿಧಾನ ಪರಿಷತ್ ಚುನಾವಣಾ ಕಣ ರಂಗೇರಿದೆ.

ಪಕ್ಷಗಳ ಬಲಾಬಲ

ಕಾಂಗ್ರೆಸ್	ಬಿಜೆಪಿ	ಉಚ್ಚಾಟಿತರು
134	62	03 (ಬಿಜೆಪಿ)
ಜೆಡಿಎಸ್	ಕೆಆರ್‌ಪಿಪಿ	ಎಸ್‌ಕೆಪಿ
18	01	01
ಪಕ್ಷೇತರರು	ಸ್ಪೀಕರ್	ಖಾಲಿ
02	01	02

ಅಂತಿಮ ಕಣ ಚಿತ್ರಣ

- ಶಾಸಕರ ಸಂಖ್ಯೆ 222 (2 ಕ್ಷೇತ್ರ ಖಾಲಿ)
- ಪ್ರತಿ ಅಭ್ಯರ್ಥಿ ಗೆಲ್ಲಲು 28 ಮತ ಅಗತ್ಯ
- ಪರಿಷತ್ ಆಯ್ಕೆಗೆ 7 ಸ್ಥಾನಗಳು ಲಭ್ಯ
- ಕಾಂಗ್ರೆಸ್ ಬಳಿ 134 ಶಾಸಕರು, ಪಕ್ಷೇತರ ಹಾಗೂ ಸರ್ವೋದಯ ಪಕ್ಷ ಸೇರಿದರೆ 137
- ಬಿಜೆಪಿ ಬಳಿ 62, ಜೆಡಿಎಸ್‌ಗೆ 18 ಶಾಸಕರು. ಬಿಜೆಪಿಯ 3 ಉಚ್ಚಾಟಿತ ಶಾಸಕರು ಯಾರಿಗೆ ಬೇಕಾದರೂ ಮತ ಹಾಕಬಹುದು
- ಕಾಂಗ್ರೆಸ್‌ನ ತನ್ನ ನಾಲ್ಕು ಅಭ್ಯರ್ಥಿಗಳಿಗೆ ತಲಾ 28 ಮತಗಳನ್ನು ಹಾಕಿದರೂ, 22 ಮತಗಳು ಉಳಿಯಲಿವೆ
- ಪಕ್ಷೇತರ ಹಾಗೂ ಬಿಜೆಪಿ ಉಚ್ಚಾಟಿತ ಶಾಸಕರು, ಸ್ಪೀಕರ್ ಸೇರಿ ಒಟ್ಟು 6 ಮತ ಲಭ್ಯ
- ಅದೇ ಬಿಜೆಪಿ ತನ್ನ 2 ಅಭ್ಯರ್ಥಿಗಳಿಗೆ 28 ಮತ ಹಾಕಿದರೆ ಹೆಚ್ಚುವರಿಯಾಗಿ ಉಳಿಯುವುದು ಆರು ಮತ
- ಜೆಡಿಎಸ್ ಹಾಗೂ ಬಿಜೆಪಿಯ ಉಳಿಕೆ ಮತಗಳನ್ನು ಸೇರಿಸಿದರೂ 24 ಮತಗಳಾಗಲಿವೆ, ಇಲ್ಲಿ ಸಂದಿಗ್ಧತೆಯಿದೆ
- ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಹಾಗೂ ಜೆಡಿಎಸ್‌ನ ಒಬ್ಬ ಅಭ್ಯರ್ಥಿಗೆ ಗೆಲ್ಲಲು ನಾಲ್ಕು ಮತಗಳು ಅಗತ್ಯವಿದೆ
- ಈ 4 ಮತಗಳನ್ನು ಯಾರು ಕಿತ್ತುಕೊಳ್ಳುತ್ತಾರೆ ಎಂಬುದೇ ಪ್ರಶ್ನೆ. ಅದಕ್ಕೆ ಎಲ್ಲ ತಂತ್ರಗಳನ್ನು ಹೆಣೆಯಲಾಗುತ್ತಿದೆ

ರಾಜ್ಯಸಭೆಗೆ ಅವಿರೋಧ ಆಯ್ಕೆ

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಲ್ಲಿ ಈ ತಿಂಗಳ 18ರಂದು ನಡೆಯಲಿರುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಲೋಕಸೇವಾ ಆಯೋಗದ ಮಾಜಿ ಸದಸ್ಯ ಎಂ.ನಾಗರಾಜು ತಮ್ಮ ನಾಮಪತ್ರ ಸಲ್ಲಿಸಿದರು. ಕಾಂಗ್ರೆಸ್‌ನಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ವಕ್ತಾರ ಪವನ್ ಖೇರಾ, ಹಾಗೂ ಮನ್ಸೂರ್ ಅಲಿಖಾನ್ ಅವರು ತಮ್ಮ ನಾಮಪತ್ರ ಸಲ್ಲಿಸಿದ್ದು, ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗುವ ಸಾಧ್ಯತೆಗಳಿವೆ. ನಾಲ್ಕು ಸ್ಥಾನಗಳಿಗೆ ಕಾಂಗ್ರೆಸ್‌ನಿಂದ ಮೂವರು, ಬಿಜೆಪಿಯಿಂದ ಒಬ್ಬರು ಹಾಗೂ ಪಕ್ಷೇತರದ ಅಭ್ಯರ್ಥಿ ಒಬ್ಬರು ನಾಮಪತ್ರ ಸಲ್ಲಿಸಿದ್ದರಾದರೂ ಪಕ್ಷೇತರ ಅಭ್ಯರ್ಥಿಗೆ ಶಾಸಕರ ಬೆಂಬಲ ಸಿಗದ ಕಾರಣ ಕಾಂಗ್ರೆಸ್‌ನ ಮಲ್ಲಿ ಕಾರ್ಜುನ ಖರ್ಗೆ, ಪವನ್ ಖೇರಾ, ಮನ್ಸೂರ್ ಅಲಿಖಾನ್ ಮತ್ತು ಬಿಜೆಪಿಯ ಎಂ. ನಾಗರಾಜು ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ನಿಶ್ಚಿತ.

20 ಟಿಎಂಸಿ ಎಂಪಿ ಎನ್‌ಡಿಎಗೆ ಬೆಂಬಲ

ಕೋಲ್ಕತ್ತ: ತೃಣಮೂಲ ಕಾಂಗ್ರೆಸ್ ಪಕ್ಷದಲ್ಲಿ ರಾಜಕೀಯ ಬಿಕ್ಕಟ್ಟು ತೀವ್ರಗೊಂಡಿದ್ದು, 20 ಸಂಸದರು ಎನ್‌ಡಿಎಗೆ ಬೆಂಬಲ ಸೂಚಿಸಲು ನಿರ್ಧರಿಸಿದ್ದಾರೆ. ಸಂಸದರು ತಮ್ಮ ನಿಲುವನ್ನು ಲೋಕಸಭಾ ಸ್ಪೀಕರ್ ಡಾ. ಓಂ ಬಿರ್ಲಾ ಅವರಿಗೆ ಪತ್ರದ ಮೂಲಕ ತಿಳಿಸಿದ್ದಾರೆ ಎಂದು ಪಕ್ಷದ ಹಿರಿಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ಹೇಳಿದ್ದಾರೆ. ಈ ಸಂಬಂಧ ಮಾತನಾಡಿರುವ ಅವರು, ನಾನೂ ಸೇರಿದಂತೆ ಸುಮಾರು 20 ಸಂಸದರು ಎನ್‌ಡಿಎ ಬೆಂಬಲಿಸುವ ತಮ್ಮ ನಿರ್ಧಾರದ ಕುರಿತಂತೆ ಲೋಕಸಭಾ ಸ್ಪೀಕರ್‌ಗೆ ಪತ್ರದಲ್ಲಿ ತಿಳಿಸಿದ್ದೇವೆ. ಲೋಕಸಭೆಯಲ್ಲಿ ಮುಖ್ಯ ಸಚೇತಕರಾಗಿ ಮುಂದುವರಿತ್ತೇನೆ. ಸಂಸದರ ಜತೆ ಸಮಾಲೋಚನೆ ನಡೆಸಿದ ಬಳಿಕವೇ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಇಂಡಿ ಸಭೆಗೆ ಆಪ್ ಡಿಎಂಕೆ ಪಕ್ಷ ಗೈರು

ದೆಹಲಿ: ಇಂಡಿ ಒಕ್ಕೂಟ ಅಂಗಪಕ್ಷಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವುದು ಹಾಗೂ ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಟಿಎಂಸಿ ಮತ್ತು ಡಿಎಂಕೆ ಅನುಭವಿಸಿದ ಇತ್ತೀಚಿನ ಚುನಾವಣಾ ಸೋಲಿನ ಹಿನ್ನೆಲೆಯಲ್ಲಿ ಸಂಬಂಧಗಳನ್ನು ಸರಿಪಡಿಸುವ ಉದ್ದೇಶದಿಂದ ಸೋಮವಾರ ದೆಹಲಿಯಲ್ಲಿ ನಡೆದ ಇಂಡಿ ಒಕ್ಕೂಟದ ಪ್ರಮುಖ ಸಭೆಯಲ್ಲಿ 25 ಪಕ್ಷಗಳು ಭಾಗವಹಿಸಿದ್ದವು. ಈ ಸಭೆಗೆ, ಡಿಎಂಕೆ ಮತ್ತು ಆಮ್ ಆದ್ಮಿ ಪಕ್ಷ ಗೈರಾಗಿದ್ದವು. ತಮಿಳುನಾಡಿನಲ್ಲಿ ಟಿವಿಕೆ ಜತೆ ಕಾಂಗ್ರೆಸ್ ಚುನಾವಣೋತ್ತರ ಮೈತ್ರಿ ಮಾಡಿ ಕೊಂಡಿರುವುದನ್ನು ಉಲ್ಲೇಖಿಸಿ, ಡಿಎಂಕೆ ಕಳೆದ ವಾರ ಸಭೆಗೆ ಗೈರು ಹಾಜರಾಗುವ ನಿರ್ಧಾರವನ್ನು ಪ್ರಕಟಿಸಿತ್ತು.

ಫಿಲಿಪೈನ್ಸ್‌ನಲ್ಲಿ ಪ್ರಬಲ ಭೂಕಂಪ: 32 ಸಾವು

ಮನಿಲಾ: ಫಿಲಿಪೈನ್ಸ್‌ನ ದಕ್ಷಿಣ ಭಾಗದಲ್ಲಿ ಸೋಮವಾರ ಸಂಭವಿಸಿದ ಪ್ರಬಲ 7.8 ತೀವ್ರತೆಯ ಭೂಕಂಪದಿಂದ ಕನಿಷ್ಠ 32 ಮಂದಿ ಮೃತಪಟ್ಟಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿರುವುದರಿಂದ ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ. ಭೂಕಂಪದ ಪರಿಣಾಮ ಹಲವಾರು ಕಟ್ಟಡಗಳು ಕುಸಿದು ಬಿದ್ದಿದ್ದು, ಫಿಲಿಪೈನ್ಸ್ ಸೇರಿದಂತೆ ಇಂಡೋನೇಷ್ಯಾ, ತೈವಾನ್, ಪಲಾವ್, ಪಪುವಾ ನ್ಯೂಗಿನಿಯಾ ಮತ್ತು ಜಪಾನ್ ದೇಶಗಳಲ್ಲಿ ಸುನಾಮಿ ಎಚ್ಚರಿಕೆ ಘೋಷಿಸಲಾಗಿದೆ. ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನಾಂಡ್ ಮಾರ್ಕೋಸ್ ಜೂನಿಯರ್, ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದು, ಮಿಂಡನಾವೊದ ಪೀಡಿತ ಪ್ರದೇಶಗಳಲ್ಲಿ ಶಾಲೆಗಳಿಗೆ ರಜೆ ಘೋಷಿಸಿ ಆದೇಶ ಹೊರಡಿಸಿದ್ದಾರೆ.

ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಜಾರ್ಜ್

ಪ್ರವಾಸೋದ್ಯಮ ಬಲಪಡಿಸಲು ಕ್ರಮವಹಿಸಿ

ಬೆಂಗಳೂರು: ರಾಜ್ಯದಲ್ಲಿರುವ ಪ್ರವಾಸೋದ್ಯಮ ತಾಣಗಳನ್ನು ಬಲಪಡಿಸಲು ಅಗತ್ಯ ಕ್ರಮವಹಿಸಿ ಎಂದು ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಡಿ.ಕೆ.ಶಿವಕುಮಾರ್ ಸರಕಾರದಲ್ಲಿ ಪ್ರವಾಸೋದ್ಯಮ ಸಚಿವರಾಗಿ ಅಧಿಕಾರ ಸ್ವೀಕರಿಸಿ, ಹಿರಿಯ ಅಧಿಕಾರಿಗಳೊಂದಿಗೆ ಪರಾಮರ್ಶೆ ಸಭೆ ನಡೆಸಿದ ಅವರು, ಉತ್ತಮ ಮೂಲ ಸೌಕರ್ಯ, ಸುಸ್ಥಿರ ಅಭ್ಯಾಸಗಳು, ಪ್ರವಾಸಿ ಅನುಭವದ ಗುಣಮಟ್ಟ ಸುಧಾರಣೆ ಮತ್ತು ಎಲ್ಲ ಸೌಲಭ್ಯಗಳಲ್ಲಿ ಗುಣಮಟ್ಟದ ಮಾನದಂಡಗಳ ಮೂಲಕ ಕರ್ನಾಟಕದ ಪ್ರವಾಸೋದ್ಯಮ ಕ್ಷೇತ್ರವನ್ನು ಬಲಪಡಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಾವೀನ್ಯತೆ, ಸಿಬ್ಬಂದಿ ತರಬೇತಿ, ತಂತ್ರಜ್ಞಾನ ಆಧಾರಿತ ಸೇವೆಗಳು, ನಿಯಮಿತ ಕ್ಷೇತ್ರ ತಪಾಸಣೆ ಮತ್ತು ದಕ್ಷ ದೂರು ನಿವಾರಣೆಗೆ ಒತ್ತು ನೀಡಿ, ಕರ್ನಾಟಕದ ಶ್ರೀಮಂತ ಪರಂಪರೆ, ಸಂಸ್ಕೃತಿ, ವನ್ಯಜೀವಿ, ಕರಾವಳಿ ಮತ್ತು ನೈಸರ್ಗಿಕ ಸೌಂದರ್ಯವನ್ನು ಜಾಗತಿಕ ಪ್ರವಾಸೋದ್ಯಮ ನಕ್ಷೆಯಲ್ಲಿ ಗುರುತಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವ ಕೆ.ಜೆ.ಜಾರ್ಜ್.

ಚರಂಡಿ ಸ್ವಚ್ಛಗೊಳಿಸದ ನಗರಸಭೆ ವಿರುದ್ಧ ಆಕ್ರೋಶ

ಹರಿವ ನೀರಿನಲ್ಲೇ 3 ತಾಸು ಧರಣಿ!

- ಚರಂಡಿ ದುರಸ್ತಿಗೆ ಮನವಿ ಸಲ್ಲಿಸಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯ
- ಅಧಿಕಾರಿಗಳ ವಿರುದ್ಧ ಕೋಪಗೊಂಡ ಯುವಕನಿಂದ ಧರಣಿ

ಬೆಳಗಾವಿ: ಬೈಲಹೊಂಗಲ ಪಟ್ಟಣದಲ್ಲಿ ಸೋಮವಾರ ಸುರಿದ ಭಾರಿ ಮಳೆಯಿಂದಾಗಿ ಕುಲಕರ್ಣಿ ಗಲ್ಲಿ, ಪಾಟೀಲ ಗಲ್ಲಿ, ಕೋಲಕಾರ ಗಲ್ಲಿ ಪ್ರದೇಶದ ಮನೆಗಳಿಗೆ ನೀರು ನುಗ್ಗಿತ್ತು. ಇದರಿಂದ ಬೇಸರಗೊಂಡ ಈಶ್ವರ ಶಿಲೇದಾರ ಎಂಬ ಯುವಕ ಪ್ರವಾಹದ ರೀತಿಯಲ್ಲಿ ಧುಮ್ಮಿಕ್ಕುತ್ತಿದ್ದ ಮಳೆಯ ನೀರಿನಲ್ಲೇ 3 ತಾಸು ಧರಣಿ ನಡೆಸಿದರು. ಯೂ ಟ್ಯೂಬರ್ ಆಗಿರುವ ಅವರ ವಿಡಿಯೊ ಹಾಗೂ ಫೋಟೊಗಳು ಸಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಹರಿದಾಡಿವೆ.

ರಸ್ತೆ, ಚರಂಡಿ ದುರಸ್ತಿ ಮಾಡಿಸಿ, ಮಳೆ ನೀರು ಹರಿದು ಹೋಗಲು ಅನುಕೂಲ ಮಾಡಿ ಎಂದು ಮಳೆಗಾಲ ಬರುವ ಮುನ್ನವೇ ನಗರಸಭೆ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಆದರೂ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದರು. ಸೋಮವಾರದ ಮಳೆಯಿಂದ ತಮ್ಮ ಬದುಕೇ ಅಸ್ತವ್ಯಸ್ತವಾಗಿದೆ. ಅಧಿಕಾರಿಗಳ ಬೇಜವಾಬ್ದಾರಿಯೇ ಇದಕ್ಕೆ ಕಾರಣ ಎಂದು ಕೋಪಗೊಂಡ ಯುವಕ ಧರಣಿಗೆ ಮುಂದಾದರು. ರಸ್ತೆಯಲ್ಲಿದ್ದ ವಿದ್ಯುತ್ ಕಂಬಕ್ಕೆ ತಾಗಿ ಕುಳಿತರು. ಅವರ ತಲೆಯ ಎತ್ತರಕ್ಕೆ ನೀರು ರಭಸವಾಗಿ ಹರಿಯುತ್ತಿದ್ದರೂ ಸ್ಥಳ ಬಿಟ್ಟು ಕದಲಿಲ್ಲ. ಸ್ಥಳಕ್ಕೆ ಧಾವಿಸಿದ ನಗರಸಭೆ ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ, ಪುರಸಭೆ ಮಾಜಿ ಅಧ್ಯಕ್ಷ ವಿಜಯ ಬೋಳನ್ನವರ ಮಾತನಾಡಿ, ಮಳೆ ನೀರು ಸಲೀಸಾಗಿ ಹರಿದು ಹೋಗಲು ಶೀಘ್ರ ವ್ಯವಸ್ಥೆ ಮಾಡಲಾಗುವುದು. ಧರಣಿ ಕೈ ಬಿಡಿ ಎಂದು ಭರವಸೆ ನೀಡಿದ ಬಳಿಕ ಯುವಕ ಮನೆಗೆ ಮರಳಿದರು.

ಖಾತೆ ದೊರೆತು ವಾರವಾದರೂ ಅಧಿಕಾರ ಸ್ವೀಕಾರಕ್ಕೆ ಹಿಂದೇಟು

ಖಾತೆ ಕ್ಯಾತೆ: ತಣಿಯದ ಮುನಿಸು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿಎಂ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಖಾತೆ ಹಂಚಿಕೆ ಅಸಮಾಧಾನ ಮತ್ತೂ ಮುಂದುವರಿದಿದೆ. ಬೆಂಗಳೂರು ನಗರಾಭಿವೃದ್ಧಿ ಖಾತೆ ಪಡೆದಿರುವ ಸಚಿವ ಕೃಷ್ಣ ಬೈರೇಗೌಡ, ಬಿಎಂಆರ್‌ಡಿಎ ಮತ್ತು ಬಿಡಿಎ ಒಳಗೊಂಡಂತೆ ಬೆಂಗಳೂರಿನ ಸಮಗ್ರ ಜವಾಬ್ದಾರಿ ನೀಡಬೇಕು ಎಂದು ಒತ್ತಾಯಿಸಿರುವುದಾಗಿ ತಿಳಿದು ಬಂದಿದೆ.

ಕಾಂಗ್ರೆಸ್ ವರಿಷ್ಠರು ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನನಗೆ ಹಂಚಿಕೆ ಮಾಡಿರುವ ಜಲಸಂಪನ್ಮೂಲ ಇಲಾಖೆಯಲ್ಲೆ ಮುಂದುವರಿಯುತ್ತೇನೆ. ಬೇರೆ ಯಾವುದೆ ಖಾತೆ ಕೊಟ್ಟರೂ ನನಗೆ ಬೇಡ ಎಂದು ಜಲಸಂಪನ್ಮೂಲ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಈ ನಡುವೆ ಬೆಂಗಳೂರು ನಗರಾಭಿವೃದ್ಧಿ ಖಾತೆ ಪಡೆದಿರುವ ಕೃಷ್ಣ ಬೈರೇಗೌಡ ಈವರೆಗೂ ಇಲಾಖೆಯ ಪರಿಚಯಾತ್ಮಕ ಸಭೆ ನಡೆಸಿಲ್ಲ. ತಮಗೆ ಇದೇ ಖಾತೆ ಇರಲಿದೆಯೇ ಅಥವಾ ಬದಲಾಗಲಿದೆಯೇ ಎಂಬ ಗೊಂದಲದಲ್ಲಿ ಇದ್ದಂತಿದೆ.

ಸಚಿವ ಕೃಷ್ಣ ಬೈರೇಗೌಡ ಅವರಿಗೆ ಗ್ರೇಟರ್ ಬೆಂಗಳೂರು ನಗರಾಭಿವೃದ್ಧಿಯಲ್ಲಿ ಐದು ಮಹಾನಗರ ಪಾಲಿಕೆಗಳ ಜವಾಬ್ದಾರಿ ವಹಿಸಲಾಗಿದೆ. ಪ್ರಮುಖ ವಾಗಿ ಬಿಡಿಎ ಮತ್ತು ಬಿಎಂಆರ್‌ಡಿಎ ಜವಾಬ್ದಾರಿಗಳನ್ನು ಮುಖ್ಯಮಂತ್ರಿಯವರು ತಮ ಬಳಿಯೇ ಇರಿಸಿಕೊಂಡಿದ್ದಾರೆ. ಬಿಡಿಎನಲ್ಲಿ ಸಾವಿರಾರು ಕೋಟಿ ರುಪಾಯಿಗಳ ಕಾಮಗಾರಿಗಳು ನಡೆಯಬೇಕಿದೆ. ಗ್ರೇಟರ್ ಬೆಂಗಳೂರು ಮಹಾನಗರ ಪಾಲಿಕೆಗಳಿಗೆ ಚುನಾವಣೆ ನಡೆದು ಸದಸ್ಯರು ಆಯ್ಕೆಯಾದರೆ, ಸ್ಥಳೀಯ ಆಡಳಿತಕ್ಕೆ ಒತ್ತು ನೀಡಬೇಕಿದೆ.

→ 4

ವಿಶ್ವವಾಣಿ

ಯಾರಿಗೂ ಬೇಡವಾದ ಬೆಂಗಳೂರು ನಗರಾಭಿವೃದ್ಧಿ ಖಾತೆ?
ಮೊದಲು ಈ ಖಾತೆಗೆ ರಾಮಲಿಂಗಾರೆಡ್ಡಿ ಪಟ್ಟು, ರಾಜೀನಾಮೆ, ಬಳಿಕ ಜಲಸಂಪನ್ಮೂಲಕ್ಕೇ ತೃಪ್ತಿ
ಖಾತೆ ಹೊಂದಿರುವ ಕೃಷ್ಣ ಬೈರೇಗೌಡರಿಗೂ ಇದು ಬೇಡ | ಬೇರೆ ನೀಡಿ ಎಂದು ವರಿಷ್ಠರಿಗೆ ಮನವಿ
ರಂಜಿತ್ ಎಚ್. ಅಶ್ವತ್ಥ ಬೆಂಗಳೂರು
ಇದೇನು ಬೇಡಾಟ?
ಜಿಬಿಎಯಿಂದ ರೆಡ್ಡಿ ಅಂತರ?
ವಿಶ್ವವಾಣಿ ನಮ್ಮಲ್ಲೇ ಮೊದಲು

ಸಚಿವ ರೆಡ್ಡಿಗೆ ನಾಲ್ಕು ಕೊಠಡಿ

13 ಸಚಿವರಿಗೆ ಕೊಠಡಿ ಹಂಚಿಕೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ನೀಡಿದೆ. ಜತೆಗೆ ಸಿಎಂ ಆರ್ಥಿಕ ಸಲಹೆಗಾರ ಎಲ್.ಕೆ.ಅತೀಕ್ ಅವರಿಗೂ ಕೊಠಡಿ ಹಂಚಿಕೆಯಾಗಿದೆ. ವಿಧಾನಸೌಧ ಹಾಗೂ ವಿಕಾಸಸೌಧದಲ್ಲಿ ಮಂತ್ರಿಗಳಿಗೆ ಕೊಠಡಿ ಹಂಚಿಕೆ ಮಾಡಲಾಗಿದೆ. ಖಾತೆಗಾಗಿ ಕ್ಯಾತೆ ತೆಗೆದು, ರಾಜೀನಾಮೆ ನೀಡಿ, ಆಮೇಲೆ ವಾಪಸ್ ಪಡೆದಿದ್ದ ಅಸಮಾಧಾನಿತ ಸಚಿವ ರಾಮಲಿಂಗಾರೆಡ್ಡಿಗೆ ಒಂದಲ್ಲ, ನಾಲ್ಕು ಕೊಠಡಿಗಳನ್ನು ಸಿಎಂ ಹಂಚಿಕೆ ಮಾಡಿದ್ದಾರೆ. ವಿಧಾನಸೌಧದಲ್ಲಿ 335, 336, 337 ಹಾಗೂ 337-ಎ ನಂಬರಿನ ಕೊಠಡಿಗಳನ್ನು ರಾಮಲಿಂಗಾರೆಡ್ಡಿಗೆ ನೀಡಲಾಗಿದೆ. ಈ ಹಿಂದೆ ಡಿ.ಕೆ. ಶಿವಕುಮಾರ್ ಡಿಸಿಎಂ ಆಗಿದ್ದಾಗ ಈ ನಾಲ್ಕೂ ಕೊಠಡಿಗಳನ್ನು ಬಳಸುತ್ತಿದ್ದರು. ಈಗ ಸಿಎಂ ಆದ ಬಳಿಕ ಆ ಎಲ್ಲ ಕೊಠಡಿಗಳನ್ನು ರಾಮಲಿಂಗರೆಡ್ಡಿಗೆ ಡಿಕೆಶಿ ಹಂಚಿದ್ದಾರೆ. ಈ ಹಿಂದೆ ಡಿಸಿಎಂ ಆಗಿದ್ದಾಗ ಡಿ.ಕೆ.ಶಿವಕುಮಾರ್ ಬಳಕೆ ಮಾಡುತ್ತಿದ್ದ ಕಚೇರಿಯನ್ನು ನವೀಕರಣ ಮಾಡಿಕೊಂಡಿದ್ದರು. ಇದೀಗ ಆ ಕಚೇರಿಯನ್ನೂ ಸಚಿವ ರಾಮಲಿಂಗಾರೆಡ್ಡಿಗೆ ನೀಡಲಾಗಿದೆ.

ಪ್ರವಾಸಿ ಪ್ರಪಂಚ
ವಿಹಾರವೇ ವಿಶ್ವ!
ಸಂಪಾದಕರ ಸಕತ್ ಸರಕು
ತಿರುಗಿ ಕೆಟ್ಟವರಿಲ್ಲವೋ ಅಂಕಣದಲ್ಲಿ
ನಿಜಾರ್ಥದಲ್ಲಿ 'ಸೂರ್ಯ ಎಂದಿಗೂ ಮುಳುಗದ ಸಾಮ್ರಾಜ್ಯ' ಅಂದ್ರೆ ಫ್ರಾನ್ಸ್!
ಸಂಚಾರಿ ಸಂಪಾದಕ
ಕೊರತೆಯನ್ನೇ ಅವಕಾಶವನ್ನಾಗಿಸಿದ ವಿಯೆಟ್ನಾಮ್ ಟ್ರೇನ್ ಸ್ಟ್ರೀಟ್
ತಿರುಗನ ಕನಸು
ಹೊಟೇಲ್‌ನಲ್ಲಿ ನಾವು ಉಳಿಯುವ ರೂಮು ನಮ್ಮ ಸಂಸ್ಕಾರದ ಕನ್ನಡಿ!
Ask the Editor
ಭಟ್ರೇ..ಗಗನಸಖಿಗೆ ಲವ್ ಪ್ರಪೋಸ್ ಮಾಡಿದ್ರೆ ಅಪರಾಧವಾಗುತ್ತಾ?
ಭಟ್ಟರ್ fly

53ನೆಯ ಸಂಚಿಕೆ
ಆ ಪೇಪರ್ರೂ ಇದೆ
E ಪೇಪರ್ರೂ ಇದೆ
epaper.pravasiprapancha.com ಗೆ ಭೇಟಿ ಕೊಡಿ.
ಯಾವ ಸಂಚಿಕೆ ಬೇಕಾದರೂ ಕೊಂಡೋದಿರಿ ಇಷ್ಟವಾದರೆ ಕೊಂಡಾಡಿರಿ!
ವಿನಾಯಕ ಓಣಿವಿಷ್ಣೇಶ್ವರ ಬರೆಯುತ್ತಾರೆ
ಪುರಾತತ್ವ ಇಲಾಖೆ ಸ್ಥಳಗಳಲ್ಲಿ ಫೋಟೋ ತೆಗೆಯುವುದು ಅಪರಾಧವೇ?
ಖುಷಿ ರವಿ
ಜರ್ಮನಿ ಪ್ರವಾಸದಲ್ಲಿ ಫಸ್ಟ್ ಟೈಂ ಟ್ರೈ ಮಾಡಿದ್ದೇನು ಗೊತ್ತಾ?

ಖುಷಿ ರವಿ ಕಥಾ ಯಾನ
ಜರ್ಮನಿಯಲ್ಲಿ ಕಳೆದು ಹೋಗಿದ್ದ ಹೊರಟ್ಟಿಯವರು ಸಿಕ್ಕಿದ್ದು ಹೇಗೆ?
ಬಸವರಾಜ್ ಹೊರಟ್ಟಿಯವರ ವಿಶೇಷ ಸಂದರ್ಶನ
ಅನಿರುದ್ಧ್ ವಿದ್ಯಾಭೂಷಣ್ ವೈಲ್ಡ್ ಲೈಫ್ ಫೋಟೋಗ್ರಫಿ ಬಗ್ಗೆ...

ಅನಂತ ಹರಿತ್ಸ ಅವರು ಬರೆದ ಕ್ಯಾಮೆರಾ ಹುಟ್ಟಿನ ಕಥೆ
ಪುರಾಣ ಪ್ರಯಾಣ
ರಾಮನ ಪಯಣದಲ್ಲಿ ಪರಶುರಾಮನ ಆಗಮನ
24 ವರ್ಣಮಯ ಪುಟಗಳು, ಅಂಗೈಯಲ್ಲಿ ಇಡೀ ಜಗತ್ತು. ಪ್ರತಿ ಪುಟದಲ್ಲೂ ಬೆರಗು. ನಿಮ್ಮ ಆರಾಮ ಮತ್ತು ವಿರಾಮದ ದಿನವನ್ನು ಪ್ರವಾಸಿ ಪ್ರಪಂಚದೊಂದಿಗೆ ಕಳೆಯಿರಿ. ವಾರ ಪೂರ್ತಿ ಸುತ್ತಾಡಿ. ಹ್ಯಾಪಿ ರೀಡಿಂಗ್!

ಸಮಾಚಾರ ಸಣ್ಣದಲ್ಲ

ನಾಳೆ ಜನಮುಖಿ ಅರಸು ಕೃತಿ ಬಿಡುಗಡೆ

ತುಮಕೂರು: ತುಮಕೂರು ವಿಶ್ವವಿದ್ಯಾನಿಲಯ ಹಾಗೂ ಡಿ. ದೇವರಾಜ ಅರಸು ಅಧ್ಯಯನ ಪೀಠದ ಆಶ್ರಯದಲ್ಲಿ 'ಜನಮುಖಿ ಅರಸು' ಕೃತಿಯ ಲೋಕಾರ್ಪಣೆ ಮತ್ತು 'ಡಿ. ದೇವರಾಜ ಅರಸು : ಸಮಸಮಾಜದ ಕನಸುಗಾರ' ಎಂಬ ರಾಜ್ಯ ಮಟ್ಟದ ವಿಚಾರ ಸಂಕಿರಣ ಈ ತಿಂಗಳ 10ರಂದು ಬೆಳಗ್ಗೆ 11 ಗಂಟೆಗೆ ವಿವಿಯ ಸರ್. ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ವಿಧಾನಸಭೆ ಮಾಜಿ ಸಭಾಪತಿ ಕೆ.ಆರ್. ರಮೇಶ್‌ಕುಮಾರ್ ಕಾರ್ಯಕ್ರಮ ಉದ್ಘಾಟನೆ ಮತ್ತು ಕೃತಿಯ ಲೋಕಾರ್ಪಣೆ ನೆರವೇರಿಸುವರು. ಕುಲಪತಿ ಪ್ರೊ. ಎಂ ವೆಂಕಟೇಶ್ವರಲು ಅಧ್ಯಕ್ಷತೆ ವಹಿಸುವರು. ಕುಲಸಚಿವರು (ಮೌಲ್ಯಮಾಪನ) ಪ್ರೊ. ಎಚ್. ಎಸ್. ಮೋಹನ್ ಕೃತಿ ಕುರಿತು ಮಾತನಾಡುವರು. ಕುಲಸಚಿವರಾದ ನಾಹಿದಾ ಜಮ್ ಜಮ್, ಹಣಕಾಸು ಅಧಿಕಾರಿ ನರಸಿಂಹಮೂರ್ತಿ, ಡಿ. ದೇವರಾಜ ಅರಸು ಅಧ್ಯಯನ ಪೀಠದ ಸಂಯೋಜಕ ಡಾ. ಗುಂಡೇಗೌಡ, ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ವಿದ್ಯಾ ವಿಷಯಕ ಪರಿಷತ್ ಸದಸ್ಯರು ಭಾಗವಹಿಸುವರು.

ಪರಿಸರ ದಿನಾಚರಣೆ ಕಾರ್ಯಕ್ರಮ ಇಂದು

ಚಿಕ್ಕಬಳ್ಳಾಪುರ : ಜೂನ್ 13 ರಂದು ಪ್ರಶಾಂತಿ ಬಾಲಮಂದಿರ ಟ್ರಸ್ಟ್, ಸತ್ಯಸಾಯಿ ಗ್ರಾಮ ಮುದ್ದೇನಹಳ್ಳಿ ಸಹಯೋಗದಲ್ಲಿ ರಾಜ್ಯಾದ್ಯಂತ 5 ಕೋಟಿಗೂ ಹೆಚ್ಚು ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ಹಾಗೂ ಜಲಮೂಲಗಳ ಪುನರುಜ್ಜೀವನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಸದರಿ ಕಾರ್ಯಕ್ರಮದ ಕುರಿತು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಟಿ.ಪಿ.ರಾಮಲಿಂಗೇಗೌಡ ಅಧ್ಯಕ್ಷತೆಯಲ್ಲಿ ಜೂನ್ 9 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಿಕ್ಕಬಳ್ಳಾಪುರದಲ್ಲಿ 206 ಚೀಲ ಯೂರಿಯಾ ವಶ | ಆರೋಪಿಗಳ ವಿರುದ್ಧ ಕಾನೂನು ಕ್ರಮಕ್ಕೆ ಜಿಲ್ಲಾಧಿಕಾರಿ ಜಿ.ಪ್ರಭು ಸೂಚನೆ

ಅಕ್ರಮ ರಸಗೊಬ್ಬರ ದಾಸ್ತಾನಿನ ಮೇಲೆ ದಾಳಿ

ಚಿಕ್ಕಬಳ್ಳಾಪುರ: ನಗರದ ಹೊರವಲಯ ಚದಲಪುರ ಬಳಿ ಕೃಷಿ ಬಳಕೆಯ ಸಬ್ಸಿಡಿ ಯೂರಿಯಾ ರಸಗೊಬ್ಬರವನ್ನು ಬಳಕೆ ಮಾಡಿಕೊಂಡು ಅಕ್ರಮವಾಗಿ ಡಿಇಎಫ್ ದ್ರಾವಣ ತಯಾರಿಸುತ್ತಿದ್ದವರ ಮೇಲೆ ಪ್ರಕರಣ ದಾಖಲಿಸಿ ಅಗತ್ಯ ಕಾನೂನು ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿ ಜಿ ಪ್ರಭು ಅವರು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಯೂರಿಯಾ ಸೇರಿದಂತೆ ಯಾವುದೇ ರೀತಿಯ ರಸಗೊಬ್ಬರವನ್ನು ಅಕ್ರಮವಾಗಿ ಸಂಗ್ರಹಿಸಿ ಕೈಗಾರಿಕಾ ಉದ್ದೇಶಕ್ಕೆ ಬಳಕೆ ಮಾಡುವುದು ಕಾನೂನುಬಾಹಿರವಾಗಿದ್ದು ಇಂತಹ ಪ್ರಕರಣಗಳು ಜಿಲ್ಲೆಯಲ್ಲಿ ಜರುಗದಂತೆ ಕಟ್ಟೆಚ್ಚರದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಫ್ರೂಟ್ ಐಡಿ ಆಧಾರದ ಮೇಲೆ ನಿಯಮಾವಳಿಯಂತೆ ರೈತರಿಗೆ ರಸಗೊಬ್ಬರ ವಿತರಣೆ ಮಾಡಬೇಕು ಎಂದರು.

ರಸಗೊಬ್ಬರ ಮಾರಾಟಗಾರರು ಕೂಡ ಕೃಷಿ ಇಲಾಖೆ ನೀಡಿರುವ ನೀತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕೃಷಿ ಉದ್ದೇಶಕ್ಕಾಗಿ ಖರೀದಿಯಾಗುವ ರಸಗೊಬ್ಬರ ಕೃಷಿ ಚಟುವಟಿಕೆಗಳಿಗೆ ಮಾತ್ರವೇ ಬಳಕೆಯಾಗಬೇಕು. ಇದನ್ನು ಹೊರತುಪಡಿಸಿ ಅಕ್ರಮವಾಗಿ ಕೈಗಾರಿಕಾ ಉತ್ಪನ್ನಗಳ ತಯಾರಿಗಾಗಿ ಅಥವಾ ಅಕ್ರಮ ಇಂಧನ ತಯಾರಿ ಸೇರಿದಂತೆ ಇತರ ಯಾವುದೇ ಉದ್ದೇಶಕ್ಕಾಗಿ ಯಾವುದೇ ವ್ಯಕ್ತಿ, ಯಾವುದೇ ಸಂಸ್ಥೆ ಅಕ್ರಮ ಬಳಕೆಗೆ ಮುಂದಾದರೆ ಅಂತಹ ಅವರ ಮೇಲೆ ಕಟ್ಟುನಿಟಿನ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

ಅಕ್ರಮವಾಗಿ ಡಿಇಎಫ್ ದ್ರಾವಣ ತಯಾರಿಸುತ್ತಿದ್ದವರ ಮೇಲೆ ಪ್ರಕರಣ ದಾಖಲಿಸಿ ಅಗತ್ಯ ಕಾನೂನು ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿ ಜಿ ಪ್ರಭು ಅವರು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಚದಲಪುರ ಗೇಟ್ನಿಂದ ಗವಿಗಾನಹಳ್ಳಿಗೆ ಹೋಗುವ ರಸ್ತೆಯ ಸರ್ವೆ ನಂ. 76/7ರಲ್ಲಿರುವ ಗೋದಾಮಿನಲ್ಲಿ ಅಕ್ರಮವಾಗಿ ಡೀಸೆಲ್ ಎಕ್ಸಾಸ್ಟ್ ಡಿಇಎಫ್ ತಯಾರಿಸುತ್ತಿರುವ ಬಗ್ಗೆ ಭಾನುವಾರ ರಾತ್ರಿ ಗಮನಕ್ಕೆ ಬಂದ ಕೂಡಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಂಟಿ ಕೃಷಿ ನಿರ್ದೇಶಕರು, ಉಪ ವಿಭಾಗಾಧಿಕಾರಿಗಳು, ಜಂಟಿ ಕೈಗಾರಿಕೆ ನಿರ್ದೇಶಕ,ಕಾನೂನು ಮಾಪನ ಶಾಸ್ತ್ರ ಇಲಾಖೆ ಸಹಾಯಕ ನಿಯಂತ್ರಕ, ಸಹಾಯಕ ಕೃಷಿ ನಿರ್ದೇಶಕ ಮೋಹನ್. ಎಸ್.ಎಂ, (ಜಾರಿದಳ),ಸಹಾಯಕ ಕೃಷಿ ನಿರ್ದೇಶಕ ಮುನಿರಾಜ .ಸಿ, ಕೃಷಿ ಅಧಿಕಾರಿ ರಾಮಚಂದ್ರ ವಿ ಹಾಗೂ ಕೃಷಿ ಇಲಾಖೆಯ ಜಾಗೃತದಳ ವಿಭಾಗದ ಅಧಿಕಾರಿಗಳು ಸದರಿ ಗೋಧಾಮು ಪ್ರದೇಶಕ್ಕೆ ಭೇಟಿ ನೀಡಿ 216 ಚೀಲ ಯೂರಿಯಾ ಅಕ್ರಮ ದಾಸ್ತಾನನ್ನು ವಶಕ್ಕೆ ಪಡೆದಿದ್ದು ಈ ಸಂಬಂಧ ಅಗತ್ಯ ದಾಖಲೆ ಕ್ರೋಡಿಕರಣ ಮಾಡಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಈ ಬಗ್ಗೆ ಸದರಿ ಸ್ಥಳಕ್ಕೆ ಭೇಟಿ ನೀಡಿ ಅಗತ್ಯ ಸೂಚನೆಗಳನ್ನು ನೀಡಿದ್ದೇನೆ ಎಂದು ತಿಳಿಸಿದರು.

> ಯೂರಿಯಾ ಸೇರಿದಂತೆ ಯಾವುದೇ ರೀತಿಯ ರಸಗೊಬ್ಬರವನ್ನು ಅಕ್ರಮವಾಗಿ ಸಂಗ್ರಹಿಸಿ ಕೈಗಾರಿಕಾ ಉದ್ದೇಶಕ್ಕೆ ಬಳಕೆ ಮಾಡುವುದು ಕಾನೂನುಬಾಹಿರವಾಗಿದ್ದು ಇಂತಹ ಪ್ರಕರಣಗಳು ಜಿಲ್ಲೆಯಲ್ಲಿ ಜರುಗದಂತೆ ಕಟ್ಟೆಚ್ಚರದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಫ್ರೂಟ್ ಐಡಿ ಆಧಾರದ ಮೇಲೆ ನಿಯಮಾವಳಿಯಂತೆ ರೈತರಿಗೆ ರಸಗೊಬ್ಬರ ವಿತರಣೆ ಮಾಡಬೇಕು.
> -ಜಿ.ಪ್ರಭು, ಜಿಲ್ಲಾಧಿಕಾರಿ

ಜಂಟಿ ಕೃಷಿ ನಿರ್ದೇಶಕ ಅಭಿದ್ ಅವರು ಈ ಬಗ್ಗೆ ಮಾಹಿತಿ ನೀಡಿ ಮಾತನಾಡುತ್ತಾ ಚದಲಪುರ ಗೇಟ್ನಿಂದ ಗವಿಗಾನಹಳ್ಳಿಗೆ ಹೋಗುವ ರಸ್ತೆಯ ಸರ್ವೆ ನಂ. 76/7 ರಲ್ಲಿರುವ ಗೋದಾಮಿನಲ್ಲಿ ಶ್ರೀರಾಮ್ ಫರ್ಟಿಲೈಜರ್ ಅಂಡ್ ಕೆಮಿಕಲ್ಸ್-ರಾಜ ಸ್ಥಾನ ಸಂಸ್ಥೆಯ 129 ಚೀಲ , ನ್ಯಾಷನಲ್ ಫರ್ಟಿಲೈಸರ್‌ಅಂಡ್ ಕೆಮಿಕಲ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ ಮಧ್ಯಪ್ರದೇಶ -1823 (45 ಏಜ), ಗುಜರಾತ್ ನರ್ಮದಾ ವ್ಯಾಲಿ ಫರ್ಟಿಲೈಸರ್‌ಅಂಡ್ ಕೆಮಿಕಲ್ಸ್ (ಜಿಎನ್ ಆರ್ಜಿ) ಸಂಸ್ಥೆಯ 69 ಚೀಲ (45ಕೆ.ಜಿ.) ಒಟ್ಟು 216 ಚೀಲಗಳ ಅಕ್ರಮ ಯೂರಿಯಾ ದಾಸ್ತಾನು ಮಾಡಿರುವುದು ಕಂಡುಬಂದಿರುತ್ತದೆ. ಸದರಿ ದಾಸ್ತಾನಿನ ಜೊತೆಗೆ 491 (50ಕೆ.ಜಿ) ಕೈಗಾರಿಕೆಗೆ ಬಳಸುವ ಯೂರಿಯಾವನ್ನು ಸಹ ಅನುಮತಿ ಪಡೆಯದೇ ಅಕ್ರಮವಾಗಿ ದಾಸ್ತಾನು ಇಟ್ಟಿರುವುದು ದಾಳಿಯ ವೇಳೆ ಬೆಳಕಿಗೆ ಬಂದಿದೆ. ಸದರಿ ವಿಷಯವನ್ನು ನಂದಿ ಗಿರಿಧಾಮ ಪೊಲೀಸ್ ಠಾಣೆಗೆ ಮಾಹಿತಿ ನೀಡಿ ಕೃಷಿ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಯ ಸಹಕಾರದೊಂದಿಗೆ ಭಾನುವಾರ ರಾತ್ರಿ ಕಾವಲು ಕಾದು ಸದರಿ ದಾಸ್ತಾನನ್ನು ರಕ್ಷಣೆ ಮಾಡಲಾಗಿದ್ದು ಆರೋಪಿಗಳ ಪತ್ತೆಗಾಗಿ ಹಾಗೂ ಮುಂದಿನ ಅಗತ್ಯ ಕಾನೂನು ಕ್ರಮಕ್ಕೆ ಮುಂದಾಗಿದ್ದೇವೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಅತ್ಯಾಧುನಿಕ ಜಿಲ್ಲಾಸ್ಪತ್ರೆ 18 ತಿಂಗಳಲ್ಲಿ ಸೇವೆಗೆ ಲಭ್ಯ

ತುಮಕೂರು: ಸಾರ್ವಜನಿಕರ ಬೇಡಿಕೆಯಂತೆ ಆಧುನಿಕ ಸೌಲಭ್ಯಗಳ ಜಿಲ್ಲಾಸ್ಪತ್ರೆ 18 ತಿಂಗಳಲ್ಲಿ ಜನಸೇವೆಗೆ ಸಿಗಲಿದೆ ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ತಿಳಿಸಿದರು.

ಜಿಲ್ಲಾ ಆಸ್ಪತ್ರೆ ಹಳೆಯ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗೆ ಸೋಮವಾರ ಚಾಲನೆ ನೀಡಿ ಮಾತನಾಡಿದರು.

ಪ್ರಸ್ತುತ ಸಾರ್ವಜನಿಕ ಆಸ್ಪತ್ರೆ ಸ್ವಾತಂತ್ರ್ಯ ಪೂರ್ವದಲ್ಲಿ ನಿರ್ಮಾಣವಾದ ಆಸ್ಪತ್ರೆಯಾಗಿದ್ದು, ಅತ್ಯಾಧುನಿಕ ಸೌಲಭ್ಯಗಳ ಆಸ್ಪತ್ರೆ ನಿರ್ಮಿಸುವಂತೆ ಸಾರ್ವಜನಿಕರಿಂದ ಬೇಡಿಕೆ ಇತ್ತು. ಈ ಹಿನ್ನೆಲೆಯಲ್ಲಿ ಇದೇ ಜಾಗದಲ್ಲಿ ಜಿಲ್ಲಾ ಆಸ್ಪತ್ರೆಯನ್ನು 131 ಕೋಟಿ ರು. ವೆಚ್ಚದಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣವಾಗಲಿದ್ದು, ಮುಂದಿನ 18 ತಿಂಗಳಲ್ಲಿ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ ಎಂದು ಅವರು ತಿಳಿಸಿದರು.

18 ತಿಂಗಳಿಗೆ ಮುನ್ನವೇ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದ ಅವರು, ಪಾರಂಪರಿಕ ಆಸ್ಪತ್ರೆ ಕಟ್ಟಡದ ಕಲ್ಲುಗಳನ್ನು ಹಾಗೂ ಇತರ ಸಾಮಗ್ರಿಗಳನ್ನು ಅತ್ಯಂತ ಜತನದಿಂದ ಬಳಸಿಕೊಳ್ಳುವಂತೆ ಈ ಹಿಂದೆ ಸಮಗ್ರವಾಗಿ ಯೋಚಿಸಿ ತೀರ್ಮಾನಿಸಲಾಗಿದೆ. ಹಿಂದಿನ ಕಲ್ಲುಗಳನ್ನು ಸದ್ಬಳಕೆ ಮಾಡಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಕಾಮಗಾರಿಗೆ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಅವರು ಚಾಲನೆ ನೀಡಿದರು.

ಸೂರಜ್ಗೆ ಸಂತಾಪ: ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸೂರಜ್ ಹೆಗಡೆ ಅವರ ನಿಧನಕ್ಕೆ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ತೀವ್ರ ಸಂತಾಪ ವ್ಯಕ್ತಪಡಿಸಿದರು.

ಗ್ಯಾರಂಟಿ ಸಮಿತಿಯ ಅಧ್ಯಕ್ಷರಾಗಿದ್ದ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ, ಅವರ ಕುಟುಂಬ ವರ್ಗಕ್ಕೆ ಈ ನೋವನ್ನು ಭರಿಸುವ ಶಕ್ತಿ ಯನ್ನು ಭಗವಂತ ಕರುಣಿಸಲಿ ಎಂದು ಸಂತಾಪ ವ್ಯಕ್ತಪಡಿಸಿದರು.

ಸಚಿವ ಸ್ಥಾನ ಸಿಗುವ ವಿಶ್ವಾಸ: ಶಾಸಕ ಸುಬ್ಬಾರೆಡ್ಡಿ

ಗುಡಿಬಂಡೆ: ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತು ಚರ್ಚೆಗಳು ಜೋರಾಗಿರುವ ನಡುವೆಯೇ, ಬಾಗೇಪಲ್ಲಿ-ಗುಡಿಬಂಡೆ ಕ್ಷೇತ್ರದ ಶಾಸಕ ಸುಬ್ಬಾರೆಡ್ಡಿ ಅವರು ಈ ಬಾರಿ ಸಚಿವ ಸ್ಥಾನ ಸಿಗುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಶೀಘ್ರದಲ್ಲೇ ಸಚಿವ ಸಂಪುಟದ ಎರಡನೇ ಪಟ್ಟಿ ಬಿಡುಗಡೆಯಾಗಲಿದ್ದು, ಅದರಲ್ಲಿ ನನ್ನ ಹೆಸರು ಇರುತ್ತೆ ಎಂದು ಹೇಳಿಕೆ ನೀಡಿದ್ದಾರೆ.

ಸಚಿವ ಸ್ಥಾನದ ಕುರಿತು ಮಾತನಾಡಿರುವ ಶಾಸಕ ಸುಬ್ಬಾರೆಡ್ಡಿಯವರು, ನಾನು ಪಕ್ಷದ ಶಿಸ್ತಿನ ಸಿಪಾಯಿ. ಸತತವಾಗಿ ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದು, ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಜೊತೆಗೆ ಪಕ್ಷದ ಬಲವರ್ಧನೆಯಲ್ಲೂ ಮುಂದಿದ್ದೇನೆ. ಡಿ.ಕೆ.ಶಿವಕುಮಾರರವರು ಮುಖ್ಯಮಂತ್ರಿಯಾಗುವ ಸಮಯದಲ್ಲಿ ನಾನು ಸಹ ವರಿಷ್ಟರಲ್ಲಿ ಸಚಿವ ಸ್ಥಾನದ ಬೇಡಿಕೆ ಇಟ್ಟಿದ್ದೆ. ಆಗ ಅವರು ನನಗೆ ಸಚಿವ ಸ್ಥಾನ ನೀಡುವ ಭರವಸೆ ನೀಡಿದ್ದರು. ಆದರೆ ಕಾರಣಾಂತರಗಳಿಂದ ಮೊದಲ ಪಟ್ಟಿಯಲ್ಲಿ ನನಗೆ ಸಚಿವ ಸ್ಥಾನ ಸಿಗಲಿಲ್ಲ. ಮತ್ತೊಮ್ಮೆ ಸಿಎಂ ಶಿವಕುಮಾರ್‌ಹಾಗೂ ಹಿರಿಯ ನಾಯಕರಾದ ಸಿದ್ದರಾಮಯ್ಯನವರ ಬಳಿ ನೀವು ಕೊಟ್ಟ ಮಾತಿನಂತೆ ನನಗೆ ಸಚಿವ ಸ್ಥಾನ ಕೊಡಿ ಎಂದು ಕೇಳಿದ್ದೇನೆ. ಎರಡನೇ ಪಟ್ಟಿಯಲ್ಲಿ ನನಗೆ ಸಚಿವ ಸ್ಥಾನ ಕೊಡುತ್ತೇವೆ ಎಂದು ಮಾತು ಕೊಟ್ಟಿದ್ದಾರೆ ಎಂದರು. ಸಚಿವ ಸ್ಥಾನ ಸಿಗದೇ ಇದ್ದರೇ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಕ್ಷೇತ್ರದ ಎಲ್ಲ ಮುಖಂಡರು, ಕಾರ್ಯಕರ್ತರೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳೋಣ ಎಂದು ಮನವಿ ಮಾಡಿದ್ದೇನೆ ಎಂದರು.



ಸುದ್ದಿಗಾರರೊಂದಿಗೆ ಶಾಸಕ ಸುಬ್ಬಾರೆಡ್ಡಿ ಅವರು ಮಾತನಾಡಿದರು.

PUBLIC NOTICE

This is to bring to the notice of the general public that our client **Mr.Sudhakar** S/o Sri.R.Munian is intending to purchase the schedule property from Mrs.Banu V D/o Sri.Venkat Reddy GA; person/s objecting for the proposed purchase or are having any right, title, interest or any type of claim over the scheduled property is hereby called upon to file their objections /claims what so ever along with documentary proof on or before **7 days** from the date of publication of this notice with the under mentioned advocate failing which our clients shall proceed and complete the sale transaction with the above stated person.

SCHEDULE PROPERTY

Item No.1: All the Piece and Parcel of the agricultural land bearing **Sy.No.75/2 measuring 11 guntas** situated at Saggya Sargur village, Halaguru Hobli, Malavalli taluk Mandya District and bounded on:
East by : Halla, **West by :** Sy.no.75/1 belonging to K.M.Ramesh, **North by :** Sy.No.75/3 belonging to Mrs.Vidya and **South by :** Sy.No.76/5 & 76/4 belonging to Mrs.Apoorva.

Item No.2 : All the Piece and Parcel of the agricultural land bearing **Sy.No.75/3 measuring 0.01.12.00 guntas** situated at Saggya Sargur village, Halaguru Hobli, Malavalli taluk Mandya District & bounded on:
East by : Sy.No.75/2 belonging to Mrs.Vidya
West by : Sy.no.75/3 belonging to Mr.Somashekar C,
North by : Sy.No.19 belonging to Mr.Ravi kumar and
South by : Sy.No.75/2 belonging to Mrs.Vidya.

Item No.3: All the Piece and Parcel of the agricultural land bearing **New Sy.No.19/5 & old sy.No.19/3 measuring 02.04 guntas** situated at Siddapura village, Virupakshipura Hobli, Channapatna Taluk, Ramanagara District bounded on **East by :** Halla, **West by :** Block 2 land, **North by :** Lahi No.2 land, **South by :** Saggya Sargur border.

C.K.V.K. LAW ASSOCIATES
Mr. VENKATESH CHANDRAN, Advocate & Legal Consultant, Mb-9845846428, 9108784843, 080-48658774, No.235 (Old No.13), 9th Main, 4th Block, Hennur Cross, Kalyan Nagar Post, Bangalore-560043

PUBLIC NOTICE

This is to bring to the notice of the general public that our client **Mr.Sudhakar** S/o Sri.R.Munian is intending to purchase the schedule property from Mrs.Banu V D/o Sri.Venkat Reddy GA; person/s objecting for the proposed purchase or are having any right, title, interest or any type of claim over the scheduled property is hereby called upon to file their objections /claims what so ever along with documentary proof on or before **7 days** from the date of publication of this notice with the under mentioned advocate failing which our clients shall proceed and complete the sale transaction with the above stated person.

SCHEDULE PROPERTY

Item No.1: All the Piece and Parcel of the agricultural land bearing **Sy.No.75/2 measuring 11 guntas** situated at Saggya Sargur village, Halaguru Hobli, Malavalli taluk Mandya District and bounded on:
East by : Halla, **West by :** Sy.no.75/1 belonging to K.M.Ramesh, **North by :** Sy.No.75/3 belonging to Mrs.Vidya and **South by :** Sy.No.76/5 & 76/4 belonging to Mrs.Apoorva.

Item No.2 : All the Piece and Parcel of the agricultural land bearing **Sy.No.75/3 measuring 0.01.12.00 guntas** situated at Saggya Sargur village, Halaguru Hobli, Malavalli taluk Mandya District & bounded on:
East by : Sy.No.75/2 belonging to Mrs.Vidya
West by : Sy.no.75/3 belonging to Mr.Somashekar C,
North by : Sy.No.19 belonging to Mr.Ravi kumar and
South by : Sy.No.75/2 belonging to Mrs.Vidya.

Item No.3: All the Piece and Parcel of the agricultural land bearing **New Sy.No.19/5 & old sy.No.19/3 measuring 02.04 guntas** situated at Siddapura village, Virupakshipura Hobli, Channapatna Taluk, Ramanagara District bounded on **East by :** Halla, **West by :** Block 2 land, **North by :** Lahi No.2 land, **South by :** Saggya Sargur border.

C.K.V.K. LAW ASSOCIATES
Mr. VENKATESH CHANDRAN, Advocate & Legal Consultant, Mb-9845846428, 9108784843, 080-48658774, No.235 (Old No.13), 9th Main, 4th Block, Hennur Cross, Kalyan Nagar Post, Bangalore-560043

IN THE COURT OF THE ADDITIONAL CIVIL JUDGE AND JMFC AT MADHUGIRI C.MIS. NO. 148 /2026.

PETITIONER: MARAKKA D/o Late Chigalingappa @ Chikkalingappa and wife of Late Nagappa, Aged about 54 years,
2.SRINIVASA S/o Late Nagappa, aged about 49 years, Both are R/at Badigondanahalli village, Dodderi Hobali, Madhugiri Taluk Tumakuru District.
- VS-
RESPONDENT: The Tahashildar, Taluk Office, Madhugiri Town, Madhugiri Taluk.

PAPER PUBLICATION

WHEREAS, the petitioner has filed the above petition for seeking of Death certificate of 1st petitioner's father by name Chigalingappa @ Chikkalingappa S/o Late Sannappa who died on 25-07-1984 at Badigondanahalli village, Dodderi Hobali, Madhugiri Taluk.
If anybody have any objection over the issuance of the said death certificate may appear in above Hon'ble Court either in person are through your advocate on 19/07/2026 at 11-00 am.
Failing to appear the matter will be heard and decided ex-parte.
Given under my hand and seal of the court this day on 6th June 2026

By order of court
Chief Ministerial Officer
COURT OF THE ADDITIONAL CIVIL JUDGE AND JMFC AT MADHUGIRI.
Advocate for Petitioners
D.H SUDHAKAR
Pavagada.

IN THE COURT OF THE PRINCIPAL CIVIL JUDGE AND J.M.F.C. AT TUMKURU
C.MIS.No.142/2026

Petitioners:- 1. B.M.Venkateshaiah s/o Late Muthappa, aged about 70 years. **2. Lakshmidevamma w/o Late Govindappa** aged 72 years. **3. B.M.Venkateshaiah s/o Late Murthappa,** aged 70 years. 4. **Jayalakshmamma w/o Late Lakshminarasimhaiah,** aged about 68 years. r/o Kotebeedhi, Thyamagondlu, at post, Nelamangala, Taluk, Bangalore rural, District. **5. Aluvelamma w/o Late D.N.Munevenkataswamy,** aged about 67 years. r/o S. Devaganahalli, at post, Sidlaghatta taluk, Chikkaballapura dist. **6. B.M. Gopalaiah s/o Late Murthappa,** aged about 66 years. **7. B.M. Rajanna s/o Late Murthappa,** aged about 65 years. **8. B.M. Krishnappa s/o Late Murthappa,** aged about 64 years. Petitioner No.1 to 3 and 6 to 8 are r/o Buruganahalli, Kasaba hobli, Koratagere taluk.

V/S

Respondents:- The Registrar of birth and death's and The Tahasildar, Koratagere, Koratagere taluk.

PUBLIC NOTIFICATION

The above named petitioner is filed petition for obtain the death certificate of the Petitoners grandmother **Chikkathimmakka w/o Puttanajappa,** died on 02-03-1941 at Buruganahalli village, Kasaba hobli, Koratagere taluk. is there any other legal representatives are here by summoned to appear before this court in person or by a pleader on:-01-08-2026 at 11-00 A.M. to answer the same, failing which the petition will be disposed off exparte.Given under my hand and the seal of the court on this day of 04-06-2026.

By order of the court
Sd/-, shirastedar
chivil judge (jr. Dn) & J.M.F.C. court Tumkuru.
G.M. Krisnhnamurthy, Advocate,
Komal Girish.N.S, Advocate
Near Mini Vidhana Soudha, Koratagere.
Advocate for petitioner.

IN THE COURT OF THE PRINCIPAL CIVIL JUDGE AND J.M.F.C. AT TUMKURU
C.MIS.No.141/2026

Petitioners:- 1. Venkatachalaiah s/o Late Bheemaiah, aged about 57 years. **2. Lakshmidevamma w/o Late Govindappa,** aged about 72 years. **3. B.M.Venkateshaiah s/o Late MuRthappa,** aged about 70 years. **4. Jayalakshmamma w/o Late Lakshminarasimhaiah,** aged about 68 years. r/o Kotebeedhi, Thyamagondlu, at post, Nelamangala, Taluk, Bangalore rural, District. **5. Aluvelamma w/o Late D.N.Munevenkataswamy,** aged about 67 years. r/o S. Devaganahalli, at post, Sidlaghatta taluk, Chikkaballapura dist. **6. B.M.Gopalaiah s/o Late Murthappa,** aged about 66 years. **7. B.M.Rajanna s/o Late Murthappa,** aged about 65 years. **8. B.M.Krishnappa s/o Late Murthappa,** aged about 64 years. Petitioner No.1 to 3 and 6 to 8 are r/o Buruganahalli, Kasaba hobli, Koratagere taluk.

V/S

Respondents:- The Registrar of birth and death's and The Tahasildar, Koratagere taluk.

PUBLIC NOTIFICATION

The above named petitioner is filed petition for obtain the death certificate of the Petitoners grandfather **puttananjappa son of Venkataravanappa,** died on 05-04-1936 at Buruganahalli village, Kasaba hobli, Koratagere taluk. is there any other legal representatives are here by summoned to appear before this court in person or by a pleader on:-01-08-2026 at 11-00 A.M. to answer the same, failing which the petition will be disposed off exparte.Given under my hand and the seal of the court on this day of 04-06-2026.

By order of the court
Sd/-, shirastedar
chivil judge (jr. Dn) & J.M.F.C. court Tumkuru.
G.M. Krisnhnamurthy, Advocate,
Komal Girish.N.S, Advocate
Near Mini Vidhana Soudha, Koratagere.
Advocate for petitioner.

IN THE COURT OF THE PRINCIPAL CIVIL JUDGE AND J.M.F.C. AT TUMKURU
C.MIS.No.143/2026

Petitioners:- 1. Lakshmidevamma w/o Late Govindappa, aged about 72 years. **2. B.M.Venkateshaiah s/o Late Muthappa,** aged about 70 years. **3. Jayalakshmamma w/o Late Lakshminarasimhaiah,** aged about 68 years. r/o Kotebeedhi, Thyamagondlu, at post, Nelamangala, Taluk, Bangalore rural, District. **4. Aluvelamma w/o Late D.N.Munevenkataswamy,** aged about 67 years. r/o S. Devaganahalli, at post, Sidlaghatta taluk, Chikkaballapura dist. **5. B.M. Gopalaiah s/o Late Murthappa,** aged about 66 years. **6. B.M. Rajanna s/o Late Murthappa,** aged about 65 years. **7. B.M. Krishnappa s/o Late Murthappa,** aged about 64 years. Petitioner No.1,2 and 5 to 7 are r/o Buruganahalli, Kasaba hobli, Koratagere taluk.

V/S

Respondents:- The Registrar of birth and death's and The Tahasildar, Koratagere, Koratagere taluk.

PUBLIC NOTIFICATION

The above named petitioner is filed petition for obtain the death certificate of the Petitoners father **Murthappa s/o Puttananjappa,** died on 03-05-1977 at Buruganahalli village, Kasaba hobli, Koratagere taluk. is there any other legal representatives are here by summoned to appear before this court in person or by a pleader on:-01-08-2026 at 11-00 A.M. to answer the same, failing which the petition will be disposed off exparte. Given under my hand and the seal of the court on this day of 04-06-2026.

By order of the court
Sd/-, shirastedar
chivil judge (jr. Dn) & J.M.F.C. court Tumkuru.
G.M. Krisnhnamurthy, Advocate,
Komal Girish.N.S, Advocate
Near Mini Vidhana Soudha, Koratagere.
Advocate for petitioner.

IN THE COURT OF THE PRINCIPAL CIVIL JUDGE AND J.M.F.C. AT TUMKURU
C.MIS.No.194/2026

Petitioners:- 1. Lingamma w/o Late Naganna, aged about 65 years. r/o Pannenahalli, Holavanahalli hobli, Koratagere taluk. **2. Gangamma w/o Sanappa,** aged 60 years. r/o Chunchenahalli, Puravara hobli, Madhugiri taluk. **3. G.M.Hanumantharaju s/o Mallaiah,** aged 58 years. **4. G.M. Hanumaiah s/o Late Mallaiah,** aged about 53 years. Petitioner No.3 and 4 and are r/o Gidaganahalli, Urdigere hobli, Tumakuru taluk & dist.

V/S

Respondents:- The Registrar of birth and death's and The deputy Tahasildar, Nada office, Urdigere hobli, Tumkur taluk and dist.

PUBLIC NOTIFICATION

The above named petitioner is filed petition for obtain the death certificate of the Petitoners father **Mallaiah s/o Hanumaiah,** died on 01-06-1983 at. Gidaganahalli village, Urdigere hobli, Tumakuru taluk & dist. is there any other legal representatives are here by summoned to appear before this court in person or by a pleader on:-10-07-2026 at 11-00 A.M. to answer the same, failing which the petition will be disposed off exparte. Given under my hand and the seal of the court on this day of 04-06-2026.

By order of the court
Sd/-, shirastedar
chivil judge (jr. Dn) & J.M.F.C. court Tumkuru.
G.M. Krisnhnamurthy, Advocate,
Komal Girish.N.S, Advocate
Near Mini Vidhana Soudha, Koratagere.
Advocate for petitioner.

ಶಿಸ್ತು ಅಳವಡಿಸಿಕೊಂಡರೆ ಸಾಧನೆ ಸಾಧ್ಯ

ಶಿರಾ: ನಗರದ ಬಾಲಕಿಯರ ಸರಕಾರಿ ಪದವಿಪೂರ್ವ ಕಾಲೇಜು ಹಾಗೂ ಪ್ರೌಢಶಾಲೆಗೆ ಇಂದು ಮಾನ್ಯ ವಿಧಾನ ಪರಿಷತ್ ಶಾಸಕರಾದ ಚಿದಾನಂದ್ ಎಂ. ಗೌಡ ಅವರು ಭೇಟಿ ನೀಡಿ, ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ಕೂಲ್ ಬ್ಯಾಗ್ಗಳನ್ನು ವಿತರಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಶಾಸಕ ಚಿದಾನಂದ್ ಎಂ. ಗೌಡ ಅವರು ತಮ್ಮ ವೈಯಕ್ತಿಕ ವೆಚ್ಚದಲ್ಲಿ ಸರಕಾರಿ ಕಾಲೇಜು ಹಾಗೂ ಹೈಸ್ಕೂಲ್ನ ಸುಮಾರು 2000 ವಿದ್ಯಾರ್ಥಿಗಳಿಗೆ ಆಕರ್ಷಕ ಹಾಗೂ ಉನ್ನತ ಗುಣಮಟ್ಟದ ಸ್ಕೂಲ್ ಬ್ಯಾಗ್ಗಳನ್ನು ವಿತರಿಸುವ ಮೂಲಕ ತಮ್ಮ ಅಪಾರ ಸಾಮಾಜಿಕ ಕಳಕಳಿಯನ್ನು ಮೆರೆದಿದ್ದಾರೆ. ಏಕಕಾಲದಲ್ಲಿ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಬ್ಯಾಗ್ ಪಡೆದ ವಿದ್ಯಾರ್ಥಿನಿಯರ ಮೊಗದಲ್ಲಿ ಸಂತಸದ ಮಂದಹಾಸ ಮೂಡಿತ್ತು.

ಬ್ಯಾಗ್ ವಿತರಿಸಿ ಮಾತನಾಡಿದ ಎಂಎಲ್ ಸಿ ಚಿದಾನಂದ್ ಎಂ ಗೌಡ ರವರು, ವಿದ್ಯಾರ್ಥಿಗಳಿಗೆ ಅತ್ಯುತ್ತಮ ಪ್ರೇರಣಾದಾಯಕ ಭಾಷಣ ಮಾಡಿದರು.

ವಿದ್ಯಾರ್ಥಿಗಳು ಸಮಯ ಪ್ರಜ್ಞೆ ಅಳವಡಿಸಿಕೊಂಡು, ಕಷ್ಟಪಟ್ಟು ಓದಿ ಉನ್ನತ ಹುದ್ದೆಗಳನ್ನು ಅಲಂಕರಿಸುವ ಮೂಲಕ ಪೋಷಕರಿಗೆ ಹಾಗೂ ಶಾಲೆಗೆ ಕೀರ್ತಿ ತರಬೇಕು,' ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು, ಮುಖ್ಯೋಪಾಧ್ಯಾಯರು, ಶಾಲಾ ಅಭಿವೃದ್ಧಿ ಮಂಡಳಿ ಪದಾಧಿಕಾರಿಗಳು, ಶಿಕ್ಷಕ ವೃಂದ, ಜಿಲ್ಲಾ ಉಪಾಧ್ಯಕ್ಷರಾದ ಚಿಕ್ಕಣ್ಣ, ಜಿಲ್ಲಾ ಕಾರ್ಯದರ್ಶಿ ಕುಮಾರ್ ಮಾಸ್ಟರ್, ನಗರ ಮಂಡಲ ಅಧ್ಯಕ್ಷರಾದ ಗಿರಿಧರ್, ಪ್ರಧಾನ ಕಾರ್ಯದರ್ಶಿ ಭಾಸ್ಕರ್‌ಮತ್ತು ಪುರುಷೋತ್ತಮ್, ಉಪಾಧ್ಯಕ್ಷರಾದ ಬೊಪ್ಪರಾಯಪ್ಪ ಮತ್ತು ನಾಗರಾಜ್ ಗೌಡ, ಕಾರ್ಯದರ್ಶಿ ಧೀರೇಶ್, ಸೈಯದ್ ಬಾಬಾ,

ಯುವ ಮೋರ್ಚಾ ಅಧ್ಯಕ್ಷರಾದ ತಡಕಲೂರು ಹರೀಶ್, ಎಸ್ಟಿ ಮೋರ್ಚಾ ಅಧ್ಯಕ್ಷರಾದ ತೇಜಸ್ವರ್, ಭೀರೇಶ್ವರ ಕ್ರೆಡಿಟ್ ಕೋ-ಆಪರೇಟೀವ್ ನಿರ್ದೇಶಕರಾದ ರಂಗನಾಥ್, ಮಹಿಳಾ ಮೋರ್ಚಾ ಹೇಮಲತ, ಅರುಣ, ಮಂಜುಳ, ಉಷಾ, ವಿಜಯಮ್ಮ, ತಿಮ್ಮರಾಜಮ್ಮ, ಅಜಿತ್, ನರಸಿಂಹಮೂರ್ತಿ, ಗುಂಡಪ್ಪ ಹಾಗೂ ಅನೇಕ ಮುಖಂಡರು ಉಪಸ್ಥಿತರಿದ್ದರು.

ನಗರದ ಬಾಲಕಿಯರ ಸರಕಾರಿ ಪದವಿಪೂರ್ವ ಕಾಲೇಜು ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ವಿಧಾನ ಪರಿಷತ್ ಸದಸ್ಯ ಚಿದಾನಂದ್ ಎಂ. ಗೌಡ ಉಚಿತವಾಗಿ ಸ್ಕೂಲ್ ಬ್ಯಾಗ್ಗಳನ್ನು ವಿತರಿಸಿದರು.

ಮನೆಗೆರೆಡು ಮರ-ಬದುಕಿಗೆ ಹೆಮ್ಮರ

ಚೇಳೂರು: ಶುದ್ಧ ಉತ್ತಮ ವಾತಾವರಣವಿದ್ದರೆ ಆರೋಗ್ಯಕರ ಹಾಗೂ ಜೀವನ ಮನೆಗೆ ನಡೆಸಬಹುದಾಗಿದ್ದು ಪ್ರತಿಯೊಬ್ಬರೂ ಮನೆಗೆ ಎರಡರೆಡು ಗಿಡ ನೆಡುವ ಮೂಲಕ ಪೋಷಣೆ ಮಾಡಿ ಪರಿಸರ ಕಾಪಾಡುವ ಕೆಲಸ ಮಾಡಬೇಕೆಂದು ಚೇಳೂರು ತಾಲೂಕು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಕೃಷಿ ಅಧಿಕಾರಿ ಅಭೀಷೇಕ್ ಹೇಳಿದರು.

ಚೇಳೂರು ಪಟ್ಟಣದ ಗೆರಿಗಿರೆಡ್ಡಿಪಾಳ್ಯದ ಸರಕಾರಿ ಶಾಲೆ ಆಡಳಿತ ಮಂಡಳಿ ಮತ್ತು ಚೇಳೂರು ತಾಲೂಕು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭೀವೃದ್ಧಿ ಆಶ್ರಯದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಇಂದು ಸೋಮವಾರ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ಮಾನವನ ಆರೋಗ್ಯಕರ ಜೀವನಕ್ಕಾಗಿ ಪರಿಸರದಲ್ಲಿ ಶುದ್ಧ ಗಾಳಿ.

ಸಕಾಲಕ್ಕೆ ಮಳೆ ಬೆಳೆಯಾಗಲು ಗಿಡ ಮರಗಳ ಅಗತ್ಯತೆ ಇದೆ. ಪರಿಸರದಲ್ಲಿ ಏನಾದರೂ ಏರುಪೇರು ಆದಲ್ಲಿ ಹವಾಮಾನ ವೈಫರಿತ್ಯ ಎದುರಿಸಬೇಕಾಗಿದೆ ಎಂದು ಎಚ್ಚರಿಸಿದರು.

ಶಾಲಾ ಸಹ ಶಿಕ್ಷಕ ಎನ್.ಕೆ. ಮುನಿಸ್ವಾಮಿರೆಡ್ಡಿ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಟ್ರಾಫಿಕ್ ಸಮಸ್ಯೆಯಿಂದ ವಾಯುಮಾಲಿನ್ಯ ಹೆಚ್ಚಾಗುತ್ತಿದ್ದು ಇದರಿಂದ ಪರಿಸರ ಕಲಷಿತಗೊಳ್ಳುತ್ತಿದೆ. ಪ್ರತಿಯೊಬ್ಬ ನಾಗರಿಕರು ಪರಿಸರದ ಸಮತೋಲನ ಕಾಪಾಡಲು ಗಿಡ ಮರಗಳನ್ನು ನೆಟ್ಟು ಪೋಷಣೆ ಮಾಡಬೇಕು ಗಿಡ ನೆಟ್ಟರೆ ಮಳೆಯಾಶ್ರಯ ಹೊಂದುವವರೆಗೆ ನೀರನ್ನು ಹಾಕಿ ಪೋಷಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಚೇಳೂರು ತಾಲೂಕು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭೀವೃದ್ಧಿ ಮೇಲ್ವಿಚಾರಕಿ ರಾಧೀಕಾ. ಸೇವಾ ಪ್ರತಿನಿಧಿ ಮಂಜುಳ. ಶಿಕ್ಷಕ ನಾಗರಾಜ. ಆಶಾ ಕಾರ್ಯಕರ್ತೆ ಆಯಿಷಾ. ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳಾದ ಗೀತಾ. ಕನ್ಯಾ.ನಾಗಮ್ಮ. ಶಾಲೆಯ ಎಸ್.ಡಿ.ಎಂ.ಸಿ ಮಾಜಿ ಅಧ್ಯಕ್ಷ ಸಿಂಗಿರಿ ನರಸಿಂಹಪ್ಪ. ಪೋಷಕರುಗಳು. ಹಾಜರಿದ್ದರು.

ಚೇಳೂರು ಪಟ್ಟಣದ ಗೆರಿಗಿರೆಡ್ಡಿಪಾಳ್ಯದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮಕ್ಕೆ ಅಭೀಷೇಕ್ ಅವರು ಚಾಲನೆ ನೀಡಿದರು.

ಶಿಕ್ಷಣದ ಜತೆ ಕೌಶಲ ಕಲಿಸಿ: ಕರವೇ ಜಿಲ್ಲಾಧ್ಯಕ್ಷ

ಕೋಲಾರದ ಸರಕಾರಿ ನೂತನ ಪ್ರೌಢಶಾಲೆಯಲ್ಲಿ ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡರ ಜನ್ಮದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

ಕೋಲಾರ: ಯುವಶಕ್ತಿಗೆ ಶಿಕ್ಷಣದ ಜತೆಗೆ ಕೌಶಲ್ಯ ಕಲೆ ಮತ್ತು ಸಂವಹನ ನೈಪುಣ್ಯತೆಯನ್ನು ಕಲಿಸಲು ಶಾಲಾ-ಕಾಲೇಜುಗಳು ಮುಂದಾಗಬೇಕೆಂದು ಕರವೇ ಜಿಲ್ಲಾಧ್ಯಕ್ಷ ಮೇಡಿಹಾಳ ಎಂ.ಕೆ.ರಾಘವೇಂದ್ರ ಹೇಳಿದರು.

ಸರ್ಕಾರಿ ನೂತನ ಪ್ರೌಢಶಾಲೆಯಲ್ಲಿ ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡರ ಜನ್ಮದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಿ ಮಾತನಾಡಿ, ಪದವೀಧರರು ಉತ್ತಮ ಅಂಕ ಗಳಿಸುತ್ತಿದ್ದರೂ ಸಾಮಾನ್ಯ ಜ್ಞಾನದ ಕೊರತೆಯಿಂದಾಗಿ ಸಂದರ್ಶನದಲ್ಲಿ ಮುಗ್ಗರಿಸುತ್ತಿರುವುದರಿಂದಾಗಿ ಶಿಕ್ಷಣದ ಜತೆಗೆ ಕೌಶಲ್ಯವನ್ನು ಕಲಿಸಬೇಕೆಂದರು. ಕೋಲಾರ ಜಿಲ್ಲೆಯ ಕೈಗಾರಿಕೋದ್ಯಮ ಉತ್ತರ ಭಾರತದ ಮಂದಿಯ ಮೇಲೆ ಅವಲಂಭನೆ ಆಗಿದ್ದು ಪ್ರಸ್ತುತ ಉತ್ತರ ಭಾರತದಲ್ಲೂ ಬೃಹತ್ ಕೈಗಾರಿಕೆಗಳು ಸ್ಥಾಪನೆ ಆಗುತ್ತಿರುವುದರಿಂದಾಗಿ ಕಾರ್ಮಿಕರು ಕ್ರಮೇಣ ತವರಿಗೆ ಮರಳುವುದರಿಂದಾಗಿ ಸ್ಥಳೀಯವಾಗಿ ಕಾರ್ಖಾನೆಗಳು ಮುಚ್ಚುವ ಸ್ಥಿತಿ ಬರುತ್ತದೆ ಎಂದು ಆತಂಕ ವ್ಯಕ್ತಪಡಿಸಿದ ರಾಘವೇಂದ್ರ ಅವರು ಇನ್ನಾದರೂ ಉದ್ಯಮಿಗಳು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸ್ಥಳೀಯ ಪ್ರತಿಭೆಗಳಿಗೆ ಉದ್ಯೋಗ ದೊರಕಿಸುವ ನಿಟ್ಟಿನಲ್ಲಿ ಮುಂದಾಗಬೇಕೆಂದು ಆಗ್ರಹಿಸಿದರು.

> ಸರಕಾರಿ ಪ್ರೌಢಶಾಲೆ ಮುಂಭಾಗ ಮತ್ತು ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವುದು ನಮ್ಮೆಲ್ಲರ ಜವಾಬ್ದಾರಿ ಆಗಿದ್ದು ಈ ನಿಟ್ಟಿನಲ್ಲಿ ಜೆಸಿಬಿ ಮೂಲಕ ಶಾಲಾವರಣವನ್ನು ಸ್ವಚ್ಛಗೊಳಿಸುವ ಮೂಲಕ ಸಸಿ ನೆಡುವ ಕೆಲಸ ಮಾಡಲಾಗುತ್ತದೆ. ಮುಂದಿನ ಹಂತದಲ್ಲಿ ಶಾಲೆಗೆ ಅಗತ್ಯವಾದ ಮೂಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.
> -ಎ.ಅಜಯ್ ಕುಮಾರ್, ಜಿಲ್ಲಾಧ್ಯಕ್ಷರು, ಸರಕಾರಿ ನೌಕರರ ಸಂಘ

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಎ. ಅಜಯ್ ಕುಮಾರ್‌ಮಾತನಾಡಿ, ಕೋವಿಡ್ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಕೈಗೆ ಬಂದ ಮೊಬೈಲ್ ಅನ್ನು ಇದೀಗ ಬಿಡಿಸುವುದು ನಮಗೆ ಸವಾಲಾಗಿದ್ದು ಮಕ್ಕಳು ಇನ್ನಾದರೂ ಓದಿನ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿ ಕೆಪಿಎಸ್ಸಿ ಮತ್ತು ಯುಪಿಎಸ್ಸಿ ಪರೀಕ್ಷೆಗಳನ್ನು ಪಾಸು ಮಾಡಬೇಕು. ಪತ್ರಿಕೆಗಳನ್ನು ಓದುವ ಜತೆಗೆ ಟಿವಿಯಲ್ಲಿ ವಾರ್ತೆಗಳನ್ನು ನೋಡುವ ಮೂಲಕ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಿಕೊಂಡು ಶೈಕ್ಷಣಿಕವಾಗಿ ಉನ್ನತಿ ಸಾಧಿಸಬೇಕು ಎಂದು ಸಲಹೆ ನೀಡಿದರು. ಅಕ್ಷರ ದಾಸೋಹದ ಶಿಕ್ಷಣಾಧಿಕಾರಿ ತಿಮ್ಮರಾಯಪ್ಪ ಮಾತನಾಡಿದರು.

ಉಪ ಪ್ರಾಂಶುಪಾಲೆ ಕೆ.ಎಸ್.ಸುನಂದಮ್ಮ, ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುನಿರಾಜು, ಕಾರ್ಯದರ್ಶಿ ನವೀನ್, ಕಾರ್ಮಿಕ ಘಟಕದ ಅಧ್ಯಕ್ಷ ಡಿ.ವಿ.ಮಂಜುನಾಥಗೌಡ, ಮುಖಂಡರಾದ ರಾಮಣ್ಣ,ಭದ್ರಮ್ಮ, ರೈತ ಘಟಕದ ಉಪಾಧ್ಯಕ್ಷ ಮಂಜುನಾಥಗೌಡ, ಗಣೇಶ್,ಶಿವಕುಮಾರ್, ಆನಂದ್, ಯಶವಂತ್ ಇದ್ದರು.

ಸಮಾಚಾರ ಸಣ್ಣದಲ್ಲ

ಹೆಚ್ಚಿನ ಬಿತ್ತನೆ ಬೀಜ ವಿತರಿಸಲು ಆಗ್ರಹ

ಚೇಳೂರು: ಮುಂಗಾರು ಹುಟ್ಟಿ ಎರಡು ಸಲ ಮಳೆ ಬ ರೈತಾಪಿ ಜನತೆ ಜಮೀನುಗಳಲ್ಲಿ ಉಳುಮೆ ಮಾಡುತ್ತಿದ್ದು ಕೃಷಿ ಇಲಾಖೆಯಲ್ಲಿ ಬಿತ್ತನೆ ಬೀಜ ಅಲ್ಪ ಸ್ವಲ್ಪ ಬಂದಿದ್ದು ಹೊಸ ತಾಲೂಕಿಗೆ ಹೆಚ್ಚಿನ ಬಿತ್ತನೆ ಬೀಜ ನೀಡಬೇಕೆಂದು ಕರ್ನಾಟಕ ರಾಜ್ಯ ಕೃಷಿಕ ಸಮಾಜದ ಚೇಳೂರು ತಾಲೂಕು ಅಧ್ಯಕ್ಷ ಸಿ.ಹೊಸಹುಡ್ಯ ವಿ.ಶಿವಾರೆಡ್ಡಿ ಹೇಳಿದರು. ಅವರು ತಾಲೂಕು ಕೃಷಿ ಕಚೇರಿಯಲ್ಲಿ ಮಾತನಾಡಿ, ರಾಸಾಯನಿಕ ಗೊಬ್ಬರಗಳ ಬಳಕೆ ಕಡಿಮೆ ಮಾಡಿ ಸಾವಯವ ಗೊಬ್ಬರಗಳ ಬಳಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ ಮುಂಗಾರು ಹಂಗಾಮಿನಲ್ಲಿ ರೈತರು ಬೀಜಗಳನ್ನ ಸಬ್ಸಿಡಿ ಧರದಲ್ಲಿ ಕೊಂಡುಕೊಳ್ಳಿ ಚೇಳೂರು ತಾಲೂಕಾದರೂ ಇನ್ನೂ ಹೋಬಳಿಯ ಮಟ್ಟದಲ್ಲಿದ್ದು ರೈತ ಸಂಪರ್ಕ ಕೇಂದ್ರಕ್ಕೆ ಸರಕಾರದ ವತಿಯಿಂದ ಬಿತ್ತನೆ ಬೀಜ ಈ ವರ್ಷ ಸ್ವಲ್ಪ ತಡವಾಗಿ ಶೇಂಗಾ ಬಂದಿದೆ ಮುಂಗಾರು ಬಂದು ಎರಡು ತಿಂಗಳಾದರೂ ಶೇಂಗಾ, ರಾಗಿ, ಅಲಸಂದಿ ತೊಗರಿ ಇತರೆ ಬಿತ್ತನೆ ಧಾನ್ಯಗಳು ಚೇಳೂರು ರೈತ ಸಂಪರ್ಕ ಕೇಂದ್ರಕ್ಕೆ ಸರಬರಾಜು ಇಲ್ಲ ಕೃಷಿ ಅಧಿಕಾರಿಗಳ ಬೇಜಾವಬ್ದಾರಿತನ ಎದ್ದು ತೋರಿಸುತ್ತಿದೆ ಇದೇ ಮುಂದುವರಿಸಿದರೆ ಕೃಷಿಕ ಸಮಾಜದ ವತಿಯಿಂದ ಪ್ರತಿಭಟನೆ ಮಾಡಲಾಗುವುದೆಂದು ಎಚ್ಚರಿಸಿದ್ದಾರೆ.

ಬಿಡದಿ ಟೌನ್ ಶಿಪ್ ವಿರೋಧಿಸಿ ಸ್ಥಳೀಯ ರೈತರ ಪ್ರತಿಭಟನೆ | ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಬೆಂಬಲ

ಸಿಎಂ ಕಡೆಯಿಂದ ಉತ್ತರ ಬಾರದಿದ್ದರೆ ಧರಣಿ

ವಿಶ್ವವಾಣಿ ಸುದ್ದಿಮನೆ ರಾಮನಗರ

ಬಿಡದಿ ಟೌನ್ ಶಿಪ್ ವಿಚಾರವಾಗಿ ಈ ಭಾರಿಯ ಅಧಿವೇಶನದಲ್ಲಿ ಚರ್ಚಿಸಲಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದ ಸರಿಯಾದ ಉತ್ತರ ಲಭಿಸದಿದ್ದರೆ, ಅಧಿವೇಶನದಲ್ಲಿ ಅನಿರ್ಧಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುತ್ತದೆ ಎಂದು ವಿಜಯಪುರ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು.

ಬಿಡದಿ ಟೌನ್ ಶಿಪ್ ವಿರೋಧಿಸಿ ಸ್ಥಳೀಯ ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದ ಅವರು, ಅಧಿವೇಶನದಲ್ಲಿ ನಡೆಸುವ ಪ್ರತಿಭಟನೆಗೆ ಬಿಡದಿಯ ರೈತರು ಸಹ ಸಹಕಾರ ನೀಡಬೇಕು. ಸಾವಿರಾರು ಮಂದಿ ಆಗಮಿಸಿ, ಸರಕಾರದ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದರು.

ಸರಕಾರದಿಂದ ನೆಮ್ಮದಿ ನಾಶ: ನೆಮ್ಮದಿಯಾಗಿ ಬದುಕುತ್ತಿರುವ ರೈತರ ಭೂಮಿಯನ್ನು ಕಸಿದುಕೊಂಡು ಸರಕಾರ ಟೌನ್ ಶಿಪ್ ಮಾಡಲು ಹೊರಟಿದೆ. ಹಾಗಾಗಿ ನಾನು ಈ ಬಗ್ಗೆ ಅಧಿವೇಶನದಲ್ಲಿ ಧ್ವನಿ ಎತ್ತಲಿದ್ದೇನೆ. ಇದಕ್ಕೆ ನಿಮ್ಮ ಸಹಕಾರವೂ ಅಗತ್ಯವಾಗಿದೆ. ನಮ್ಮ ಧ್ವನಿ ಅಡಗಿಸುವ ಕೆಲಸ ಮಾಡಿದರೆ, ಇದಕ್ಕೆ ನಾನು ಜಗ್ಗುವುದಿಲ್ಲ. ಗುಂಡಿಟ್ಟರೂ ಪರವಾಗಿಲ್ಲ ಬಿಡದಿ ಭಾಗದ ರೈತರ ಪರವಾಗಿ ನಾನು ಕೆಲಸ ಮಾಡಲಿದ್ದೇನೆ ಎಂದು ರೈತರಿಗೆ ಧೈರ್ಯ ಹೇಳಿದರು.


ಬಿಡದಿ ಟೌನ್ ಶಿಪ್ ವಿರೋಧಿಸಿ ಸ್ಥಳೀಯ ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಬಸನಗೌಡ ಯತ್ನಾಳ್ ಭೇಟಿ ನೀಡಿ, ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಬಿಡದಿ ಬೆಂಗಳೂರು ಪಕ್ಕದ ಮಲೆನಾಡು: ಬಿಡದಿ ಬೆಂಗಳೂರು ಪಕ್ಕದಲ್ಲಿರುವ ಮಲೆನಾಡು, ಇಲ್ಲಿನ ವಾತಾರಣವೂ ಯೋಗ್ಯವಾಗಿದೆ. ಆದರೆ, ರಾಜಕಾರಣಿಗಳ ಸ್ವಾರ್ಥಕ್ಕಾಗಿ ಇಲ್ಲಿ ಟೌನ್‌ಶಿಪ್ ಮಾಡಲು ಮುಂದಾಗಲಾಗುತ್ತಿದೆ. ಈ ಬಗ್ಗೆ ಎಚ್ಚರಿಕೆಯಿಂದರ ಇರಬೇಕು. ಜತೆಗೆ, ಈ ಬಿಡದಿ ಟೌನ್‌ಶಿಪ್ ಮುಂದುವರೆದರೆ 30ರಿಂದ 35 ಸಾವಿರ ಕೋಟಿ ಲೂಟಿ ಹೊಡೆಯುವ ಸಾಧ್ಯಗಳಿವೆ. ಹಾಗಾಗಿ ರೈತರು ಈ ಬಗ್ಗೆ ಜಾಗರೂಕರಾಗಿರಬೇಕು ಎಂದು ಮನವಿ ಮಾಡಿದರು.

ಬರಡು ಭೂಮಿ ಇದ್ದರೆ ಕ್ಷಮೆ ಕೇಳ್ತೀನಿ: ಡಿ.ಕೆ. ಶಿವಕುಮಾರ್‌ಅವರು ಈ ಹಿಂದಿನ ಅಧಿವೇಶನದಲ್ಲಿ ಮಾತನಾಡುವಾಗ ಬಿಡದಿ ಬರಡು ಭೂಮಿ ಹಾಗಾಗಿ ಟೌನ್ ಶಿಪ್ ನಿರ್ಮಿಸುತ್ತಿದ್ದೇವೆ ಎಂಬುದಾಗಿ ಹೇಳಿದ್ದರೂ, ಈ ಬಗ್ಗೆ ನನಗೆ ಅಸಮಾಧಾನವಿದೆ. ಅವರು ಸ್ಥಳಕ್ಕೆ ಆಗಮಿಸಿ ನೋಡಲಿ. ಅದನ್ನು ಬಿಟ್ಟು ಯಾರಿಗೋ ಅನುಕೂಲ ಕಲ್ಪಿಸಿಕೊಡುವುದಾಗಿ ಯೋಜನೆ ಮುಂದುವರೆಸುವುದು ಬೇಡ. ಒಂದೊಮ್ಮೆ ಒಂದು ಎಕರೆ ಬರಡು ಭೂಮಿ ಬಿಡದಿ ಸುತ್ತಮುತ್ತಲಿನ ಪ್ರದೇಶದಲ್ಲಿ ಲಭಿಸಿದರೆ, ನಾನೂ ರಾಜಕಾರಣದಲ್ಲಿ ನೇರವಾಗಿ ಕ್ಷಮೆಯಾಚಿಸಲು ಸಿದ್ಧನಿದ್ದೇನೆ ಎಂದು ಸವಾಲು ಹಾಕಿದರು.

ನಾಟಕವಾಡಲು ಬಂದಿಲ್ಲ: ಬಿಡದಿ ಸುತ್ತಮುತ್ತಲಿನ ಪ್ರದೇಶದಲ್ಲಿ ನನಗೆ ಸಂಬಂಧಿಸಿದ್ದಂತೆ ಒಂದಿಂಚೂ ಭೂಮಿ ಸಹ ಇಲ್ಲ. ನಾನು ಪ್ರಾಮಾಣಿಕವಾಗಿ ಕಳೆದ 455 ದಿನಗಳಿಂದ ತಮ್ಮ ಭೂಮಿಗಾಗಿ ಪ್ರತಿಭಟನೆ ನಡೆಸುತ್ತಿರುವ ರೈತರ ಪರವಾಗಿ ಹೋರಾಟ ಮಾಡಲು ಬಂದಿದ್ದೇನೆ. ಇದರಲ್ಲಿ ಯಾವುದೇ ನಾಟಕ ಇಲ್ಲ. ಅವರ ನೋವಿಗೆ ಧ್ವನಿಯಾಗಲು ಬಂದಿದ್ದೇನೆ ಎಂದರು.

ಫಲವತ್ತಾದ ಭೂಮಿಯಲ್ಲಿ ಟೌನ್ ಶಿಪ್ ನಿರ್ಮಾಣ: ಟೌನ್ ಶಿಪ್ ನಿರ್ಮಾಣ ಮಾಡಲು ಗುರುತಿರುವ ಜಾಗವೂ ರೈತರ ನೆಮ್ಮದಿಯಿಂದ ಜೀವನ ಕಟ್ಟಿಕೊಂಡಿದ್ದಾರೆ. ಫಲವತ್ತಾದ ಭೂಮಿಯಲ್ಲಿ ರೈತರು ಸುಭೀಕ್ಷವಾಗಿ ಉಳುಮೆ ಮಾಡುತ್ತಿದ್ದಾರೆ. ತೆಂಗು, ಮಾವು, ರೇಷ್ಮೆ ಹೈನುಗಾರಿಕೆ ಮಾಡಿಕೊಂಡು ಕೃಷಿಯನ್ನೇ ನಂಬಿ ಜೀವನ ಸಾಗಿಸುತ್ತಿದ್ದಾರೆ. ಇವರ ನೋವು ಅಧಿಕಾರದಲ್ಲಿರುವವರಿಗೆ ಕಾಣಿಸುತ್ತಿಲ್ಲ. ರೈತರು ಬದುಕು ಕಟ್ಟಿಕೊಂಡಿರುವ ಜಾಗವೇ ಇವರಿಗೆ ಮುಖ್ಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಬೈರಮಂಗಲ-ಕಂಚುಗಾರನಹಳ್ಳಿ ಭೂ ಹಿತರಕ್ಷಣಾ ಸಂಘದ ಅಧ್ಯಕ್ಷ ರಾಮಣ್ಣ, ಕಾರ್ಯದರ್ಶಿ ಶ್ರೀನಿವಾಸ್ ರೆಡ್ಡಿ, ಖಜಾಂಚಿ ನಾಗರಾಜು, ರೈತ ಮುಖಂಡರಾದ ಮಾರುತಿ, ಪ್ರಕಾಶ್, ರಾಧಾಕೃಷ್ಣ, ಅಶ್ವತ್ಥ್, ಕೃಷ್ಣ, ಜಯಮ್ಮ, ಸುಮಿತ್ರ, ಭಾಗ್ಯ ನಾಗರಾಜ್, ಮಂಜುನಾಥ್, ಹೇಮಂತ್, ಜ್ಯೋತಿ, ಚೈತ್ರಾ, ಅನಿತಾ ಸೇರಿದಂತೆ ನೂರಾರು ರೈತರು ಇದ್ದರು.

ಅಜ್ಜಯ್ಯ ಶಿಷ್ಯನಿಗೆ ಬುದ್ಧಿ ಕಲಿಸಲಿ

ಸಿಎಂ ಡಿಕೆಶಿ ಅವರು ತಮ್ಮ ಗುರುವಾದ ಗಂಗಾಧರ ಅಜ್ಜಯ್ಯ ಅವರ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ಹಾಗಾಗಿ ತಮ್ಮ ನೆಚ್ಚಿನ ಶಿಷ್ಯನಿಗೆ ಬಿಡದಿ ಟೌನ್ ಶಿಪ್ ವಿಚಾರವಾಗಿ ಗೂಂಡಾಗಿರಿ ಮಾಡಬೇಡ, ಇದನ್ನು ಹಿಂಪಡೆಯುವಂತೆ ಅಜ್ಜಯ್ಯ ಸೂಚನೆ ನೀಡಲಿ. ಸಾಡೇ ಸಾಥಿ ನಡೆಯುವ ಸಂದರ್ಭದಲ್ಲಿ ಅಧಿಕಾರ ಪಡೆದುಕೊಂಡಿರುವ ಡಿಕೆಶಿ ಅವರು 20 ತಿಂಗಳು ಮುಖ್ಯಮಂತ್ರಿಯಾಗಿರಬೇಕೆಂದರೆ ಮೊದಲು ಈ ಬಿಡದಿ ಟೌನ್ ಶಿಪ್ ವಿಚಾರವನ್ನು ಹಿಂದಕ್ಕೆ ಪಡೆದುಕೊಳ್ಳಬೇಕು. ಇಲ್ಲವಾದರೆ, ಇದೇ ವಿಚಾರವಾಗಿ ಅವರು ಅಧಿಕಾರ ಕಳೆದುಕೊಳ್ಳವು ಹಂತ ತಲುಪಲಿದ್ದಾರೆ. ಇನ್ನು ಜನತೆಯ ಸಹನೆಗೆ ಒಂದು ಹಂತವಿದೆ. ಆ ಹಂತ ದಾಟಿದ ಬಳಿಕ ಜನರೇ ರಾಜಕಾರಣಿಗಳ ಮನೆಗೆ ನುಗ್ಗಿ ಬುದ್ಧಿ ಕಲಿಸುತ್ತಾರೆ. ಈ ಬಗ್ಗೆ ನೇಪಾಳ ಹಾಗೂ ಪಶ್ಚಿಮ ಬಂಗಾಳ ಮತ್ತು ಬಿಹಾರವೇ ಸಾಕ್ಷಿ. ಇವರ ಗೂಂಡಾ ವರ್ತನೆಗಳು ಮಿತಿ ಮೀರುತ್ತಿದ್ದು, ಮತ್ತೊಂದು ಪಶ್ಚಿಮ ಬಂಗಾಳ ಆಗದಂತೆ ನೋಡಿಕೊಳ್ಳಬೇಕು ಎಂದು ಬಸವನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ಸಂಸದ ಸುಧಾಕರ ಜನ್ಮದಿನ ಜೂ.27ಕ್ಕೆ | ರಕ್ತದಾನ, ಆರೋಗ್ಯ ತಪಾಸಣಾ ಶಿಬಿರ

ಪ್ರತಿ ವಿದ್ಯಾರ್ಥಿಗೆ 5 ಸಾವಿರ ರು. ಪ್ರೋತ್ಸಾಧನ

ಚಿಕ್ಕಬಳ್ಳಾಪುರ: ಜೂ. 27ಕ್ಕೆ ಶ್ರೀಸಾಯಿಕೃಷ್ಣ ಚಾರಿಟಬಲ್ ಟ್ರಸ್ಟ್ (ರಿ) ಹಾಗೂ ಡಾ.ಕೆ.ಸುಧಾಕರ್ ಫೌಂಡೇಷನ್ ವತಿಯಿಂದ ಪಿಯುಸಿ, ಪದವಿ, ಸ್ನಾತಕಪದವಿ ವಿದ್ಯಾರ್ಥಿಗಳಿಗೆ 5 ಸಾವಿರ ನಗದು ಪುರಸ್ಕಾರ ನೀಡಿ ಸತ್ಕರಿಸುವ ಮೂಲಕ ಶೈಕ್ಷಣಿಕ ಜೀವನಕ್ಕೆ ಪ್ರೋತ್ಸಾಹ ನೀಡಲಾಗುವುದು ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮರಳಕುಂಟೆ ಕೃಷ್ಣಮೂರ್ತಿ ತಿಳಿಸಿದರು.

ನಗರದ ಸಂಸದರ ಗೃಹಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರೋತ್ಸಾಹ ಧನದ ಕ್ಯೂಆರ್ ಕೋಡ್ ವುಳ್ಳ ಪೋಸ್ಟರ್ ಬಿಡುಗಡೆ ಮಾಡಿ, ಅವರು ಮಾತನಾಡಿದರು. ಶ್ರೀಸಾಯಿಕೃಷ್ಣ ಚಾರಿಟಬಲ್ ಟ್ರಸ್ಟ್ (ರಿ) ಹಾಗೂ ಡಾ.ಕೆ ಸುಧಾಕರ್ ಫೌಂಡೇಷನ್ ವತಿಯಿಂದ ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ 18 ವರ್ಷಗಳಿಂದ ಸಮಾಜ ಸೇವಾ ಕಾರ್ಯಗಳನ್ನು ಮಾಡಿಕೊಂಡು ಬರಲಾಗುತ್ತಿದೆ.

ವಿದ್ಯಾರ್ಥಿಗಳ ಮತ್ತು ಯುವಕರ ಶಿಕ್ಷಣ ಗುಣಮಟ್ಟವನ್ನು ವೃದ್ಧಿಗೊಳಿಸುವ ಮತ್ತು ಶಾಲಾ ಕಾಲೇಜುಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಉತ್ತೇಜಿಸುವ ಸಲುವಾಗಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ನೋಟ್ ಪುಸ್ತಕಗಳು, ಮೆರಿಟ್ ಸ್ಕಾಲರ್‌ಶಿಪ್, ಉನ್ನತ ಶಿಕ್ಷಣಕ್ಕೆ ನೆರವು, ಕೋವಿಡ್ ಸಂದರ್ಭದಲ್ಲಿ ಪಾಲಕರನ್ನು ಕಳೆದುಕೊಂಡ ಮಕ್ಕಳನ್ನು ದತ್ತು ಪಡೆದು ಅವರಿಗೆ ನಿರಂತರ ಪೂರ್ಣಾವಧಿಯ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿ ನೈತಿಕ ಬೆಂಬಲ ನೀಡಲಾಗಿದೆ ಎಂದರು.

ಚಿಮುಲ್ ನಿರ್ದೇಶಕ ಕೆ.ವಿ.ನಾಗರಾಜ್ ಮಾತನಾಡಿ, ಜೂ.27ರಂದು ನಾಡಪ್ರಭು ಕೆಂಪೇಗೌಡರ ಜನ್ಮದಿನದ ಸಮಾರಂಭ ಹಾಗೂ ಡಾ.ಕೆ.ಸುಧಾಕರ್ ಜನ್ಮದಿನವೂ ಅಂದೇ ಇದ್ದು ಅಲ್ಲಿ ವಿದ್ಯಾರ್ಥಿ ವೇತನ ವಿತರಿಸಲಾಗುವುದು. ಇದೇ ದಿನ ಡಾ.ಕೆ.ಸುಧಾಕರ್ ಫೌಂಡೇಷನ್ ವತಿಯಿಂದ ಬೃಹತ್ ಮೆಗಾ ವೇದಿಕೆಯಲ್ಲಿ ಬೆಳಗ್ಗೆ 9 ರಿಂದ 2 ವರೆಗೆ ಬೃಹತ್ ರಕ್ತದಾನ ಶಿಬಿರ ಹಾಗೂ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿನಗರಸಭೆ ಮಾಜಿ ಅಧ್ಯಕ್ಷ ಎ. ಗಜೇಂದ್ರ ಮುಖಂಡ ರಾಮಸ್ವಾಮಿ, ನಾರಾಯಣಸ್ವಾಮಿ ಪಾಪುತೇಜ, ಸುಬ್ಬಾರೆಡ್ಡಿ, ಶ್ರೀನಿವಾಸ್, ಅನುಆನಂದ್, ಎಸ್.ಆರ್.ಎಸ್.ದೇವರಾಜ್, ಕೃಷ್ಣಾರೆಡ್ಡಿ ಮತ್ತಿತರರು ಇದ್ದರು.

ಸುದ್ದಿಗೋಷ್ಠಿಯಲ್ಲಿ ಗಣ್ಯರು ದ್ವಿತೀಯ ಪಿ.ಯು ಮತ್ತು ಪದವಿ ಸ್ನಾತಕ ಪದವಿ ವಿದ್ಯಾರ್ಥಿಗಳ ಪ್ರೋತ್ಸಾಹಧನ ವಿತರಣೆಯ ಕ್ಯೂಆರ್ ಕೋಡ್‌ನ ಪೋಸ್ಟರ್ ಬಿಡುಗಡೆ ಮಾಡಿದರು.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ದ್ವಿತೀಯ ಪಿಯು ಓದುತ್ತಿರುವ ಹಾಗೂ ಉತ್ತೀರ್ಣರಾಗಿರುವ ಮತ್ತು ಪದವಿ ವ್ಯಾಸಂಗ ಮಾಡುತ್ತಿರುವ, ಬಿ.ಎಡ್, ಬಿ.ಪಿ.ಎಡ್, ಸ್ನಾತಕೋತ್ತರ ಪದವಿ, ಕಾನೂನು ಶಿಕ್ಷಣ, ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ನೆರವಾಗಲು ಪ್ರತಿ ವಿದ್ಯಾರ್ಥಿಗೆ 5000ರು. ಪ್ರೋತ್ಸಾಹ ಧನ ನೀಡಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ವಿದ್ಯಾರ್ಥಿಗಳು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ತಮ್ಮ ವಿವರಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕಾಗಿದೆ ಎಂದು ಪಂಚಗಿರಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ವಿ.ನವೀನ್ ಕಿರಣ್ ತಿಳಿಸಿದರು.

ನಿವೇಶನ ರಹಿತರಿಗೆ ವಸತಿ ಸೌಲಭ್ಯ: ಶಾಸಕ ಬಾಬು

ಚಿಕ್ಕನಾಯಕನಹಳ್ಳಿ: ತಾಲೂಕಿನ ಮುದ್ದೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಿವೇಶನ ರಹಿತರಾಗಿರುವ ಪ್ರತಿಯೊಬ್ಬರಿಗೂ ಮುಂಬರುವ ದಿನಗಳಲ್ಲಿ ಹಂತ-ಹಂತವಾಗಿ ಜಾಗ ಗುರುತಿಸಿ, ಮನೆ ನಿರ್ಮಿಸಿಕೊಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಸಿ.ಬಿ.ಸುರೇಶಬಾಬು ಭರವಸೆ ನೀಡಿದರು.

ತಾಲೂಕಿನ ಮುದ್ದೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗಿದ್ದ 'ಮನೆಮಗ ಮನೆಬಾಗಿಲಿಗೆ' ಶೀರ್ಷಿಕೆಯಡಿಯ ಜನಸ್ಪಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರಾಮೀಣ ಭಾಗದ ಬಡವರ ವಸತಿ ಯೋಜನೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಈಗಾಗಲೇ ಗಣಿಬಾಧಿತ ಪ್ರದೇಶಾಭಿವೃದ್ಧಿ ಯೋಜನೆಯಡಿ ಒಟ್ಟು 1400 ಮನೆಗಳು ಮಂಜೂರಾತಿ ಹಂತದಲ್ಲಿವೆ. ಈ ಯೋಜನೆಯಡಿ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಳ್ಳಲು ತಲಾ 7 ಲಕ್ಷ ರು. ಹಣ ನೀಡಲಾಗುವುದು. ಈ ಮನೆಗಳು ಮಂಜೂರಾಗಿ ಬಂದ ತಕ್ಷಣವೇ, ಪ್ರಥಮ ಆದ್ಯತೆಯ ಮೇರೆಗೆ ಹಳ್ಳಿಗಳಲ್ಲಿ ನಿವೇಶನ ರಹಿತರನ್ನು ಗುರುತಿಸಿ ವಸತಿ ಸೌಲಭ್ಯ ಕಲ್ಪಿಸಲಾಗುವುದು ಎಂದು ಶಾಸಕರು ಸ್ಪಷ್ಟಪಡಿಸಿದರು. ಇದೇ ವೇಳೆ ಬೈಯಲಪ್ಪನ ಮಠಕ್ಕೆ 50 ಲಕ್ಷ ರು. ವೆಚ್ಚದಲ್ಲಿ ಹೊಸ ಸಮುದಾಯ ಭವನವನ್ನು ಮಂಜೂರು ಮಾಡಲಾಗುವುದು ಎಂದರು.

ಅಧಿಕಾರಿಗಳು ಹಾಗೂ ಸಾರ್ವಜನಿಕರ ನಡುವೆ ಇರುವ ಮಧ್ಯವರ್ತಿಗಳ ಹಾವಳಿ ಮತ್ತು ಲಂಚದ ಆಮಿಷವನ್ನು ಸಂಪೂರ್ಣವಾಗಿ ತಪ್ಪಿಸುವ ಉದ್ದೇಶದಿಂದಲೇ ಈ 'ಮನೆಮಗ ಮನೆಬಾಗಿಲಿಗೆ' ಕಾರ್ಯಕ್ರಮ ರೂಪಿಸಲಾಗಿದೆ. ಹಳ್ಳಿಗಳ ವಾಸ್ತವ ಸ್ಥಿತಿ ಅರಿತು, ಸ್ಥಳೀಯ ಸಮಸ್ಯೆಗಳನ್ನು ಸ್ಥಳದಲ್ಲೇ ಬಗೆಹರಿಸಲು ಇದು ಸಹಕಾರಿಯಾಗಿದೆ. ಇದು ಯಾವುದೇ ಒಂದು ಪಕ್ಷ ಅಥವಾ ಜಾತಿಗೆ ಸೀಮಿತವಾಗಿರದೆ, ಕ್ಷೇತ್ರದಲ್ಲಿರುವ ಎಲ್ಲ ನಾಗರಿಕರ ಕಲ್ಯಾಣಕ್ಕಾಗಿ ಹಮ್ಮಿಕೊಂಡಿರುವ ಪಕ್ಷಾತೀತ ಕಾರ್ಯಕ್ರಮವಾಗಿದೆ. ಸಾರ್ವಜನಿಕರು ಸಣ್ಣಪುಟ್ಟ ಕೆಲಸಗಳಿಗಾಗಿ ಅಧಿಕಾರಿಗಳು ಹಾಗೂ ಶಾಸಕರನ್ನು ಹುಡುಕಿಕೊಂಡು ಅಲೆದಾಡುವುದನ್ನು ತಪ್ಪಿಸಲು ತಾಲೂಕಿನ ಎಲ್ಲ 34 ಗ್ರಾ.ಪಂ ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ಈ ಜನಸ್ಪಂದನ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ತಹಸೀಲ್ದಾರ್‌ಮಮತಾ ಮಾತನಾಡಿ, ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸಿ ಈಗಾಗಲೇ ದುರಸ್ತಿ ಕಾರ್ಯಗಳು ಪ್ರಗತಿಯಲ್ಲಿವೆ. ತೋಟದ ಮನೆಗಳಿಗೆ ಸಿಗಬಹುದಾದ ಸೌಲಭ್ಯಗಳ ಕುರಿತು ಆಯಾ ಪಂಚಾಯಿತಿ ಅಧಿಕಾರಿಗಳಿಂದ ಮಾಹಿತಿ ಪಡೆದು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಮುದ್ದೇನಹಳ್ಳಿ ಗ್ರಾ.ಪಂ ವ್ಯಾಪ್ತಿಯ ಎಂ.ಎಚ್. ಕಾವಲ್, ಬಯಲಪ್ಪನ ಮಠ, ಸಾಲ್ಕಟ್ಟೆ, ಲಕ್ಮೇನಹಳ್ಳಿ, ಆಲದಕಟ್ಟೆ,ಬ್ಯಾಲದಕೆರೆ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಜನಸ್ಪಂದನ ಯಶಸ್ವಿಯಾಗಿ ನಡೆಯಿತು.

ವೇದಿಕೆಯಲ್ಲಿ ಇಒ ಹರೀಶ್, ಆಡಳಿತಾಧಿಕಾರಿ ಜಯರಾಮ್, ಬಿಇಒ ಕಾಂತರಾಜು, ಕೃಷಿ ಸಹಾಯಕ ನಿರ್ದೇಶಕ ಶಿವರಾಜ್ ಕುಮಾರ್, ತೋಟಗಾರಿಕೆ ಸಹಾಯಕ ನಿರ್ದೇಶಕ ರಾಜಪ್ಪ, ಆಹಾರ ನಿರೀಕ್ಷಕ ರಾಹುಲ್, ಪಿಡಿಒ ಬಸವಣ್ಣ ಪೂಜಾರಿ ಹಾಗೂ ಸ್ಥಳೀಯ ಮುಖಂಡರಾದ ಮಲ್ಲೇಶ್, ಚಂದ್ರಶೇಖರ್, ರಾಮಚಂದ್ರಯ್ಯ ಉಪಸ್ಥಿತರಿದ್ದರು.


ತಾಲೂಕಿನ ಮುದ್ದೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ 'ಮನೆಮಗ ಮನೆ ಬಾಗಿಲಿಗೆ' ಶೀರ್ಷಿಕೆಯಡಿಯ ಜನಸ್ಪಂದನಾ ಕಾರ್ಯಕ್ರಮ ಆಯೋಜಿಸಲಾಯಿತು.

ತುಮಕೂರು-ರಾಯದುರ್ಗ ರೈಲ್ವೆ ಯೋಜನೆ | ಉಪ ಮುಖ್ಯಮಂತ್ರಿ

ವರ್ಷದೊಳಗೆ ಕಾಮಗಾರಿ ಪೂರ್ಣಗೊಳಿಸಲು ಸೂಚನೆ

ತುಮಕೂರು: ತುಮಕೂರು-ರಾಯದುರ್ಗ ರೈಲ್ವೆ ಯೋಜನೆಯ ಸಂಬಂಧಿಸಿದಂತೆ ಪಾವಗಡದಿಂದ ತುಮಕೂರುವರೆಗಿನ ಕಾಮಗಾರಿಯನ್ನು ವರ್ಷದೊಳಗೆ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಿರುವುದಾಗಿ ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್‌ತಿಳಿಸಿದ್ದಾರೆ.

ತುಮಕೂರು-ರಾಯದುರ್ಗ ರೈಲ್ವೆ ಮಾರ್ಗದ ಪಾವಗಡ ರೈಲು ನಿಲ್ದಾಣ ಕಾಮಗಾರಿಯನ್ನು ಸೋಮವಾರ ಪರಿಶೀಲಿಸಿದ ಅವರು, ಸಂಬಂಧಿಸಿದ ಅಧಿಕಾರಿಗಳು ಹಾಗೂ ಗುತ್ತಿಗೆದಾರರೊಂದಿಗೆ ಚರ್ಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ತುಮಕೂರು-ರಾಯದುರ್ಗ ರೈಲ್ವೆ ಯೋಜನೆ ಕಾಮಗಾರಿ ಈಗಾಗಲೇ ಬಹುತೇಕ ಪೂರ್ಣಗೊಂಡಿದ್ದು, ಬಳ್ಳಾರಿಯಿಂದ ಪಾವಗಡದವರೆಗೆ ಪ್ರಾಯೋಗಿಕವಾಗಿ ರೈಲನ್ನು ಓಡಿಸಲಾಗಿದೆ. ಪಾವಗಡದಿಂದ ತುಮಕೂರಿನವರೆಗಿನ ಕಾಮಗಾರಿ ಬೇರೆ ಬೇರೆ ಕಾರಣಗಳಿಂದ ವಿಳಂಬವಾಗಿತ್ತು. ಇದೀಗ ಅದನ್ನೂ ಬಗೆಹರಿಸಲಾಗಿದ್ದು, ಕಾಮಗಾರಿಯನ್ನು ತ್ವರಿತವಾಗಿ ವರ್ಷದೊಳಗಾಗಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿರುವುದಾಗಿ ಅವರು ಹೇಳಿದರು.

2007ರಲ್ಲಿ ಲಾಲೂ ಪ್ರಸಾದ್ ಯಾದವ್ ಅವರು ಕೇಂದ್ರ ರೈಲ್ವೆ ಸಚಿವರಾಗಿದ್ದ ಸಂದರ್ಭದಲ್ಲಿ ಆಗಿನ ಮಡಕಶಿರಾ ಶಾಸಕ ರಘುವೀರರೆಡ್ಡಿ, ಪಾವಗಡ ಶಾಸಕ ವೆಂಕಟರಮಣಪ್ಪ ಅವರೊಂದಿಗೆ ರೈಲ್ವೆ ಸಚಿವರನ್ನು ಭೇಟಿಯಾಗಿ ತುಮಕೂರು-ರಾಯದುರ್ಗ ರೈಲು ಮಾರ್ಗ ನೀಡುವಂತೆ ಕೋರಲಾಗಿತ್ತು. ಈ ಹಿನ್ನೆಲೆಯಲ್ಲಿ ಅಂದಿನ ಸರಕಾರದ ರೈಲ್ವೆ ಆಯವ್ಯಯ ಪಿಂಕ್‌ಬುಕ್‌ನಲ್ಲಿ ಈ ಯೋಜನೆಗೆ 98 ಕೋಟಿ ರು. ಅಂದಾಜು ವೆಚ್ಚವನ್ನು ನಿಗದಿಗೊಳಿಸಲಾಗಿತ್ತು. ಆನಂತರ ಬಂದ ಸರಕಾರ ಈ ಯೋಜನೆಯನ್ನು ಕೈಗೆತ್ತಿಕೊಂಡು ಕಾರ್ಯರೂಪಕ್ಕೆ ತಂದಿದೆ ಎಂದರು.

ಭೂಸ್ವಾಧೀನ ಇನ್ನಿತರೆ ಕಾರಣಗಳಿಂದಾಗಿ ಈ ಯೋಜನೆ ವಿಳಂಬವಾಗಿದೆ. ಆದರೆ ಸದ್ಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲಾಗಿದ್ದು, ಬಾಕಿ ಕಾಮಗಾರಿಯನ್ನು ತ್ವರಿತವಾಗಿ ಮುಗಿಸುವಂತೆ ಸೂಚಿಸಲಾಗಿದೆ. ಯೋಜನೆಯ ಪ್ರಕಾರ 2028ಕ್ಕೆ ತುಮಕೂರು-ರಾಯದುರ್ಗ ಸಂಪೂರ್ಣ ಮಾರ್ಗ ಪೂರ್ಣಗೊಳ್ಳುವ ಬಗ್ಗೆ ಅಧಿಕಾರಿಗಳು ತಿಳಿಸಿದ್ದು, ಅದಕ್ಕೆ ಮುಂಚಿತವಾಗಿಯೇ 2027ರ ಹೊತ್ತಿಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿರುವುದಾಗಿ ಉಪ ಮುಖ್ಯಮಂತ್ರಿ ಪರಮೇಶ್ವರ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ.ಅಶೋಕ್, ರೈಲ್ವೆ ಇಲಾಖೆ ಅಧಿಕಾರಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ತುಮಕೂರು-ರಾಯದುರ್ಗ ರೈಲ್ವೆ ಮಾರ್ಗದ ಪಾವಗಡ ರೈಲು ನಿಲ್ದಾಣ ಕಾಮಗಾರಿಯನ್ನು ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಪರಿಶೀಲಿಸಿದರು.

ಬಹುಗ್ರಾಮ ನೀರಿನ ಕಾಮಗಾರಿ ಸಮಸ್ಯೆ ಬಗೆಹರಿಸಿ

ತುಂಗಭದ್ರಾ, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಅಧೀಕ್ಷಕ ಎಂಜಿನಿಯರ್ ಇಂದ್ರಕುಮಾರ್ ಹಾಗೂ ಕಾರ್ಯಪಾಲಕ ಎಂಜಿನಿಯರ್ ವಾಸುದೇವ್ ಅವರೊಂದಿಗೆ ಚರ್ಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಅವರು, ಪಾವಗಡ ತಾಲೂಕಿಗೆ ಕುಡಿಯುವ ನೀರಿಗಾಗಿ 2600 ಕೋಟಿ ರು. ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗಿರುವ ತುಂಗಭದ್ರಾ, ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕಾಮಗಾರಿಯಲ್ಲಿ ಕೆಲವು ಸಮಸ್ಯೆಗಳಿದ್ದವು. ಇವುಗಳನ್ನು ಬಗೆಹರಿಸುವ ಸಲುವಾಗಿ ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿ ಪಡೆದಿರುವುದಾಗಿ ತಿಳಿಸಿದರು. ಸದರಿ ಕುಡಿಯುವ ನೀರಿನ ಯೋಜನೆ ಕಾಮಗಾರಿ ಸಂಬಂಧಿಸಿದಂತೆ ಸರಕಾರದ ಉದ್ದೇಶ ಸಮರ್ಪಕವಾಗಿ ಅನುಷ್ಠಾನಗೊಳ್ಳಬೇಕು. ಈ ನಿಟ್ಟಿನಲ್ಲಿ ಇರುವ ಸಮಸ್ಯೆಗಳನ್ನು ಬಗೆಹರಿಸುವ ಸಂಬಂಧ ಸರಕಾರದ ನೂತನ ನೀರಾವರಿ ಸಚಿವರೊಂದಿಗೆ ಚರ್ಚಿಸಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಕ್ರಮವಹಿಸಲಾಗುವುದು ಎಂದರು.

ಚಿರತೆ ದಾಳಿಗೆ ನಾಯಿ ಸಾವು

ಚಾಮರಾಜನಗರ: ಕೊಳ್ಳೇಗಾಲ ತಾಲೂಕಿನ ಜಕ್ಕಳ್ಳಿ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಭಾನುವಾರ ಮುಂಜಾನೆ ಬೀದಿ ನಾಯಿಯೊಂದನ್ನು ತಿಂದು ಹೋಗಿದೆ.

ಕಳೆದ 15 ದಿನಗಳಿಂದ ಈ ಭಾಗದಲ್ಲಿ ಕಾಣಿಸಿಕೊಳ್ಳುತ್ತಿದ್ದ ಚಿರತೆಯನ್ನು ಸೆರೆ ಹಿಡಿಯಲು ಜಕ್ಕಳ್ಳಿ ವಾಟರ್ ಟ್ಯಾಂಕ್ ಬಳಿ ಬೋನ್‌ವೊಂದನ್ನು ಅರಣ್ಯ ಇಲಾಖೆಯವರು ಹಾಕಿದ್ದಾರೆ. ಆದರೆ ಜಕ್ಕಳ್ಳಿಯ ಮತ್ತೊಂದು ಕಡೆ ವೀರಮಾದು ಅವರ ಇಟ್ಟಿಗೆ ಫ್ಯಾಕ್ಟರಿ ಬಳಿ ಕಾಣಿಸಿಕೊಂಡಿದ್ದು, ಬೆಳಗಿನ ಜಾವ ನಾಯಿಯೊಂದರ ಮೇಲೆ ದಾಳಿ ನಡೆಸಿ ತಿನ್ನುತ್ತಿದ್ದು, ಇದನ್ನು ಗಮನಿಸಿದ್ದ ಇಟ್ಟಿಗೆ ಫ್ಯಾಕ್ಟರಿ ಕೂಲಿ ಕಾರ್ಮಿಕರು ಕೂಗಿಕೊಂಡಾಗ ನಾಯಿಯನ್ನು ತಿನ್ನುತ್ತಿದ್ದ ಚಿರತೆ ಅರ್ಧಕ್ಕೆ ಬಿಟ್ಟು ಓಡಿಹೋಗಿದೆ. ಅದಲ್ಲದೇ ಚಿರತೆ ಅಡಾಡಿದ್ದ ಸ್ಥಳದಲ್ಲಿ ಹೆಜ್ಜೆ ಗುರುತು ಕಾಣಿಸಿಕೊಂಡಿದ್ದೆ. ಹೀಗಾಗಿ ಗ್ರಾಮಸ್ಥರಲ್ಲಿ ಆತಂಕ ಉಂಟಾಗಿದೆ ಪ್ರತಿ ದಿನ ಬೆಳಗ್ಗೆ ಹಾಗೂ ರಾತ್ರಿ ಸಮಯದಲ್ಲಿ ಜಮೀನಿಗೆ ಹಾಗೂ ಹೊರವಲಯಕ್ಕೆ ಹೋಗಲು ತುಂಬಾ ಭಯ ಪಡುತ್ತಿದ್ದಾರೆ ಹಾಗಾಗಿ ಸಂಬಂಧಪಟ್ಟ ಅರಣ್ಯ ಇಲಾಖೆಯವರು ಬೇಗನೆ ಚಿರತೆ ಹಿಡಿದು ಕಾಡಿಗೆ ಬಿಡಬೇಕೆಂದು ಗ್ರಾಮಸ್ಥರು ಮನವಿ ಮಾಡಿಕೊಂಡಿದ್ದಾರೆ.

ಬಳಿಕ ಅರಣ್ಯ ಇಲಾಖೆಯವರ ಗಮನಕ್ಕೆ ತಂದು ಇಟ್ಟಿಗೆ ಫ್ಯಾಕ್ಟರಿ ಬಳಿ ಚಿರತೆಯನ್ನು ಸರೆಹಿಡಿಯಲು ಬೋನ್ ಅಳವಡಿಸಿದ್ದಾರೆ. ಇದ್ದರಿಂದ ಈ ಭಾಗದ ರೈತರು ಮತ್ತು ಕೂಲಿ ಕಾರ್ಮಿಕರು ಭಯಭೀತರಾಗಿದ್ದಾರೆ.

ಅಂಬೇಡ್ಕರ್ ಹಾಸ್ಟೆಲ್ ಕಾಮಗಾರಿ ಕಳಪೆ: ದೂರು

ಕೋಲಾರ: ಸಮಾಜ ಕಲ್ಯಾಣ ಇಲಾಖೆಯ ಅಂಬೇಡ್ಕರ್ ಹಾಸ್ಟೆಲ್ ಸೇರಿದಂತೆ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಡೆದಿರುವ ಕಳಪೆ ಕಾಮಗಾರಿಗಳ ಕುರಿತು ತನಿಖೆ ನಡೆಸಬೇಕೆಂದು ಆಗ್ರಹಿಸಿ ಅಂಬೇಡ್ಕರ್ ಸ್ವಾಭಿಮಾನಿ ಬಳಗದಿಂದ ನಗರದಲ್ಲಿ ಮೆರವಣಿಗೆ ನಡೆಸಿ ಲೋಕಾಯುಕ್ತ ಡಿವೈಎಸ್ಪಿಗೆ ದೂರು ನೀಡಲಾಯಿತು.

ನಚಿಕೇತನಿಲಯದಿಂದ ಆರಂಭವಾದ ಮೆರವಣಿಗೆ ಮೆಕ್ಕೆ ವೃತ್ತದ ಮೂಲಕ ಹಾದು ಲೋಕಾಯುಕ್ತ ಕಚೇರಿವರೆಗೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅಂಬೇಡ್ಕರ್ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಲಾಯರ್ ಮಂಜುನಾಥ್, ಅಂಬೇಡ್ಕರ್ ಹಾಸ್ಟೆಲ್ ಕಾಮಗಾರಿಯಲ್ಲಿ 7 ಕೋಟಿ ರು. ಅಕ್ರಮ ನಡೆದಿದ್ದು ಕಾಮಗಾರಿ ತೀರಾ ಕಳಪೆ ಆಗಿದೆ. ಗುತ್ತಿಗೆದಾರರಿಗೆ ಜನ ಪ್ರತಿನಿಧಿಗಳ ಆಶೀರ್ವಾದ ಇರುವುದರಿಂದಾಗಿ ಜಿಲ್ಲಾ ಡಳಿದ ಅಧಿಕಾರಿಗಳು ದೂರಿಗೆ ಸ್ಪಂದನೆ ನೀಡುತ್ತಿಲ್ಲ. ಈ ಸಂಬಂಧ ಡಿಸಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಹಾಗೂ ಜಿಲ್ಲಾ ಪಂಚಾಯತಿ ಸಿಇಒ ಅವರಿಗೆ ದೂರು ನೀಡಿದರೂ ಕ್ರಮ ಕೈಗೊಳ್ಳದ ಕಾರಣ ಅಂತಿಮವಾಗಿ ಲೋಕಾಯುಕ್ತಕ್ಕೆ ದೂರು ನೀಡಲಾಗುತ್ತಿದ್ದು ತಕ್ಷಣ ಕ್ರಮ ಕೈಗೊಳ್ಳಬೇಕು. ತಪ್ಪಿದಲ್ಲಿ ಉಗ್ರ ಪ್ರತಿಭಟನೆ ನಡೆಸುವ ಜತೆಗೆ ಕಾನೂನು ಹೋರಾಟ ಮಾಡಲಾಗುತ್ತದೆ ಎಂದು ಮಂಜುನಾಥ್ ಎಚ್ಚರಿಸಿದರು.

ಮನವಿ ಸ್ವೀಕರಿಸಿದ ಲೋಕಾ ಡಿವೈಎಸ್ಪಿ ವೆಂಕಟೇಶ್ ಅವರು ದೂರನ್ನು ಪರಿಶೀಲಿಸಿ ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಪ್ರತಿಭಟ ನೆ ನೇತೃತ್ವವನ್ನು ದಲಿತ ಮುಖಂಡರಾದ ಸಾಮ್ರಾಟ್ ಸುಬ್ಬು, ಕೀಲುಕೋಟೆ ಪರಮೇಶ್, ಸುಗಟೂರು ಮೂರ್ತಿ, ಖಾದ್ರೀಪುರ ಉಮಾನಾರಾಯಣ್, ಮಂಗಸಂದ್ರ ನವೀನ್, ಸಿಮೆಂಟ್ ರಾಜು, ದೊಡ್ಡಹಸಾಳ ಲಕ್ಷ್ಮಿ ಮಪತಿ, ದಿಂಬಚಾಮನಹಳ್ಳಿ ಮಹೇಶ್ ವಹಿಸಿದ್ದರು.

ಅಂಬೇಡ್ಕರ್ ಹಾಸ್ಟೆಲ್ ಕಳಪೆ ಕಾಮಗಾರಿ ವಿರುದ್ಧ ಲೋಕಾಗೆ ದೂರು ನೀಡಲಾಯಿತು.

ಟ್ರೂಆಲ್ಟ್ ಬಯೋಎನರ್ಜಿ ಲಿಮಿಟೆಡ್
ಸಿಐಎನ್: L15400KA2021PLC145978
ನೋಂದಾಯಿತ ಕಚೇರಿ: ಸರ್ವೆ ನಂ. 166, ಮುಧೋಳ ರಸ್ತೆ, ಕುಲಳಿ ಕ್ರಾಸ್, ಜಮಖಂಡಿ, ಬಾಗಲಕೋಟೆ, ಕರ್ನಾಟಕ, 587313
ಕಾರ್ಪೊರೇಟ್ ಕಚೇರಿ: 15ನೇ ಮಹಡಿ, ಯುನಿಟ್ ನಂ. N-1501, ವರ್ಲ್ಡ್ ಟ್ರೇಡ್ ಸೆಂಟರ್,
ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, ನಂ. 26/1, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು 560055, ಕರ್ನಾಟಕ, ಭಾರತ.
ಇಮೇಲ್: contact@trualtbioenergy.com, ವೆಬ್ಸೈಟ್: www.trualtbioenergy.com, ಫೋನ್: 080-23255000

TRUALT® BIOENERGY

ಅಂಚೆ ಮತಪತ್ರ ಪ್ರಕಟಣೆ

ಕಂಪನಿಗಳ ಕಾಯ್ದೆ, 2013 ("ಕಾಯ್ದೆ") ರ ಸೆಕ್ಷನ್ 108 ರೊಂದಿಗೆ ಓದಲಾದ ಸೆಕ್ಷನ್ 110 ರ ನಿಬಂಧನೆಗಳು ಮತ್ತು ಇತರ ಅನ್ವಯವಾಗುವ ನಿಬಂಧನೆಗಳ (ಯಾವುದಾದರೂ ಇದ್ದರೆ), ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮಗಳು 20 ಮತ್ತು 22 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 (ಏಪ್ರಿಲ್ 8, 2020), 17/2020 (ಏಪ್ರಿಲ್ 13, 2020) ಮತ್ತು 03/2025 (ಸೆಪ್ಟೆಂಬರ್ 22, 2025) ("ಎಂಸಿಎ ಸುತ್ತೋಲೆಗಳು"), ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಮತ್ತು ಡಿಸ್ಕ್ಲೋಸರ್ ರಿಕ್ವೈರ್ಮೆಂಟ್ಸ್) ನಿಯಮಾವಳಿಗಳು, 2015 ರ ನಿಯಂತ್ರಣ 44, ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ("ICSI") ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್ಸ್ (ಪ್ರಸ್ತುತ ಜಾರಿಯಲ್ಲಿರುವ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದ ಯಾವುದೇ ಶಾಸನಬದ್ಧ ಮಾರ್ಪಾಡು ಅಥವಾ ಮರು-ಶಾಸನಗಳನ್ನು ಒಳಗೊಂಡಂತೆ), ಮತ್ತು ಇತರ ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳ ಅನುಸಾರವಾಗಿ, ಇ-ವೋಟಿಂಗ್ ಪ್ರಕ್ರಿಯೆ ("ಇ-ವೋಟಿಂಗ್") ಮೂಲಕ ಅಂಚೆ ಮತಪತ್ರದ ಮುಖಾಂತರ ಈ ಕೆಳಗಿನ ಸಾಮಾನ್ಯ ನಿರ್ಣಯಕ್ಕಾಗಿ ಟ್ರೂಆಲ್ಟ್ ಬಯೋಎನರ್ಜಿ ಲಿಮಿಟೆಡ್ ("ಕಂಪನಿ") ನ ಸದಸ್ಯರ ಅನುಮೋದನೆಯನ್ನು ಪ್ರಸ್ತಾಪಿಸಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಕ್ರ. ಸಂ.	ಸಾಮಾನ್ಯ ನಿರ್ಣಯದ ವಿವರಣೆ
1.	2026-27ನೇ ಹಣಕಾಸು ವರ್ಷದ ಅವಧಿಯಲ್ಲಿ ನಿರಾಣಿ ಶುಗರ್ಸ್ ಲಿಮಿಟೆಡ್‌ನೊಂದಿಗೆ ಕೈಗೊಳ್ಳಲಿರುವ ಮಹತ್ವದ ಸಂಬಂಧಿತ ಪಕ್ಷದ ವ್ಯವಹಾರ(ಗಳ) ಅನುಮೋದನೆಗೆ

ಮೇಲ್ಕಂಡ ಎಂಸಿಎ ಸುತ್ತೋಲೆಗಳ ಅನುಸಾರವಾಗಿ, ಶುಕ್ರವಾರ, ಜೂನ್ 5, 2026 ರಂದು ('ಕಟ್-ಆಫ್ ದಿನಾಂಕ') ಡೆಪಾಸಿಟರಿಗಳಿಂದ / ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್ಫರ್ ಏಜೆಂಟ್ ('RTA') ಆಗಿರುವ ಬಿಗ್‌ಶೇರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್‌ನಿಂದ ಸ್ವೀಕರಿಸಿದ ಸದಸ್ಯರ ರಿಜಿಸ್ಟರ್ / ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಹೆಸರುಗಳು ಕಂಡುಬರುವ ಮತ್ತು ಕಂಪನಿ/ಆರ್‌ಟಿಎ/ಡೆಪಾಸಿಟರಿಗಳಲ್ಲಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ, ಕಂಪನಿಯು ವಿವರಣಾತ್ಮಕ ಹೇಳಿಕೆಯೊಂದಿಗೆ ಅಂಚೆ ಮತಪತ್ರದ ಸೂಚನೆಯ ರವಾನೆಯನ್ನು ಜೂನ್ 8, 2026 ರಂದು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮಾತ್ರ ಪೂರ್ಣಗೊಳಿಸಿದೆ. ಈ ಸೂಚನೆಯು ಕಂಪನಿಯ ವೆಬ್ಸೈಟ್ www.trualtbioenergy.com ವೆಬ್‌ಸೈಟ್‌ನಿಂದ ಅಂದರೆ ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ www.nseindia.com ಮತ್ತು ಬಿಎಸ್‌ಇ (BSE) ಲಿಮಿಟೆಡ್‌ನ www.bseindia.com ವೆಬ್‌ಸೈಟ್‌ನಿಂದ ಕೂಡ ಪಡೆಯಬಹುದು.

ಲಿಸ್ಟಿಂಗ್ ನಿಯಮಾವಳಿಗಳ ನಿಯಂತ್ರಣ 44, ಎಂಸಿಎ ಸುತ್ತೋಲೆಗಳು ಮತ್ತು ಎಸ್‌ಎಸ್-2 ರೊಂದಿಗೆ ಓದಲಾದ ಕಾಯ್ದೆಯ ಸೆಕ್ಷನ್ 108 ಮತ್ತು 110 ರ ಅನುಸಾರವಾಗಿ, ಅಂಚೆ ಮತಪತ್ರದ ಫಾರ್ಮ್‌ನ ಭೌತಿಕ ಪ್ರತಿಯನ್ನು ಸಲ್ಲಿಸುವ ಬದಲು ವಿದ್ಯುನ್ಮಾನವಾಗಿ ತಮ್ಮ ಮತಗಳನ್ನು ಚಲಾಯಿಸಲು ಅನುವು ಮಾಡಿಕೊಡಲು,ಕಂಪನಿಯು ತನ್ನ ಸದಸ್ಯರಿಗೆ ಮಾತ್ರ ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಅದರಂತೆ, ಈ ಅಂಚೆ ಮತಪತ್ರಕ್ಕಾಗಿ ಅಂಚೆ ಮತಪತ್ರದ ಫಾರ್ಮ್ ಮತ್ತು ಪ್ರಿ-ಪೇಯ್ಡ್ ಬಿಸಿನೆಸ್ ರಿಪ್ಲೈ ಲಕೋಟೆಯೊಂದಿಗೆ ಸೂಚನೆಯ ಭೌತಿಕ ಪ್ರತಿಯನ್ನು ಸದಸ್ಯರಿಗೆ ಕಳುಹಿಸಲಾಗಿಲ್ಲ. ಸದಸ್ಯರ 'ಸಮ್ಮತಿ' ಅಥವಾ 'ಅಸಮ್ಮತಿ' ಸಂವಹನವು ರಿಮೋಟ್ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮಾತ್ರ ನಡೆಯುತ್ತದೆ. ತನ್ನ ಸದಸ್ಯರಿಗೆ ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಕಂಪನಿಯು ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನ ಸೇವೆಗಳನ್ನು ತೊಡಗಿಸಿಕೊಂಡಿದೆ.

ಇ-ವೋಟಿಂಗ್ ಪ್ರಕ್ರಿಯೆಯು ಬುಧವಾರ, ಜೂನ್ 10, 2026 ರಂದು ಬೆಳಿಗ್ಗೆ 9 AM (IST) ಗೆ ಪ್ರಾರಂಭವಾಗುತ್ತದೆ ಮತ್ತು ಗುರುವಾರ, ಜುಲೈ 9, 2026 ರಂದು ಸಂಜೆ 5 PM (IST)ಗೆ ಕೊನೆಗೊಳ್ಳುತ್ತದೆ. ಗುರುವಾರ, ಜುಲೈ 9, 2026 ರಂದು ಸಂಜೆ 5 PM (IST) ನಂತರ ಇ-ವೋಟಿಂಗ್ಗೆ ಅವಕಾಶ ನೀಡಲಾಗುವುದಿಲ್ಲ ಎಂಬುದನ್ನು ಷೇರುದಾರರು ಗಮನಿಸುವಂತೆ ವಿನಂತಿಸಲಾಗಿದೆ.

ಇ-ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಸ್ಕ್ರುಟಿನೈಸರ್ ಆಗಿ ಬೆಂಗಳೂರಿನ ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರಿ ಶ್ರೀ ದೀಪಕ್ ಸಾಧು (ಸಿಒಪಿ 14992) ಅವರನ್ನು ನಿರ್ದೇಶಕರ ಮಂಡಳಿಯು ನೇಮಿಸಿದೆ.

ಎಂಸಿಎ ಸುತ್ತೋಲೆಗಳ ನಿಬಂಧನೆಗಳಿಗೆ ಅನುಗುಣವಾಗಿ, ಷೇರುದಾರರು ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯ ಮೂಲಕ ಮಾತ್ರ ಮತ ಚಲಾಯಿಸಬಹುದು. ಶುಕ್ರವಾರ, ಜೂನ್ 5, 2026 ರಂದು ಸದಸ್ಯರ ರಿಜಿಸ್ಟರ್/ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಹೆಸರುಗಳು ಇರುವ ಷೇರುದಾರರನ್ನು ಇ-ವೋಟಿಂಗ್ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ ಮತ್ತು ಆ ದಿನಾಂಕದಂದು ಷೇರುದಾರರ ಹೆಸರಿನಲ್ಲಿ ನೋಂದಾಯಿಸಲಾದ ಇಕ್ವಿಟಿ ಷೇರುಗಳ ಪಾವತಿಸಿದ ಮೌಲ್ಯದ ಆಧಾರದ ಮೇಲೆ ಮತದಾನದ ಹಕ್ಕುಗಳನ್ನು ಲೆಕ್ಕಹಾಕಲಾಗುತ್ತದೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಸೂಚನೆಯನ್ನು ಕೇವಲ ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು.

ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಅಥವಾ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದ ಷೇರುದಾರರು ಇ-ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸಬಹುದಾದ ವಿಧಾನವನ್ನು ಒಳಗೊಂಡಂತೆ ಇ-ವೋಟಿಂಗ್ ಪ್ರಕ್ರಿಯೆಯ ಕುರಿತಾದ ವಿವರವಾದ ಕಾರ್ಯವಿಧಾನ/ಸೂಚನೆಗಳನ್ನು ಅಂಚೆ ಮತಪತ್ರದ ಸೂಚನೆಯಲ್ಲಿ ಒದಗಿಸಲಾಗಿದೆ. ಅಂಚೆ ಮತಪತ್ರದ ಸೂಚನೆಯನ್ನು ಸ್ವೀಕರಿಸದ ಯಾವುದೇ ಸದಸ್ಯರು cs@trualtbioenergy.com ನಲ್ಲಿ ಕಂಪನಿಗೆ ಅರ್ಜಿ ಸಲ್ಲಿಸಬಹುದು ಮತ್ತು ಅದರ ನಕಲು ಪ್ರತಿಯನ್ನು ಪಡೆಯಬಹುದು.

ಪರಿಶೀಲನೆಯ ಪೂರ್ಣಗೊಂಡ ನಂತರ ಪರಿಶೀಲಕರು ತಮ್ಮ ವರದಿಯನ್ನು ಅಧ್ಯಕ್ಷರು ಅಥವಾ ವ್ಯವಸ್ಥಾಪಕ ನಿರ್ದೇಶಕರು ಅಥವಾ ಹಾಗೆ ಅಧಿಕೃತಗೊಂಡ ಯಾವುದೇ ವ್ಯಕ್ತಿಗೆ ಸಲ್ಲಿಸುತ್ತಾರೆ ಮತ್ತು ಇ-ವೋಟಿಂಗ್ ಫಲಿತಾಂಶಗಳನ್ನು ಶನಿವಾರ, ಜುಲೈ 11, 2026 ರಂದು ಅಥವಾ ಅದಕ್ಕೂ ಮೊದಲು ಘೋಷಿಸಲಾಗುತ್ತದೆ. ಹೇಳಲಾದ ಫಲಿತಾಂಶಗಳನ್ನು ಪರಿಶೀಲಕರ ವರದಿಯ ಜೊತೆಗೆ ಷೇರು ವಿನಿಮಯ ಕೇಂದ್ರಗಳಿಗೆ ತಿಳಿಸಲಾಗುತ್ತದೆ ಮತ್ತು ಕಂಪನಿಯ ವೆಬ್ಸೈಟ್ www.trualtbioenergy.com ಹಾಗೂ NSDL ನ ಇ-ವೋಟಿಂಗ್ ವೆಬ್‌ಸೈಟ್‌ನಲ್ಲಿಯೂ ಅಪ್ಲೋಡ್ ಮಾಡಲಾಗುತ್ತದೆ.

ಅಂಚೆ ಮತಪತ್ರದ ಮೂಲಕ ಅಗತ್ಯ ಬಹುಮತದೊಂದಿಗೆ ನಿರ್ಣಯಗಳನ್ನು ಅಂಗೀಕರಿಸಿದರೆ, ಅದನ್ನು ರಿಮೋಟ್ ಇ-ವೋಟಿಂಗ್ಗೆ ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಂದರೆ ಜುಲೈ 9, 2026 ರಂದು ಅಂಗೀಕರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ರಿಮೋಟ್ ಇ-ವೋಟಿಂಗ್ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು/ಕುಂದುಕೊರತೆಗಳಿದ್ದಲ್ಲಿ, ನೀವು www.evoting.nsdl.com ನ 'ಡೌನ್ಲೋಡ್' ವಿಭಾಗದಲ್ಲಿ ಲಭ್ಯವಿರುವ ಷೇರುದಾರರಿಗಾಗಿ 'ಪದೇ ಪದೇ ಕೇಳಲಾಗುವ ಪ್ರಶ್ನೆಗಳು' ('FAQs') ಮತ್ತು ಷೇರುದಾರರಿಗಾಗಿ ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ ಸಂಖ್ಯೆ: 022 - 4886 7000 ಗೆ ಕರೆ ಮಾಡಬಹುದು ಅಥವಾ ಸಹಾಯಕ ವ್ಯವಸ್ಥಾಪಕ ಶ್ರೀ ಫಾಲ್ಗುಣಿ ಚಕ್ರಬರ್ತಿ ಅವರನ್ನು ಅವರ ಗೊತ್ತುಪಡಿಸಿದ ಇ-ಮೇಲ್ ವಿಳಾಸ: evoting@nsdl.com ಮುಖಾಂತರ ಸಂಪರ್ಕಿಸಬಹುದು.

ಟ್ರೂಆಲ್ಟ್ ಬಯೋಎನರ್ಜಿ ಲಿಮಿಟೆಡ್ ಪರವಾಗಿ
(ಸಹಿ/-)
ಮೋನು ಕುಮಾರ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: ಜೂನ್ 8, 2026

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
ಮಿನಿ ವಿಧಾನಸೌಧ ಪಕ್ಕದಲ್ಲಿ, ಸ್ಟೇಷನ್ ಮುಖ್ಯ ರಸ್ತೆ, ಕಲಬುರಗಿ-585102.Email: commissionergda@gmail.com

ಸಂಖ್ಯೆ: ನಪ್ರಾಕ/ತಾಂತ್ರಿಕ/ಉದ್ಯಾನವನ/ /2026-27/1056 ದಿನಾಂಕ : 08-06-2026

-: ಇ-ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ (ಮೂರನೇಯ ಕರೆ) :-

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಲಬುರಗಿ ನಗರದ ಸ್ಥಳೀಯ ಯೋಜನಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ ಸಂಖ್ಯೆ. 19 ರ ಬಿಲಾಲಾಬಾದ ಕಾಲೋನಿ ರೆಹಮಾನ ಮಜೀದ ಹತ್ತಿರದಲ್ಲಿರುವ ಬಿಲಾಲಾಬಾದ ಪಾರ್ಕ & ಆಟದ ಮೈದಾನ ಅಭಿವೃದ್ಧಿ ಪಡಿಸುವ ಕಾಮಗಾರಿಗಾಗಿ ಇ-ಪ್ರೋಕ್ಯೂರಮೆಂಟ ಟೆಂಡರ್ ಕರೆಯಲಾಗಿದೆ. ಟೆಂಡರಗಿಟ್ಟ ಮೊತ್ತ **ರೂ. 1,34,32,260/-** ಇ.ಎಮ್.ಡಿ ಮೊತ್ತ ರೂ. 2,00,000/- ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ದ್ವಿಲಕೋಟೆ ಮಾದರಿಯಲ್ಲಿ (KW-4) ರಂತೆ, ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **23.06.2026 ರಂದು ಸಾಯಂಕಾಲ 5:30 ಗಂಟೆವರೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **25.06.2026 ರಂದು ಬೆಳಗ್ಗೆ 11:00 ಗಂಟೆಗೆ** ಆರ್ಥಿಕ ಬಿಡ್ ತೆರೆಯುವ ದಿನಾಂಕ: **29.06.2026 ರಂದು ಬೆಳಗ್ಗೆ 11:00 ಗಂಟೆಗೆ.** ಟೆಂಡರದ ಎಲ್ಲಾ ವಿವರಗಳನ್ನು ಇ-ಪ್ರೋಕ್ಯೂರಮೆಂಟ ಟೆಂಡರದ ವೆಬ್‌ಸೈಟ್ www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಇನ್ನುಳಿದಂತೆ ವಿವರಗಳಿಗಾಗಿ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/194/ಕೆ.ಎಸ್.ಎಂ.ಸಿ.&ಎ/2026-27

ಪುರಸಭೆ ಕಾರ್ಯಾಲಯ ಚಿಟಗುಪ್ಪಾ, ಜಿಲ್ಲೆ ಬೀದರ

ಸಂ: ಪುಸಚಿ/ಕಾಮಗಾರಿ/ಸಿಆರ್-/2025-26 ದಿನಾಂಕ: 08.06.2026

ಟೆಂಡರ್ ಪ್ರಕಟಣೆ

1) ಕಾಮಗಾರಿ / ಸರಕು / ಸೇವೆಯ ವಿವರ (DMA/2025-26/OW/WORK_INDENT55354/CALL-3), 2) ಕಾಮಗಾರಿ / ಸರಕು / ಸೇವೆಯ ಅಂದಾಜು ಮೊತ್ತ KPPP ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ KPPP ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ KPPPನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು **24.06.2026, 4:30 PM,** 6) ಟೆಂಡರ ತೆರೆಯುವ **ದಿನಾಂಕ 25.06.2026, 5:00 PM,** 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಮುಖ್ಯಾಧಿಕಾರಿಗಳು, ಪುರಸಭೆ ಚಿಟಗುಪ್ಪ 08483-277536 Email : itstaff_ulb_chittguppa@yahoo.com, 8) ಅಂತರಜಾಲ ತಾಣದ ವಿಳಾಸ www.kppp.karnataka.gov.in

ಸಹಿ/-ಮುಖ್ಯಾಧಿಕಾರಿ
ಪುರಸಭೆ ಚಿಟಗುಪ್ಪಾ,

ವಾ.ಸಾ.ಸಂ.ಇ/ಬೀದರ/52/ಕೆ.ಎಸ್.ಎಂ.ಸಿ.&ಎ/2026-27

ನಗರಸಭಾ ಕಾರ್ಯಾಲಯ
ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಸಹಾಯವಾಣಿ: 27931759, ದೂರವಾಣಿ: 27931221
Email- itstaff_ulb_hosakote@yahoo.com Website. www.hosakotecity.mrc.gov.in

ನಂ: ನಸಹೊ/ತಾಂತ್ರಿಕ ಶಾಖೆ/ಟೆಂಡರ್/ಸಿಆರ್/07/2026-27 ದಿನಾಂಕ: 08/06/2026

"ಟೆಂಡರ್ ಪ್ರಕಟಣೆ" (ಇ-ಪ್ರೊಕ್ಯೂರ್‌ಮೆಂಟ್ ಕೆ.ಟಿ.ಪಿ.ಪಿ ಪೋರ್ಟ್‌ಲ್ ಮೂಲಕ)

ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2026-27ನೇ ಸಾಲಿನ ನಗರಸಭಾ ನಿಧಿ ಹಾಗೂ 5%ರ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ 01/02 ರ ಪ್ರಕಾರ ಟೆಂಡರ್‌ನ್ನು ಏಕ/ದ್ವಿ -ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ.ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಮೀಸಲಿರಿಸಿರುವ (ರೂ.ಲಕ್ಷಗಳಲ್ಲಿ)
01	DMA/2026-27/BD/WORK_INDENT59226	5.20	Others
02	DMA/2026-27/RD/WORK_INDENT59236	8.00	CAT-1
03	DMA/2026-27/0W/WORK_INDENT59207	7.50	SC
04	DMA/2026-27/0W/WORK_INDENT59127	41.00	Others
05	DMA/2026-27/0W/WORK_INDENT59402	8.90	SC
06	DMA/2026-27/OW/WORK_INDENT59288	10.00	CAT-II(A)
07	DMA/2026-27/BD/WORK_INDENT59281	6.005	Others
08	DMA/2026-27/OW/WORK_INDENT59298	10.00	Others
09	DMA/2026-27/OW/WORK_INDENT57079/CALL-2	12.00	Others
10	DMA/2025-26/OW/WORK_INDENT50914/CALL-2	20.00	Others

1) ಕ್ರ.ಸಂ: 03 ಮತ್ತು 04ರ ಇಂಡೆಂಟ್‌ಗಳಿಗೆ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **16/06/2026 ರ ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **18/06/2026 ರ ಬೆಳಗ್ಗೆ 11:00 ಗಂಟೆಗೆ** ನಿಗಧಿಪಡಿಸಲಾಗಿರುತ್ತದೆ.
2) ಕ್ರ.ಸಂ: 01, 02, 05, 06, 07, 08, 09 ಮತ್ತು 10ರ ಇಂಡೆಂಟ್‌ಗಳಿಗೆ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **23/06/2026 ರ ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **25/06/2026 ರ ಬೆಳಗ್ಗೆ 11:00 ಗಂಟೆಗೆ** ನಿಗಧಿಪಡಿಸಲಾಗಿರುತ್ತದೆ.
3) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in/#/portal/portal-home ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

ಸಹಿ/- ಪೌರಾಯುಕ್ತರು
ನಗರಸಭೆ, ಹೊಸಕೋಟೆ

DIPR/CP/VCPL/1048/2026-27

ಖಾತೆ ಕ್ಯಾತೆ: ತಣಿಯದ ಮುನಿಸು

← ಮೊದಲಪುಟದಿಂದ

ಸಚಿವರ ಕಾರ್ಯಭಾರ ಕಡಿಮೆಯಾಗಲಿದೆ. ಬಿಡಿಎ, ಬಿಎಂ ಆರ್‌ಡಿಎಗೆ ಪಾಲಿಕೆ ಸದಸ್ಯರ ಹಸ್ತಕ್ಷೇಪ ಮಾಡಲು ಅವಕಾಶ ಇಲ್ಲ. ಹೀಗಾಗಿ ಸಚಿವ ಕೃಷ್ಣ ಬೈರೇಗೌಡ ಈವರೆಗೂ ಖಾತೆಯ ಜವಾಬ್ದಾರಿ ವಹಿಸಿಕೊಳ್ಳದೇ ಗೊಂದಲದಲ್ಲಿದ್ದಾರೆ ಎನ್ನಲಾಗಿದೆ. ಈವರೆಗೂ ತಾವು ನಿರ್ವಹಿಸಿದ ಕಂದಾಯ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡಲು ಸಹಕರಿಸಿದ ಎಲ್ಲರಿಗೂ ಧನ್ಯವಾದ ಹೇಳಿದ್ದಾರೆ. ಹೊಸ ಖಾತೆಯ ಬಗ್ಗೆ ಚಕಾರ ಎತ್ತದೆ ಇರುವುದು ಹಲವು ಅನುಮಾನಗಳನ್ನು ಮೂಡಿಸಿದೆ.

ಕುಮಾರಕೃಪಾ ಒಳಾಂಗಣ ನವೀಕರಣ

ಒಂದೆಡೆ ಪಾರಂಪರಿಕ ಕಟ್ಟಡ ಕುಮಾರಕೃಪಾ ಒಳಾಂಗಣ ನವೀಕರಣ ನಡೆಯುತ್ತಿದೆ. ಅತಿಥಿ ಗೃಹವಾಗಿದ್ದ ಕುಮಾರಕೃಪಾ ಇನ್ಮುಂದೆ ಮುಖ್ಯಮಂತ್ರಿಗಳ ಸರಕಾರಿ ನಿವಾಸ ಆಗಲಿದೆ. ವಾಸ್ತುಶಾಸ್ತ್ರದ ಪ್ರಕಾರ ಸಿಎಂ ಡಿ.ಕೆ.ಶಿವಕುಮಾರ್ ಕುಮಾರಕೃಪಾ ಒಳಾಂಗಣ ನವೀಕರಣ ಮಾಡಿಸುತ್ತಿದ್ದಾರೆ. ಮತ್ತೊಂದೆಡೆ ರಾಮಲಿಂಗಾರೆಡ್ಡಿ ಸೇರಿದಂತೆ ಎಲ್ಲ 13 ಸಚಿವರಿಗೂ ಕೊಠಡಿ ಹಂಚಿಕೆ ಮಾಡಲಾಗಿದೆ.

ಯಾವ ಸಚಿವರಿಗೆ ಯಾವ ಕೊಠಡಿ?

ಡಾ.ಪರಮೇಶ್ವರ್ -ಉಪ ಮುಖ್ಯಮಂತ್ರಿ -ವಿಧಾನಸೌಧ-327, 327 ಎ
ಕೆ.ಎಚ್.ಮುನಿಯಪ್ಪ -ಸಚಿವ-ವಿಧಾನಸೌಧ -340 ಅ, 341, 341ಎ
ಕೆ.ಜೆ.ಜಾರ್ಜ್-ಸಚಿವ -ವಿಧಾನಸೌಧ-317, 317 ಎ
ಎಂ.ಬಿ.ಪಾಟೀಲ್-ಸಚಿವ -ವಿಧಾನಸೌಧ-344, 344 ಎ
ರಾಮಲಿಂಗಾರೆಡ್ಡಿ-ಸಚಿವ -ವಿಧಾನಸೌಧ-335, 336, 337, 337 ಎ
ಸತೀಶ್ ಜಾರಕಿಹೊಳಿ-ಸಚಿವ-ವಿಕಾಸಸೌಧ- 444, 445
ಕೃಷ್ಣ ಬೈರೇಗೌಡ-ಸಚಿವ-ವಿಕಾಸಸೌಧ-244, 245
ಪ್ರಿಯಾಂಕ್ ಖರ್ಗೆ-ಸಚಿವ-ವಿಕಾಸ ಸೌಧ-242, 243
ಯು.ಟಿ.ಖಾದರ್-ಸಚಿವ-ವಿಧಾನಸೌಧ-315, 315 ಎ
ಈಶ್ವರ್ ಖಂಡ್ರೆ-ಸಚಿವ-ವಿಕಾಸಸೌಧ-36, 37
ಡಾ.ಯತೀಂದ್ರ ಸಿದ್ದರಾಮಯ್ಯ-ಸಚಿವ-ವಿಧಾನಸೌಧ, 314, 314
ಡಾ.ಶರಣಪ್ರಕಾಶ್ ಪಾಟೀಲ್-ಸಚಿವ-ವಿಕಾಸಸೌಧ - 344, 345

ನಗರಸಭಾ ಕಾರ್ಯಾಲಯ, ಹರಿಹರ-577601
ಫೋ:08192-202627 ka.harihar.cmc@gmail.com

ನಂ.ನಸಹ/ತಾಂತ್ರಿಕ/ಐಎಫ್‌ಟಿ-33/2026-27 ದಿನಾಂಕ: 06-06-2026

ಟೆಂಡರ್ ಪ್ರಕಟಣೆ

2026-27ನೇ ಸಾಲಿನ ನಗರಸಭೆ ಸಾಮಾನ್ಯ ನಿಧಿ ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ-1999-2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಸಿ-1 & 2ರ ನಿಯಮದನ್ವಯ ಈ ಕೆಳಗಿನಂತೆ ಇಂಡೆಂಟ್ ನಂಬರ್‌ಗೆ ನೀಡಲಾದ ಕೆಲಸಕ್ಕೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ/ಏಜೆನ್ಸಿದಾರರು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗಳಿಗೆ ತಮ್ಮ ದರಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು ತಮಗೆ ಅನ್ವಯಿಸುವ ಟೆಂಡರ್ ದಾಖಲೆಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಾಖೆ ನಗರಸಭೆ, ಹರಿಹರ ಇವರಿಂದ ಪಡೆಯಬಹುದಾಗಿದೆ.

ವಿವರ	ಕ್ರಮ ಸಂಖ್ಯೆ 01 ರ ಕಾಮಗಾರಿಗೆ ನಿಗಧಿಪಡಿಸಿದ ದಿನಾಂಕ	ಕ್ರಮ ಸಂಖ್ಯೆ 02 ರ ಕಾಮಗಾರಿಗೆ ನಿಗಧಿಪಡಿಸಿದ ದಿನಾಂಕ
ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 16-06-2026 ರಂದು ಸಾಯಂಕಾಲ 5.00 ಗಂಟೆಯವರೆಗೆ	ದಿನಾಂಕ: 01-07-2026 ರಂದು ಸಾಯಂಕಾಲ 5.00 ಗಂಟೆಯವರೆಗೆ
ಕೆ.ಪಿ.ಪಿ ಪೋರ್ಟಲ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 17-06-2026 ರಂದು ಬೆಳಿಗ್ಗೆ 11.00 ಗಂಟೆಗೆ	ದಿನಾಂಕ: 02-07-2026 ರಂದು ಬೆಳಿಗ್ಗೆ 11.00 ಗಂಟೆಗೆ

ಕ್ರ. ಸಂ	ಇಂಡೆಂಟ್ ನಂಬರ್	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1.	DMA/2026-27/SE 8007	14.00
2.	DMA/2026-27/SE 8008	184.00

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಹರಿಹರ.
ಸಹಿ/-ಪೌರಾಯುಕ್ತರು, ನಗರಸಭೆ, ಹರಿಹರ.
ವಾಸಾಇ/ಡಿವಿಜಿ/142/ಕೆಎಸ್‌ಎಂಸಿಎ/2026-27

ಬೆದರಿಸಿ ಆಟೋ ಚಾಲಕನಿಂದ ಹಣ ವಸೂಲಿ, ವಿಡಿಯೊ ವೈರಲ್

ಪೊಲೀಸರ ಹೆಸರಲ್ಲಿ ಹಗಲು ದರೋಡೆ

ಕಲಬುರಗಿ: ನಗರದ ಹೃದಯ ಭಾಗದಲ್ಲೇ ಪೊಲೀಸರ ಹೆಸರು ಹೇಳಿ ಬಡ ಆಟೋ ಚಾಲಕನೊಬ್ಬನಿಂದ ಹಾಡಹಗಲಲ್ಲೇ ಹಣ ವಸೂಲಿ ಮಾಡಿರುವ ಆಘಾತಕಾರಿ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ವೈರಲ್ ಆಗಿದೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಮೀಪ ಈ ಕೃತ್ಯ ನಡೆದಿದೆ. ವೃದ್ಧ ಆಟೋ ಚಾಲಕನೊಬ್ಬನನ್ನು ರಸ್ತೆಯಲ್ಲಿ ತಡೆದ ಅಪರಿಚಿತ ವ್ಯಕ್ತಿಯೊಬ್ಬ, ನೀನು ಸಂಚಾರ ನಿಯಮ ಉಲ್ಲಂಘಿಸಿದ್ದೀಯಾ. ನನಗೆ ಸರ್ಕಲ್ ಇನ್‌ಸ್ಪೆಕ್ಟರ್ ಶರಣಪ್ಪ ಅವರು ಚೆನ್ನಾಗಿ ಗೊತ್ತು. ಅವರು ಬಂದರೆ ನಿನಗೆ 2000 ರು.ದಂಡ ಹಾಕುತ್ತಾರೆ. ನನಗೆ ಕೇವಲ 500 ರು. ಕೊಟ್ಟರೆ ಇಲ್ಲೇ ಕೇಸ್ ಮುಗಿಸುತ್ತೇನೆ ಎಂದು ಹೆದರಿಸಿದ್ದಾನೆ. ಪೊಲೀಸರ ಜಿಪ್ಸಿ ಬರುತ್ತಿದೆ ಎಂದು ಹೆದರಿದ ವೃದ್ಧ ಚಾಲಕ, ಅನಿವಾರ್ಯವಾಗಿ ಆತನಿಗೆ 500 ರು.ನೀಡಿದ್ದಾರೆ.

ಈ ದರೋಡೆಯ ದೃಶ್ಯವನ್ನು ಅಲ್ಲೇ ಇದ್ದ ಸಾರ್ವಜನಿಕರೊಬ್ಬರು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ. ಬಳಿಕ ಆಟೋ ಚಾಲಕನನ್ನು ವಿಚಾರಿಸಿದಾಗ, ಅವನು ಯಾರು ಅಂತಲೇ ಗೊತ್ತಿಲ್ಲ. ನೀನು ಇಂಡಿಕೇಟರ್ ಹಾಕದೆ ಆಟೋ ಸೈಡ್‌ಗೆ ತೆಗೆದುಕೊಂಡಿದ್ದೀಯಾ, ಸಾಹೇಬರ ಹತ್ತಿರ ನಡಿ ಎಂದು ಹೆದರಿಸಿದ. ನನ್ನ ಬಳಿ ಎಲ್ಲ ದಾಖಲೆಗಳು ಸರಿಯಾಗಿಯೇ ಇವೆ. ಆದರೆ ಖಾಕಿ ಡ್ರೆಸ್ ಇಲ್ಲದಿದ್ದರೂ ಪೊಲೀಸ್ ಎಂದು ಹೆದರಿಸಿದ್ದಕ್ಕೆ ದುಡ್ಡು ಕೊಟ್ಟೆ. ಜೀವನ ಸಾಕಾಗಿ ಹೋಗಿದೆ ಸರ್... ಎಂದು ವೃದ್ಧ ಚಾಲಕ ಕಣ್ಣೀರಿಡುತ್ತಾ ತನ್ನ ಅಳಲು ತೋಡಿಕೊಂಡಿದ್ದಾನೆ. ಈ ಘಟನೆಯು ಸ್ಟೇಷನ್ ಬಜಾರ್ ಮತ್ತು ಸಂಚಾರ ಪೊಲೀಸ್ ಠಾಣೆ-1ರ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾಗಿದೆ.

ಕೆಲಸ ಮಾಡಲಿ ಎಐ ಕ್ಯಾಮೆರಾಗಳು

ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪತ್ತೆ ಹಚ್ಚಲು ಕೋಟ್ಯಂತರ ರುಪಾಯಿ ವೆಚ್ಚದಲ್ಲಿ ಎಐ (ಕೃತಕ ಬುದ್ಧಿಮತ್ತೆ) ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಈಗ ಪೊಲೀಸರ ಹೆಸರನ್ನೇ ಬಳಸಿ ಹಗಲು ದರೋಡೆ ನಡೆಸಿರುವ ಖದೀಮನನ್ನು ಪತ್ತೆ ಹಚ್ಚಲು ಈ ಎಐ ಕ್ಯಾಮೆರಾಗಳನ್ನು ಬಳಸಿಕೊಂಡು, ಆರೋಪಿಯನ್ನು ತಕ್ಷಣವೇ ಬಂಧಿಸಬೇಕು ಎಂದು ಸಾರ್ವಜನಿಕರು ತೀವ್ರವಾಗಿ ಒತ್ತಾಯಿಸಿದ್ದಾರೆ.

ಸಾರಿಗೆ ಸಚಿವರಾಗಿ ಬೈರತಿ ಸುರೇಶ್ ಅಧಿಕಾರ ಸ್ವೀಕಾರ, ಅಧಿಕಾರಿಗಳ ಜತೆ ಸಭೆ

ಶಕ್ತಿ ಮಹಿಳೆಯರಿಗೆ ಸ್ಮಾರ್ಟ್ ಕಾರ್ಡ್

ಬೆಂಗಳೂರು: ಶಕ್ತಿ ಯೋಜನೆಯನ್ನು ಪರಿಣಾಮಕಾರಿ ಯಾಗಿ ಮಾಡುವ ಉದ್ದೇಶದಿಂದ ರಾಜ್ಯದ ಮಹಿಳೆಯರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಣೆ ಮಾಡಲು ನಿರ್ಧರಿಸಲಾಗಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ವಿಧಾನಸೌಧದ ಕೊಠಡಿಯಲ್ಲಿ ಸೋಮವಾರ ಅಧಿಕಾರ ಸ್ವೀಕರಿಸಿ ಇಲಾಖೆ ಅಧಿಕಾರಿಗಳು, ಹಿತೈಷಿಗಳು, ಅಭಿಮಾನಿಗಳು ನೂತನ ಸಚಿವರಿಗೆ ಅಭಿನಂದನೆ ಸಲ್ಲಿಸಿದರು. ಬಳಿಕ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೇಂದ್ರ ಕಚೇರಿಗೆ ಭೇಟಿ ನೀಡಿ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ ಮತ್ತು ವಾಯವ್ಯ ಸಾರಿಗೆ ನಿಗಮಗಳ ಮುಖ್ಯಸ್ಥರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಇಲಾಖೆಗಳ ಬಗ್ಗೆ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಪಂಚ ಗ್ಯಾರಂಟಿಗಳ ಮೂಲಕ ಜನತೆಯ ಬದುಕು ಹಸನಾಗು ವಂತೆ ಮಾಡಲಾಗಿದೆ. ಶಕ್ತಿ ಯೋಜನೆ ಕೋಟ್ಯಂತರ ಮಹಿಳೆಯರು ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಯೋಜನೆ ಜಾರಿಯಾದ ಬಳಿಕ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ.40ರಷ್ಟು ಹೆಚ್ಚಳವಾಗಿದೆ ಎಂದರು.

ರಾಜ್ಯದ ಮೂರು ಕೋಟಿಗೂ ಅಧಿಕ ಜನರಿಗೆ ಈ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸುವ ನಿರೀಕ್ಷೆಯಿದೆ. ಮಹಿಳೆಯರಿಗೆ ಉಚಿತವಾಗಿ ಸ್ಮಾರ್ಟ್‌ಕಾರ್ಡ್ ಸಿಗಲಿದ್ದು, ಪುರುಷರು ಮೆಟ್ರೋ ಕಾರ್ಡ್ ರೀತಿಯಲ್ಲಿ ಹಣ ಪಾವತಿಸಿ ಸ್ಮಾರ್ಟ್‌ಕಾರ್ಡ್ ಪಡೆದುಕೊಳ್ಳ ಬಹುದಾಗಿದೆ. ಈ ಕಾರ್ಡ್ ಅನ್ನು ಅದರಲ್ಲಿ ಹಣ ಖಾಲಿಯಾದ ನಂತರ ರೀಚಾರ್ಜ್ ಮಾಡಬೇಕಾಗು ತ್ತದೆ. ಸುಮಾರು 3 ಕೋಟಿ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸುವ ಅಗತ್ಯವಿರುವುದರಿಂದ ಸ್ಮಾರ್ಟ್‌ಕಾರ್ಡ್ ಸಿದ್ಧಪಡಿಸಲು ಜಾಗತಿಕ ಟೆಂಡರ್ ಕರೆದು ಸದ್ಯ ದಲ್ಲಿಯೇ ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಿಸುವ ಪ್ರಕ್ರಿ ಯೆಯನ್ನು ಪೈಲಟ್ ಯೋಜನೆಯಡಿ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.ಸಭೆಯಲ್ಲಿ ಸಾರಿಗೆ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್, ಆಯುಕ್ತ ಸೆಲ್ವಮಣಿ ಸೇರಿದಂತೆ ನಾಲ್ಕೂ ನಿಗಮಗಳ ಹಿರಿಯ ಅಧಿಕಾರಿಗಳು ಹಾಜರಿದ್ದರು.

ನಿರ್ಭಯಕ್ಕೆ ಹೆಚ್ಚು ಆದ್ಯತೆ : ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಲಾಗುತ್ತಿದೆ. ಖಾಸಗಿ ಪ್ರಯಾಣಿಕರ ವಾಹನಗಳು ಅಂದರೆ, ವಾಣಿಜ್ಯ ಕಾರುಗಳು, ಟ್ಯಾಕ್ಸಿಗಳು ಸೇರಿದಂತೆ ಇನ್ನಿತರೆ ವಾಹನಗಳಿಗೆ ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ ಸಿಸ್ಟಂ ಅಳವಡಿಕೆಯನ್ನು ಕ್ಷಿಪ್ರಗತಿಯಲ್ಲಿ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇದುವರೆಗೆ 1 ಲಕ್ಷಕ್ಕೂ ಅಧಿಕ ವಾಹನಗಳಿಗೆ ಈ ವ್ಯವಸ್ಥೆ ಅಳವಡಿಸಲಾಗಿದ್ದು, ಇನ್ನುಳಿದ 4-5 ಲಕ್ಷ ವಾಹನಗಳಿಗೆ ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಅಳವಡಿಸಬೇಕೆಂದು ಅಧಿಕಾರಿಗಳಿಗೆ ಸಾರಿಗೆ ಸಚಿವ ಬೈರತಿ ಸುರೇಶ್ ಆದೇಶ ನೀಡಿದರು.

ಸಚಿವ ಬೈರತಿ ಸುರೇಶ್ ಅವರು ವಿಧಾನಸೌಧದ ಕೊಠಡಿಯಲ್ಲಿ ಸೋಮವಾರ ಅಧಿಕಾರ ಸ್ವೀಕರಿಸಿ, ಪೂಜೆ ಸಲ್ಲಿಸಿದರು.

ರಾಜ್ಯ ಸರಕಾರದ ಅನುದಾನದಡಿಯಲ್ಲಿ 1000 ಸಾವಿರ ಬಸ್‌ಗಳನ್ನು ಖರೀದಿಸಲಾಗುತ್ತದೆ. ಇದೇ ವೇಳೆ, ಕೇಂದ್ರ ಸರಕಾರದ ಅನುದಾನದಲ್ಲಿ 4 ಸಾವಿರ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿದೆ. ಹಂತಹಂತವಾಗಿ ಬಸ್‌ಗಳನ್ನು ಖರೀದಿಸಿ ನಾಲ್ಕೂ ನಿಗಮಗಳಿಗೆ ಹಂಚಿಕೆ ಮಾಡಲಾಗುತ್ತದೆ.
-**ಬೈರತಿ ಸುರೇಶ್** ಸಾರಿಗೆ ಸಚಿವ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನೋಂದಾಯಿತ ಕಛೇರಿ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001
ದೂರವಾಣಿ ಸಂಖ್ಯೆ: 080-22289966/22256688 ಫ್ಯಾಕ್ಸ್: 080-22264477
ಇ-ಮೇಲ್: mail@vjnl.in, ವೆಬ್‌ಸೈಟ್: www.vjnl.in CIN No: U41000KA2016SGC097260
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ-572132
ಫೋನ್ ನಂ.: 08137- 282112 ಇ-ಮೇಲ್:eeyetmadhugiri4@gmail.com

ಕ್ರಸಂ: ಕಾಇಂ/ವಿಜನಿನಿ/ಎಹೊಯೋ/ಮ/ವಿ.04/ಟೆ.ಅ-08/2026-27 ದಿನಾಂಕ: 04.06.2026 ಮತ್ತು ಟೆ.ಅ-09/2026-27 ದಿನಾಂಕ: 04.06.2026

ಟೆಂಡರ್ ಪ್ರಕಟಣೆ: (ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯಲ್ಲಿ **1) Construction Of RCC Box Under NH-48 (Old NH-4) By Box Pushing Technique At Ch: 26+895 Km (NH LHS Ch: 40+395 Km & NH RHS Ch: 40+425 Km) To Provide Crossing Of Gravity Main Of TG Halli And Ramanagara Gravity Feeder Under Yettinahole Project (Indent No. VJNL/2025- 26/BR/WORK_INDENT493/CALL-2)** ಮತ್ತು **2) Construction Of RCC Box Under NH-75 (Old NH-48) By Box Pushing Technique At Ch:40+762 Km (NH Ch: 35+65 Km) To Provide Crossing Of Gravity Main Of TG Halli And Ramanagara Gravity Feeder Under Yettinahole Project. (Indent No. VJNL/2025-26/BR/WORK_INDENT495/CALL-2) 02 ಕಾಮಗಾರಿಗಳ ರೂ.490.69 ಮತ್ತು 454.42 ಲಕ್ಷದ ಕಾಮಗಾರಿಗಳಿಗೆ ಹಾಗೂ 3) Consultancy services for Survey and investigation, preparation of designs, drawings, estimates and DTPs for the proposed Vaderahalli storage reservoir near Vaderahalli village, Koratagere Taluk, Tumkur District and allied works with required structures to draw water from Vaderahalli to Lakkenahalli Balancing reservoir or to intake forebay of Kolar Package 1 pump house etc., including land acquisition and R & R proposals under Yettinahole project (Indent No.VJNL/2026-27/SE0214) 01 ಕಾಮಗಾರಿ ರೂ.97.25 ಲಕ್ಷ ಒಟ್ಟು 03** ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ Percentage Tender ಮೂಲಕ ಅರ್ಹ ಬಿಡ್ಡುದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ https://kppp.karnataka.gov.in ವೆಬ್ ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾದ ದಿನಾಂಕಗಳ ವಿವರ ಈ ಕೆಳಗಿನಂತಿದೆ.

ಕ್ರ ಸಂ	ಘಟನೆಗಳ ಕ್ಯಾಲೆಂಟರ್	ಟೆಂಡರ್ ಅಧಿಸೂಚನೆ: 08/ 2026-27 ದಿನಾಂಕ: 04.06.2026 ರ ದಿನಾಂಕಗಳ ವಿವರ	ಟೆಂಡರ್ ಅಧಿಸೂಚನೆ: 09/ 2026-27 ದಿನಾಂಕ: 04.06.2026 ರ ದಿನಾಂಕಗಳ ವಿವರ
1	ಇ-ಪ್ರೊಕ್ಯೂರ್‌ಮೆಂಟ್ ನ https://kppp.karnataka.gov.in ವೆಬ್ ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾದ ದಿನಾಂಕ	05.06.2026 ರಿಂದ 16.06.2026 ಸಂಜೆ 5:00 ಗಂಟೆಯವರೆಗೆ	05.06.2026 ರಿಂದ 16.06.2026 ಸಂಜೆ 5:00 ಗಂಟೆಯವರೆಗೆ
2	ಕೆಪಿಪಿ-ಪೋರ್ಟಲ್ ಮೂಲಕ ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ.	16.06.2026 ಸಂಜೆ 5:00 ಗಂಟೆಯವರೆಗೆ	16.06.2026 ಸಂಜೆ 5:00 ಗಂಟೆಯವರೆಗೆ
3	ಟೆಂಡರ್ ಗೆ ಸಂಬಂಧಪಟ್ಟ ವಿವರಗಳನ್ನು ಪಡೆಯಬಹುದಾದ ಕೊನೆಯ ದಿನಾಂಕ	11.06.2026 ಸಂಜೆ 3:00 ಗಂಟೆಯವರೆಗೆ	11.06.2026 ಸಂಜೆ 3:00 ಗಂಟೆಯವರೆಗೆ
4	ಪ್ರಿ-ಬಿಡ್ ಮೀಟಿಂಗ್, **ಮುಖ್ಯ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ, ವಲಯ, ತುಮಕೂರು ರವರ ಕಛೇರಿಯಲ್ಲಿ**	11.06.2026 ರ ಬೆಳಿಗ್ಗೆ 11:00 ಗಂಟೆಯವರೆಗೆ	--
5	ತಾಂತ್ರಿಕ ಬಿಡ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ ತೆರೆಯುವ ದಿನಾಂಕ	18.06.2026 ರಂದು ಬೆಳಿಗ್ಗೆ 11:00 ಗಂಟೆಗೆ	18.06.2026 ರಂದು ಬೆಳಿಗ್ಗೆ 11:00 ಗಂಟೆಗೆ
6	ಆರ್ಥಿಕ ಬಿಡ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ, ವಿಭಾಗ ನಂ.4 ಮಧುಗಿರಿ ರವರ ಕಛೇರಿಯಲ್ಲಿ ತೆರೆಯುವ ದಿನಾಂಕ	ತಾಂತ್ರಿಕ ಬಿಡ್ ಗೆ ಅನುಮೋದನೆ ದೊರೆತ ನಂತರ	ತಾಂತ್ರಿಕ ಬಿಡ್ ಗೆ ಅನುಮೋದನೆ ದೊರೆತ ನಂತರ

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿ.ಜ.ನಿ.ನಿ, ಎತ್ತಿನಹೊಳೆ ಯೋಜನಾ ವಿಭಾಗ-04 ಮಧುಗಿರಿ.

DIPR/TUM/RO-43/26-27/Oysters

ಕರ್ನಾಟಕ ಸರಕಾರ
ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)
CITY MUNCIPAL COUNCIL, SIRSI (U.K.)
ದೂರವಾಣಿ: 08384-226338 ವೆಬ್‌ಸೈಟ್: www.sirsicity.mrc.gov.in ಇ-ಮೇಲ್: comm_srs@yahoo.com

ನಂ.ನಸಶಿ/ನೈವಿ/ಟೆಂಡರ/ಬೀ.ನಾ.ಸಂ.ಶ/ವಿವ-/2026-27 ದಿನಾಂಕ: 04.06.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಾವಳಿ-2000 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ನೋಂದಾಯಿತ ಏಜೆನ್ಸಿದಾರರು/ಅಧೀಕೃತ ಪೂರೈಕೆದಾರರಿಂದ ಟೆಂಡರ್ ಡಾಕ್ಯುಮೆಂಟ್ KCರ ನಿಬಂಧನೆಗೊಳಪಟ್ಟಂತೆ, KPP Portalನಲ್ಲಿ ರಜಿಸ್ಟ್ರೇಷನ್ ಮಾಡಿಸಿದ ಅರ್ಹ ನೋಂದಾಯಿತ AWO/NGO ರವರಿಂದ(1) DMA/2026-27/SE7785/CALL-2 (ಅಂದಾಜು ಮೊತ್ತ ರೂ. 24.75 ಲಕ್ಷಗಳು) ಕಾಮಗಾರಿಗೆ ಟೆಂಡರಗಳನ್ನು KPP Portal ಮೂಲಕ ಕರೆಯಲಾಗಿದ್ದು, KPP Portal ನಿಯಮಗಳ ಮತ್ತು ಟೆಂಡರು ಕರಾರುಗಳ ಅನ್ವಯ ಟೆಂಡರ್ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು. (1) KPP Portal ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.06.2026 (ಸಂಜೆ 16.00 ಗಂಟೆವರೆಗೆ) (2) KPP Portal ಮೂಲಕ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19.06.2026 (ಸಂಜೆ 16.30 ಗಂಟೆಗೆ) (3) KPP Portal ಮೂಲಕ ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 20.06.2026 (ಸಂಜೆ 16.00 ಗಂಟೆಗೆ) (ರಜಾ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು) ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು KPP Portal ಪ್ಲಾಟ್ ಫಾರಂನಲ್ಲಿ www.kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

DIPR/KWR/KSMCA/184/26-27 dt. 06.06.2026

ಸಹಿ/-ಪೌರಾಯುಕ್ತರು,
ನಗರಸಭೆ, ಶಿರಸಿ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು.

ಸಂಖ್ಯೆ : 06/2026-27 ದಿನಾಂಕ: 06.06.2026

ಟೆಂಡರ್ ಅಧಿಸೂಚನೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು-570010 ರವರು **ಕೆ.ಡಬ್ಲ್ಯೂ-3ರ ಮತ್ತು 2ರ ರೀತ್ಯ ಒಟ್ಟು 02** ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ **ರೂ.25.00 ಲಕ್ಷಗಳು** ಮತ್ತು ಗರಿಷ್ಠ **ಮೊತ್ತ ರೂ. 75.00 ಲಕ್ಷಗಳಾಗಿರುತ್ತದೆ,** ಇ.ಎಂ.ಡಿ ಕನಿಷ್ಠ **ರೂ 0.50 ಲಕ್ಷಗಳು** ಮತ್ತು ಗರಿಷ್ಠ **ರೂ 1.50 ಲಕ್ಷಗಳಾಗಿರುತ್ತದೆ.**

ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವದಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ ಪೋರ್ಟಲ್" ನಲ್ಲಿ ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್'ಗೆ ಸಂಬಂದಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.

1)ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ: **ದಿನಾಂಕ 16.06.2026, ಸಂಜೆ 5-30 ಗಂಟೆ**
2)ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ: **17.06.2026, ಸಂಜೆ 5-30 ಗಂಟೆ**
3) ಬಿಡ್ ತೆರೆಯುವ ದಿನಾಂಕ : **19.06.2026 ರ ಬೆಳಿಗ್ಗೆ 11-00 ಗಂಟೆ ನಂತರ.**

ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು, ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್‌ಗಳನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸನೀ ಮತ್ತು ಅಂ.ಅ ವಿಭಾಗ, ಮೈಸೂರು

ವಾಸಾಸಂಇ/ಮೈಸೂರು/276/ಎಸ್‌ಎಸ್‌ಸಿ/2026-27

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ
ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ದೂರವಾಣಿ : +91-80-22864626, ಇ-ಮೇಲ್: spwireless@ksp.gov.in

ಟೆಂಡರ್ ಸಂಖ್ಯೆ: KSP/2025-26/IND0565/Call-2, ದಿನಾಂಕ: 06.06.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ರಾಜ್ಯ ಗುಪ್ತಚರ ಘಟಕಕ್ಕೆ ಅವಶ್ಯವಿರುವ, **MCS Compliant LTE, LTE+VHF/UHF DMR Hybrid Handheld Radios And Associated Systems** ನೆಟ್‌ವರ್ಕ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ **ರೂ. 870.00 ಲಕ್ಷಗಳು,** ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 11.06.2026 ಸಮಯ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 20.06.2026 ಸಮಯ 17.00 ಗಂಟೆಗಳು.** ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಪೊಲೀಸ್ ಅಧೀಕ್ಷಕರು,
ವೈರ್‌ಲೆಸ್, ಬೆಂಗಳೂರು

ವಾಸಾಸಂಇ/ವಾ.ಪ್ರ./1042/ಶಿರಡಿ ಸಾಯಿ/2026-27

ಬೆಳಗಾವಿ ಮಹಾನಗರ ಪಾಲಿಕೆ
ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005,
ಸುಭಾಷನಗರ, ಬೆಳಗಾವಿ. ದೂರವಾಣಿ : 0831-2405304,
Email : itstaff_ulb_belgaum@yahoo.com, Website : www.belgaumcity.mrc.gov.in

ಸ್ವಚ್ಛ ಭಾರತ
एक कदम स्वच्छता की ओर

ಸಂಖ್ಯೆ : ಮ.ನ.ಪಾ.ಬೆ./ಲೋ.ಶಾ./ಕಾ.ಅ./ಡಿ.ಎಂ./ಟಿ.ಎನ್.ಡಿ./ಇಪ್ರೋ-04/ 2026-27 ದಿನಾಂಕ : 08-06-2026

ಇ-ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ

ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಮಹಾನಗರ ಪಾಲಿಕೆಯ ಅನುದಾನದಡಿಯಲ್ಲಿ **ಬೆಳಗಾವಿ ಮಹಾನಗರ ಪಾಲಿಕೆಯ ವಾಪ್ತಿಯಲ್ಲಿ ವಿವಿಧೆಡೆ ವಿದ್ಯುತ್ತೀಕರಣ ಮಾಡುವ ಕಾಮಗಾರಿಗಳಿಗೆ ಎಸ್.ಸಿ. ಕ್ಯಾಟಗೆರಿ - 01, ಎಸ್.ಟಿ. ಕ್ಯಾಟಗೆರಿ - 01, ಕ್ಯಾಟಗೆರಿ-1 - 01 ಕ್ಯಾಟಗೆರಿ-2(ಎ) - 02 ಹಾಗೂ ಸಾಮಾನ್ಯ ಮಿಸಲಾತಿಗೆ 02 ಹೀಗೆ ಒಟ್ಟು 07 ಕಾಮಗಾರಿಗಳಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ.

1) ಟೆಂಡರ್ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ : 18-06-2026 ರ ಸಂಜೆ 5.00 ಘಂಟೆವರೆಗೆ. 2) ಟೆಂಡರಿನ ಮೊದಲನೆ ಸಭೆಯ ದಿನಾಂಕ : 19-06-2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 25-06-2026 ರ ಅಪರಾಹ್ನ 4.00 ಘಂಟೆವರೆಗೆ. 4) ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 29-06-2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 5) ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 30-06-2026 ರ ಬೆಳಿಗ್ಗೆ 11.00 ಘಂಟೆಗೆ, ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.

ಹೆಚ್ಚಿನ ವಿವರಗಳಿಗೆ ಆನ್‌ಲೈನ್ **ವೆಬ್‌ಸೈಟ್ : https://www.kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಆಯುಕ್ತರು,
ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/385/ಮಣಿಪಾಲ್/2026-27

ವಿಶ್ವವಾಣಿ ಪುಸ್ತಕ

QR CODE
ಸ್ಕ್ಯಾನ್ ಮಾಡಿ

ಫೋನ್ ಪೇ/ ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್‌ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ವಾಟ್ಸಪ್ ನಂಬರ್‌ಗೆ ಕಳುಹಿಸಿ.

ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.

63623 93966

₹ 375

ಸಮಾಚಾರ ಸಣ್ಣದಲ್ಲ

ಕರ್ತವ್ಯನಿರತ ಬಸ್ ನಿರ್ವಾಹಕ ಸಾವು

ಜೇವರ್ಗಿ: ಹೃದಯಾಘಾತದಿಂದ ಕರ್ತವ್ಯ ನಿರತ ನಿರ್ವಾಹಕನೊಬ್ಬ ಮೃತಪಟ್ಟ ಘಟನೆ ಪಟ್ಟಣದ ಡಾ.ಅಂಬೇಡ್ಕರ್ ಸರ್ಕಲ್ ಬಳಿ ಸೋಮವಾರ ಬೆಳಗ್ಗೆ ಸಂಭವಿಸಿದೆ. ತಾಲೂಕಿನ ರಾಜವಾಳ ಗ್ರಾಮದ ಮಲ್ಲಯ್ಯಸ್ವಾಮಿ ವಿರುಪಯ್ಯಸ್ವಾಮಿ ಹಿರೇಮಠ (35 ವರ್ಷ) ಮೃತರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ. ಕಲಬುರಗಿ ಬಸ್ ಘಟಕ-2ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಲ್ಲಯ್ಯ ಸ್ವಾಮಿ ಕಲಬುರಗಿ-ಹರವಾಳ ಮಾರ್ಗದಲ್ಲಿ ಸಂಚರಿಸುತ್ತಿದ್ದ ಕೆಕೆಆರ್‌ಟಿಸಿ ಬಸ್‌ನ ನಿರ್ವಾಹಕರಾಗಿದ್ದರು. ಸೋಮವಾರ ಬೆಳಗ್ಗೆ 9.30 ಗಂಟೆ ಸುಮಾರಿಗೆ ಹರವಾಳ ಗ್ರಾಮಕ್ಕೆ ತೆರಳುವ ಸಂದರ್ಭದಲ್ಲಿ ಪಟ್ಟಣದ ಡಾ.ಅಂಬೇಡ್ಕರ್ ಸರ್ಕಲ್ ಬಳಿ ಎದೆನೋವು ಕಾಣಿಸಿಕೊಂಡಿದೆ. ತಕ್ಷಣ ಅದೇ ಬಸ್ ಅನ್ನು ಚಾಲಕ ಸರಕಾರಿ ಸಾರ್ವಜನಿಕ ಆಸ್ಪತ್ರೆಗೆ ಒಯ್ದು ಚಿಕಿತ್ಸೆಗಾಗಿ ದಾಖಲು ಮಾಡಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಮನೆ ಕಾಂಪೌಂಡ್ ಏರಿ ಕುಳಿತ ಚಿರತೆ

ಹಾಸನ: ಜಿಲ್ಲೆಯ ಅರಸೀಕೆರೆ ತಾಲೂಕಿನ ಕಾಳೇಗೌಡನಕೊಪ್ಪಲು ಗ್ರಾಮದಲ್ಲಿ ತಡರಾತ್ರಿ ಚಿರತೆಯೊಂದು ಮನೆಯ ಕಾಂಪೌಂಡ್ ಮೇಲೆ ಕುಳಿತು ಬೇಟೆಗೆ ಹೊಂಚು ಹಾಕುತ್ತಿದ್ದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸೈರನ್ ಶಬ್ದಕ್ಕೂ ಮಿಸುಕಾಡದೆ ಮನೆಯ ಕಾಂಪೌಂಡ್ ಮೇಲೆ ಕುಳಿತು ಶಬ್ದ ಬಂದ ಕಡೆ ತದೇಕ ಚಿತ್ತದಿಂದ ದಿಟ್ಟಿಸುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ವಾರದ ಹಿಂದೆಯಷ್ಟೇ ಮೇಕೆಯೊಂದನ್ನು ಹೊತ್ತೊಯ್ದು ತಿಂದಿತ್ತು. ಸಾಕು ನಾಯಿ, ಇತರ ಪ್ರಾಣಿಗಳನ್ನು ಹೊತ್ತೊಯ್ಯಲು ಬಂದಿರಬಹುದು ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಪಿಸಿ ನೇಮಕಾತಿಗೆ 45 ದಿನ ಉಚಿತ ತರಬೇತಿ

ಬೆಂಗಳೂರು: ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷಾ ಅಭ್ಯರ್ಥಿಗಳಿಗಾಗಿ 45 ದಿನಗಳ ಉಚಿತ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿನೇಂದ್ರ ಸ್ಪರ್ಧಾತ್ಮಕ ಪರೀಕ್ಷೆಗಳ ಸಂಸ್ಥೆ ತಿಳಿಸಿದೆ. ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ತರಬೇತಿ ಕಾರ್ಯಕ್ರಮ ನಡೆಯಲಿದೆ. ಅಭ್ಯರ್ಥಿಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿನ್ನೆಲೆ ಪರಿಗಣಿಸಿ ವೈಯಕ್ತಿಕ ಸಂದರ್ಶನದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಜೂ.15 ಸಲ್ಲಿಕೆಗೆ ಕೊನೆ ದಿನ. 7676167901, 9986439874 ಸಂಪರ್ಕಿಸಿ. www.jiceias.comನಲ್ಲಿ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
09.06.2026
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶ್ರೀ ಸತ್ಯೇಶ ಬೆಳ್ಳೂರು
ಶ್ರೀಮತಿ ಪಲ್ಲವಿ ಭಟ್
ವಿಷಯ
ಹದಿಬದೆಯ ಧರ್ಮ
vishwavani.news

ದಿನ ವಿಶೇಷ

09 ಜೂನ್ 2026 ಮಂಗಳವಾರ

» ಸೂರ್ಯೋದಯ	: 5-41
» ಸೂರ್ಯಾಸ್ತ	: 7-10
» ತಿಥಿ	: ನವಮಿ
» ನಕ್ಷತ್ರ	: ಪೂರ್ವಭಾದ್ರ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ಅಧಿಕ ಜ್ಯೇಷ್ಠ
» ಪಕ್ಷ	: ಕೃಷ್ಣಪಕ್ಷ

ಮುಂದಿನ 8 ವಾರಗಳಲ್ಲಿ ಕ್ಷೇತ್ರ ಪುನರ್ ವಿಂಗಡಣೆ, ಮೀಸಲಾತಿ ಪ್ರಕ್ರಿಯೆ ಪೂರ್ಣ: ಸಚಿವ ಖಂಡ್ರೆ

ಗ್ರಾಪಂಗಳಿಗೆ ವರ್ಷಾಂತ್ಯದೊಳಗೆ ಚುನಾವಣೆ

ಬೆಂಗಳೂರು: ಅಧಿಕಾರ ವಿಕೇಂದ್ರೀಕರಣ ದಿವಂಗತ ರಾಜೀವ್ ಗಾಂಧೀ ಅವರ ಕಲ್ಪನೆಯಾಗಿದ್ದು, ಈ ವರ್ಷಾಂತ್ಯದೊಳಗೆ ಎಲ್ಲ ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಕ್ರಮವಹಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಪರಿಚಯಾತ್ಮಕ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಮುಂದಿನ 8 ವಾರಗಳಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಕಾರ್ಯ ಹಾಗೂ ಮೀಸಲಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ನಂತರ ರಾಜ್ಯ ಚುನಾವಣೆ ಆಯೋಗ ಚುನಾವಣೆ ಪ್ರಕ್ರಿಯೆ ನಡೆಸಲಿದೆ ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 25540 ಮಂಜೂರಾದ ಹುದ್ದೆಗಳಿದ್ದು, ಈ ಪೈಕಿ ಖಾಲಿ ಇರುವ 8770 ಹುದ್ದೆ ಪೈಕಿ 4 ಸಾವಿರ ಹುದ್ದೆಯ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು . ಎ ವರ್ಗದ 268, ಬಿ ವರ್ಗದ 1079, ಸಿ ವರ್ಗದ 5294, ಡಿ ವರ್ಗದ 2129 ಹುದ್ದೆಗಳು ಖಾಲಿ ಇದ್ದು, ಈ ಪೈಕಿ ಎಲ್ಲ ವರ್ಗದ ಹುದ್ದೆಗಳ ಪೈಕಿ 4 ಸಾವಿರ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಈ ಎಲ್ಲ ಹುದ್ದೆಗಳನ್ನು ಪಾರದರ್ಶಕವಾಗಿ ಭರ್ತಿ ಮಾಡಲು ಸೂಚಿಸಲಾಗಿದೆ ಎಂದರು.

ಕಲ್ಯಾಣ ಕರ್ನಾಟಕದ ಎಲ್ಲ ಹುದ್ದೆಗಳ ಭರ್ತಿಗೆ ಸೂಚನೆ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳ ಭರ್ತಿಗೂ ಕ್ರಮ ವಹಿಸುವಂತೆ ಸೂಚನೆ ನೀಡಿರುವುದಾಗಿ ಈಶ್ವರ ಖಂಡ್ರೆ ತಿಳಿಸಿದರು. ಈಗಾಗಲೇ ಜೂನ್ 3ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ 56 ಸಾವಿರ ಹುದ್ದೆಗಳ ನೇಮಕಾತಿಗೆ ಸಮ್ಮತಿ ಸೂಚಿಸಿದ್ದು, 1400 ಹುದ್ದೆಗಳ ಭರ್ತಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಅನುಮತಿ ನೀಡಲಾಗಿದೆ. ಈ ಹುದ್ದೆಗಳ ಭರ್ತಿಗೆ ಶೀಘ್ರವೇ ಪ್ರಕ್ರಿಯೆ ಆರಂಭಿಸಲಾಗುವುದು ಎಂದರು.

ಸಭೆಯಲ್ಲಿ ಇಲಾಖೆಯ ಕಾರ್ಯದರ್ಶಿಗಳಾದ ಸಮೀರ್ ಶುಕ್ಲ, ರಂದೀಪ್ ಡಿ, ಪಂಚಾಯತ್ ರಾಜ್ ಆಯುಕ್ತರಾದ ಡಾ ಅರುಂಧತಿ, ಕೆಆರ್ ಐಡಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಗೌಡ, ಕುಡಿಯುವ ನೀರು ಪೂರೈಕೆ ವಿಭಾಗದ ಆಯುಕ್ತರಾದ ಫೌಜಿಯಾ ತರುನ್ನುಂ ಮತ್ತಿತರರು ಪಾಲ್ಗೊಂಡಿದ್ದರು.

ಇಲಾಖೆ ಅಧಿಕಾರಿಗಳ ಜತೆ ಬೆಂಗಳೂರಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಸಭೆ ನಡೆಸಿದರು.

> **ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಮತ್ತು ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದಿಂದ ಸೃಜಿಸಲಾಗಿರುವ ಎಲ್ಲ ಆಸ್ತಿಗಳ ದಾಖಲೀಕರಣ ಆಗಬೇಕು. ಈ ಎಲ್ಲ ಆಸ್ತಿಗಳೂ ಗುಣಮಟ್ಟದಿಂದ ಕೂಡಿರಬೇಕು. ಇದರಲ್ಲಿ ಯಾವುದೇ ರಾಜೀಗೆ ಅವಕಾಶವಿಲ್ಲ. ಜತೆಗೆ ಎಲ್ಲ ಆಸ್ತಿಯನ್ನು ಜಿಯೋ ಟ್ಯಾಗ್ ಮಾಡಿ ಸರಕಾರಿ ಆಸ್ತಿ ಸಂರಕ್ಷಣೆ ಮಾಡಿ, ಅದನ್ನು ಅಪ್ ಲೋಡ್ ಮಾಡಬೇಕು.**
> **ಈಶ್ವರ ಖಂಡ್ರೆ,** ಗ್ರಾಮೀಣಾಭಿವೃದ್ಧಿ ಸಚಿವ

ಕಲುಷಿತ ನೀರು ಸರಬರಾಜಾಗದಂತೆ ಕಟ್ಟೆಚ್ಚರ ವಹಿಸಿ

ಗ್ರಾಮೀಣ ಕರ್ನಾಟಕದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವುದು ಎಲ್ಲ ಪಂಚಾಯ್ತಿಗಳ ಆದ್ಯ ಕರ್ತವ್ಯವಾಗಿದ್ದು, ಯಾವುದೇ ಕಾರಣಕ್ಕೂ ಕಲುಷಿತ ನೀರು ಸರಬರಾಜಾಗದಂತೆ ಎಚ್ಚರ ವಹಿಸಿ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಬಿ ಖಂಡ್ರೆ, ಅಧಿಕಾರಿಗಳಿಗೆ ಸೂಚಿಸಿರುವುದಾಗಿ ತಿಳಿಸಿದ್ದಾರೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಮಂಡಳಿಯ ಸಭಾಂಗಣದಲ್ಲಿ ಇಲಾಖೆಯ ಉನ್ನತಾಧಿಕಾರಿಗಳ ಪರಿಚಯಾತ್ಮಕ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಲುಷಿತ ನೀರು ಸೇವನೆಯಿಂದ ಮುಗ್ಧ ಜನರು ಮೃತಪಟ್ಟ ಘಟನೆಗಳು ಹಲವೆಡೆ ನಡೆದಿವೆ. ಇಂತಹ ಘಟನೆ ಮರುಕಳಿಸದಂತೆ ನೀರಿನ ಪರೀಕ್ಷೆಯನ್ನು ಎನ್‌ಎಬಿಎಲ್ ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ನಿಯಮಿತವಾಗಿ ಮಾಡುವಂತೆ ಆದೇಶಿಸಿರುವುದಾಗಿ ತಿಳಿಸಿದರು. ಎಲ್ಲ ನಾಗರಿಕತೆಗಳೂ ಹುಟ್ಟಿದ್ದು ನದಿಗಳ ತಟದಲ್ಲಿ. ನೀರು ಜೀವಜಲ. ನೀರಿಲ್ಲದೆ ಬದುಕಲು ಸಾಧ್ಯವಿಲ್ಲ. ಹೀಗಾಗಿ ಪಂಚಾಯ್ತಿಗಳಿಂದ ಪೂರೈಕೆ ಮಾಡುವ ಕುಡಿಯುವ ನೀರಿನಲ್ಲಿ ಯಾವುದೇ ಲೋಪ ಆಗದಂತೆ ಬಹು ಹಂತದ ಪರಿಶೀಲನೆ ನಡೆಸಲು ಸೂಚಿಸಲಾಗಿದೆ.

ತಪ್ಪಿದ ಸಿಎಂ ಸ್ಥಾನ ಪರಂ ಭಾವುಕ

ತುಮಕೂರು: ಮೂರು ಬಾರಿ ಮುಖ್ಯ ಮಂತ್ರಿ ಸ್ಥಾನ ಕೈತಪ್ಪಿದ್ದಕ್ಕೆ ಬೇಸರ ವ್ಯಕ್ತಪಡಿಸಿದ ಡಿಸಿಎಂ ಡಾ.ಜಿ.ಪರಮೇಶ್ವರ ಅವರು, ತಮ್ಮ ರಾಜಕೀಯ ಜೀವನ ನಡೆದು ಬಂದ ಹಾದಿ ನೆನೆದು ಭಾವುಕರಾದರು.

ಡಿಸಿಎಂ ಆಗಿ ಮೊದಲ ಬಾರಿಗೆ ಬಂದ ಜಿ.ಪರಮೇಶ್ವರ ಅವರನ್ನು ಅವರ ಒಡೆತನದ ಸಿದ್ಧಾರ್ಥ ಕಾಲೇಜಿನ ಸಿಬ್ಬಂದಿ ಸೋಮವಾರ ಆತ್ಮೀಯವಾಗಿ ಬರಮಾಡಿಕೊಂಡರು. ಈ ವೇಳೆ ಅವರು ಮನಬಿಚ್ಚಿ ಮಾತನಾಡಿದರು. ಮಧ್ಯೆ ಮಧ್ಯೆ ಭಾವುಕರಾದರು. ರಾಜಕೀಯಕ್ಕೆ ಆಕಸ್ಮಿಕವಾಗಿ ಬಂದೆ. ಈಗ 40 ವರ್ಷಗಳ ಅನುಭವ ಇದೆ. ಜನಪರ ಕೆಲಸ ಮಾಡಿದ್ದರಿಂದ ಜನರ ಪ್ರೀತಿ ಸಿಕ್ಕಿದೆ. ಇಲ್ಲವಾಗಿದ್ದರೆ ಜನರಾಗಲೀ, ಪಕ್ಷವಾಗಲೀ ನನ್ನನ್ನು ಗುರುತಿ ಸುತ್ತಿರಲಿಲ್ಲ ಎಂದರು.

2013ರ ಚುನಾವಣೆಯಲ್ಲಿ ಸೋತೆ. ಬಹುಶಃ ನಾನು ಗೆದ್ದಿದ್ದರೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುತ್ತಿರಲಿಲ್ಲ. ನನ್ನ ಹಣೆಬರಹವೋ ಏನೋ ಗೊತ್ತಿಲ್ಲ. ಆಗ ನಾನು ಸೋತ ಕಾರಣಕ್ಕೆ ಅವರು ಸಿಎಂ ಆದರು. 2018ರ ಚುನಾವಣೆಯಲ್ಲಿ ನಮ್ಮ ಪಕ್ಷ 80 ಸ್ಥಾನಗೆದ್ದಿತ್ತು. 30 ಸ್ಥಾನಗಳನ್ನು ಗೆದ್ದಿದ್ದ ಜೆಡಿಎಸ್ ಜತೆಗೆ ಪಕ್ಷ ಮೈತ್ರಿ ಮಾಡಿ ಕೊಂಡಾಗ ಕಾರಣಾಂತರದಿಂದ ಕುಮಾರಸ್ವಾಮಿ ಸಿಎಂ ಆದರು. ಅವತ್ತು ನನ್ನನ್ನು ಸಿಎಂ ಮಾಡಬಹುದಿತ್ತು. ಆದರೆ ಆಗಲಿಲ್ಲ ಎಂದರು.

ನಾಗರಬಾವಿ, ದೇವಕೊಂಡಹಳ್ಳಿ ಸಿಸಿ ರಸ್ತೆಗೆ ಚಾಲನೆ | ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ

ಶಾಸಕ ಪ್ರದೀಪ್ ಈಶ್ವರ್ ಕ್ಷೇತ್ರ ಸಂಚಾರ

ಚಿಕ್ಕಬಳ್ಳಾಪುರ: ಮಂಚೇನಹಳ್ಳಿ ಮತ್ತು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಲಾಗುವುದು ಎಂದು ಶಾಸಕ ಪ್ರದೀಪ್ ಈಶ್ವರ್ ಹೇಳಿದರು.

ತಾಲೂಕಿನ ಹಳೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಡಿ ಭಾಗದ ಗ್ರಾಮಗಳಾದ ನಾಗರಬಾವಿಯಿಂದ ದೇವರಕೊಂಡಹಳ್ಳಿಗೆ ಸಂಪರ್ಕ ಕಲ್ಪಿಸುವ ಸುಮಾರು 3 ಕೋಟಿ ವೆಚ್ಚದ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಾನು ಮಾತುಕೊಟ್ಟಂತೆ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಮೂಲ ಸೌಕರ್ಯಗಳಿಂದ ವಂಚಿತ ಗಡಿಭಾಗದ ಹಳ್ಳಿಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗುವುದು.

ಕ್ಷೇತ್ರದ ಗಡಿ ಭಾಗದ ಹಳ್ಳಿಗಳ ಅಭಿವೃದ್ಧಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸುವ ಭಾಗ ವಾಗಿಯೇ ನಾಗರಬಾವಿ ಹಾಗೂ ದೇವರ ಕೊಂಡಹಳ್ಳಿ ಗ್ರಾಮಗಳ ದಶಕಗಳ ರಸ್ತೆ ಸಮಸ್ಯೆಗೆ ಶಾಶ್ವತ ಮುಕ್ತಿ ನೀಡಲು 3 ಕೋಟಿ ವೆಚ್ಚದಲ್ಲಿ ಗುಣಮಟ್ಟದ ಸಿಸಿ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ.

ಸಾರ್ವಜನಿಕರು ಕಾಮಗಾರಿಯ ಗುಣಮಟ್ಟದ ಕಡೆಗೆ ಗಮನ ಹರಿಸಬೇಕು. ಕಳಪೆಕಾಮಗಾರಿ ಆಗುತ್ತಿದೆ ಎಂದು ಕಂಡು ಬಂದಲ್ಲಿ ಕೂಡಲೇ ಕೆಲಸ ನಿಲ್ಲಿಸಿ, ನನಗೆ ಕರೆ ಮಾಡಿ, ಆಗ ಗುಣಮಟ್ಟದ ಕೆಲಸಕ್ಕೆ ಆಧ್ಯತೆ ದೊರೆಯಲಿದೆ ಜನತೆಯಲ್ಲಿ ಮನವಿ ಮಾಡಿದರು.

ನಾಗರಬಾವಿ ಗ್ರಾಮದಲ್ಲಿರುವ ಶಿಥಿಲಗೊಂಡಿರುವ ಶಾಲಾ ಕೊಠಡಿಗಳನ್ನು ಕೆಡವಿ ಹೊಸಕಟ್ಟಡವನ್ನು ಕಟ್ಟುವಂತೆ, ಶಾಲೆಗೆ ಕಾಂಪೌಂಡ್ ನಿರ್ಮಿಸುವಂತೆ ಗ್ರಾಮಸ್ಥರು ಮನವಿ ಮಾಡಿದರು. ಕೂಡಲೇ ಪಿಆರ್‌ಡಿ ವಿಭಾಗಕ್ಕೆ ತಾಕೀತು ಮಾಡಿದ ಶಾಸಕರು ತುರ್ತಾಗಿ ಈ ಕೆಲಸ ಮಾಡಿ ಎಂದು ಮೌಖಿಕ ಆದೇಶ ಮಾಡಿದರು. ಇಷ್ಟೇ ಅಲ್ಲದೆ ಎರಡೂ ಗ್ರಾಮಗಳ ಜನತೆಗೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲು ಕ್ರಮವಹಿಸುವಂತೆಯೂ ಹೇಳುವ ಮೂಲಕ ನಾಗರಬಾವಿ ಮತ್ತು ದೇವರ ಕೊಂಡಹಳ್ಳಿ ಗ್ರಾಮಸ್ಥರ ಮೊಗದಲ್ಲಿ ಸಂತೋಷ ಉಕ್ಕುವಂತೆ ಮಾಡಿದರು.

ಬಸ್ ವಿಸ್ತರಣೆಗೆ ಮನವಿ: ದೊಡ್ಡಬಳ್ಳಾಪುರ ತಾಲೂಕಿನ ಶ್ರೀಕ್ಷೇತ್ರಸುಬ್ರಹ್ಮಣ್ಯೇಶ್ವರ ಸನ್ನಿಧಿಯಿರುವ ಘಾಟಿಗೆ ಈಗಾಗಲೇ ಬರುತ್ತಿರುವ ಬಿಎಂಟಿಸಿ ಬಸ್ಸುಗಳನ್ನು ಮಂಚೇನಹಳ್ಳಿಗೆ ಬಂದು ಹೋಗುವಂತೆ ಮಾಡಿದರೆ ವಿದ್ಯಾರ್ಥಿಗಳು, ಕೃಷಿಕರು, ರೈತರು, ಕೂಲಿ ಕಾರ್ಮಿಕರಿಗೆ, ಸರಕಾರಿ ನೌಕರರಿಗೆ ಅನುಕೂಲ ಆಗುತ್ತದೆ ಎಂದು ಮಾಡಿದ ಮನವಿಗೆ ಸ್ಪಂದಿಸಿದ ಶಾಸಕರು ಕೂಡಲೇ ಗಮನಹರಿಸುವುದಾಗಿ ತಿಳಿಸಿದರು.

ಈ ವೇಳೆ ತಹಸೀಲ್ದಾರ್ ಪೂರ್ಣಿಮಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗಭೂಷಣ್, ವಕೀಲ ಕೆ.ಎಂ.ಮುನೇಗೌಡ, ಚಿಕ್ಕ ರಕ್ಷಿತ್‌ರೆಡ್ಡಿ, ನಾಗೇಶ್‌ರೆಡ್ಡಿ, ವಿನಯ್ ಬಂಗಾರಿ, ಇಮ್ರಾನ್ ಮಸ್ತಾನ್ ಸಾಬ್, ನಾರಾಯಣಸ್ವಾಮಿ, ಮಾರುತಿ, ಅರವಿಂದ್,ಇಒ, ಎಡಿಎಲ್‌ಆರ್, ಬೆಸ್ಕಾಂ, ಪೊಲೀಸ್, ಅರಣ್ಯ ಇಲಾಖೆ ಸೇರಿ 36 ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಮಂಚೇನಹಳ್ಳಿ ತಾಲೂಕು ನಾಗರಬಾವಿ ಮತ್ತು ದೇವರಕೊಂಡಹಳ್ಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ 3 ಕೋಟಿ ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಪ್ರದೀಪ್ ಈಶ್ವರ್ ಭೂಮಿಪೂಜೆ ನೆರವೇರಿಸಿದರು.

ಅಹವಾಲುಗಳಿಗೆ ಸ್ಥಳದಲ್ಲೇ ಪರಿಹಾರ

ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡುವ ಮುನ್ನ ಬೆಳಂಬೆಳಗ್ಗೆಯೇ ದಲಿತರೇ ಹೆಚ್ಚಾಗಿ ವಾಸಿಸುವ ನಾಗರಬಾವಿ ಮತ್ತು ದೇವರಕೊಂಡಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿದ್ದ ಶಾಸಕ ಪ್ರದೀಪ್ ಈಶ್ವರ್ ಅವರು ಗ್ರಾಮಗಳಲ್ಲಿ ಸಂಚರಿಸಿ ಜನರಿಂದ ಅಹವಾಲು ಆಲಿಸಿದರು. ಸ್ಥಳದಲ್ಲಿದ್ದ ತಹಸೀಲ್ದಾರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ, ಆಹಾರ ಪೂರೈಕೆ ಶಿರಸ್ತೇದಾರ್, ಕಂದಾಯ, ಅರಣ್ಯ ಇಲಾಖೆ ಸೇರಿ 33 ಇಲಾಖೆ ಅಧಿಕಾರಿಗಳಿಗೆ ಪರಿಹಾರ ಮಾಡುವಂತೆ ಸೂಚನೆ ನೀಡಿದರು. ಪಿಂಚಣಿ, ಹಾಸ್ಟೆಲ್ ಸಮಸ್ಯೆ, ಪಡಿತರ ಸಮಸ್ಯೆ, ಕುಡಿಯುವ ನೀರು ಸೇರಿ ಹಲವು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಿಕೊಟ್ಟರು. ಬಾಕಿ ಇರುವ ಇತರೆ ಸಮಸ್ಯೆಗಳನ್ನು ಆದಷ್ಟು ಬೇಗ ಕಾಲಮಿತಿಯಲ್ಲಿ ಬಗೆಹರಿಸುವುದಾಗಿ ಸಾರ್ವಜನಿಕರಿಗೆ ಭರವಸೆ ನೀಡಿದರು.

ಅಹಿಂದ ನಾಯಕರನ್ನು ಹಿಂದಕ್ಕೆ ತಳ್ಳುವವರು ಈಗಲೂ ಇದ್ದಾರೆ

ಬೆಳಗಾವಿ: ಅಹಿಂದ ನಾಯಕರನ್ನು ಹಿಂದಕ್ಕೆ ತಳ್ಳುವ ಕೆಲಸ ಹಿಂದಿನಿಂದಲೂ ನಡೆದು ಬಂದಿದೆ. ಈಗಲೂ ಹಿಂದೆ ತಳ್ಳುವವರು ಪ್ರಯತ್ನ ಮಾಡುತ್ತಿದ್ದಾರೆ. ಎಲ್ಲವನ್ನೂ ಮೀರಿ ನಾವು ಬೆಳೆಯಬೇಕು, ಬೆಳೆಯುತ್ತೇವೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು.

'ಪ್ರಸಕ್ತ ಸರಕಾರದಲ್ಲಿ ಅಹಿಂದ ನಾಯಕರಿಗೆ ಹಿನ್ನಡೆ ಆಗಿದೆಯೇ? ಅಪಪ್ರಚಾರಗಳು ನಡೆಯುತ್ತಿವೆಯೇ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅಂಥ ಕೆಲಸಗಳು ನಡೆದೇ ಇವೆ. ಸದ್ಯ ನನ್ನ ಬಗ್ಗೆ ಅಪಪ್ರಚಾರ ಮಾಡಿದವರ ವಿರುದ್ಧ ತನಿಖೆ ನಡೆದಿದೆ ಎಂದರು.

'ನಿಮಗೆ ಉಪಮುಖ್ಯಮಂತ್ರಿ ಸ್ಥಾನ ಕೊಡಿಸುವಲ್ಲಿ ಸಿದ್ದರಾಮಯ್ಯ ಹಿಂದೆ ಸರಿದಿದ್ದು ಏಕೆ?' ಎಂಬ ಪ್ರಶ್ನೆಗೆ ಉತ್ತರಿಸಿದ ಸತೀಶ, ಸದ್ಯ ಪರಮೇಶ್ವರಪ್ಪ ಅವರಿಗೆ ಕೊಡಿಸಿದ್ದಾರೆ. ಮುಂದೆ ನೋಡೋಣ. ನನಗೆ ಸಿಗುವ ಗೌರವ ಸಿಕ್ಕಿದೆ ಎಂಬುದು ನನ್ನ ಅನಿಸಿಕೆ. ಆದರೆ, ನಮ್ಮ ಜನ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿದ್ದರು. ಹಾಗಾಗಿ, ಅವರಿಗೆ ಬೇಸರವಾಗುವುದು ಸಹಜ ಎಂದೂ ಹೇಳಿದರು.

ಒಕ್ಕಲಿಗರಿಗೆ ಬಿಜೆಪಿ ಅನ್ಯಾಯ

ಮಂಡ್ಯ: ಟಿಶ್ಯೂ ಪೇಪರ್ ತರ ಬಳಸಿ ಕೊಂಡು ಬಿಸಾಕೋದೇ ಬಿಜೆಪಿ ಕೆಲಸವಾಗುತ್ತಿದೆ. ಜೆಡಿಎಸ್‌ಗೆ ಬಿಸ್ಕೇಟ್ ತರ ಒಂದು ಕೇಂದ್ರ ಮಂತ್ರಿ ಕೊಟ್ಟಿದ್ದಾರೆ. ಬಿಜೆಪಿಯವರು ಮಂಡ್ಯಕ್ಕೆ ಚಪ್ಪಡಿಕಲ್ಲು ಎಳೆದು ಒಕ್ಕಲಿಗರನ್ನು ಮುಗಿಸಿದ್ದಾರೆ ಎಂದು ಶಾಸಕ ಗಣಿಗ ರವಿಕುಮಾರ್ ವಾಗ್ದಾಳಿ ನಡೆಸಿದರು. ಅಂಬರೀಶಣ್ಣನ ಕುಟುಂಬ ಮತ್ತು ದೇವೇಗೌಡರ ಮೇಲೆ ಅಪಾರ ಪ್ರೀತಿ ಇದೆ. ನಿಖಿಲ್ ಕುಮಾರಸ್ವಾಮಿ ಅವರನ್ನು ಎಂಪಿ ಚುನಾವಣೆಗೆ ನಿಲ್ಲಿಸಿದ್ದರು. ಅವರ ವಿರುದ್ಧ ಸ್ವತಂತ್ರವಾಗಿ ಸ್ಪರ್ಧಿಸಿ ಸುಮಲತಾ 1 ಲಕ್ಷಕ್ಕೂ ಅಧಿಕ ಮತಗಳಿಂದ ವಿಜಯ ಪತಾಕೆ ಹಾರಿಸಿದರು. ಹಾಲಿ ಮುಖ್ಯಮಂತ್ರಿ ಮಗನ ವಿರುದ್ಧ ಗೆಲ್ಲುವುದು ಸುಲಭವಲ್ಲ ಎಂದರು.

ಟೌನ್‌ಶಿಪ್ ಯೋಜನೆ ವಿರುದ್ಧ ಸದನದಲ್ಲಿ ಧ್ವನಿ ಎತ್ತುವೆ: ಯತ್ನಾಳ್

ಡಿಕೆಶಿ ಬಿಡದಿ ಟೌನ್‌ಶಿಪ್ ಯೋಜನೆ ಕೈಬಿಡಲಿ

ರಾಮನಗರ: ಬಿಡದಿ ಟೌನ್‌ಶಿಪ್ ವಿಚಾರವಾಗಿ ಈ ಭಾರಿಯ ಅಧಿವೇಶನದಲ್ಲಿ ಚರ್ಚಿಸಲಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದ ಸರಿಯಾದ ಉತ್ತರ ಲಭಿಸದಿದ್ದರೆ, ಅಧಿವೇಶನದಲ್ಲಿ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುತ್ತದೆ ಎಂದು ವಿಜಯಪುರ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು.

ಬಿಡದಿ ಟೌನ್‌ಶಿಪ್ ವಿರೋಧಿಸಿ ಸ್ಥಳೀಯ ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದ ಅವರು, ಅಧಿವೇಶನದಲ್ಲಿ ನಡೆಸುವ ಪ್ರತಿಭಟನೆಗೆ ಬಿಡದಿಯ ರೈತರು ಸಹ ಸಹಕಾರ ನೀಡಬೇಕು. ಸಾವಿರಾರು ಮಂದಿ ಆಗಮಿಸಿ, ಸರಕಾರದ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದರು.

ನೆಮ್ಮದಿಯಾಗಿ ಬದುಕುತ್ತಿರುವ ರೈತರ ಭೂಮಿಯನ್ನು ಕಸಿದುಕೊಂಡು ಸರಕಾರ ಟೌನ್‌ಶಿಪ್ ಮಾಡಲು ಹೊರಟಿದೆ. ಹಾಗಾಗಿ ನಾನು ಈ ಬಗ್ಗೆ ಅಧಿವೇಶನದಲ್ಲಿ ಧ್ವನಿ ಎತ್ತಲಿದ್ದೇನೆ. ಇದಕ್ಕೆ ನಿಮ್ಮ ಸಹಕಾರವೂ ಅಗತ್ಯವಾಗಿದೆ. ನಮ್ಮ ಧ್ವನಿ ಅಡಗಿಸುವ ಕೆಲಸ ಮಾಡಿದರೆ, ಇದಕ್ಕೆ ನಾನು ಜಗ್ಗುವುದಿಲ್ಲ. ಗುಂಡಿಟ್ಟರೂ ಪರವಾಗಿಲ್ಲ ಬಿಡದಿ ಭಾಗದ ರೈತರ ಪರವಾಗಿ ನಾನು ಕೆಲಸ ಮಾಡಲಿದ್ದೇನೆ ಎಂದು ರೈತರಿಗೆ ಧೈರ್ಯ ಹೇಳಿದರು.

ಬಿಡದಿ ಬೆಂಗಳೂರು ಪಕ್ಕದಲ್ಲಿರುವ ಮಲೆನಾಡು, ಇಲ್ಲಿನ ವಾತಾರಣವೂ ಯೋಗ್ಯವಾಗಿದೆ. ಆದರೆ, ರಾಜಕಾರಣಿಗಳ ಸ್ವಾರ್ಥಕ್ಕಾಗಿ ಇಲ್ಲಿ ಟೌನ್‌ಶಿಪ್ ಮಾಡಲು ಮುಂದಾಗಲಾಗುತ್ತಿದೆ. ಈ ಬಗ್ಗೆ ಎಚ್ಚರಿಕೆಯಿಂದರ ಇರಬೇಕು. ಜತೆಗೆ, ಈ ಬಿಡದಿ ಟೌನ್‌ಶಿಪ್ ಮುಂದುವರಿದರೆ 30ರಿಂದ 35 ಸಾವಿರ ಕೋಟಿ ರು.ಲೂಟಿ ಹೊಡೆಯುವ ಸಾಧ್ಯಗಳಿವೆ. ರೈತರು ಈ ಬಗ್ಗೆ ಜಾಗರೂಕರಾಗಿರಬೇಕು ಎಂದರು.

ಬಿಡದಿ ಟೌನ್‌ಶಿಪ್ ವಿರೋಧಿಸಿ ಸ್ಥಳೀಯ ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಬಸನಗೌಡ ಯತ್ನಾಳ್ ಭೇಟಿ ನೀಡಿ, ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಅಪಾರ ಸಂಖ್ಯೆಯಲ್ಲಿ ಸೇರಿದ ಜನ | ಕೊಪ್ಪಳದಲ್ಲಿ ಬೈಕ್, ಟಯರ್‌ಗೆ ಬೆಂಕಿ ಹಚ್ಚಿ ಪ್ರತಿಭಟನೆ

ರಾಘವೇಂದ್ರ ಹಿಟ್ನಾಳಗೆ ಸಚಿವ ಸ್ಥಾನ ನೀಡುವಂತೆ ಆಗ್ರಹ

ಕೊಪ್ಪಳ: ಸತತ ಮೂರು ಬಾರಿ ಶಾಸಕರಾಗಿರುವ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಬೆಂಬಲಿಗರು ನಗರದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಅಪಾರ ಸಂಖ್ಯೆಯಲ್ಲಿ ಜನ ನಗರದ ಗೌರಿಶಂಕರ ದೇವಸ್ಥಾನದ ಬಳಿ ಜಮಾಯಿಸಿ ಅಲ್ಲಿಂದ ಅಶೋಕ ವೃತ್ತದ ತನಕ ಪ್ರತಿಭಟನಾ ಮೆರವಣಿಗೆ ಮಾಡಿದರು.

ಕೇಂದ್ರೀಯ ಬಸ್ ನಿಲ್ದಾಣದ ಮುಂಭಾಗದಲ್ಲಿ ಟೈಯರ್ ಸುಟ್ಟು ಅಶೋಕ ವೃತ್ತದಲ್ಲಿ ಬೈಕ್‌ಗೆ ಬೆಂಕಿ ಹಚ್ಚಿ ಕಾಂಗ್ರೆಸ್ ಪಕ್ಷದ ವರಿಷ್ಠರು ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಮ್ಮ ಮನದಾಸೆಯನ್ನು ಅರ್ಥಮಾಡಿಕೊಂಡು ರಾಘವೇಂದ್ರ ಹಿಟ್ನಾಳ ಅವರನ್ನು ಸಚಿವರನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯ ಮಾರ್ಗದು ದ್ದಕ್ಕೂ ಹಿಟ್ನಾಳ ಪರ ಘೋಷಣೆಗಳನ್ನು ಕೂಗಿದರು. ಭಿತ್ತಿಚಿತ್ರಗಳನ್ನು ಪ್ರದರ್ಶಿಸಿದರು. ಮಧ್ಯ ಪ್ರವೇಶಿಸಿದ ಪೊಲೀಸರು ಅರೆಬರೆ ಸುಟ್ಟ ಬೈಕ್ ತೆರವು ಮಾಡಿದರು.

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಸನ್ನ ಗಡಾದ, ಮಾಜಿ ಅಧ್ಯಕ್ಷ ಶ್ರೀನಿವಾಸ ಗುಪ್ತಾ, ನಗರಸಭೆ ಮಾಜಿ ಅಧ್ಯಕ್ಷ ಅಮ್ಜದ್ ಪಟೇಲ್, ಮುಖಂಡರಾದ ಮಲ್ಲಿಕಾರ್ಜುನ ಪೂಜಾರ, ಕಾಟನ್ ಪಾಷಾ, ಕೃಷ್ಣ ಗಲಬಿ, ಗವಿಸಿದ್ಧಗೌಡ ಗೌಡ, ದೇವೇಂದ್ರಪ್ಪ ಪೂಜಾರ, ಪದ್ಮಾ ಕಂಬಳಿ, ಕಾಂಗ್ರೆಸ್ ಮುಖಂಡರಾದ ಕೆ. ಎಂ.ಸೈಯದ್, ಗೂಳಪ್ಪ ಹಲಗೇರಿ, ಜ್ಯೋತಿ ಗೊಂಡಬಾಳ, ಕೃಷ್ಣ ಇಟ್ಟಂಗಿ ಸೇರಿದಂತೆ ಇತರರು ಇದ್ದರು.

ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಕಾಂಗ್ರೆಸ್ ಮುಖಂಡರು ಕೊಪ್ಪಳದ ಕೇಂದ್ರೀಯ ಬಸ್ ನಿಲ್ದಾಣದ ಮುಂಭಾಗದಲ್ಲಿ ಟೈಯರ್ ಸುಟ್ಟು ಪ್ರತಿಭಟನೆ ವ್ಯಕ್ತಪಡಿಸಿದರು.

ನಮ್ಮ ಹೋರಾಟ ಪಕ್ಷ, ಸರಕಾರದ ವಿರುದ್ಧವಲ್ಲ

ಕೊಪ್ಪಳ ವಿಧಾನಸಭಾ ಕ್ಷೇತ್ರದಿಂದ ಗೆದ್ದವರಿಗೆ ಒಮ್ಮೆಯೂ ಸಚಿವ ಸ್ಥಾನ ಲಭಿಸಿಲ್ಲ. ರಾಘವೇಂದ್ರ ಹಿಟ್ನಾಳ 3 ಬಾರಿ ಶಾಸಕರಾಗಿದ್ದಾರೆ. ಅವರನ್ನು ಈ ಬಾರಿ ಸಚಿವರನ್ನಾಗಿ ಮಾಡಿದರೆ ಕ್ಷೇತ್ರದ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಮುಂದಿನ ಚುನಾವಣೆಯಲ್ಲಿಯೂ ಗೆಲ್ಲಲು ಸಾಧ್ಯವಾಗುತ್ತದೆ. ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವೆಲ್ಲರೂ ಬದ್ಧರಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಿಂದುಳಿದ ವರ್ಗದ ನಾಯಕ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ನೀಡಿದರೆ ಪಕ್ಷದ ಸಂಘಟನೆಗೂ ಅನುಕೂಲವಾಗುತ್ತದೆ. 2023ರ ಚುನಾವಣೆ ಸಮಯದಲ್ಲಿ ಹಿಟ್ನಾಳ ಸಚಿವರಾಗುತ್ತಾರೆ ಎನ್ನುವ ಭರವಸೆಯನ್ನು ಮತದಾರರಿಗೆ ಕೊಟ್ಟು ಪ್ರಚಾರ ಮಾಡಿದ್ದೆವು. ನಮ್ಮ ಬೇಡಿಕೆಯನ್ನು ಹೈಕಮಾಂಡ್ ಈಡೇರಿಸಬೇಕು. ನಮ್ಮ ಹೋರಾಟ ಪಕ್ಷದ ಹಾಗೂ ಸರಕಾರದ ವಿರುದ್ಧವಲ್ಲ. ನಮ್ಮ ಕೂಗು ವರಿಷ್ಠರಿಗೆ ತಲುಪಿಸಲು ಪ್ರತಿಭಟನೆ ನಡೆಸಿದ್ದೇವೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಅವರ ಅಭಿಮಾನಿಗಳು ಉರುಳು ಸೇವೆ ಹಾಗೂ ದೀಡ್ ನಮಸ್ಕಾರ ಮಾಡಿದರು.

ಜಿ.ಎಸ್.ಪಾಟೀಲರ ಮಂತ್ರಿಗಿರಿಗೆ ಉರುಳು ಸೇವೆ

ಗದಗ: ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ನಗರದಲ್ಲಿ ಅವರ ಅಭಿಮಾನಿಗಳು ಸೋಮವಾರ ಉರುಳು ಸೇವೆ ಹಾಗೂ ದೀಡ್ ನಮಸ್ಕಾರ ಮಾಡಿದರು. ನಗರದ ಪುಟ್ಟರಾಜ ಗವಾಯಿ ಪ್ರತಿಮೆಯಿಂದ ಪುಟ್ಟರಾಜ ಗವಾಯಿ ಮಠದವರೆಗೆ ಮೆರವಣಿಗೆ ನಡೆಯಿತು. ಜಿ.ಎಸ್.ಪಾಟೀಲರ ಪರ ಫಲಕಗಳನ್ನು ಪ್ರದರ್ಶಿಸಲಾ ಯಿತು. ಅವರ ಪರ ಘೋಷಣೆ ಕೂಗಲಾಯಿತು. ಜಿ.ಎಸ್. ಪಾಟೀಲರಿಗೆ ಸಚಿವ ಸಂಪುಟ ವಿಸ್ತರಣೆ ವೇಳೆ ಆದ್ಯತೆ ನೀಡಿ, ಸಚಿವ ಸ್ಥಾನ ನೀಡಬೇಕೆಂದು ಮುಖಂಡರು ಆಗ್ರಹಿಸಿದರು. ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಭಾಗವಹಿಸಿದ್ದರು. ರಸ್ತೆಯುದ್ದಕ್ಕೂ ಸಂಚಾರ ದಟ್ಟಣೆ ಉಂಟಾಯಿತು. ಪೊಲೀಸ್ ಬಿಗಿ ಬಂದೋಬಸ್ತ್ ಒದಗಿಸಲಾಗಿತ್ತು.

ಸಂಪಾದಕೀಯ

ಕಿರಿಯ ಪ್ರತಿಭೆಗಳ ಮಿಂಚು

ಭಾರತದ ಕ್ರೀಡಾ ಲೋಕದಲ್ಲಿ ಹೊಸ ಹೊಸ ಪ್ರತಿಭೆಗಳ ಆಗಮನವಾಗುತ್ತಿದೆ. ಮಾತ್ರವಲ್ಲ, ಹಿರಿಯರನ್ನು, ಅನುಭವಿಗಳನ್ನು ಮೀರಿ ಇವರು ಮಿಂಚುತ್ತಿದ್ದಾರೆ. ಉದಾಹರಣೆಗೆ, ವೈಭವ್ ಸೂರ್ಯವಂಶಿಯನ್ನು ಗಮನಿಸಬಹುದು. ಕೇವಲ 15 ವರ್ಷ ವಯಸ್ಸಿನಲ್ಲಿಯೇ ತಮ್ಮ ಅದ್ಭುತ ಬ್ಯಾಟಿಂಗ್‌ನಿಂದ ಅವರು ಗಮನ ಸೆಳೆದಿದ್ದಾರೆ. ಎಡಗೈ ಬ್ಯಾಟ್ಸ್‌ಮನ್ ಆಗಿರುವ ಇವರ ಆಟದ ಶೈಲಿ ಸಚಿನ್ ತೆಂಡುಲ್ಕರ್, ವಿನೋದ್ ಕಾಂಬ್ಳಿ ಮೊದಲಾದವರ ಆರಂಭಿಕ ದಿನಗಳ ಆಕ್ರಮಣಕಾರಿ ಆಟವನ್ನು ನೆನಪಿಸುತ್ತದೆ. ಬಿಹಾರ ಮೂಲದ ವೈಭವ್ ಐಪಿಎಲ್‌ನಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವನ್ನು ಪ್ರತಿನಿಧಿಸಿ, ತಮ್ಮ ದಾಖಲೆಗಳಿಂದಾಗಿ ಸರಣಿ ಪುರುಷ ಎನಿಸಿಕೊಂಡದ್ದಲ್ಲದೆ, ಇದೀಗ ಭಾರತೀಯ ಕ್ರಿಕೆಟ್ ತಂಡಕ್ಕೂ ಆಯ್ಕೆಯಾಗಿದ್ದಾರೆ. ಸರಿಯಾದ ಮಾರ್ಗದರ್ಶನ ಮತ್ತು ಸೂಕ್ತ ಆಟದ ಅವಕಾಶ ನೀಡಿದರೆ ಅವರು ಭಾರತ ತಂಡಕ್ಕೆ ಅಮೂಲ್ಯ ಆಸ್ತಿ ಆಗಬಲ್ಲರು. ಇದೇ ರೀತಿ ಚೆಸ್ ಆಟದಲ್ಲಿ ಪ್ರಜ್ಞಾನಂದ ಅವರು ದೇಶವೇ ಹೆಮ್ಮೆ ಪಡುವ ಸಾಧನೆ ಮಾಡಿದ್ದಾರೆ. ಅತಿ ಕಿರಿಯ ಪ್ರಾಯದಲ್ಲೇ ಭಾರತದ ಗ್ರ್ಯಾಂಡ್ ಮಾಸ್ಟರ್ ಆದ ಪ್ರಜ್ಞಾನಂದ, ನಾರ್ವೆ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ, ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸಿ ಟ್ರೋಫಿ ತಮ್ಮದಾಗಿಸಿಕೊಂಡರು. ಅವರಿಗಿನ್ನೂ 20 ವರ್ಷ. ಇನ್ನೊಬ್ಬ ಕಿರಿಯ ಚೆಸ್ ಮಾಸ್ಟರ್ ಗುಕೇಶ್‌ನನ್ನೂ ನೆನೆಯಬಹುದು. ಇದೇ ವೇಳೆ, ನಿನ್ನೆ ಆಫ್ಘನ್ ತಂಡದ ವಿರುದ್ಧ ನಡೆದ ಟೆಸ್ಟ್‌ನಲ್ಲಿ ಭಾರತ ತಂಡದ ಮಾನವ್ ಸುತಾರ್ 6 ವಿಕೆಟ್‌ಗಳನ್ನು ಕಿತ್ತು ದಾಖಲೆ ಮಾಡಿದ್ದಾರೆ. ಇದು ಭಾರತ ತಂಡದಲ್ಲಿ ಸುತಾರ್ ಅವರ ಚೊಚ್ಚಲ ಟೆಸ್ಟ್ ಹಾಗೂ ಅವರ ವಯಸ್ಸು 26. ವೈಭವ್, ಸುತಾರ್, ಪ್ರಜ್ಞಾನಂದ, ಗುಕೇಶ್ ಮೊದಲಾದವರು ಆಧುನಿಕ ಭಾರತದ ಯುವ ತಲೆಮಾರಿನ ಕ್ರೀಡಾಳುಗಳಾಗಿದ್ದು, ಕ್ರೀಡಾಸ್ಫೂರ್ತಿಯನ್ನೂ ಗೆಲ್ಲುವ ಛಲವನ್ನೂ ಪ್ರದರ್ಶಿಸಿದ್ದಾರೆ. ಇಂಥ ಕಿರಿಯ ಪ್ರತಿಭೆಗಳೇ ನಮ್ಮ ದೇಶದ ಕ್ರೀಡಾಚೈತನ್ಯವನ್ನು ಮುಂದಕ್ಕೊಯ್ಯಲಿದ್ದಾರೆ ಎಂಬುದನ್ನು ಇವರು ಸಾರಿ ಹೇಳುತ್ತಿದ್ದಾರೆ. ಇಂಥ ಚೈತನ್ಯವಂತ, ಪ್ರತಿಭಾವಂತ ಕಿರಿಯ ಆಟಗಾರರು ನಮ್ಮ ದೇಶದಲ್ಲಿ ಇನ್ನೂ ಬಹಳ ಮಂದಿ ಇರಬಹುದು. ಅವರನ್ನು ಗುರುತಿಸುವ, ಸರಿಯಾದ ಪ್ರೋತ್ಸಾಹ ನೀಡುವ, ತರಬೇತಿ ನೀಡುವ ಕೆಲಸ ಆಗಬೇಕು. ಕ್ರೀಡಾ ಶಿಕ್ಷಣಕ್ಕೆ, ಪ್ರತಿಭೆಗಳ ಅನ್ವೇಷಣೆಗೆ ಉತ್ತೇಜನ ಸಿಗಬೇಕು. ಆಗ ಭಾರತ ಒಲಿಂಪಿಕ್ಸ್ ಪದಕ ಪಟ್ಟಿಯಲ್ಲಿಯೂ ಮಿಂಚುವಂತೆ ಆದೀತು.

ಸೊಂಪಾದಕೀಯ

ಕಳ್ಳರ ಕೈಗೆ ಖಜಾನೆ

ಮಧ್ಯ ಪ್ರದೇಶದ ಶಿವಪುರಿ ಜಿಲ್ಲೆಯ ಯುಟ್ಯೂಬರ್ ರಚನಾ ಗುರ್ಜರ್ ಎಂಬಾಕೆಯ ಮನೆಯಲ್ಲಿ ನಡೆದ ಚಿನ್ನಾಭರಣ ಕಳ್ಳತನದ ಸುದ್ದಿ ಈಗ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ. ಈ ಸುದ್ದಿಯ ಬಗ್ಗೆ ನಗಬೇಕೋ, ರಚನಾ ಅವರ ದುರವಸ್ಥೆಗೆ ಬೇಸರ ಪಡಬೇಕೋ ಗೊತ್ತಾಗುವುದಿಲ್ಲ. ಕಾರಣ, ತೂಕಡಿಸುವರಿಗೆ ಹಾಸಿಗೆ ಹಾಸಿ ಕೊಟ್ಟರು ಎಂಬಂತೆ, ಈಕೆಯೇ ತಮ್ಮಲ್ಲಿ ಚಿನ್ನ ಬೆಳ್ಳಿ ಎಷ್ಟಿದೆ ಎಂಬ ಮಾಹಿತಿಯನ್ನು ಕಳ್ಳರಿಗೆ ನೀಡಿದ್ದರು. ಅದೂ ಸಾಮಾಜಿಕ ಜಾಲತಾಣದಲ್ಲಿ. ಯುಟ್ಯೂಬರ್ ಆಗಿರುವ ಈಕೆ ಇತ್ತೀಚೆಗೆ ಮಾಡಿದ ವಿಡಿಯೋ ಒಂದರಲ್ಲಿ ಸುಮಾರು 10 ಲಕ್ಷ ರೂ. ಮೌಲ್ಯದ ತಮ್ಮ ಚಿನ್ನಾಭರಣದ ವಿಡಿಯೋ ಮಾಡಿ ಹಾಕಿದ್ದರು. ಅಂದ ಹಾಗೆ ಇವರಿಗೆ ಅಲ್ಲಿ 1 ಲಕ್ಷಕ್ಕೂ ಅಧಿಕ ಫಾಲೋವರ್ಸ್ ಇದ್ದಾರೆ. ಈ ಕಳ್ಳರೂ ಬಹುಶಃ ಈಕೆಯ 'ಫಾಲೋವರ್'ಗಳೇ ಆಗಿರಬೇಕು. ಅಕ್ಷರಶಃ ರಚನಾಳನ್ನು ಈ ಖದೀಮರು 'ಫಾಲೋ' ಮಾಡಿದ್ದಾರೆ. ಸಾಲದು ಎಂಬಂತೆ ರಚನಾ ತಮ್ಮ ಮನೆಯ ಪ್ರವೇಶದ್ವಾರದಿಂದ ಹಿಡಿದು ಒಳಗಿನ ಕೊಠಡಿಗಳವರೆಗೆ ವಿಡಿಯೋ ಚಿತ್ರೀಕರಿಸಿದ್ದರು. ಈ ವಿಡಿಯೊ ವೀಕ್ಷಿಸಿದ ಚೋರರು ಮನೆಯ ವಿನ್ಯಾಸ, ತಿಜೋರಿಯ ಜಾಗ, ಸಿಸಿ ಕ್ಯಾಮೆರಾ ಎಲ್ಲೆಲ್ಲಿದೆ ಎಲ್ಲವನ್ನೂ ತಿಳಿದು ಸಂಚು ರೂಪಿಸಿದ್ದಾರೆ. ನಮ್ಮಲ್ಲಿ ಇದಕ್ಕೆ 'ಬಡಿಗೆ ಕೊಟ್ಟು ಹೊಡೆಸಿಕೊಳ್ಳುವುದು' ಎಂಬ ಸೊಗಸಾದ ನಾಣ್ಣುಡಿಯಿದೆ. ನೀವೂ ಯುಟ್ಯೂಬರ್ ಆಗಿದ್ದರೆ, ಅಥವಾ ನಿಮ್ಮ ಸ್ವತ್ತುಗಳ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಹಾಕುವವರಾಗಿದ್ದರೆ, ನಿಮ್ಮ 'ಫಾಲೋವರ್'ಗಳ ಬಗ್ಗೆ ಹುಷಾರಾಗಿರಿ. ಎಲ್ಲ ಇನ್‌ಫ್ಲುಯೆನ್ಸರ್‌ಗಳೂ ರಚನಾಳಷ್ಟೇ 'ಬುದ್ಧಿವಂತ'ರಾಗಿದ್ದರೆ ಕಳ್ಳರಿಗೆ ಸ್ಕೆಚ್ ಹಾಕುವ ಕೆಲಸವೂ ಉಳಿತಾಯ.

ಸಂಪಾದಕರ ಸದ್ಯಶೋಧನೆ

ಪಾಸಿಟಿವ್ ಕ್ಲೈಂಬ್ ಎಂದರೇನು?

ವಿಮಾನವು ರನ್‌ವೇಯಿಂದ ಮೇಲಕ್ಕೆದ್ದು ಆಕಾಶಕ್ಕೆ ಜಿಗಿಯುವ ಆ ಕ್ಷಣ ಅತ್ಯಂತ ರೋಮಾಂಚನಕಾರಿ. ಈ ಸಮಯದಲ್ಲಿ ಕಾಕ್‌ಪಿಟ್‌ನಲ್ಲಿ ಪೈಲಟ್‌ಗಳು ಪರಸ್ಪರ ಸಂವಹನ ನಡೆಸುವಾಗ 'ಪಾಸಿಟಿವ್ ಕ್ಲೈಂಬ್' (Positive Climb) ಅಥವಾ 'ಪಾಸಿಟಿವ್ ರೇಟ್' (Positive Rate) ಎಂಬ ಪದವನ್ನು ಬಳಸುತ್ತಾರೆ. ಇದು ಕೇವಲ ಒಂದು ಸಾಧಾರಣ ಘೋಷಣೆಯಲ್ಲ; ವಿಮಾನದ ಮತ್ತು ಅದರಲ್ಲಿರುವ ನೂರಾರು ಪ್ರಯಾಣಿಕರ ಸುರಕ್ಷತೆಯನ್ನು ನಿರ್ಧರಿಸುವ ಅತ್ಯಂತ ನಿರ್ಣಾಯಕ ಸಂದೇಶವಾಗಿದೆ. 'ಪಾಸಿಟಿವ್ ಕ್ಲೈಂಬ್' ಎಂದರೇನು? ವಿಮಾನವು ರನ್‌ವೇಯನ್ನು ಸಂಪೂರ್ಣವಾಗಿ ಬಿಟ್ಟು, ಯಾವುದೇ ಅಡೆತಡೆಯಿಲ್ಲದೇ ಸುರಕ್ಷಿತವಾಗಿ ಮೇಲಕ್ಕೆ ಏರುತ್ತಿದೆ (Climbing) ಎಂಬುದನ್ನು ಇದು ಸೂಚಿಸುತ್ತದೆ. ವಿಮಾನವು ಟೇಕಾಫ್ ಆದ ತಕ್ಷಣ, ಕಣ್ಣಿನ ದೃಷ್ಟಿಯಿಂದ ಮಾತ್ರ ವಿಮಾನ ಮೇಲಕ್ಕೆ ಹೋಗುತ್ತಿದೆ ಎಂದು ನಂಬಲು ಸಾಧ್ಯವಿಲ್ಲ. ಏಕೆಂದರೆ ಆ ಕ್ಷಣದಲ್ಲಿ ಗಾಳಿಯ ಒತ್ತಡ ಅಥವಾ ತಾಂತ್ರಿಕ ವ್ಯತ್ಯಾಸಗಳಿಂದಾಗಿ ವಿಮಾನ ಮತ್ತೆ ಕೆಳಗೆ ಬೀಳುವ ಅಪಾಯವಿರುತ್ತದೆ. ಆದ್ದರಿಂದ, ವಿಮಾನದ ಉಪಕರಣಗಳು (Instruments) ವಿಮಾನವು ನಿಜವಾಗಿಯೂ ಮೇಲಕ್ಕೆ ಹೋಗುತ್ತಿದೆ ಎಂದು ಖಚಿತಪಡಿಸಿದಾಗ ಪೈಲಟ್ ಈ ಪದವನ್ನು ಬಳಸುತ್ತಾರೆ. ಇದನ್ನು ಯಾರು, ಯಾರಿಗೆ ಹೇಳುತ್ತಾರೆ? ಸಾಮಾನ್ಯವಾಗಿ ವಾಣಿಜ್ಯ ವಿಮಾನಗಳ ಕಾಕ್‌ಪಿಟ್‌ನಲ್ಲಿ ಇಬ್ಬರು ಪೈಲಟ್‌ಗಳಿರುತ್ತಾರೆ. ಒಬ್ಬರು, ಪೈಲಟ್ ಫ್ಲೈಯಿಂಗ್ (Pilot Flying- PF)– ವಿಮಾನವನ್ನು ಚಲಾಯಿಸುತ್ತಿರುವವರು ಮತ್ತು ಮತ್ತೊಬ್ಬರು, ಪೈಲಟ್ ಮಾನಿಟರಿಂಗ್ (Pilot Monitoring- PM)– ಉಪಕರಣಗಳನ್ನು ಮತ್ತು ಪರಿಸರವನ್ನು ಗಮನಿಸುತ್ತಿರುವವರು. ವಿಮಾನವು ಮೇಲಕ್ಕೆ ಏರುತ್ತಿರುವುದನ್ನು ಉಪಕರಣಗಳಲ್ಲಿ ಗಮನಿಸಿದ ತಕ್ಷಣ ಪೈಲಟ್ ಮಾನಿಟರಿಂಗ್ 'ಪಾಸಿಟಿವ್ ಕ್ಲೈಂಬ್' ಎಂದು ಜೋರಾಗಿ ಹೇಳುತ್ತಾರೆ. ಇದನ್ನು ಕೇಳಿದ ತಕ್ಷಣ ಪೈಲಟ್ ಫ್ಲೈಯಿಂಗ್ 'ಗೇರ್ ಅಪ್' (Gear Up) ಎಂದು ಆದೇಶಿಸುತ್ತಾರೆ. ಅಂದರೆ ವಿಮಾನದ ಚಕ್ರಗಳನ್ನು (Landing Gear) ಒಳಗಡೆ ತೆಗೆದುಕೊಳ್ಳಲು ಹೇಳುತ್ತಾರೆ. ಪೈಲಟ್‌ಗಳು ಇದನ್ನು ಹೇಗೆ ಖಚಿತಪಡಿಸಿಕೊಳ್ಳುತ್ತಾರೆ? ಕಾಕ್‌ಪಿಟ್‌ನಲ್ಲಿರುವ ಎರಡು ಮುಖ್ಯ ಉಪಕರಣಗಳನ್ನು ನೋಡಿ ಇದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. ಮೊದಲನೆಯದು, ವರ್ಟಿಕಲ್ ಸ್ಪೀಡ್ ಇಂಡಿಕೇಟರ್ (VSI). ಇದು ವಿಮಾನವು ಪ್ರತಿ ನಿಮಿಷಕ್ಕೆ ಎಷ್ಟು ಅಡಿ ಮೇಲಕ್ಕೆ ಏರುತ್ತಿದೆ ಎಂಬುದನ್ನು ತೋರಿಸುತ್ತದೆ. ಇದರ ಮುಳ್ಳು 'ಪ್ಲಸ್' (Positive) ಕಡೆಗೆ ಮುಖ ಮಾಡಿದಾಗ ವಿಮಾನ ಮೇಲಕ್ಕೆ ಹೋಗುತ್ತಿದೆ ಎಂದು ಅರ್ಥ. ಎರಡನೆಯದು, ಆಲ್ಟಿಮೀಟರ್ (Altimeter). ಇದು ಸಮುದ್ರ ಮಟ್ಟದಿಂದ ವಿಮಾನ ಎಷ್ಟು ಎತ್ತರದಲ್ಲಿದೆ ಎಂಬುದನ್ನು ತೋರಿಸುತ್ತದೆ. ವಿಮಾನ ಮೇಲಕ್ಕೆ ಹೋದಂತೆ ಈ ಮೀಟರ್‌ನಲ್ಲಿನ ಸಂಖ್ಯೆಗಳು ಹೆಚ್ಚಾಗುತ್ತಾ ಹೋಗುತ್ತವೆ. ಈ ಎರಡೂ ಉಪಕರಣಗಳು ವಿಮಾನವು ಸುರಕ್ಷಿತವಾಗಿ ಮೇಲಕ್ಕೆ ಏರುತ್ತಿರುವುದನ್ನು ತೋರಿಸಿದಾಗ ಮಾತ್ರ 'ಪಾಸಿಟಿವ್ ಕ್ಲೈಂಬ್' ಎಂದು ಘೋಷಿಸಲಾಗುತ್ತದೆ. ರಾತ್ರಿ ಕತ್ತಲಲ್ಲಿ ಅಥವಾ ದಟ್ಟವಾದ ಮಂಜು ಮುಸುಕಿದ ವಾತಾವರಣದಲ್ಲಿ ಟೇಕಾಫ್ ಆಗುವಾಗ ಪೈಲಟ್‌ಗಳಿಗೆ ಆಕಾಶ ಯಾವುದು, ಭೂಮಿ ಯಾವುದು ಎಂದು ತಿಳಿಯದಂತೆ ಕಣ್ಣಿನ ಭ್ರಮೆ (Spatial Disorientation) ಉಂಟಾಗಬಹುದು. ವಿಮಾನ ಮೇಲಕ್ಕೆ ಹೋಗುತ್ತಿದೆ ಎಂದು ಪೈಲಟ್‌ಗೆ ಅನಿಸಬಹುದು, ಆದರೆ ವಾಸ್ತವದಲ್ಲಿ ಅದು ಕೆಳಗೆ ಹೋಗುತ್ತಿರಬಹುದು. ಇಂಥ ಅಪಾಯವನ್ನು ತಪ್ಪಿಸಲು ಉಪಕರಣಗಳನ್ನು ನಂಬಿ 'ಪಾಸಿಟಿವ್ ಕ್ಲೈಂಬ್' ಎಂದು ಘೋಷಿಸುವುದು ಕಡ್ಡಾಯ. ವಿಮಾನದ ಚಕ್ರಗಳು (Landing Gear) ಹೊರಗಡೆ ಇದ್ದಾಗ ಗಾಳಿಯ ಪ್ರತಿರೋಧ (Drag) ಹೆಚ್ಚಾಗಿರುತ್ತದೆ. ಇದರಿಂದ ವಿಮಾನಕ್ಕೆ ವೇಗವಾಗಿ ಮೇಲಕ್ಕೆ ಏರಲು ಸಾಧ್ಯವಾಗುವುದಿಲ್ಲ. ಚಕ್ರಗಳನ್ನು ಒಳಗಡೆ ತೆಗೆದುಕೊಂಡರೆ ವಿಮಾನವು ಸುಲಭವಾಗಿ ಮತ್ತು ವೇಗವಾಗಿ ಹಾರಬಲ್ಲದು. ಆದರೆ, ವಿಮಾನ ಇನ್ನೂ ಸರಿಯಾಗಿ ಮೇಲಕ್ಕೆ ಏರಲು ಆರಂಭಿಸುವ ಮುನ್ನವೇ ಚಕ್ರಗಳನ್ನು ಒಳಗಡೆ ಪಡೆದರೆ, ವಿಮಾನ ಮತ್ತೆ ರನ್‌ವೇ ಮೇಲೆ ಬಿದ್ದು ಭೀಕರ ಅಪಘಾತ ಸಂಭವಿಸಬಹುದು.ಆದ್ದರಿಂದ'ಪಾಸಿಟಿವ್ ಕ್ಲೈಂಬ್' ಖಚಿತವಾದ ನಂತರವೇ ಚಕ್ರಗಳನ್ನು ಒಳಕ್ಕೆತೆಗೆದುಕೊಳ್ಳಲಾಗುತ್ತದೆ. ಒಂದು ವೇಳೆ ಟೇಕಾಫ್ ಆದ ತಕ್ಷಣ ವಿಮಾನದ ಇಂಜಿನ್ ವೈಫಲ್ಯ ಸಂಭವಿಸಿ ದರೆ, ವಿಮಾನವು ಮೇಲಕ್ಕೆ ಏರುತ್ತಿದೆಯೇ ಅಥವಾ ಕೆಳಗೆ ಬೀಳುತ್ತಿದೆಯೇ ಎಂದು ತಿಳಿಯುವುದು ಬಹಳ ಮುಖ್ಯ. ಪಾಸಿಟಿವ್ ಕ್ಲೈಂಬ್ ಸ್ಥಿತಿಯಲ್ಲಿದ್ದರೆ ಪೈಲಟ್‌ಗಳಿಗೆ ಪರಿಸ್ಥಿತಿಯನ್ನು ನಿಭಾಯಿಸಲು ಸ್ವಲ್ಪ ಸಮಯ ಸಿಗುತ್ತದೆ.

ಒಕ್ಕಲಿಗರ ಅಸ್ಮಿತೆ ಕದಲಿಸಲು ಕೈ ಪ್ರಯತ್ನ?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

vveditoped@gmail.com

ಭಾರತದ ರಾಜಕೀಯ ಇತಿಹಾಸದಲ್ಲಿ ಜಾತಿ-ಧರ್ಮಗಳು ಮಹತ್ವದ ಪಾತ್ರ ವಹಿಸುತ್ತವೆ ಎನ್ನುವುದು ಎಷ್ಟು ಸತ್ಯವೋ, ದಕ್ಷಿಣ ಭಾರತದಲ್ಲಿ ಜಾತಿ-ಧರ್ಮ ಮೀರಿದ ಲೆಕ್ಕಾಚಾರಗಳು ದೊಡ್ಡ ಪ್ರಮಾಣದಲ್ಲಿ ನಡೆಯುತ್ತವೆ. ಆದರೆ ದಕ್ಷಿಣ ಭಾರತದ ರಾಜಕೀಯ 'ಪ್ಯಾಟರ್ನ್'ಗೆ ಕರ್ನಾಟಕ ರಾಜಕೀಯ ಕೊಂಚ ಭಿನ್ನವಾಗಿರುವುದು ಸುಳ್ಳಲ್ಲ. ಕರ್ನಾಟಕದಲ್ಲಿ ಅಹಿಂದ ಸಮುದಾಯದ ಮತಗಳೇ ನಿರ್ಣಾಯಕ ಎನಿಸಿದ್ದರೂ, ಈ ಸಮುದಾಯದೊಂದಿಗೆ ಒಕ್ಕಲಿಗ ಹಾಗೂ ಲಿಂಗಾಯತರು ಯಾರೊಂದಿಗೆ ನಿಲ್ಲುತ್ತಾರೆ ಎನ್ನುವುದರ ಮೇಲೆ ಚುನಾವಣಾ ಭವಿಷ್ಯ ನಿರ್ಣಯವಾಗುತ್ತದೆ.

ಅದರಲ್ಲಿಯೂ ಹಳೇ ಮೈಸೂರು ಭಾಗದ ಬಹುಪಾಲು ಕ್ಷೇತ್ರಗಳ ಫಲಿತಾಂಶವನ್ನು ನಿರ್ಣಯಿಸಿರುವ ಒಕ್ಕಲಿಗ ಸಮುದಾಯದ ಹಲವು ನಾಯಕರು ಬಂದು ಹೋದರೂ, ಸಮುದಾಯದ ನಾಯಕನಾಗಿ ಉಳಿದುಕೊಂಡಿರುವುದು ಮಾತ್ರ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ. ದೇವೇಗೌಡರ ಕಾರಣಕ್ಕೆ ಜನತಾ ಪರಿವಾರದೊಂದಿಗಿದ್ದ ಒಕ್ಕಲಿಗರು, ಬಳಿಕ ಜೆಡಿಎಸ್‌ನೊಂದಿಗೆ ನಿಂತರು. ಈ ಒಕ್ಕಲಿಗ ಮತಗಳನ್ನು ಚದುರಿಸಲು ಕಾಂಗ್ರೆಸ್ ಹಾಗೂ ಬಿಜೆಪಿ ಹತ್ತು ಹಲವು ರೀತಿಯ ಪ್ರಯತ್ನ ಮಾಡಿದ್ದರೂ, ಈಗಲೂ ಬಹುಪಾಲು ಸಮುದಾಯ ದೇವೇಗೌಡರ ಹೆಸರಿಗೆ ನಿಷ್ಠವಾಗಿದೆ ಎನ್ನುವುದು ಸ್ಪಷ್ಟ.

ಈ ನಿಷ್ಠೆಯನ್ನು ಕದಡಲು, ಒಕ್ಕಲಿಗ ಸಮುದಾಯದ ನಾಯಕನಾಗಲು ಹಲವು ದಶಕಗಳಿಂದ ಹೋರಾಡುತ್ತಿರುವುದು ಡಿ.ಕೆ.ಶಿವಕುಮಾರ್. ಹಾಗೆ ನೋಡಿದರೆ, ದೇವೇಗೌಡರ ವಿರುದ್ಧ ಸ್ಪರ್ಧಿಸಿಯೇ ಚುನಾವಣಾ ರಾಜಕೀಯಕ್ಕೆ ಧುಮುಕಿದ್ದ ಡಿ.ಕೆ.ಶಿವಕುಮಾರ್, ಅಲ್ಲಿಂದಲೂ ದೇವೇಗೌಡರ ಕುಟುಂಬದ ವಿರುದ್ಧ ನಿರಂತರವಾಗಿ ಹೋರಾಡಿಕೊಂಡೇ ಬಂದಿದ್ದಾರೆ. ಈ ಹೋರಾಟ ಕೇವಲ ರಾಜಕೀಯಕ್ಕೆ ಸೀಮಿತವಾಗದೇ, ವೈಯಕ್ತಿಕ ಪೈಪೋಟಿಗೂ ಇಳಿದಿದೆ ಎನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ. ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ, ಉಪಮುಖ್ಯಮಂತ್ರಿಯಾದ ಬಳಿಕ ಒಕ್ಕಲಿಗ ಸಮುದಾಯದ ಮತಗಳನ್ನು ಸೆಳೆಯಲು ಪ್ರಯತ್ನಿಸಿ, ಡಿ.ಕೆ.ಶಿವಕುಮಾರ್ ಇದರಲ್ಲಿ ಪೂರ್ಣ ಯಶಸ್ಸು ಪಡೆಯದಿದ್ದರೂ ಕಳೆದ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್‌ನ ಕೆಲ ಭದ್ರಕೋಟೆಗಳನ್ನು ಬೇಧಿಸುವಲ್ಲಿ ಯಶಸ್ವಿಯಾದರು. ಆರಂಭದಲ್ಲಿ ಇದು ಕಾಂಗ್ರೆಸ್ ಯಶಸ್ಸು ಎನಿಸಿದರೂ, ಬಿಜೆಪಿ-ಜೆಡಿಎಸ್ ಮೈತ್ರಿಯೊಳಗಿದ್ದ ಒಳ ರಾಜಕೀಯದಿಂದ ಮತಗಳು ಚದುರಿ ಕಾಂಗ್ರೆಸ್‌ಗೆ ಲಾಭವಾಯಿತು ಎನ್ನುವದನ್ನು ಅರಿಯಲು ಹೆಚ್ಚಿನ ಸಮಯ ಬೇಕಾಗಲಿಲ್ಲ.

ಆದರೆ ಮುಂದಿನ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಯಾಗಿ ಹೋದರೆ, ಬಹುಪಾಲು ಕ್ಷೇತ್ರಗಳಲ್ಲಿ ಚದುರಿದ್ದ ಮತಗಳನ್ನು ಒಗ್ಗೂಡಿಸಿಕೊಂಡು ಚುನಾವಣೆಗೆ ಹೋದರೆ ಕಾಂಗ್ರೆಸ್‌ಗೆ ಲಾಭವಾಗುತ್ತದೆ ಎನ್ನುವುದು ಸ್ಪಷ್ಟವಾಗಿದೆ. ಇದೀಗ ಒಕ್ಕಲಿಗ ಮತಗಳನ್ನು ಒಡೆಯಲು ಹಾಗೂ ಬಿಜೆಪಿ-ಜೆಡಿಎಸ್‌ನಲ್ಲಿರುವ 'ಮೈತ್ರಿ'ಯಲ್ಲಿ ಬಿರುಕಿನ ಹುಳ ಬಿಡಲು ಕಾಂಗ್ರೆಸಿಗರು ಹುಡುಕಿದ ದಾರಿಯೇ, ದೇವೇಗೌಡರಿಗೆ ದಕ್ಕದ ರಾಜ್ಯಸಭಾ ಟಿಕೆಟ್. 94ರ ಆಸುಪಾಸಿನಲ್ಲಿರುವ ದೇವೇಗೌಡರು ಈ ಬಾರಿ ರಾಜ್ಯಸಭೆಗೆ ಸ್ಪರ್ಧಿಸುವುದು ಬಹುತೇಕ ಅನುಮಾನ ಎನ್ನುವ ಮಾತುಗಳು ಜೆಡಿಎಸ್ ವಲಯದಲ್ಲಿಯೇ ಕೇಳಿಬಂದಿತ್ತು. ಇದಕ್ಕೆ ಪೂರಕ ಎನ್ನುವಂತೆ ದೇವೇಗೌಡರು ಸ್ವತಃ ರಾಜ್ಯಸಭೆಯಲ್ಲಿ ಮಾತನಾಡುವಾಗ ಪರೋಕ್ಷವಾಗಿ ಈ ಮಾತುಗಳನ್ನು ಆಡಿದ್ದರು. ಆದರೂ, ದೇವೇಗೌಡರು ಚುನಾವಣೆಗೆ ಸ್ಪರ್ಧಿಸಲಿದ್ದಾರೆ ಎನ್ನುವ ಮಾತುಗಳು ರಾಜಕೀಯ ವಲಯದಲ್ಲಿ ಶುರುವಾಗಿತ್ತು. ಆದರೆ ಬಿಜೆಪಿ-ಜೆಡಿಎಸ್ ಕೇವಲ ಒಬ್ಬರನ್ನು ರಾಜ್ಯಸಭೆಗೆ ಕಳುಹಿಸಲು ಅವಕಾಶವಿದ್ದುದರಿಂದ ದೇವೇಗೌಡರನ್ನು ಕಳುಹಿಸುವ ಬಗ್ಗೆ ಮೋದಿ-ಶಾ ತೀರ್ಮಾನಿಸಲಿದ್ದಾರೆ ಎಂದು ಬಿಜೆಪಿ ನಾಯಕರು ಹೇಳಿದ್ದರು. ಅಂತಿಮವಾಗಿ ದೇವೇಗೌಡರ ಟಿಕೆಟ್ ಕೈತಪ್ಪಿತ್ತು.

ಹಾಗೇ ನೋಡಿದರೆ, ದೇವೇಗೌಡರ ಸದ್ಯದ ವಯೋಸಹಜ ಸಮಸ್ಯೆಗಳನ್ನು ಗಮನಿಸಿದಾಗ ಮರುಆಯ್ಕೆ ಕಷ್ಟವೆನ್ನುವ ಮಾತನ್ನು ಜೆಡಿಎಸ್‌ನ ನಾಯಕರೇ ಹೇಳುತ್ತಿದ್ದರು. ಕಾಂಗ್ರೆಸ್‌ನ ಹಲವು ನಾಯಕರು ದೇವೇಗೌಡರು ಸಕ್ರಿಯ ರಾಜಕೀಯದಿಂದ ದೂರವಿದ್ದರೆ, ನಮಗೆ ಒಕ್ಕಲಿಗ ಮತಬ್ಯಾಂಕ್‌ನಲ್ಲಿ ಸಣ್ಣ ಬಿರುಕನ್ನಾದರೂ ತರಲು ಸಾಧ್ಯ ಎನ್ನುವ ನಿರೀಕ್ಷೆಯಲ್ಲಿದ್ದರು. ಆದರೆ ಬಿಜೆಪಿ ದೇವೇಗೌಡರ ಬದಲಿಗೆ ಬೇರೊಬ್ಬರಿಗೆ ಟಿಕೆಟ್ ಘೋಷಿಸುತ್ತಿದ್ದಂತೆ ಜೆಡಿಎಸ್ ನಾಯಕರಿಗಿಂತ ಹೆಚ್ಚು 'ನೋವ'ನ್ನು ಕಾಂಗ್ರೆಸಿಗರು ಹೊರಹಾಕಿದ್ದಾರೆ. ಈ ನೋವಿಗೆ 'ಬಿಜೆಪಿಯಿಂದ ಒಕ್ಕಲಿಗರನ್ನು



ದಮನ ಮಾಡುವ ತಂತ್ರ' ಎನ್ನುವ ಮಾತನ್ನು ಹೇಳುತ್ತಿದ್ದಾರೆ.

ದೇವೇಗೌಡರಿಗೆ ಟಿಕೆಟ್ ನೀಡದಿರುವುದು ತಿಳಿಯುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಹಲವು ಒಕ್ಕಲಿಗ ನಾಯಕರು ಬಿಜೆಪಿ ಹೈಕಮಾಂಡ್ ವಿರುದ್ಧ ಕಿಡಿಕಾರಲು ಶುರು ಮಾಡಿದರು. ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಒಂದು ಹೆಜ್ಜೆ ಮುಂದೆ ಹೋಗಿ, 'ಕೇಂದ್ರ ಸಚಿವ ಸ್ಥಾನ ಉಳಿಸಿಕೊಳ್ಳುವ ಉದ್ದೇಶದಿಂದ ಎಚ್‌ಡಿಕೆ ರಾಜಕೀಯ ಶರಣಾಗತಿ' ಎಂದು ಟೀಕಿಸಿದರು. ಕರ್ನಾಟಕದ ಮಾಜಿ ಪ್ರಧಾನಮಂತ್ರಿಯ ಸ್ಥಾನಮಾನಕ್ಕೆ ಗೌರವ ನೀಡಿ ಕಾಂಗ್ರೆಸ್ ಪಕ್ಷ ಹಾಗೂ ಸೋನಿಯಾ ಗಾಂಧಿ ಈ ಹಿಂದೆ ದೇವೇಗೌಡ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡಲು ಬೆಂಬಲ ನೀಡಿದ್ದರು. ಈ ಎಲ್ಲವನ್ನು ಮರೆತು ಜೆಡಿಎಸ್-ಬಿಜೆಪಿ ಮೈತ್ರಿ ಮಾಡಿಕೊಂಡು, ಮೋದಿ ಸರಕಾರದಲ್ಲಿ ಎಚ್‌ಡಿಕೆ ಸಚಿವರಾದರು. ಈಗ 2026ರ ಜೂನ್ 7ರಂದು, ಬಿಜೆಪಿ ಮಾಜಿ ಪ್ರಧಾನಮಂತ್ರಿ, ಎಚ್.ಡಿ. ದೇವೇಗೌಡರಿಗೆ ರಾಜ್ಯಸಭಾ ನಾಮನಿರ್ದೇಶನ ನೀಡುವುದನ್ನು ನಿರಾಕರಿಸಿ, ತನ್ನ ಪಕ್ಷದ ಪದಾಧಿಕಾರಿಯನ್ನೇ ಆಯ್ಕೆ ಮಾಡಿದೆ. ಆ ಮೂಲಕ ಅಧಿಕಾರಕ್ಕಾಗಿ ತಾವು ಎಲ್ಲದಕ್ಕೂ ಸಿದ್ಧ ಎನ್ನುವುದನ್ನು ಕುಮಾರಸ್ವಾಮಿ ತೋರಿಸಿಕೊಟ್ಟಿದ್ದಾರೆ ಎಂದು ಸುರ್ಜೇವಾಲಾ ವಾಗ್ದಾಳಿ ನಡೆಸಿದ್ದಾರೆ.

ಆದರೆ ದೇವೇಗೌಡರನ್ನು ರಾಜ್ಯಸಭೆಗೆ ಮರುಆಯ್ಕೆ ಮಾಡದಿರಲು ಪ್ರಮುಖವಾಗಿ ಅವರ ಆರೋಗ್ಯ ಮತ್ತು ವಯಸ್ಸೇ ಕಾರಣ ಎನ್ನುವುದು ಬಿಜೆಪಿ-ಜೆಡಿಎಸ್‌ಗೆ ಸ್ಪಷ್ಟವಾಗಿದೆ. ಸಕ್ರಿಯರಾಗಿ ರಾಜ್ಯಸಭೆಯಲ್ಲಿ ಪಾಲ್ಗೊಳ್ಳುವುದು, ದೆಹಲಿ ಓಡಾಟ ಕಷ್ಟಸಾಧ್ಯವಾಗಲಿದೆ. ಕರ್ನಾಟಕದಿಂದ ಅಲ್ಲದಿದ್ದರೂ, ಬಿಜೆಪಿ ಆಡಳಿತವಿರುವ ಬೇರೆ ರಾಜ್ಯಗಳಿಂದ ದೇವೇಗೌಡರಿಗೆ ರಾಜ್ಯಸಭೆ ಸ್ಥಾನ ನೀಡುವ ಬಗ್ಗೆ ಚರ್ಚೆ ನಡೆದಿತ್ತು. ಆದರೆ, ಸ್ವತಃ ದೇವೇಗೌಡರೇ ಅದಕ್ಕೆ ಒಲ್ಲೆ ಅಂದಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕ ಎನ್ನುವಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಮಾತನಾಡಿ, 'ದೇವೇಗೌಡರು ರಾಜ್ಯಸಭೆ ಸದಸ್ಯ ಆಗಬೇಕು ಎಂದು ಕೇಳಿರಲಿಲ್ಲ. ಸಾರ್ವಜನಿಕರಿಂದ ಒತ್ತಾಯ ಇತ್ತು. ಅವರನ್ನು ಆಯ್ಕೆ ಮಾಡಿದರೆ ರಾಜ್ಯದ ಸಮಸ್ಯೆ ಬಗ್ಗೆ ಸಂಸತ್‌ನಲ್ಲಿ ಚರ್ಚಿಸಿ ಬಗೆಹರಿಯುತ್ತದೆ ಎಂಬ ಭಾವನೆ ಇತ್ತು. ಅವರು ಯಾವತ್ತೂ ರಾಜ್ಯಸಭೆ ಸ್ಥಾನ ಬೇಕು ಅಂತ ಹೇಳಿಲ್ಲ. ಅವರು ಅರ್ಜಿ ಹಾಕಿರಲಿಲ್ಲ' ಎನ್ನುವ ಮೂಲಕ ಕಾಂಗ್ರೆಸ್‌ನ ಎಲ್ಲ ಆರೋಪಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿದ್ದಾರೆ.

ಹಾಗಾದರೆ, ಕಾಂಗ್ರೆಸ್ ದೇವೇಗೌಡರ ವಿಷಯದಲ್ಲಿ ಕಣ್ಣೀರು ಸುರಿಸಿದ್ದು ಏಕೆ ಎನ್ನುವುದಕ್ಕೆ ಉತ್ತರ ಒಕ್ಕಲಿಗ ಸಾಮ್ರಾಜ್ಯ ಕಾರಣ ಎನ್ನುವುದು ಸ್ಪಷ್ಟವಾಗುತ್ತದೆ. ಮೊದಲೇ ಹೇಳಿದಂತೆ, ಈಗಲೂ ಕರ್ನಾಟಕದಲ್ಲಿ ಒಕ್ಕಲಿಗರು ದೇವೇಗೌಡರ ಹಿಂದಿದ್ದಾರೆ. ಈಗ ದೇವೇಗೌಡರಿಗೆ ಟಿಕೆಟ್ ನೀಡದೇ ಬಿಜೆಪಿ ಮೋಸ ಮಾಡಿದೆ ಎನ್ನುವಂತೆ ಬಿಂಬಿಸಿದರೆ, ಭವಿಷ್ಯದ ಚುನಾವಣೆಯಲ್ಲಿ ಬಿಜೆಪಿಯನ್ನು ಒಕ್ಕಲಿಗ ವಿರೋಧಿ ಎನ್ನುವಂತೆ ಬಿಂಬಿಸಬಹುದು ಎನ್ನುವ ದೂರಾಲೋಚನೆ ಕಾಂಗ್ರೆಸ್‌ಗಿದೆ. ಈ ಹಿಂದೆ ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್ ಅವರನ್ನು ಕಾಂಗ್ರೆಸ್ ನಡೆಸಿಕೊಂಡ ರೀತಿಯ ವಿರುದ್ಧ ಲಿಂಗಾಯತರು ತಿರುಗಿಬಿದ್ದು, ಇಡೀ ಸಮುದಾಯ ಬಿಜೆಪಿಯೊಂದಿಗೆ ಹೋದಂತೆ, ಭವಿಷ್ಯದಲ್ಲಿ ಒಕ್ಕಲಿಗರು ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡರೆ ಭವಿಷ್ಯದಲ್ಲಿ ಪಕ್ಷಕ್ಕೆ ಬಹುದೊಡ್ಡ ಲಾಭವಾಗುತ್ತದೆ ಎನ್ನುವುದು ಕಾಂಗ್ರೆಸ್ ಲೆಕ್ಕಾಚಾರವಾಗಿದೆ.

ಮುಖ್ಯಮಂತ್ರಿಯಾಗಿ ಅಧಿಕಾರದ ಗದ್ದುಗೆ ಏರಿರುವ ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಖಾತೆ ಕ್ಯಾತೆ, ಸಂಪುಟದಲ್ಲಿ ಸ್ಥಾನ ಸಿಗದಿರುವುದಕ್ಕೆ ಅಸಮಾಧಾನದ ಹೊರತಾಗಿಯೂ, ಅಧಿಕಾರ ಸ್ವೀಕರಿಸಿದ ವಾರ ಕಳೆಯುವುದರಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಹಲವು ಭಾಗಗಳಿಗೆ 'ಸಮರ್ಪಣಾ ಸಮಾವೇಶ'ದ ನೆಪದಲ್ಲಿ ಭಾನುವಾರ ಇಡೀ ದಿನ ಸುತ್ತಾಡಿದ್ದಾರೆ. ಈ ರ್‍ಯಾಲಿಯಲ್ಲಿ ಮಾತನಾಡುವ ವೇಳೆ, ಅವರಾಡಿದ ಮಾತುಗಳು ಕ್ಷೇತ್ರದ ಜನರಿಗೆ ಕೃತಜ್ಞತೆ ಸಲ್ಲಿಸುವುದಕ್ಕಿಂತ ಹೆಚ್ಚಾಗಿ, ಭವಿಷ್ಯದ ರಾಜಕೀಯ ಲೆಕ್ಕಾಚಾರಗಳಿದ್ದವು ಎನ್ನುವುದು ಸ್ಪಷ್ಟ. ಅದರಲ್ಲಿಯೂ, 'ನಮ್ಮ ಬದುಕು ಶಾಶ್ವತವಲ್ಲ, ನಾವು ಬಿಟ್ಟು ಹೋಗುವ ಸಾಕ್ಷಿ ಗುಡ್ಡೆಗಳೇ ಶಾಶ್ವತ. ನಾನು ಕೇವಲ ಎರಡು ವರ್ಷ ಮಾತ್ರ ಸಿಎಂ ಆಗಿರಬೇಕೇ..? ನಿಮ್ಮ ಆಶೀರ್ವಾದದಿಂದ 2028ರಲ್ಲಿ ಮತ್ತೆ ಗೆಲ್ಲಬೇಕು. ಅದಕ್ಕೆ ನೀವು ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡೋಣ. ಒಳ್ಳೆ ರೀತಿಯಲ್ಲಿ ಅಧಿಕಾರ ನಡೆಸಿ ಸಾಕ್ಷಿ ಗುಡ್ಡೆಗಳನ್ನು ಬಿಟ್ಟು ಹೋಗೋಣ. ಜನತಾದಳದ ಕಾರ್ಯಕರ್ತರಿಗೂ ಈ ಡಿ.ಕೆ. ಶಿವಕುಮಾರ್ ಇದ್ದಾನೆ. ನನ್ನ ಮನೆ ಬಾಗಿಲು ನಿಮಗೂ ತೆರೆದಿದೆ. ನೀವು ನನ್ನನ್ನು ಬಳಸಿಕೊಂಡು, ಸಹಾಯ ಪಡೆಯಬಹುದು' ಎನ್ನುವ ಮೂಲಕ ತಮ್ಮ ಭವಿಷ್ಯದ ಆಲೋಚನೆಯನ್ನು ನೇರವಾಗಿಯೇ ಹೇಳಿದ್ದಾರೆ. ಈ ಮೂಲಕ ಒಕ್ಕಲಿಗ ಮತಗಳನ್ನು ಭದ್ರಪಡಿಸಿಕೊಂಡು, ಹಳೇ ಮೈಸೂರು ಭಾಗದಲ್ಲಿ ಇನ್ನಷ್ಟು ಕ್ಷೇತ್ರಗಳನ್ನು ಗಳಿಸುವ ಜತೆಜತೆಗೆ ಈಗಿರುವ ಕ್ಷೇತ್ರಗಳನ್ನು ಉಳಿಸುವ ಲೆಕ್ಕಾಚಾರದಲ್ಲಿದ್ದಾರೆ.

ಹಾಗೆ ನೋಡಿದರೆ, ಮುಖ್ಯಮಂತ್ರಿಯಾಗಿ ಕೂರುವುದು ಖಚಿತವಾಗುತ್ತಿದ್ದಂತೆ ಡಿ.ಕೆ.ಶಿವಕುಮಾರ್ 2028ರ ಚುನಾವಣೆಗೆ ಸಿದ್ಧತೆ ಆರಂಭಿಸಿದ್ದಾರೆ. ಆದರೆ ನಾಯಕತ್ವ ಬದಲಾವಣೆಯ ಈ ಸಂಧಿಕಾಲವನ್ನು ಬಳಸಿಕೊಳ್ಳಬೇಕಿದ್ದ ಬಿಜೆಪಿ ಸಾಮಾಜಿಕ ಜಾಲತಾಣದಲ್ಲಿ 'ಪೋಸ್ಟ್' ಮಾಡುವುದರಲ್ಲಿಯೇ ತಮ್ಮ ಪ್ರತಿಪಕ್ಷದ ಕೆಲಸವನ್ನು ನಿಭಾಯಿಸುತ್ತಿದೆ. ಸಂಪುಟ ಸರ್ಕಸ್, ರಾಮಲಿಂಗಾರೆಡ್ಡಿ ರಾಜೀನಾಮೆ ಪ್ರಹಸನ, ಕೃಷ್ಣಬೈರೇಗೌಡ ಅವರು ಬೆಂಗಳೂರು ನಗರಾಭಿವೃದ್ಧಿ ಖಾತೆಯಿಂದ ವಿಮುಖವಾಗಿರುವ ವಿಷಯವನ್ನು ಮುಂದಿಟ್ಟುಕೊಂಡು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದಾಗಿದ್ದ ಅವಕಾಶವನ್ನು ಒಂದು ಹಂತಕ್ಕೆ ಕೈಚೆಲ್ಲಿತ್ತು ಎಂದರೆ ತಪ್ಪಾಗುವುದಿಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಯುವ ವೇಳೆ ಯಾವುದೇ ಡ್ಯಾಮೇಜ್ ಆಗದಂತೆ ಎಚ್ಚರವಹಿಸಿದ್ದಾರೆ ಎನ್ನುವುದು ಸತ್ಯವಾದರೂ, ಪ್ರತಿಪಕ್ಷವಾಗಿ ಈ ಕಾಲವನ್ನು ಬಳಸಿಕೊಂಡು 'ಹಿಂದ'(ಹಿಂದುಳಿದ, ದಲಿತ) ಸಮುದಾಯವನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸಬಹುದು ಎಂದು ಅಂದಾಜಿಸಲಾಗಿತ್ತು. ಇದಕ್ಕೆ ಪೂರಕವಾಗಿ ವಿಧಾನಪರಿಷತ್, ರಾಜ್ಯಸಭೆಗಳಿಗೆ ಈ ಹಿಂದೆ ಮಾಡುತ್ತಿದ್ದ 'ಅಚ್ಚರಿಯ ಆಯ್ಕೆ'ಯ ತಂತ್ರಗಾರಿಕೆಯನ್ನು ಬಿಟ್ಟು, ಜಾತಿ ಸಮೀಕರಣಕ್ಕೆ ಒತ್ತು ನೀಡಿದೆ. ದೇವೇಗೌಡರಿಂದ ತೆರವಾಗಿದ್ದ ರಾಜ್ಯಸಭೆಗೆ ಕುರುಬ ಸಮುದಾಯದ ಮ.ನಾಗರಾಜ್ ಅವರಿಗೆ ಮಣೆ ಹಾಕಿದ್ದರೆ, ಹಿಂದುಳಿದ ಸಮುದಾಯದ ರಘು ಕೌಟಿಲ್ಯ ಹಾಗೂ ಲಿಂಗಾಯತ ಸಮುದಾಯದ ಲಿಂಗರಾಜ್ ಪಾಟೀಲ್ ಅವರನ್ನು ವಿಧಾನಪರಿಷತ್‌ಗೆ ಕಳುಹಿಸಲು ಮುಂದಾಗಿದೆ.

ಜಾತಿ ಸಮೀಕರಣದಲ್ಲಿ ಈ ಬಾರಿ ಬಿಜೆಪಿ ಉತ್ತಮ ನಡೆ ಎನಿಸಿದ್ದರೂ, ಪ್ರತಿಪಕ್ಷವಾಗಿ ಕಾಂಗ್ರೆಸ್‌ನಲ್ಲಿ ಎದ್ದಿರುವ ಗೊಂದಲದ ಲಾಭ ಪಡೆಯುವಲ್ಲಿ ಈಗಲೂ ಪೂರ್ಣ ಪ್ರಮಾಣದಲ್ಲಿ ಎಚ್ಚೆತ್ತಿಲ್ಲ ಎನ್ನುವುದು ಸ್ಪಷ್ಟ. ಅದರಲ್ಲಿಯೂ ಮುಂದಿನ ಮೂರು ತಿಂಗಳಲ್ಲಿ ಎದುರಾಗಲಿರುವ ಜಿಬಿಎ ಚುನಾವಣೆಯ ಸಮಯದಲ್ಲಿ, ಬೆಂಗಳೂರು ನಗರಾಭಿವೃದ್ಧಿ ಖಾತೆಯ ವಿಷಯದಲ್ಲಿ ಕಾಂಗ್ರೆಸ್‌ನಲ್ಲಿ ಭಾರಿ ಪ್ರಮಾಣದ ಹೈಡ್ರಾಮ ಸೃಷ್ಟಿಯಾಗಿದೆ. ಹಿರಿಯ ಕಾಂಗ್ರೆಸಿಗ ರಾಮಲಿಂಗಾರೆಡ್ಡಿ ರಾಜೀನಾಮೆ ಕೊಟ್ಟು, ಬಳಿಕ ಹಿಂಪಡೆದಿದ್ದಾರೆ. ಈಗಲೂ ಬೆಂಗಳೂರು ನಗರಾಭಿವೃದ್ಧಿ ಖಾತೆಯ ಅಧಿಕಾರ ಸ್ವೀಕರಿಸಲು ಕೃಷ್ಣಬೈರೇಗೌಡ ಹಿಂದೇಟು ಹಾಕುತ್ತಿದ್ದಾರೆ. ಈ ಅಂಶಗಳನ್ನು ಮುಂದಿಟ್ಟುಕೊಂಡು ಸರಕಾರದ ವಿರುದ್ಧ ಜನಾಭಿಪ್ರಾಯ ಮೂಡಿಸಲು ಇದ್ದ ಅವಕಾಶವನ್ನು ಕಳೆದುಕೊಂಡಿದೆಯೇ ಎನ್ನುವ ಅನುಮಾನ ಮೂಡುತ್ತಿವೆ.

ವಿಧಾನಸಭಾ ಚುನಾವಣೆಗೆ ಇನ್ನು ಎರಡೇ ವರ್ಷ ಬಾಕಿಯಿರುವುದರಿಂದ ಈಗಾಗಲೇ ರಾಜಕಾರಣಿಗಳು ಸ್ಥಳೀಯ ಮಟ್ಟದಲ್ಲಿ ತಮ್ಮ ಕಾರ್ಯಗಳನ್ನು ಆರಂಭಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ಹತ್ತು ಹಲವು ಗೊಂದಲಗಳಿದ್ದರೂ, ಎಲ್ಲವನ್ನು ಬದಿಗಿಟ್ಟು ಮುಂದಿನ ಚುನಾವಣೆಗೆ ತಯಾರಿ ಆರಂಭಿಸಿದೆ. ಇದಕ್ಕೆ ಪೂರಕವಾಗಿ ದೇವೇಗೌಡರಿಗೆ ಸಿಗದ ರಾಜ್ಯಸಭಾ ಅವಕಾಶವನ್ನು ಮುಂದಿಟ್ಟುಕೊಂಡು ಒಕ್ಕಲಿಗರ ಅಸ್ಮಿತೆಯನ್ನು ಕೆಣಕಲು ಪ್ರಯತ್ನಿಸುತ್ತಿದೆ. ಆದರೆ ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳಿಗೆ ಬಿಜೆಪಿ ಈ ಹಂತದಲ್ಲಿಯೇ ಉತ್ತರ ಕಂಡುಕೊಳ್ಳಬೇಕಿದೆ. ಇಲ್ಲದೇ ಹೋದರೆ, ಮುಂದಿನ ದಿನದಲ್ಲಿ ಎದುರಾಗಲಿರುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಹಾಗೂ 2028ರ ವಿಧಾನಸಭಾ ಚುನಾವಣೆಯಲ್ಲಿ ಹೊಡೆತ ಬೀಳುವ ಸಾಧ್ಯತೆಯಿದೆ. ಆದ್ದರಿಂದ ಈಗಲೇ ಎಚ್ಚೆತ್ತುಕೊಳ್ಳುವುದು ಉತ್ತಮ, ಏಕೆಂದರೆ ರಾಜಕೀಯದಲ್ಲಿ ರೈಲಿಗೆ ತಾಸಿನ ಮೊದಲೇ ಟಿಕೆಟ್ ಪಡೆಯಬೇಕು. ರೈಲು ಸ್ಟೇಷನ್‌ನಲ್ಲಿ ನಿಂತಾಗ ಟಿಕೆಟ್ ಪಡೆದರೂ, ಸೀಟು ಸಿಗೋ ಸಾಧ್ಯತೆ ತೀರಾ ಕಡಿಮೆ!

94ರ ಈ ಯುವ ನಿರ್ದೇಶಕನ ಹೆಸರು ಸಿಂಗೀತಂ!

ಪದಸಾಗರ

ನವೀನ್ ಸಾಗರ್

vveditoped@gmail.com

ಸಿಂಗೀತಂ ಶ್ರೀನಿವಾಸ ರಾವ್. ಈ ಹೆಸರು ಮೊದಲ ಬಾರಿ ನೋಡಿದ್ದು ಹಾಲು ಜೇನು ಚಿತ್ರದ ಪೋಸ್ಟರ್‌ನಲ್ಲಿ. ಇದೇನಿದು ಹಿಂಗಿದೆ ಹೆಸರು.. ಪತ್ರಿಕೆಯಲ್ಲಿ ತಪ್ಪಾಗಿ ಪ್ರಿಂಟಾಗಿದೆಯಾ ಅಂತ ತಲೆ ಕೆರೆದುಕೊಂಡಿದ್ದೆ. ಆದರೆ ಸಿನಿಮಾ ಪರದೆಯ ಮೇಲೂ ಹೆಸರು ಹಾಗೆಯೇ ಮೂಡಿತ್ತು. ನನಗಿನ್ನೂ ಆಗ ಐದು ವರ್ಷವಷ್ಟೇ. ಸಿನಿಮಾಗೆ ನನ್ನನ್ನು ಕರೆದುಕೊಂಡು ಹೋಗಿದ್ದವರಿಗೆ ಬಹುಶಃ ನಿರ್ದೇಶಕರ ಹೆಸರೆಲ್ಲ ಗಮನಿಸುವ ಆಲೋಚನೆಯೂ ಬಂದಿರಲಿಕ್ಕಿಲ್ಲ, ಅವರಿಗದು ರಾಜಕುಮಾರನ ಸಿನಿಮಾ ಅಷ್ಟೆ. ನಾನೊಂದು ವಿಚಿತ್ರ ತಳಿ. ಆ ವಯಸ್ಸಿನಲ್ಲೇ ಹೆಸರುಗಳು, ಪದಗಳು ನನ್ನಲ್ಲಿ ಯೋಚನೆಗಳನ್ನು ಹುಟ್ಟಿಸುತ್ತಿದ್ದವು. ಕಾಗುಣಿತ ವ್ಯಾಕರಣಗಳನ್ನೆಲ್ಲ ಶಾಸ್ತ್ರೀಯವಾಗಿ ಕಲಿಯುವ ವಯಸ್ಸೇ ಮುಟ್ಟಿಲ್ಲದಿದ್ದರೂ ದೋಷಗಳು ಗೊತ್ತಾಗುತ್ತಿದ್ದವು. ಸಂಗೀತಂ ಬರೆಯೋಕೆ ಸಿಂಗೀತಂ ಬರೆದುಬಿಟ್ಟಿದ್ದಾರೆ ಎಂದು ಮನದೊಳಗೆ ಮೂಕರೋಧನೆ ಶುರುವಾಗಿಬಿಟ್ಟಿತ್ತು. ಆ ಹೆಸರಿರೋದೇ ಹಾಗೆಂದು ಒಪ್ಪಿಕೊಳ್ಳಲು ಐದಾರು ವರ್ಷಗಳೇ ಹಿಡಿದವು.

ಆದರೆ ಆ ಹೆಸರು ವರ್ಷಗಳು ಉರುಳಿದಂತೆ ಒಂದು ಆಕರ್ಷಣೆ ಮತ್ತು ಅಭಿಮಾನ ಮೂಡಿಸಿಬಿಟ್ಟಿತ್ತು. ಕಾರಣ ಆ ವ್ಯಕ್ತಿ ಕೊಟ್ಟ ಸಿನಿಮಾಗಳು. ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದ ಸಿನಿಮಾ ಅಂದರೆ ಹೊಸತನ ತುಂಬಿದ ಕಥೆ, ಸದಭಿರುಚಿಯ ತಿಳಿ ಹಾಸ್ಯ ಮತ್ತು ಗುಪ್ತಗಾಮಿನಿಯಂತೆ ಹರಿಯುವ ಒಂದು ಸಂದೇಶ ಇವೆಲ್ಲದರ ಜತೆಗೆ ಅತ್ಯುತ್ತಮ ಹಾಡುಗಳ ಒಂದು ಆಲ್ಬಂ ಖಚಿತ ಎಂದಾಗಿಬಿಟ್ಟಿತು.ಇಂದು ಸಿಂಗೀತಂ ಶ್ರೀನಿವಾಸರಾವ್ ಅವರನ್ನು ನೆನಪಿಸಿಕೊಳ್ಳಲು ಘನವಾದ ಕಾರಣವಿದೆ. ಬರುವ ಶುಕ್ರವಾರ ಅಂದರೆ ಇದೇ ಜೂನ್ ಹನ್ನೊಂದಕ್ಕೆ ಸಿಂಗೀತಂ ನಿರ್ದೇಶನದ ಅರವತ್ತೊಂದನೇ ಚಿತ್ರ ತೆರೆಕಾಣಲಿದೆ. ಅರವತ್ತೊಂದನೇ ಚಿತ್ರ ಎಂಬುದರಲ್ಲೇನು ವಿಶೇಷ ಅಂತೀರಾ? ಇದನ್ನು ಅವರು ನಿರ್ದೇಶಿಸಿರೋದು ತಮ್ಮ 94ನೆಯ ವಯಸ್ಸಿನಲ್ಲಿ! ಹೌದು. ಸಿಂಗೀತಂ ಅವರಿಗೀಗ 95 ವರ್ಷ.

ಈ ವಯಸ್ಸಿನಲ್ಲಿ ಚಟುವಟಿಕೆಯಿಂದಿರುವ, ಆರೋಗ್ಯದಿಂದಿರುವ ಜೀವಗಳನ್ನು ನಾವು ಕಂಡಿರುವುದು ಬೆರಳೆಣಿಕೆಯಷ್ಟು ಮಾತ್ರ. ದೇವೇಗೌಡರು ತಮ್ಮ 93ನೆಯ ವಯಸ್ಸಿನಲ್ಲೂ ತುಂಬಿದ ಸಭೆಯಲ್ಲಿ ಅಬ್ಬರಿಸುವುದನ್ನು, ರಾಜ್ಯಸಭೆಯಲ್ಲಿ ಅಂಕಿ ಅಂಶಗಳನ್ನು ಮುಂದಿಟ್ಟು ಮಾತಾಡುವುದನ್ನು, ದಶಕಗಳ ಹಿಂದಿನ ಇತಿಹಾಸವನ್ನು ಚೂರೂ ತಪ್ಪದಂತೆ ನೆನಪಿಸಿಕೊಳ್ಳುವುದನ್ನು ಕಂಡು ಅಚ್ಚರಿ ಪಟ್ಟಿದ್ದೇನೆ. ಭೈರಪ್ಪನವರು 90ರಲ್ಲಿದ್ದಾಗ ಅವರ ಮೆಮೋರಿ ಪರ್ವ ಕಂಡು ಇವರು ಈ ವಯಸ್ಸಲ್ಲೂ ಬುಕ್ ಬರೆದರೆ ಅಚ್ಚರಿ ಇಲ್ಲ ಅಂದುಕೊಂಡಿದ್ದೆ. ಸಾಲುಮರದ ತಿಮ್ಮಕ್ಕ, ಶಿವಕುಮಾರ ಸ್ವಾಮಿಗಳು ನಮಗೆ ದೈವಸ್ವರೂಪಿಗಳಂತೆ ಕಂಡಿದ್ದರೆ. ಅಡ್ವಾಣಿಯವರು ಶತಕದತ್ತ ಸಾಗುತ್ತಿರುವುದನ್ನು ನೋಡಿದ್ದೇವೆ. ಆಶಾ ಭೋಂಸ್ಲೆ ತೊಂಬತ್ತರ ಹತ್ತಿರ ಬರುವವರೆಗೂ ಹಾಡಿದ್ದು ಕಂಡಿದ್ದೇವೆ. ಆದರೆ ನಿರ್ದೇಶಕರೊಬ್ಬರು ಈ ವಯಸ್ಸಿನಲ್ಲಿ ಸಿನಿಮಾ ನಿರ್ದೇಶಿಸುತ್ತಾರೆ ಎಂದು ಊಹಿಸಲೂ ಅಸಾಧ್ಯ. ಅಂಥ ಅಸಾಧ್ಯವನ್ನು ಸಾಧ್ಯವಾಗಿಸಿರುವುದು ಸಿಂಗೀತಂ. ನಿಜಕ್ಕೂ ಅವರೇ ನಿರ್ದೇಶಿಸಿದ್ದಾರಾ ಅಥವಾ ದಾಖಲೆಗಾಗಿ ಹೆಸರು ಹಾಕಿಕೊಂಡು ಇನ್ಯಾರೋ ಕೆಲಸ ಮಾಡಿದ್ದಾರಾ ಎಂಬ ಅನುಮಾನ ಹುಟ್ಟಿದ್ದಂತೂ ಹೌದು. ಆದರೆ ಅವರ ಸಂದರ್ಶನಗಳನ್ನು ನೋಡಿದ ನಂತರ ಅನುಮಾನ ಪರಿಹಾರವಾಗಿ ಅಭಿಮಾನ ನೂರ್ಮಡಿಯಾಯಿತು. ದೈಹಿಕವಾಗಿ ಮತ್ತು ಮಾನಸಿಕವಾಗಿ ಅಷ್ಟು ಫಿಟ್ ಅಂಡ್ ಫೈನ್ ಇರುವ ಸಿಂಗೀತಂ ಶತಕ ಪೂರೈಸುವುದರೊಳಗೆ ಇನ್ನೆರಡು ಚಿತ್ರ ನಿರ್ದೇಶಿಸಿದರೂ ಆಶ್ಚರ್ಯವಿಲ್ಲ. ಅಂದಹಾಗೆ ಸಿಂಗೀತಂ ಅವರ ಹೊಸ ಚಿತ್ರದ ಹೆಸರು ಸಿಂಗ್ ಗೀತಂ.

ಭಾರತ ಚಿತ್ರರಂಗ ಕಂಡಿರೋ ಅತ್ಯುತ್ತಮ ನಿರ್ದೇಶಕರ ಪಟ್ಟಿ ತಯಾರಿಸಿದರೆ ಸಿಂಗೀತಂ ಅವರ ಹೆಸರು ಪ್ರಾರಂಭದ ಹತ್ತರಲ್ಲೊಂದಾಗಿ ಬರಬಹುದು. ಮನೋರಂಜನೆ ಮತ್ತು ಕಮರ್ಷಿಯಲ್ ಪರಿಧಿಯಲ್ಲಿಯೇ ಇದ್ದು ಅವರಷ್ಟು ಪ್ರಯೋಗ ಮಾಡಿದ ಮತ್ತು ಹೊಸತನಕ್ಕಾಗಿ ತುಡಿದ ಮತ್ತೊಬ್ಬ ನಿರ್ದೇಶಕ ಇರಲಿಕ್ಕಿಲ್ಲ.

ಸಿಂಗೀತಂ ಸಿನಿ ಜರ್ನಿಯೇ ವಿಶಿಷ್ಟ. ನಮ್ಮಪ್ಪ ಅಮ್ಮ ಹದಿಹರೆಯದಲ್ಲಿದ್ದಾಗ ತೆರೆಕಂಡ ಮಾಯಾಬಜಾರ್ ಚಿತ್ರಕ್ಕೆ ಸಿಂಗೀತಂ ಅಸಿಸ್ಟೆಂಟ್ ಡೈರೆಕ್ಟರ್ ಆಗುವ ಮೂಲಕ ಸಿನಿಮಾಗೆ ಎಂಟ್ರಿ ಕೊಟ್ಟರು. ಪೌರಾಣಿಕ ಚಿತ್ರಗಳಲ್ಲೇ ಮಾಯಾಬಜಾರ್ ಇಂದಿಗೂ ನಂಬರ್ ಒನ್ ಎಂಟರ್ಟೇನರ್. ಹತ್ತು ವರ್ಷಗಳ ನಂತರ ಸ್ವತಂತ್ರ ನಿರ್ದೇಶಕರಾಗಿ ಬಡ್ತಿ ಪಡೆದ ಅವರು ಮೊದಲ ಚಿತ್ರ ನಿರ್ದೇಶಿಸಿದ್ದು ತೆಲುಗಿನಲ್ಲಿ. ಅವರ ಬೇರುಗಳು ಕನ್ನಡದಲ್ಲಿದ್ದವು ಎಂದು ಕೆಲವು ಮೂಲಗಳು ಹೇಳುತ್ತವೆಯಾದರೂ, ಅವರು ತೆಲುಗರು. ತಮಿಳಿನಲ್ಲಿ ಅವರು ನಿರ್ದೇಶಿಸಿದ ಮೊದಲ ಚಿತ್ರಕ್ಕೇ ಪ್ರಶಸ್ತಿ ಬಂತು. ಸಿಂಗೀತಂ ನಿರ್ದೇಶನದ ಚಿತ್ರಗಳ ಪಟ್ಟಿ ನೋಡ್ತಾ ಇದ್ರೇನೇ ಒಂದು ಮುಗುಳ್ನಗು ಮೂಡುತ್ತದೆ.

ಈ ವ್ಯಕ್ತಿ ಕೈಹಾಕದ ಜಾನರ್ ಇಲ್ಲ. ಎಂಬತ್ತರ ದಶಕದಲ್ಲೇ ಬಾಲಕೃಷ್ಣ ನಿರ್ದೇಶನದಲ್ಲಿ ಆದಿತ್ಯ 369 ಎಂಬ ಸೈಂಟಿಫಿಕ್ ಫಿಕ್ಷನ್ ನಿರ್ದೇಶಿಸಿ ಅದರಲ್ಲಿ ಟೈಮ್ ಟ್ರಾವೆಲ್ ಕಾನ್ಸೆಪ್ಟ್ ತಂದವರು ಸಿಂಗೀತಂ. ಅದರ ಬೆನ್ನಲ್ಲೇ ಭೈರವದ್ವೀಪಂ ಎಂಬ ಫ್ಯಾಂಟಸಿ ನಿರ್ದೇಶಿಸಿದರು. ಕಮಲಹಾಸನ್ ಜತೆಗಿನ ಅವರ ಜರ್ನಿಯಂತೂ ಬೇರೆಯದೇ ಅಧ್ಯಾಯ. ಕಮಲಹಾಸನ್ ನಾಲ್ಕು ಪಾತ್ರಗಳಲ್ಲಿ ನಟಿಸಿದ ಮೈಕೆಲ್ ಮದನ್ ಕಾಮರಾಜನ್ ಥರದ ಹಾಸ್ಯ ಚಿತ್ರ ಮತ್ತು ತಾಂತ್ರಿಕ ಉತ್ಕೃಷ್ಟತೆಯ ಚಿತ್ರ, ಆ ಕಾಲಕ್ಕೆ ಮಾತ್ರವಲ್ಲ ಇಂದಿಗೂ ಗ್ರೇಟ್ ಅನಿಸುತ್ತದೆ. ಕಮಲಹಾಸನ್‌ರನ್ನು ಮೂರಡಿಯ ಕುಬ್ಜನಂತೆ ತೋರಿಸಿದ್ದ ಅಪೂರ್ವ ಸಹೋದರರ್ಗಳ್ ಚಿತ್ರದ ಹಿಂದಿನ ಮೆದುಳು ಸಿಂಗೀತಂ ಅವರದ್ದೇ. ಆದರೆ ಕಮಲ್‌ಗೆ ಸಿಕ್ಕಷ್ಟು ಪ್ರಚಾರ ಸಿಂಗೀತಂಗೆ ಸಿಕ್ಕಿರಲಿಲ್ಲ. ಆದರೇನಂತೆ, ಅಂದಿನ ಪ್ರತಿ ನಟನೂ ಸಿಂಗೀತಂ ತಮಗೊಂದು ಚಿತ್ರ ನಿರ್ದೇಶಿಸಲಿ ಎಂದು ಹಂಬಲಿಸುವಂತಿರುತ್ತಿತ್ತು ಅವರ ಕೈಚಳಕ. ಕಥೆಯೇ ಹೀರೋ ಎಂಬುದನ್ನು ಒಪ್ಪುವವರೆಲ್ಲರಿಗೂ ಸಿಂಗೀತಂ ಅಚ್ಚುಮೆಚ್ಚೆನಿಸುತ್ತಿದ್ದರು. ಅದೇ ಕಾರಣಕ್ಕೆ ರಾಜ್ ಕುಮಾರ್ ಅಷ್ಟು ಗಟ್ಟಿಯಾಗಿ ಸಿಂಗೀತಂ ಅವರನ್ನು ಹಿಡಿದುಕೊಂಡುಬಿಟ್ಟರು. ಅವರ ಕಾಂಬಿನೇಷನ್‌ನಲ್ಲಿ ಬಂದ ಪ್ರತಿ ಸಿನಿಮಾವೂ ವಿಭಿನ್ನ.

ಕ್ಯಾನ್ಸರ್ ಪೀಡಿತ ಹೆಂಡತಿ ಜತೆಗಿನ ಟ್ರಾಜಿಕ್ ಲವ್ ಸ್ಟೋರಿ ಇರುವ ಹಾಲು ಜೇನು, ಪತ್ರಕರ್ತನ ಕಥೆ ಹೊಂದಿದ್ದ ಜ್ವಾಲಾಮುಖಿ, ಪುನರ್ಜನ್ಮದ ಕಥೆ ಹೊಂದಿದ್ದ ಶ್ರಾವಣ ಬಂತು, ಮರ್ಡರ್ ಮಿಸ್ಟರಿ ಕೋರ್ಟ್ ಡ್ರಾಮಾ ಹೊಂದಿದ್ದ ಚಲಿಸುವ ಮೋಡಗಳು, ಅವಳಿ ಸೋದರರ ಚಂದಮಾಮಾ ಕಥೆಯಂಥ ಎರಡು ನಕ್ಷತ್ರಗಳು, ನಿರುದ್ಯೋಗ ಸಮಸ್ಯೆಯ ಸುತ್ತ ಹೆಣೆದ ವಿಡಂಬನಾತ್ಮಕ ಚಿತ್ರ ಭಾಗ್ಯದಾ ಲಕ್ಷ್ಮಿ ಬಾರಮ್ಮ, ರಾಜ್ ಅವರ ಇನ್ನೂರನೆಯ ಚಿತ್ರ ದೇವತಾ ಮನುಷ್ಯ ಎಲ್ಲವೂ ಒಂದಕ್ಕಿಂತ ಒಂದು ಚೆಂದದ ಸಿನಿಮಾಗಳೇ. ಇದೇ ನಂಬಿಕೆಯಿಂದಲೇ ರಾಜ್ ಕುಮಾರ್ ತಮ್ಮ ಪುತ್ರರಿಬ್ಬರ ಚೊಚ್ಚಲ ಚಿತ್ರ ನಿರ್ದೇಶನದ ಜವಾಬ್ದಾರಿಯನ್ನು ಸಿಂಗೀತಂಗೇ ಒಪ್ಪಿಸಿದ್ದು. ಚಿರಂಜೀವಿ ಸುಧಾಕರ್ ಸೋತರೂ ಒಂದು ಉತ್ತಮ ಚಿತ್ರವೇ ಆಗಿತ್ತು. ಶಿವಣ್ಣನ ಆನಂದ್ ಇವತ್ತಿಗೂ ನೋಡಬಲ್ ಸಿನಿಮಾವೇ. ರಾಜ್ ಕುಟುಂಬದ ಎಲ್ಲ ನಾಲ್ವರನ್ನು ನಿರ್ದೇಶಿಸುವ ಅವಕಾಶ ಸಿಕ್ಕಿದ್ದು ಬೆರಳೆಣಿಕೆಯಷ್ಟು ನಿರ್ದೇಶಕರಿಗೆ ಮಾತ್ರ. ಅವರಲ್ಲಿ ಪ್ರಮುಖರು ಸಿಂಗೀತಂ.

ಕುಮಾರ್ ಬಂಗಾರಪ್ಪ ನಟನೆಯ ಕ್ಷೀರಸಾಗರ ಎಂಬ ಕ್ಯೂಟ್ ಚಿತ್ರ ಕೊಟ್ಟವರು ಸಿಂಗೀತಂ. ಅವರದ್ದೇ ಬೆಳ್ಳಿಯಪ್ಪ ಬಂಗಾರಪ್ಪ ಚಿತ್ರಕ್ಕೆ ಕಥೆ ಕೊಟ್ಟಿದ್ದು ಅವರೇ. ಬಹುಶಃ ಕನ್ನಡದಲ್ಲಿ ಅವರು ಕೊಟ್ಟ ಏಕೈಕ ಕೆಟ್ಟ ಚಿತ್ರ ಅಂದರೆ ಅದು ಮೇಕಪ್.

ಸಿಂಗೀತಂ ಅವರನ್ನು ಇಂಡಿಯನ್ ಸಿನಿಮಾ ನೆನಪಿಟ್ಟುಕೊಳ್ಳುವುದು ಪುಷ್ಪಕ ವಿಮಾನ ಚಿತ್ರದಿಂದ. ಇದನ್ನು ಅವರು ಮೂಕಿ ಚಿತ್ರ ಅಂತ ಹೇಳುವುದಿಲ್ಲ, ಸಂಭಾಷಣೆರಹಿತ ಸಿನಿಮಾ ಅನ್ನುತ್ತಾರೆ. ಭಾರತೀಯ ಸಿನಿಮಾಗಳಲ್ಲಿ ಪುಷ್ಪಕ ವಿಮಾನಕ್ಕೊಂದು ವಿಶೇಷ ಸ್ಥಾನವಿದೆ. ಮಾತಿಲ್ಲದೆ ಸಿನಿಮಾನೇ ಇಲ್ಲ ಎಂಬಂತಾಗಿದ್ದ ಕಾಲದಲ್ಲಿ ಹೀಗೂ ಸಿನಿಮಾ ಮಾಡಬಹುದು ಎಂದು ತೋರಿಸಿ ಗೆದ್ದಿದ್ದು ಸಿಂಗೀತಂ ಅಗ್ಗಳಿಕೆ. ನನ್ನ ನೂರನೆಯ ಚಿತ್ರ ಸಿಂಗೀತಂ ಅವರೇ ನಿರ್ದೇಶಿಸಬೇಕು ಎಂದು ಹಟ ಹಿಡಿದು ಸಾಧಿಸಿದ್ದರು ಕಮಲ್.

ಕಾಲಿಲ್ಲದ ಹೆಣ್ಮಗಳೊಬ್ಬಳು ನೃತ್ಯಗಾತಿಯಾಗಿ ಪ್ರೂವ್ ಮಾಡುವ ವಿಶೇಷ ಕಥೆಯ ಮಯೂರಿ ಚಿತ್ರ ಯಾರು ತಾನೇ ಮರೆಯೋಕೆ ಸಾಧ್ಯ? ಹದಿನಾಲ್ಕು ನಂದಿ ಪ್ರಶಸ್ತಿಗಳನ್ನು ದೋಚಿತ್ತು ಆ ಚಿತ್ರ. 1994ರಲ್ಲಿ ತೆರೆಕಂಡ ಮ್ಯಾಗ್ಗೀ ಮಟ್ಟಂ ಎಂಬ ಚಿತ್ರದಲ್ಲಿ ಮೀ ಟೂ ಕಾನ್ಸೆಪ್ಟನ್ನು ತಮ್ಮ ಚಿತ್ರದ ಕಥಾವಸ್ತು ಮಾಡಿದ್ದರು.

ಎಪ್ಪತ್ತರ ವಯಸ್ಸಿನಲ್ಲಿ ಅನಿಮೇಶನ್ ವಿದ್ಯೆ ಕಲಿತು ಸನ್ ಆಫ್ ಅಲ್ಲಾದೀನ್ ಎಂಬ ಸಂಪೂರ್ಣ ಅನಿಮೇಷನ್ ಚಿತ್ರ ನಿರ್ದೇಶಿಸುತ್ತಾರೆ ಅಂದರೆ ಇವರ ಸಿನಿಮಾ ಹುಚ್ಚು, ಕಲಿಕೆಯ ಆಸಕ್ತಿ ಯಾವ ಮಟ್ಟದ್ದಿರಬಹುದು. ಕಂಟೆಂಟ್ ವಿಷಯದಲ್ಲಿ ಇವರು ಎಷ್ಟು ಮುಂದಿದ್ದರು ಅನ್ನೋದಕ್ಕೆ ಇವೆಲ್ಲ ಕೆಲವು ಉದಾಹರಣೆಗಳಷ್ಟೆ. ತೀರಾ ಇತ್ತೀಚಿನ ಪ್ರಭಾಸ್ ಚಿತ್ರ ಕಲ್ಕಿ 2898ಎಡಿ ಮಾಡುವಾಗ ಇವರಿಂದ ಹಲವಾರು ಸಲಹೆ ಪಡೆದಿತ್ತು ಚಿತ್ರ ತಂಡ. ವಿದೇಶದ ಪ್ರತಿಷ್ಠಿತ ಸಿನಿಮಾ ಇನ್‌ಸ್ಟಿಟ್ಯೂಟ್ ಸಿಂಗೀತಂ ಶ್ರೀನಿವಾಸ್ ರಾವ್ ಅವರ ಅನುಭವಗಳನ್ನು ಪಡೆಯುತ್ತದೆ ಅಂದ್ರೆ ಅವರ ಪ್ರತಿಭೆಯ ಅಗಾಧತೆ



ಅರ್ಥವಾಗುತ್ತದೆ. ಸಿಂಗೀತಂ ಚಿತ್ರಗಳ ಶೈಲಿಯೇ ಭಿನ್ನ. ಪ್ರತಿ ಸನ್ನಿವೇಶದಲ್ಲೂ ಹಾಸ್ಯ ಭಾವುಕತೆ ಎಲ್ಲವನ್ನೂ ತುಂಬಿಸುತ್ತಾ ಅದಕ್ಕೆ ತಕ್ಕ ಸಂಗೀತ ಮಾಡಿಸುವ ಸೆನ್ಸ್ ಅವರಿಗಿತ್ತು. ಭಾಗ್ಯದಾ ಲಕ್ಷ್ಮಿ ಬಾರಮ್ಮ ಚಿತ್ರಕ್ಕೆ ಇವರೇ ಸಂಗೀತ ನಿರ್ದೇಶಕರು. ಆ ಲೆಕ್ಕದಲ್ಲಿ ಸಂಗೀತಂ ಶ್ರೀನಿವಾಸರಾವ್ ಅಂತಲೂ ಕರೆಯಬಹುದು.

ಇಂದು ಐಟಿ ಫೀಲ್ಡಿಂದ ಸಿನಿಮಾಗೆ ಬರುವ ಟ್ರೆಂಡ್ ನಡೀತಾ ಇದೆ. ಆದರೆ ಇವರು ಆ ಕಾಲದಲ್ಲೇ ಫಿಸಿಕ್ಸ್ ಕಲಿತು, ಸಿನಿಮಾ ನಿರ್ದೇಶಕರಾಗಲು ಬಂದಿದ್ದರು. ಇಂಥ ಮಹಾನ್ ನಿರ್ದೇಶಕನ ಲೇಟೆಸ್ಟ್ ಚಿತ್ರವೂ ಪ್ರಯೋಗವೇ. ಇಡೀ ಚಿತ್ರದ ಸಂಭಾಷಣೆಯನ್ನು ಹಾಡಿನ ರೂಪದಲ್ಲಿ ಒಪ್ಪಿಸುವ ಪ್ರಯೋಗ ಈ ಸಿಂಗ್ ಗೀತಂ ಚಿತ್ರದಲ್ಲಿ ಮಾಡಿದ್ದಾರಂತೆ. ದಾಖಲೆ ತೆಗೆದು ನೋಡಿದರೆ, ಪೋರ್ಚುಗೀಸ್ ನಿರ್ದೇಶಕನೊಬ್ಬ 103ನೆಯ ವಯಸ್ಸಿನಲ್ಲಿ ಚಿತ್ರ ನಿರ್ದೇಶನ ಮಾಡಿದ್ದ ಎಂಬ ಉಲ್ಲೇಖ ಸಿಗುತ್ತದೆ. ಅಮೆರಿಕದ ಕ್ಲೆಂಟ್ ಈಸ್ಟ್‌ವುಡ್ 94ನೆಯ ವಯಸ್ಸಿನಲ್ಲಿ ತನ್ನ ಕೊನೆಯ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದ. ಆ ಪ್ರಕಾರ ಸಿಂಗೀತಂ ಜಗತ್ತಿನ ಎರಡನೆಯ ಅತಿ ಹಿರಿಯ ಸಕ್ರಿಯ ನಿರ್ದೇಶಕ ಎಂಬ ದಾಖಲೆಯನ್ನು ಈಸ್ಟ್‌ವುಡ್ ಜತೆಗೆ ಹಂಚಿಕೊಂಡಿದ್ದಾರೆ.

ಇದೇ ವಾರ ತೆರೆ ಕಾಣಲಿರುವ ಸಿಂಗ್ ಗೀತಂ ಹೇಗಿರಬಹುದು ಎಂಬ ಕುತೂಹಲವಿದೆ. ಅದಕ್ಕಿಂತ ಹೆಚ್ಚಾಗಿ ಸಿಂಗೀತಂ ಅವರ ಸಂದರ್ಶನಗಳನ್ನು ನೋಡುವ ಕುತೂಹಲವಿದೆ. ಸಿಂಗೀತಂ ಚಿತ್ರಗಳ ಕ್ಲೈಮ್ಯಾಕ್ಸ್‌ಗಳಿಗೇ ಒಂದು ಸ್ಪೆಷಲ್ ಫ್ಯಾನ್ ಬೇಸ್ ಇದೆ. ಹಾಸ್ಯವನ್ನು ಉತ್ತುಂಗಕ್ಕೊಯ್ಯುವ ಆ ಶೈಲಿ ಹಲವರು ಅನುಕರಿಸಲು ಹೋಗಿ ಸೋತಿದ್ದಾರೆ.

64 ವರ್ಷಗಳ ಅವರ ಸಿನಿಜರ್ನಿಯಲ್ಲಿ ಮಾಡಿದ್ದು 61 ಚಿತ್ರಗಳು ಮಾತ್ರ ಇರಬಹುದು. ಆದರೆ ಅದರಲ್ಲಿ ಗಟ್ಟಿ ಕಾಳುಗಳೇ ಅಧಿಕ ಎಂಬುದು ಗಮನಾರ್ಹ. ಸಿಂಗೀತಂ ಶತಕ ಬಾರಿಸಲಿ. ಬದುಕಿರುವ ವರೆಗೂ ಸಿನಿಮಾ ಮಾಡುತ್ತಲೇ ಇರಲಿ. ಅಷ್ಟು ಆರೋಗ್ಯ ಅವರದಾಗಲಿ.

ಆಗುಹೋಗು

ಸಾಮಗ ದತ್ತಾತ್ರಿ

ಜಿರಲೆಗಳಲ್ಲೂ ಇರಲಿ ನೈತಿಕ ಹೊಣೆ!

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನೀಟ್ ಮತ್ತು ಸಿಬಿಎಸ್ ಇ ಪರೀಕ್ಷೆಗಳಲ್ಲಿ ನಡೆದ ಅಕ್ರಮಗಳಿಗೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಜಿರಲೆ ಜನತಾ ಪಕ್ಷ (ಜಿಜಪ) ವನ್ನು ಹುಟ್ಟುಹಾಕಿದ ಅಭಿಜಿತ್ ದೀಪ್ಕೆ ಮತ್ತು ಅವರ ಅಭಿಮಾನಿಗಳು ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ಮಾಡಿದ್ದಾರೆ. ಬರುವ ಜೂನ್ 13ರೊಳಗೆ ಶಿಕ್ಷಣ ಸಚಿವರು ರಾಜೀನಾಮೆ ನೀಡದಿದ್ದರೆ, ಅಥವಾ ಅವರ ವಜಾ ಆಗದಿದ್ದರೆ ರಾಷ್ಟ್ರಾದ್ಯಂತ ಆಂದೋಲನ ನಡೆಸುವ ಘೋಷಣೆ (ಬೆದರಿಕೆ?) ಯನ್ನು ಮುಂದಿಟ್ಟಿದ್ದಾರೆ.

ಯುವ ಜನತೆಯ ನಿರುದ್ಯೋಗ ಸಮಸ್ಯೆ, ಏರುತ್ತಿರುವ ಬೆಲೆಗಳು ಮತ್ತು ಮುರಿದು ಬಿದ್ದಿರುವ ಶಿಕ್ಷಣ ವ್ಯವಸ್ಥೆಗಳ ವಿರುದ್ಧ ಯುವ ಪೀಳಿಗೆಯ ಆಕ್ರೋಶವನ್ನು ಹೊರಹಾಕುವ ಮೂಲೋದ್ದೇಶ ಈ ಜಿಜಪ ಸಂಘಟನೆಯದು ಎಂದು ಹೇಳಲಾಗುತ್ತದೆ. ಇವರ ನಿರ್ದಿಷ್ಟ ಹಕ್ಕೊತ್ತಾಯಗಳು ಪ್ರಧಾನವಾಗಿ, 1. ವ್ಯಾಪಕ ಪರೀಕ್ಷೆ ಅಕ್ರಮಗಳು, ನೀಟ್ ಪರೀಕ್ಷೆಯ ಪ್ರಶ್ನಪತ್ರಿಕೆ ಸೋರಿಕೆ ಮತ್ತು ಸ್ಕೂಲ್ ಗ್ರೇಡಿಂಗ್‌ನಲ್ಲಿ ಅಕ್ರಮಗಳು. ಕಾರಣ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. 2. ಭ್ರಷ್ಟಾಚಾರ ತಡೆಯುವುದು. ಸಿಬಿಎಸ್‌ಇ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಅಗಾಧ ಶುಲ್ಕ ನಿಲ್ಲಿಸುವುದು. 3. ಪಕ್ಷಾಂತರಿಗಳಿಗೆ 20 ವರ್ಷ ನಿಷೇಧ. ಸಂಸತ್ತಿನಲ್ಲಿ ಮಹಿಳೆಯರಿಗೆ 50% ಮೀಸಲು; ಸುಪ್ರೀಂ ಕೋರ್ಟಿನ ನ್ಯಾಯಾಧೀಶರಿಗೆ ನಿವೃತ್ತಿ ನಂತರ ಸರಕಾರಿ ಹುದ್ದೆ ನಿಷೇಧ.ಮೆಲ್ನೋಟಕ್ಕೆ ಇವು ಸಕಾರಣ. ಆದರೆ ರಾಷ್ಟ್ರವ್ಯಾಪಿ ಪ್ರತಿಭಟನಾ ಆಂದೋಲನದ ಬೆದರಿಕೆ ಉಚಿತವಲ್ಲ. ಯಾವುದೇ ಪ್ರತಿಭಟನೆ ಸಾರ್ವಜನಿಕ ಸುವ್ಯವಸ್ಥೆಯ ಪರಿಮಿತಿಯಲ್ಲಿದ್ದಾಗ ಮಾತ್ರ ಅವು ಸಾಂವಿಧಾನಿಕವಾಗಿ ಮಾನ್ಯ. ಸರ್ಕಾರದ ಇಲಾಖೆಗಳಲ್ಲಿ ಆಗುವ ಭ್ರಷ್ಟಾಚಾರ ಮತ್ತಿತರ ಎಲ್ಲ ಗುರುತರ ವೈಫಲ್ಯಗಳಿಗೂ ಸಂಬಂಧಪಟ್ಟ ಮಂತ್ರಿಯೇ ನೈತಿಕ ಹೊಣೆ ಹೊತ್ತು ಪದತ್ಯಾಗ ಮಾಡಬೇಕೆಂಬ ಧೋರಣೆ ಎಷ್ಟರಮಟ್ಟಿಗೆ ಸಮರ್ಥನೀಯ? ಭ್ರಷ್ಟಾಚಾರಕ್ಕೆ ಗುರಿಯಾದ ಮತ್ತು ಗಂಭೀರತರ ವೈಫಲ್ಯಗಳಿಗೆ ನೇರ ಕಾರಣವಾದ ಅಧಿಕಾರಿ-ನೌಕರ ವರ್ಗದ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುವಲ್ಲಿ ಸರಕಾರ ವಿಫಲಗೊಂಡಾಗ ಸಂಬಂಧಪಟ್ಟ ಮಂತ್ರಿಯನ್ನು ಹೊಣೆಯಾಗಿಸುವುದರಲ್ಲಿ ಅರ್ಥವುಂಟು. ಪ್ರಸ್ತುತ ನೀಟ್ ಪರೀಕ್ಷೆ ಹಗರಣದಲ್ಲಿ ಮಂತ್ರಿಗಳ ನೇರ ಪಾಲಿದೆಯೇ? ಈ ಹಗರಣಕ್ಕೆ ಕಾರಣವಾದವರನ್ನು ಸರಕಾರ ಗುರ್ತಿಸಿ ಅವರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿಲ್ಲ ಎಂದಾದರೆ, ಧರ್ಮೇಂದ್ರ ಪ್ರಧಾನ್ ಪದತ್ಯಾಗ ಮಾಡಬೇಕು. ವೈಫಲ್ಯಗಳಿಗೆಲ್ಲ ಮಂತ್ರಿಗಳು ರಾಜಿನಾಮೆ ಕೊಡುವುದೆಂದರೆ ಯಾವುದೇ ಸರಕಾರ ಸ್ಥಿರವಾಗಿರಲು ಅಸಾಧ್ಯ.

ಪ್ರಸ್ತುತ ಪ್ರತಿಭಟನೆಯ ನೇತಾರರು ಮಂತ್ರಿ ದೇವೇಂದ್ರ ಪ್ರಧಾನರಲ್ಲಿ ನೈತಿಕತೆಯನ್ನು ನಿರೀಕ್ಷಿಸುವಷ್ಟು ನೈತಿಕ ಅರ್ಹತೆ, ನಿಷ್ಪಾಕ್ಷಿಕತೆ ಮತ್ತು ಅನುಭವ ಉಳ್ಳವರು ಎನ್ನುವುದು ಇವರ ಲಕ್ಷ ಲಕ್ಷ ಬೆಂಬಲಿಗರಿಗೆ ಮನವರಿಕೆ ಆಗಿದೆಯೇ? ವ್ಯವಸ್ಥೆಯನ್ನು ನೇರ್ಪುಗೊಳಿಸುವ ದಿಸೆಯಲ್ಲಿ ಇವರ ಸಲಹೆ ಸೂಚನೆಗಳು ಏನು? ಕಾಕ್ರೋಚ್ ಜನತಾ ಪಕ್ಷ ಯಾವ ಹಿನ್ನೆಲೆಯೂ ಇಲ್ಲದೆ ದಿಢೀರನೆ ಉದ್ಭವಿಸಿದ್ದು. ದೇಶದ ಅಷ್ಟೂ ಯುವ ಜನತೆ ಅತೃಪ್ತ ಸಮುದಾಯವಾಗಿದೆ, ಬಂಡೇಳುವ ಮನಃಸ್ಥಿತಿ ಹೊಂದಿದೆ ಮತ್ತು ಇಂದಿನ ಆಡಳಿತದಲ್ಲಿ ಎಲ್ಲವೂ ಅವ್ಯವಸ್ಥೆ ಎಂದು ಈ ದಿಢೀರ್ ಪಕ್ಷ ಮತ್ತು ಅದರ ಬೆಂಬಲಿಗರು ಮತ್ತಿತರ ಸಮಯ ಸಾಧಕರು ಭಾವಿಸಿರುವಂತಿದೆ! ಆಡಳಿತದಲ್ಲಿರುವವರಲ್ಲಿ ನೈತಿಕ ಹೊಣೆ ನಿರೀಕ್ಷಿಸುವವರಲ್ಲೂ ನೈತಿಕ ಅರ್ಹತೆ ನಿರೀಕ್ಷಿಸುವುದರಲ್ಲಿ ತಪ್ಪಿಲ್ಲ.

ಭಟ್ಟರ್ ಸ್ಕಾಚ್

- **ವಿಶಾಲು, ಕಾಮನಕೊಪ್ಪಲು**
ಭಟ್ರೇ, ನಾನು ಜಾಲತಾಣಾನುರಾಗಿಯಾಗಿ ಜಾಸ್ತಿ ಲೈಕ್ಸ್, ರಿವ್ಯೂಸ್ ಗಿಟ್ಟಿಸಿಕೊಳ್ಳಲು ಏನು ಮಾಡಲಿ?
- **ಭಟ್ಟರು ಏನು ಮಾಡಿದರೂ ತಪ್ಪು ಕಂಡುಕೊಳ್ಳಲು ಪ್ರಯತ್ನಿಸು!**

- **ಶೀಲಾ, ಒಂಟಿಕೊಪ್ಪಲು, ಮೈಸೂರು**
ಭಟ್ರೇ, ನಿಮಗೆ ಪಿಎ ಆಗಿದ್ದುಕೊಂಡು ವರ್ಕ್ ಫ್ರಮ್ ಹೋಮ್ ಮಾಡಬಹುದಾ?
- **‘ಮಾಮರ ಎಲ್ಲೋ ಕೋಗಿಲೆ ಎಲ್ಲೋ....’ ಸಾಧ್ಯವೇ.. ಶೀಲಾ!?**

- **ಪ್ರಕಾಶ ರೆಡ್ಡಿ, ಜಯನಗರ**
ಭಟ್ರೇ, ರಾಮಲಿಂಗಾ ರೆಡ್ಡಿ ರಾಜೀನಾಮೆ ಪ್ರಹಸನ ಏನು ಹೇಳುತ್ತದೆ?
- **ರಾಜೀನಾಮೆ ವಾಪಸ್ ತೆಗೆದುಕೊಂಡ ನಂತರ, ಅದನ್ನು ತಿಳಿದುಕೊಳ್ಳಲು ಯಾರಿಗೆ ಆಸಕ್ತಿ ಇರುತ್ತೆ, ರೆಡ್ಡಿ?**

- **ನೇತ್ರಾ ಮಂಜು, (ಇಮೇಲ್ ಮೂಲಕ)**
ಭಟ್ರೇ, ನಿಮ್ಮ ಪತ್ರಿಕೆಯ ಹೆಡ್ಡಿಂಗುಗಳು ಬರೀ ಶಿವಮಯ ಆಗಿದೆಯಲ್ಲ?
- **ಎಲ್ಲ ಶಿವ ಲೀಲೆ!**

- **ಸಹನಾ, ಪಿರಿಯಾಪಟ್ಟಣ**
ಭಟ್ರೇ, ಸಿದ್ದರಾಮಯ್ಯನವರು ಮತ್ತೆ ಸಿಎಂ ಆದರೆ?
- **ನಿನ್ನ ಹೆಸರಿಗಾದರೂ ಮರ್ಯಾದೆ ಕೊಡಬೇಡವೇ, ಸಹನಾ?!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಮಂತ್ರಿ ಸ್ಥಾನ ಸಿಗದವರ ಗಮನ ಎತ್ತ?
- **ನಿಗಮದತ್ತ!**

- **ಭೈರವ ಪಿ., ರಾಮನಗರ**
ಭಟ್ರೇ, ದೇವೇಗೌಡರಿಗೆ ರಾಜ್ಯಸಭಾ ಸ್ಥಾನ ನೀಡದೇ ಇನ್ಯಾರಿಗೋ ಕೊಟ್ಟರಲ್ಲ?
- **ದೇವೇಗೌಡರು ತಮಗೆ ಕೊಡಿ ಎಂದು ಹೇಳಿರಲಿಲ್ಲವಂತೆ!**

- **ಬಳುವನಳ್ಳಿ ಕೃಷ್ಣಯ್ಯ, ಮದ್ದೂರು**
ಭಟ್ರೇ, ಮುಂದಿನ ಎರಡು ವರ್ಷ ಡಿಕೆಶಿ ಸಿಎಂ ಆಗಿ ಇರ್ತಾರಾ?
- **ವಿಷಯ ಅದಲ್ಲ, ಅದಾದ ಬಳಿಕವೂ ಅವರೇ ಆಗ್ತಾರಾ, ಇಲ್ಲವಾ ಅನ್ನೋದು!**

- **ರತ್ನಾಕರ ಶಿವಹೊನ್ನೆ, ಬೀರೂರು**
ಇಲ್ಲೊಬ್ಬಳು ಭಟ್ಟರು ದಿನವೂ ಕನಸಿನಲ್ಲಿ ಬರ್ತಾರೆ ಅಂತ ಹೇಳ್ತಾಳಲ್ಲ?
- **ಅದೇ ಸೇಫ್ ಅಂತ ಹೇಳಬೇಕಿತ್ತು!**

- **ಕೆ.ಆರ್.ಪ್ಯಾಟಿ, ಧಾರವಾಡ**
ಭಟ್ರೇ, ಪ್ರಗತಿಪರ ಚಿಂತಕರು ಡಿಕೆಶಿಯವರನ್ನು ಒಪ್ಪಿಕೊಳ್ಳಬಹುದಾ?
- **ಆಗಲೇ ಅವರು ನೊಣವಿನಕೆರೆ ಕಡೆ ಹೊರಟ ಬಾತ್ಮಿಯಿದೆ!**

ನೈತಿಕತೆ ಬೇರೆಯವರಿಗೆ ನೀತಿಪಾಠವಾದರೆ ಸಾಕೆ?

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ದೃಶ್ಯ ಒಂದು : ಮೈಸೂರಿನ ಒಂದು ರಸ್ತೆಯಲ್ಲಿ ಹದಿನೆಂಟು ತುಂಬಿರದ ಹುಡುಗನೊಬ್ಬ ಬೈಕು ಚಲಾಯಿಸಿಕೊಂಡು ಹೋಗುತ್ತಿದ್ದಾನೆ. ಆತನ ಹಿಂದೆ ಕುಳಿತ ತಂದೆಯ ಮುಖದಲ್ಲಿ ತನ್ನ ಮಗ ಬೈಕ್ ಚಲಾಯಿಸುವ ಬಗ್ಗೆ ಅತೀವ ಹೆಮ್ಮೆ. ಅದೇ ಬಡಾವಣೆಯಲ್ಲಿರುವ ಕಾರಣ ಅವರ ಬಗ್ಗೆ ತಿಳಿದುಕೊಂಡೆ. ಆತ ಶಿಸ್ತಿನ ಮನುಷ್ಯ. ಸ್ವಲ್ಪವೂ ಕೆಟ್ಟ ಹೆಸರು ಪಡೆದುಕೊಂಡಿಲ್ಲ. ಆದರೆ ಹದಿನೆಂಟು ದೂರದ ಮಾತು, ಹದಿನಾರು ಕೂಡ ತುಂಬದ ಮಗ ಬೈಕು ಓಡಿಸುವುದು ಆತನಿಗೆ ಹೆಮ್ಮೆ. ನಮ್ಮ ಸಮಾಜದಲ್ಲಿ ಹದಿನೆಂಟು ತುಂಬದ ಲಕ್ಷಾಂತರ ಮಕ್ಕಳು ರಾಜಾರೋಷವಾಗಿ ರಸ್ತೆಯಲ್ಲಿ ಬೈಕು, ಕಾರು ಚಲಾಯಿಸುತ್ತಿದ್ದಾರೆ. ರಸ್ತೆ ಅಪಘಾತದಲ್ಲಿ ಪ್ರತಿ ನೂರು ಸಾವಿನಲ್ಲಿ ಆರು ಮಂದಿ ಹದಿನೆಂಟು ವರ್ಷಕ್ಕಿಂತ ಕಡಿಮೆ ಇರುವವರು ವಾಹನ ಚಲಾಯಿಸುತ್ತಿದ್ದರು ಎನ್ನುವುದು ತಿಳಿದು ಬಂದಿದೆ. ಹದಿನೆಂಟಕ್ಕಿಂತ ಮುಂಚೆ ವಾಹನ ಚಲಾಯಿಸಲು ಅನುಮತಿಯನ್ನು ನಮ್ಮ ಕಾನೂನು ನೀಡುವುದಿಲ್ಲ. ಆದರೆ ಈ ಕಾನೂನು ಯಾರೂ ಪಾಲಿಸುತ್ತಿಲ್ಲ. ಇದು ತಪ್ಪು ಎನ್ನುವುದು ಸಮಾಜದಲ್ಲಿ ಚರ್ಚೆ ಕೂಡ ಆಗುವುದಿಲ್ಲ.

ದೃಶ್ಯ ಎರಡು : ತಿಂಗಳ ಮೊದಲ ವಾರ ಮತ್ತು ಕೊನೆಯ ವಾರದಲ್ಲಿ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಟ್ರಾಫಿಕ್ ಪೊಲೀಸರು ನಿಂತಿರುತ್ತಾರೆ. ರಸ್ತೆಯಲ್ಲಿ ದ್ವಿಚಕ್ರ ಚಲಾಯಿಸುವರಲ್ಲಿ 70 ಪ್ರತಿಶತಕ್ಕೂ ಹೆಚ್ಚಿನ ಜನ ತಲೆಗೆ ಹೆಲ್ಮೆಟ್ ಹಾಕುವುದಿಲ್ಲ. ಬಹಳಷ್ಟು ಜನ ಅದನ್ನು ಬೈಕಿನಲ್ಲಿ ತಗಲಾಕಿರುತ್ತಾರೆ. ಪೊಲೀಸರನ್ನು ನೋಡಿದ ತಕ್ಷಣ ಅದನ್ನು ತಲೆಗೆ ಏರಿಸುತ್ತಾರೆ. ಹೆಣ್ಣು, ಗಂಡು ಮತ್ತು ವಯಸ್ಸಿನ ಭೇದವಿಲ್ಲದೆ ಪೊಲೀಸರನ್ನು ಕಂಡ ತಕ್ಷಣ ವಾಹನ ನಿಲ್ಲಿಸಿ, ವಿರುದ್ಧ ದಿಕ್ಕಿನಲ್ಲಿ ಹೋಗುವುದು ಕಂಡಿದ್ದೇನೆ. ನಾವು ಮಾಡಿದ್ದು ತಪ್ಪು ಎನ್ನುವ ಲವಲೇಶ ಭಾವನೆಯೂ ಅವರಲ್ಲಿ ಕಾಣುವುದಿಲ್ಲ. ಬದಲಿಗೆ ಹೇಗಾದರೂ ಪೊಲೀಸರ ಕೈಗೆ ಸಿಕ್ಕಿ ಹಾಕಿಕೊಳ್ಳದೆ ಇದ್ದರೆ ಸಾಕು ಎನ್ನುವ ಆ ಕ್ಷಣದ ಭಾವನೆ ಅವರಿಂದ ಇನ್ನೊಂದು ತಪ್ಪು ಮಾಡಿಸುತ್ತದೆ. ಯಾವ ಅಪರಾಧಿ ಭಾವವೂ ಇಲ್ಲದೆ ವಿರುದ್ಧ ದಿಕ್ಕಿನಲ್ಲಿ ವಾಹನವನ್ನು ಚಲಾಯಿಸುತ್ತಾರೆ. ಪೊಲೀಸರು ಕೂಡ ಕಡಿಮೆಯಿಲ್ಲ. ನಡು ರಸ್ತೆಗೆ ಬಂದು ಸವಾರರನ್ನು ಹಿಡಿಯುತ್ತಾರೆ. ರಸ್ತೆಯ ಅರ್ಧ ಭಾಗವನ್ನು ವಾಹನಗಳು ಆಕ್ರಮಿಸಿಕೊಳ್ಳುವುದರಿಂದ ಅವರು ಟ್ರಾಫಿಕ್ ಜಾಮ್‌ಗೆ ಕೂಡ ಕಾರಣರಾಗುತ್ತಿದ್ದಾರೆ. ಅಂಗೈ ಹುಣ್ಣಿಗೆ ಕನ್ನಡಿ ಯಾಕೆ ಬೇಕು ಅಲ್ವಾ? ಆದರೆ ಅಂಗೈ ಹುಣ್ಣು ಸಮಾಜಕ್ಕೆ ಕಾಣುವುದೇ ಇಲ್ಲ.

ದೃಶ್ಯ ಮೂರು : ವಾಹನವನ್ನು ತೀರಾ ಬಲಭಾಗದಲ್ಲಿ ನಿಧಾನವಾಗಿ ಚಲಾಯಿಸುತ್ತಾ ಮೊಬೈಲಿನಲ್ಲಿ ಮಾತಾಡುವುದು, ಮೊಬೈಲ್ ಸ್ಕ್ರೋಲ್ ಮಾಡುವುದು ಅತಿ ಸಾಮಾನ್ಯ. ಸಿಗ್ನಲ್ ಜಂಪ್ ಮಾಡುವುದು, ಗಾಡಿಯ ಕಿಟಕಿ ಕೆಳಗಿಳಿಸಿ ಹಿಂದೆ ಮುಂದೆ ನೋಡದೆ ಉಗಿಯುವುದು ಕೂಡ ಇವತ್ತಿಗೆ ನಮ್ಮ ಸಮಾಜದಲ್ಲಿ ಸಾಮಾನ್ಯ. ರಸ್ತೆಯಲ್ಲಿ ಕಸ ಎಸೆಯುವುದು ನಮ್ಮ ಜನ್ಮಸಿದ್ಧ ಹಕ್ಕು.

ದೃಶ್ಯ ನಾಲ್ಕು : ಸೈಟು ನೋಂದಣಿ ಮಾಡಿಸಿಕೊಳ್ಳಬೇಕು. ಇವತ್ತಿಗೆ ಸ್ಟ್ಯಾಂಪ್ ಡ್ಯೂಟಿ ಶೇ.7.65 ಆಗಿ ಹೋಗಿದೆ. ಸ್ಟ್ಯಾಂಪ್ ಡ್ಯೂಟಿ ಉಳಿಸಬೇಕಲ್ಲ. ಏನು ಮಾಡುವುದು? ನೂರು ರೂಪಾಯಿ ಮೌಲ್ಯದ ಜಾಗವನ್ನು ಐವತ್ತು ರುಪಾಯಿಗೆ ನೋಂದಣಿ ಮಾಡಿಸಿಕೊಳ್ಳುವುದು. ಉಳಿದ ಐವತ್ತು ರೂಪಾಯಿ ನಗದು ರೂಪದಲ್ಲಿ ನೀಡುವುದು. ಎಷ್ಟು ಸುಲಭ ಅಲ್ವಾ? ಇವತ್ತಿಗೆ ಇದು ಅಲಿಖಿತ ನಿಯಮ. ಈ ರೀತಿ ನಾವು ಮಾಡುವುದಿಲ್ಲ, ದಯಮಾಡಿ ಪೂರ್ಣ ಮೌಲ್ಯಕ್ಕೆ ನೋಂದಣಿ ಮಾಡಿಕೊಡಿ ಎಂದರೂ ಸಾಧ್ಯವಿಲ್ಲ ಎನ್ನುವ ಮಟ್ಟಕ್ಕೆ ಮಾರುಕಟ್ಟೆ ಬಂದು ನಿಂತಿದೆ. ಇನ್ನು ಸರಕಾರಕ್ಕೆ ನೀಡುವ ತೆರಿಗೆಯನ್ನು ತಪ್ಪಿಸಿಕೊಳ್ಳಲು, ಸಾಧ್ಯವಾದಷ್ಟೂ ಕಡಿಮೆ ನೀಡಲು ನಮ್ಮ ಸಭ್ಯ ನಾಗರಿಕರು ಮಾಡುವ ಕಸರತ್ತುಗಳನ್ನು ನಾನು ಇಲ್ಲಿ ವಿವರಿಸಲು ಹೋಗುವುದಿಲ್ಲ.

ದೃಶ್ಯ ಐದು :ಕ್ರಿಕೆಟ್ ಆಟವನ್ನು ನೋಡುತ್ತಾ, ಹೇಗೆ ಬ್ಯಾಟ್ ಮಾಡಬೇಕು, ಹೇಗೆ ಬೌಲಿಂಗ್ ಮಾಡಬೇಕಿತ್ತು, ಹೇಗೆ ಫೀಲ್ಡಿಂಗ್ ಮಾಡಬೇಕು, ಇತ್ಯಾದಿ ರನ್ನಿಂಗ್ ಕಾಮೆಂಟರಿ ನೀಡುತ್ತಾ ಸರ್ವಜ್ಞರಂತೆ ಮಾತಾಡುವ ಜನ ಕೊನೆ ಪಕ್ಷ ಗಲ್ಲಿ ಕ್ರಿಕೆಟ್ ನಲ್ಲಿಯಾದರೂ ಚಾಂಪಿಯನ್ ಎನ್ನಿಸಿಕೊಂಡಿದ್ದರೆ ಹೋಗಲಿ ಬಿಡು ಎನ್ನಬಹುದು. ಜೀವನದಲ್ಲಿ ಕೈಯಲ್ಲಿ ಬ್ಯಾಟ್ ಆಂಡ್ ಬಾಲ್ ಮುಟ್ಟದ ಜನ ಅಂತರ ರಾಷ್ಟ್ರೀಯ ಕ್ರಿಕೆಟ್ ಆಟವನ್ನು ವಿಶ್ಲೇಷಿಸುವುದು ನೋಡಿದಾಗೆಲ್ಲಾ ಮನಸ್ಸಿನಲ್ಲಿ ನಗು ಬರುತ್ತದೆ.

ದೃಶ್ಯ ಆರು : ಬುದ್ಧಿ ಬಂದಾಗಿನಿಂದ ಕೇಳುತ್ತಿರುವ ಮಾತು, ‘ಇದು ಗೊತ್ತೆ, ಇದು ಇಂತಹವರಿಗೆ ಸೇರಿದ್ದು, ಇದು ಅವರ ಜಾಗ, ಇದರಲ್ಲಿ ಅವರ ಬಂಡವಾಳವಿದೆ’. ರಾಜಕಾರಣಿ ಹೆಸರು ಕಾಲಕ್ಕೆ ತಕ್ಕಂತೆ ಬದಲಾಗಿದೆ. ಆದರೆ ಜನರ ಮನಸ್ಥಿತಿ ಮಾತ್ರ ಬದಲಾಗಿಲ್ಲ. ಇವತ್ತಿಗೂ ಇದು ಅವನದು, ಇವನದು, ಇದು ಅವರ ಜಾಯಿಂಟ್ ವೆಂಚರ್ ಇತ್ಯಾದಿ ಹೇಳುವುದು ನಿಲ್ಲಿಸುವುದಿಲ್ಲ. ಗುಂಪಿನಲ್ಲಿ ಎಲ್ಲರೂ ರಾಜಕಾರಣಿಗಳ ಬಗ್ಗೆ, ಅವರು ಅನೈತಿಕವಾಗಿ ಮಾಡಿರುವ ಆಸ್ತಿಯ ಬಗ್ಗೆ ಮಾತಾಡುತ್ತಾರೆ. ಆದರೆ ಯಾರೊಬ್ಬರೂ, ಹೌದು ಸಾಹಿತ್ಯ ಲೋಕಕ್ಕೆ ಸೇರಿದವರು ಕೂಡ, ಈತ ಭ್ರಷ್ಟ ಹೀಗಾಗಿ ನಾನು ಈತನ ಸರಕಾರ ನೀಡುವ ಪುರಸ್ಕಾರ ಸ್ವೀಕರಿಸುವುದಿಲ್ಲ, ಈತನ ಕೈಯಿಂದ ಸ್ವೀಕರಿಸುವುದಿಲ್ಲ ಎನ್ನುವ ಮಾತನ್ನು ಆಡುವುದಿಲ್ಲ. ಪರಮನೀಚ, ಪರಮ ಭ್ರಷ್ಟ ಎಂದು ಯಾವ ರಾಜಕಾರಣಿಯನ್ನು ಹಂಗಿಸಿದ್ದರೋ ಅದೇ ರಾಜಕಾರಣಿಯ ಪಕ್ಕದಲ್ಲಿ ಹೆಮ್ಮೆಯಿಂದ ನಿಂತು ಫೋಟೋ ತೆಗೆಸಿಕೊಳ್ಳುತ್ತಾರೆ. ಊರವರ ಮುಂದೆ ನನಗವನು ಗೊತ್ತು, ದೋಸ್ತು ಎಂದು ಹೇಳಿಕೊಂಡು ತಿರುಗುತ್ತಾರೆ.

ಮೇಲಿನ ಅಷ್ಟೂ ವಿಚಾರಗಳು ಊರು, ಸಮಯಗಳ ಅಂತರವಿಲ್ಲದೆ, ವಯಸ್ಸು ಮತ್ತು ಲಿಂಗಭೇದವಿಲ್ಲದೆ ಘಟಿಸುತ್ತಲೆ ಇರುತ್ತದೆ. ಇಷ್ಟೂ ವಿಚಾರಗಳಲ್ಲಿ ನಾವು ಭಾಗಿಯಾಗಿದ್ದಾಗ ನಮಗದು ತಪ್ಪು ಎಂದು ಕೂಡ ಅನ್ನಿಸುವುದಿಲ್ಲ. ಆದರೆ ನಾವೆಲ್ಲರೂ ಸಮಾಜಕ್ಕೆ ಬುದ್ಧಿವಾದ ಹೇಳುವ ದರ್ದಿಗೆ ಮಾತ್ರ ಬಹುಬೇಗ ಬಿದ್ದುಬಿಡುತ್ತೇವೆ. ಸಮಾಜದ ವಿಚಾರದಲ್ಲಿ ಇದು ನಿಷಿದ್ಧವಾಗಿಬಿಡುತ್ತದೆ. ಅಂದರೆ ಸಮಾಜದ ಬೇರೊಬ್ಬರು ಇದನ್ನು ಮಾಡಿದ್ದಾರೆ ಎನ್ನುವ ಗಾಳಿಸುದ್ದಿ ಸಿಕ್ಕರೂ ಸಾಕು ಕಣ್ರೀ, ಮಾಡಿದ್ದರೋ ಇಲ್ಲವೋ ಎನ್ನುವುದನ್ನು ತಿಳಿದುಕೊಳ್ಳದೆ ಜಗತ್ತಿನ ಎಲ್ಲಾ ನೈತಿಕತೆಗೆ ಆತನನ್ನು ಕಟ್ಟಿ ಮುಳುಗಿಸಿಬಿಡುತ್ತಾರೆ. ಇದರರ್ಥ ಎಲ್ಲರೂ ಅನೈತಿಕತೆಯ ಹಾದಿ ಹಿಡಿದಿದ್ದಾರೆ ಎಂದಲ್ಲ. ಅಥವಾ ಮೆಜಾರಿಟಿ ಮಾಡಿದರೆ ಅದು ಸರಿ ಎನ್ನುವುದೂ ಅಲ್ಲ. ನನ್ನ ಈ ಸಾಲುಗಳ ಉದ್ದೇಶ ಸ್ಪಷ್ಟ. ಜನರ ಮುಖಕ್ಕೆ ಕನ್ನಡಿ ಹಿಡಿಯುವುದು ಅಷ್ಟೇ. ನಾವೇನೂ ಮಹಾಸುಭಗರು ಎನ್ನುವ ಟೊಳ್ಳುತನವಿದೆಯಲ್ಲ ಅದಕ್ಕಿಂತ ದೊಡ್ಡ ಆತ್ಮವಂಚನೆ ಬೇರೇನೂ ಇಲ್ಲ. ನಾವು ಮಾಡಿದ ತಪ್ಪು ಸಣ್ಣದು ಎನ್ನುವ ಭಾವನೆಯೇ ತಪ್ಪು. ಹೆಲ್ಮೆಟ್ ಹಾಕದಿರುವುದು, ತೆರಿಗೆ ವಂಚನೆ, ಐದು ರೂಪಾಯಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡದೆ ಹೂಡಿಕೆ ತಜ್ಞರ ತರಹ ಮುಖವಾಡ ಹಾಕುವುದು, ಪಟ್ಟಿ ದೊಡ್ಡದು. ರಾಜಕಾರಣಿಗಳನ್ನು ಅಥವಾ ಇನ್ಯಾರನ್ನೋ ಕಳ್ಳರು, ಸುಳ್ಳರು, ನೈತಿಕತೆ ಇಲ್ಲದವರು ಎನ್ನುವ ಪಟ್ಟದಲ್ಲಿ ಸುಲಭವಾಗಿ ಕೂರಿಸುವ ಸಮಾಜ, ಜನ ಸ್ವಲ್ಪ ಆತ್ಮಾವಲೋಕನ ಕೂಡ ಮಾಡಿಕೊಳ್ಳಲಿ ಎನ್ನುವುದು ಈ ಬರಹದ ಉದ್ದೇಶ.

ದೊಡ್ಡ ಮಟ್ಟದಲ್ಲಿ ತೆರಿಗೆ ವಂಚನೆ ಮಾಡಿದರೆ ಮಾತ್ರ ಅವರು ಕೆಟ್ಟವರು, ದೊಡ್ಡ ಮಟ್ಟದಲ್ಲಿ ಲೂಟಿ ಮಾಡಿದವರು ಮಾತ್ರ ಕಳ್ಳರು ಎನ್ನುವ ನಮ್ಮ ಜನರ ಭಾವನೆ ಬದಲಾಗಬೇಕಿದೆ. ಇಲ್ಲಿ ನಾವೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ವಂಚನೆಯಲ್ಲಿ ಭಾಗಿಯಾಗಿದ್ದೇವೆ. ಆದರೆ ಎಂದಿಗೂ ನಮ್ಮ ಕಡೆಗೆ ನಾವು ಬೆಟ್ಟು ಮಾಡಿ ತೋರಿಸಿಕೊಳ್ಳುವುದಿಲ್ಲ. ಬಲಿಷ್ಠ ವ್ಯಕ್ತಿಗೆ ಸುಳ್ಳು ಹೇಳಿದರೆ ಆತನಿಗೆ ಕೋಪ ಬರುತ್ತದೆ. ಅದೇ ಸಮಾಜದಲ್ಲಿನ ಜನರಿಗೆ ನಿಜ ಹೇಳಿ ನೋಡಿ ! ಅವರಿಗೆ ಕೋಪ ಬರುತ್ತದೆ. ಅವರ ಮುಖಕ್ಕೆ ಮಾತ್ರ ಕನ್ನಡಿಯನ್ನು ಹಿಡಿಯಲು ಹೋಗಬಾರದು. ನನ್ನ ಆಪ್ತ ಸ್ನೇಹಿತನೊಬ್ಬನಿದ್ದಾನೆ. ಆದರೆ ಆತನ ಒಂದು ಗುಣವನ್ನು ನಾನು ಕಂಡರೂ ಕಾಣದಂತೆ ಇರುವುದರಿಂದ ನಮ್ಮ ಸ್ನೇಹ ಉಳಿದುಕೊಂಡಿದೆ. ನಾನು ಏನೇ ಕೊಂಡುಕೊಂಡರೂ ಎಷ್ಟು ಕೊಟ್ಟೆ ಎಂದು ಕೇಳುತ್ತಾನೆ. ಇಷ್ಟು ಎಂದ ತಕ್ಷಣ, ನೀನು ಜಾಸ್ತಿ ಕೊಟ್ಟಿದ್ದೀಯ, ಮಾರುಕಟ್ಟೆಯಲ್ಲಿ ಇದಕ್ಕೆ ಇಷ್ಟು ಬೆಲೆಯಿಲ್ಲ ಎಂದು, ತಾನು ಅದೇ ತರಹದ ವಸ್ತುವಿಗೆ ಎಷ್ಟು ಕಡಿಮೆ ಕೊಟ್ಟೆ ಎಂದು ಹೇಳಿಕೊಂಡು ಸಮಾಧಾನ ಪಡುವುದು ಆ ಗುಣ. ಅವನು ಮಾಡಿದ್ದೆಲ್ಲಾ ಬೆಸ್ಟ್! ಆತನ ಸುತ್ತಮುತ್ತ ಇರುವವರು ಟೋಪಿ ಹಾಕಿಸ್ಕೊಂಡಿದ್ದಾರೆ ಎನ್ನುವುದು ಅವನ ಭಾವನೆ. ನಾವು ಮಾಡಿದ ತಪ್ಪು ಸಣ್ಣದು, ಬೇರೆಯವರು ಮಾಡಿದ್ದು ದೊಡ್ಡದು. ಅವರು ಮಾಡಬಾರದು, ಅದು ಅಪರಾಧ ! ನಾನು ಮಾಡಿದರೆ ಅದು ಓಕೆ, ಚಲ್ತಾ ಹೈ!

ಒಟ್ಟಾರೆ ಸಮಾಜದ ಜನರನ್ನು ಮೆಚ್ಚಿಸಲು ಜನಾರ್ದನನಿಂದಲೇ ಸಾಧ್ಯವಾಗಲಿಲ್ಲ ಎಂದಮೇಲೆ ಸಾಮಾನ್ಯ ಮನುಷ್ಯರ ಕೈಲಿ ಹೇಗೆ ಸಾಧ್ಯ? ಇದನ್ನು ಕಂಡು ನಮ್ಮ ಕೆ ಎಸ್ ನರಸಿಂಹಸ್ವಾಮಿಯವರು ಒಂದೊಳ್ಳೆ ಕವನ ಬರೆದಿದ್ದಾರೆ. ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ! ಎನ್ನುತ್ತಾರೆ.

ಚಳಿಗಾಲ ಬಂದಾಗ ‘ಎಷ್ಟು ಚಳಿ?’ ಎಂದರು
ಬಂತಲ್ಲ ಬೇಸಿಗೆ, ’ಕೆಟ್ಟಬಿಸಿಲ್’ ಎಂದರು
ಮಳೆ ಬಿತ್ತೊ, ‘ಬಿಡದಲ್ಲ ಶನಿ!’ ಎಂಬ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!
ಚಿಗುರ ಚಿನ್ನದ ನಡುವೆ ಹೂವ ಬಯಸುವರು
ಹೂಗಳ ಕಾಲದಲ್ಲಿ ಹಣ್ಣ ಹೊಗಳುವರು;
‘ಹಣ್ಣಿನ ಗಾತ್ರ ಪೀಚು’ ಎಂದಿವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!
ನಿಂತವರ ಕೇಳುವರು: ನೀನೇಕೆ ನಿಂತೆ ?
ಮಲಗಿದರೆ ಗೊಣಗುವರು: ನಿನಗಿಲ್ಲ ಚಿಂತೆ!
ಓಡಿದರೆ ಬೆನ್ನ ಹಿಂದೆಯೆ ಇವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!
ಓದಿದರೆ ಹೇಳುವರು: ಮತ್ತೊಮ್ಮೆ ಬರಿಯೊ!
ಬರೆದಿಡಲು ಬೆದಕುವರು: ಬರವಣಿಗೆ ಸರಿಯೊ?
ಇವರ ಬಯಕೆಗಳೇನೊ! ಇವರದೇ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!

ನಾನು ಭಾರತಕ್ಕೆ ವಾಪಸ್ಸು ಮರಳಿ ಬಂದ ಪ್ರಥಮ ದಿನಗಳಲ್ಲಿ ನನಗೆ ಭಾರತದ ರಸ್ತೆಗಳಲ್ಲಿರುವ ಕಸ, ಹಾರನ್, ಇಲ್ಲಿನ ಜನಜಂಗುಳಿ ಬಿಟ್ಟು ಬೇರೇನೂ ಕಾಣುತ್ತಿರಲಿಲ್ಲ. ಇಲ್ಲಿ ಬದುಕುವುದು ಹೇಗೆ ? ಸಮಾಜ ಗಬ್ಬೆದ್ದು ಹೋಗಿದೆ ಎನ್ನುವ ಮನಸ್ಥಿತಿಯಲ್ಲಿದ್ದೆ. ನಂಬಿಕೆ ಬದುಕಿಗೆ ಬಹಳ ಮುಖ್ಯ. ದೃಷ್ಟಿಯಂತೆ ಸೃಷ್ಟಿ ಎನ್ನುವುದು ಅರಿವಾಗುತ್ತಾ ಹೋಯ್ತು. ಇಲ್ಲಿನ ಬದುಕು ಕೂಡ ದಶಕ ಮುಗಿಸಿದೆ. ಒಂದು ಸಣ್ಣ ಕಥೆಯೊಂದಿಗೆ ಇವತ್ತಿನ ಬರಹಕ್ಕೆ ವಿರಾಮ ಹಾಡುವೆ. ಹತ್ತಾರು ಇಲಿಗಳನ್ನು ವಿಜ್ಞಾನಿಗಳು ನೀರಿನಲ್ಲಿ ಹಾಕುತ್ತಾರೆ. ಅವುಗಳು ಇಪ್ಪತ್ತು ನಿಮಿಷದಲ್ಲಿ ಈಜಲಾಗದೆ ಮುಳುಗಿ ಸಾಯುತ್ತವೆ. ಮತ್ತೊಮ್ಮೆ ಹತ್ತಾರು ಇಲಿಗಳನ್ನು ನೀರಿಗೆ ಹಾಕುತ್ತಾರೆ. ಈ ಬಾರಿ ಕೂಡ ಅವುಗಳು ಇಪ್ಪತ್ತು ನಿಮಿಷದಲ್ಲಿ ಸಾಯುವ ಹಂತಕ್ಕೆ ಹೋಗುತ್ತವೆ, ಆದರೆ ಮುಳುಗುವ ಮುನ್ನ ರಕ್ಷಣೆ ಮಾಡುತ್ತಾರೆ. ಒಂದೆರಡು ದಿನ ಅವುಗಳನ್ನು ಕಾಪಾಡಿ ಮತ್ತೆ ನೀರಿಗೆ ಹಾಕುತ್ತಾರೆ. ಈ ಬಾರಿ ವಿಜ್ಞಾನಿಗಳಿಗೆ ಆಶ್ಚರ್ಯ ಕಾದಿತ್ತು. ಇಪ್ಪತ್ತು ನಿಮಿಷವಾದರೂ ಅವು ಮುಳುಗಲಿಲ್ಲ, ಬರೋಬ್ಬರಿ ಇಪ್ಪತ್ತು ಗಂಟೆ ಅವು ಸಾಯದೆ, ಮುಳುಗದೆ ಈಜಾಡುತ್ತಲೆ ಇದ್ದವಂತೆ ! ಇದಕ್ಕೇನು ಕಾರಣ ಎಂದು ವಿಜ್ಞಾನಿಗಳು ಗಮನಿಸಿದಾಗ ‘ನಂಬಿಕೆ’ ಎನ್ನುವುದು ಗೊತ್ತಾಯಿತಂತೆ ! ಯಾರೋ ಬರುತ್ತಾರೆ ರಕ್ಷಣೆ ಮಾಡುತ್ತಾರೆ ಎನ್ನುವ ನಂಬಿಕೆ, ಅನುಭವ ಅವುಗಳನ್ನು ಇಪ್ಪತ್ತು ಗಂಟೆ ಈಜು ಹೊಡೆಸಿತ್ತು ! ಇಲಿ ಇಪ್ಪತ್ತು ಗಂಟೆ ನಂಬಿಕೆಯಲ್ಲಿ ಬದುಕಬಲ್ಲದು ಎಂದರೆ ನಾವು ಮನುಷ್ಯರು, ಒಂದೊಳ್ಳೆ ಸಮಾಜದ ನಿರ್ಮಾಣ ನಮ್ಮೆಲ್ಲರ ಹೊಣೆ. ಇವತ್ತಲ್ಲ ನಾಳೆ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ನನ್ನದು. ಆದರೆ ನೈತಿಕತೆ ಎನ್ನುವುದು ಒನ್ ವೇ ಟ್ರಾಫಿಕ್ ಆಗಬಾರದು ಅಷ್ಟೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಗಾಜಿನ ಮನೆಯಿಂದ ಕಲ್ಲು

ಗೃಹಬಳಕೆ ಸಿಲೆಂಡರ್ ದರ ಏರಿಕೆ ಖಂಡಿಸಿ ಕೇಂದ್ರ ಸರಕಾರದ ವಿರುದ್ಧ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿದ್ದು ಯುಪಿಎ ಅವಧಿಯ ಹಣದುಬ್ಬರದ ವಿರುದ್ಧ ಊಳಿಡುತ್ತಿದ್ದ ಬಿಜೆಪಿಯವರು ಈಗ ಏಕೆ ಪ್ರತಿಭಟಿಸುತ್ತಿಲ್ಲ ಎಂದು ಟೀಕಿಸಿದೆ. ಕಾಂಗ್ರೆಸ್ ಅಧ್ಯಕ್ಷರಾದ ಖರ್ಗೆಯವರೂ ಸಹ ಬಿಜೆಪಿಯವರು ಏಕೆ ಮಾತನಾಡಿ ಪ್ರತಿಭಟಿಸುತ್ತಿಲ್ಲ ಎಂದಿದ್ದಾರೆ. ಇದೇ ಕಾಂಗ್ರೆಸ್, ಕರ್ನಾಟಕದಲ್ಲಿ ಅವರದೇ ಸರಕಾರ ಬಸ್, ಇಂಧನ, ವಿದ್ಯುತ್, ನೀರು, ನಾನಾ ದಸ್ತಾವೇಜು ಶುಲ್ಕ, ಮುದ್ರಾಂಕ ಶುಲ್ಕ, ಮೆಟ್ರೋ ಪ್ರಯಾಣ ಮುಂತಾದ ಅನೇಕ ದರಗಳನ್ನು ಏರಿಸಿದಾಗ ಏಕೆ ಪ್ರತಿಭಟಿಸುತ್ತಿಲ್ಲ ಎಂದು ಏಕೆ ಕೇಳುತ್ತಿಲ್ಲ? ಗಾಜಿನ ಮನೆಯಲ್ಲಿ ನಿಂತು ಕಲ್ಲು ಹೊಡೆಯುವುದೇಕೆ? ಯಾವುದೇ ಪಕ್ಷವಾದರೂ ಸರಿ ತಾನು ಮಾಡಿದ್ದನ್ನು ಸಮರ್ಥನೆ ಮಾಡಿಕೊಳ್ಳುತ್ತದೆ ಮತ್ತು ಇತರ ಪಕ್ಷಗಳು ಮಾಡಿದ್ದಕ್ಕೆ ವಿರೋಧ ವ್ಯಕ್ತಪಡಿಸುತ್ತದೆ. ಮಾತನಾಡುವ ಮುನ್ನ ಅದರ ಕುರಿತು ಅರಿವಿರಬೇಕಿತ್ತು.

- ಪತ್ತಂಗಿ ಎಸ್. ಮುರಳಿ

ಕೆಂಪೇಗೌಡ ಜಯಂತಿ

ಇದೇ ಜೂನ್ 27ರಂದು, ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ರಾಜ್ಯ ಸರಕಾರದ ವತಿಯಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಆಚರಿಸುತ್ತದೆ. ಆದರೆ ಒಂದೊಂದು ಸಮುದಾಯದ ಮಹನೀಯರ ಜಯಂತಿಗೆ ಇರುವಂತೆ, ಕೆಂಪೇಗೌಡ ಜಯಂತಿಗೆ ಕರ್ನಾಟಕ ಸರಕಾರ ಇಂದಿಗೂ ರಜಾ ದಿನ ಘೋಷಣೆ ಮಾಡಿಲ್ಲ. ರಾಜ್ಯದ ಜನಸಂಖ್ಯೆಯಲ್ಲಿ ಪ್ರಬಲ ಒಕ್ಕಲಿಗ ಸಮುದಾಯ ಮೂರನೇ ಸ್ಥಾನದಲ್ಲಿದೆ. ಒಕ್ಕಲಿಗ ಸಮುದಾಯದವರು ಪ್ರತಿ ವರ್ಷವೂ ಕೆಂಪೇಗೌಡರ ಜಯಂತಿಯಂದು ಈ ಬಗ್ಗೆ ಸರಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದಾರೆ. ಆದರೆ ಸರಕಾರ ಮಾತ್ರ ಮುಂದಿನ ವರ್ಷದಿಂದ ಕ್ರಮ ಕೈಗೊಳ್ಳುತ್ತೇವೆ ಎಂಬ ಆಶ್ವಾಸನೆ ಕೊಡುತ್ತಲೇ ಬಂದಿದೆ. ಈ ಬಾರಿ ರಾಜ್ಯದಲ್ಲಿ ಒಕ್ಕಲಿಗ ಸಮುದಾಯಕ್ಕೆ ಸೇರಿದ ಡಿಕೆಶಿ ಅವರು ಮುಖ್ಯಮಂತ್ರಿ ಆಗಿರುವುದರಿಂದ ಈ ವರ್ಷದಿಂದಲೇ ಜಾರಿಗೆ ಬರುವಂತೆ ಕೆಂಪೇಗೌಡ ಜಯಂತಿಯನ್ನು ರಾಜ್ಯ ಸರಕಾರ ರಜಾ ದಿನವನ್ನಾಗಿ ಘೋಷಣೆ ಮಾಡಲಿ.

- ಬೂಕನಕೆರೆ ವಿಜೇಂದ್ರ, ಮೈಸೂರು

ಸಿಎಂ ಮೆಟ್ರೋ ಪ್ರಯಾಣ

ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಕನಕಪುರ ಭೇಟಿಯ ಸಲುವಾಗಿ ಮೆಟ್ರೋ ಪ್ರಯಾಣದ ಮೂಲಕ ಸಾಗುವಾಗ ಸಹಪ್ರಯಾಣಿಕ ಸಾರ್ವಜನಿಕರೊಂದಿಗೆ ಅತ್ಯಂತ ಸ್ನೇಹಪೂರ್ವಕವಾಗಿ ವರ್ತಿಸುವ ಮೂಲಕ ತಾವು ಜನಸಾಮಾನ್ಯರ ಮಧ್ಯೆ ಸಾಮಾನ್ಯ ವ್ಯಕ್ತಿಯಂತೆಯೇ ಇರುವುದನ್ನು ಬಿಂಬಿಸಲು ಪ್ರಯತ್ನಿಸಿದ್ದಾರೆ. ಇದು ಕೇವಲ ಜನಪ್ರಿಯತೆ ಗಳಿಸುವ ನಾಟಕೀಯ ವರ್ತನೆಯಾಗದಿರಲಿ. ಜನರಿಂದ ಜನರಿಗಾಗಿ ಜನರೇ ನಡೆಸುವ ಸರಕಾರ ಎಂಬ ಪ್ರಜಾಪ್ರಭುತ್ವ ತತ್ವದ ಆಧಾರದ ಪ್ರಕಾರ, ಸಿಎಂ ಹುದ್ದೆ ಯಾರಿಗೂ ಯಾವತ್ತಿಗೂ ಶಾಶ್ವತವಲ್ಲ ಎಂಬ ಅರಿವು ಹೊಂದಿರಲಿ. ಅಂತೆಯೇ ಜನಸಾಮಾನ್ಯರ ಹಿತ ಕಾಯುವ ಮೂಲಕ ಸಿಎಂ ಹುದ್ದೆಯನ್ನು ಪ್ರಾಮಾಣಿಕತೆಯಿಂದ ನಿರ್ವಹಿಸುವ ಬದ್ಧತೆ ತೋರಿಸಲಿ.

- ಎಸ್. ಎನ್ ರಮೇಶ್, ಮಂಡ್ಯ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅರಸು ಮತ್ತು ಸಿದ್ದರಾಮಯ್ಯ: ಒಂದು ಹೋಲಿಕೆ

ರಾಜತಂತ್ರ

ಕೆ. ವಿ. ಚಂದ್ರಮೌಳಿ
vveditoped@gmail.com

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅನೇಕ ಮುಖ್ಯಮಂತ್ರಿಗಳು ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಕೆಲವರು ಆಡಳಿತದ ದಕ್ಷತೆ ಯಿಂದ, ಕೆಲವರು ಅಭಿವೃದ್ಧಿ ಯೋಜನೆಗಳಿಂದ, ಇನ್ನೂ ಕೆಲವರು ದೂರದೃಷ್ಟಿ ಮತ್ತು ಸಂಸ್ಥಾ ನಿರ್ಮಾಣ (institution building) ಸಾಮರ್ಥ್ಯದಿಂದ ನೆನಪಾ ಗುತ್ತಾರೆ. ಆದರೆ ಯಾವುದೇ ನಾಯಕನ ಅಂತಿಮ ಮೌಲ್ಯ ಮಾಪನವು ಅವರು ಗೆದ್ದ ಚುನಾವಣೆಯಿಂದಲ್ಲ; ಸಮಾಜ ಮತ್ತು ಆರ್ಥಿಕತೆಯ ಮೇಲೆ ಬೀರಿದ ಶಾಶ್ವತ ಪರಿಣಾಮದಿಂದ ನಿರ್ಧಾರವಾಗುತ್ತದೆ.

ಸಮಾಜವಾದಿ ಹಿನ್ನೆಲೆಯಿಂದ ರಾಜಕೀಯಕ್ಕೆ ಬಂದ ಸಿದ್ದರಾಮಯ್ಯ, ದೇವರಾಜ ಅರಸು ಅವರ ಅಹಿಂದ ರಾಜಕಾರಣದ ವಾರಸುದಾರರೆಂಬ ಭಾವಚಿತ್ರದೊಂದಿಗೆ ಬೆಳೆದರು. ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಬಂದು ಪರ್ಯಾಯ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದ ಅವರು, 2013ರಲ್ಲಿ ಪೂರ್ಣ ಐದು ವರ್ಷಗಳ ಅವಧಿ ಪೂರೈಸಿದ ಅಪರೂಪದ ಮುಖ್ಯಮಂತ್ರಿಗಳಲ್ಲಿ ಒಬ್ಬರಾದರು. ನಂತರ ಮತ್ತೊಮ್ಮೆ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರಿದ ಅವರು, ಕರ್ನಾಟಕದ ದೀರ್ಘಾವಧಿಯ ಮುಖ್ಯಮಂತ್ರಿಗಳ ಸಾಲಿನಲ್ಲಿ ಸ್ಥಾನ ಪಡೆದರು.

ಇಷ್ಟು ದೀರ್ಘ ರಾಜಕೀಯ ಪಯಣದ ನಂತರವೂ ಒಂದು ಪ್ರಶ್ನೆ ಉಳಿದಿದೆ: ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಇತಿಹಾಸವನ್ನು ಬದಲಿಸಿದ ಅವರ ಶಾಶ್ವತ ಕೊಡುಗೆ ಯಾವುದು?

ಎರಡು ವಿಭಿನ್ನ ಮಾದರಿಗಳು

ಅಭಿವೃದ್ಧಿ ಅರ್ಥಶಾಸ್ತ್ರದ ದೃಷ್ಟಿಯಿಂದ ನೋಡಿದರೆ, ದೇವರಾಜ ಅರಸು ಮತ್ತು ಸಿದ್ದರಾಮಯ್ಯ ಅವರ ಆಡಳಿತ ಮಾದರಿಗಳ ನಡುವಿನ ವ್ಯತ್ಯಾಸ ಸ್ಪಷ್ಟವಾಗಿದೆ. ದೇವರಾಜ ಅರಸು ಅವರ ರಾಜಕಾರಣವು ರಚನಾತ್ಮಕ ಬದಲಾವಣೆ ಮತ್ತು ಆಸ್ತಿ ಮರುಹಂಚಿಕೆ ಮೇಲೆ ಕೇಂದ್ರೀಕೃತವಾಗಿತ್ತು. ಭೂ ಸುಧಾರಣೆಗಳು, ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳ ವಿಸ್ತರಣೆ, ಸಾಮಾಜಿಕ ಅನ್ಯಾಯದ ವಿರುದ್ಧದ ಕ್ರಮಗಳು- ಇವೆಲ್ಲವೂ ಶಾಶ್ವತ ಸಬಲೀಕರಣ ಮತ್ತು ಸಾಮಾಜಿಕ ಚಲನಶೀಲತೆ ಸೃಷ್ಟಿಸುವ ಪ್ರಯತ್ನಗಳಾಗಿದ್ದವು.

ವಿಮರ್ಶಕರ ಪ್ರಕಾರ ಸಿದ್ದರಾಮಯ್ಯ ಅವರ ಆಡಳಿತವು ಕಲ್ಯಾಣ ರಾಜ್ಯದ (welfare state) ವಿಸ್ತರಣೆಗೆ ಹೆಚ್ಚಿನ ಒತ್ತು ನೀಡಿತು. ಅನ್ನಭಾಗ್ಯ, ಗೃಹಲಕ್ಷ್ಮಿ, ಶಕ್ತಿ, ಯುವನಿಧಿ ಮುಂತಾದ ಯೋಜನೆಗಳು ಲಕ್ಷಾಂತರ ಕುಟುಂಬಗಳಿಗೆ ಆದಾಯ ಭದ್ರತೆ ಮತ್ತು ಸಾಮಾಜಿಕ ರಕ್ಷಣೆಯನ್ನು ಒದಗಿಸಿವೆ. ಆದರೆ ಅವುಗಳ ಕೇಂದ್ರಬಿಂದು ಉತ್ಪಾದಕ ಆಸ್ತಿ ಸೃಷ್ಟಿಗಿಂತ ಉಪಭೋಗಕ್ಕೆ ಬೆಂಬಲ ನೀಡುವುದಾಗಿತ್ತು ಎಂಬ ಟೀಕೆ ಕೇಳಿಬರುತ್ತದೆ. ಈ ವ್ಯತ್ಯಾಸವನ್ನು ಒಂದು ಸಾಲಿನಲ್ಲಿ ಹೇಳುವುದಾದರೆ: ಅರಸು ಭೂಮಿಯ ಹಕ್ಕು ಕೊಟ್ಟರು, ಸಂಕೋಲೆ ಮುರಿದರು; ಸಿದ್ದರಾಮಯ್ಯ ನೆರವು ಕೊಟ್ಟರು, ನೋವು ತಗ್ಗಿಸಿದರು.

ಭಾಗ್ಯ ಮತ್ತು ಗ್ಯಾರಂಟಿ ರಾಜಕಾರಣ

ಸಿದ್ದರಾಮಯ್ಯ ಆಡಳಿತದ ಪ್ರಮುಖ ಗುರುತಾಗಿ ಭಾಗ್ಯ ಮತ್ತು ಗ್ಯಾರಂಟಿ ಯೋಜನೆಗಳು ಹೊರಹೊಮ್ಮಿವೆ. ಈ ಯೋಜನೆಗಳು ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ತಕ್ಷಣದ ನೆರವು ಒದಗಿಸಿ ರಾಜಕೀಯವಾಗಿಯೂ ಜನಪ್ರಿಯತೆ ಪಡೆದಿವೆ.ಆದರೆ ವಿಮರ್ಶಕರ ಪ್ರಶ್ನೆ ಬೇರೆ. ಈ ಯೋಜನೆಗಳು ಜನರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸಿದವೆಯೇ? ಅಥವಾ ಸರಕಾರದ ನೆರವಿನ ಮೇಲೆ ಹೆಚ್ಚು ಅವಲಂಬಿತರನ್ನಾಗಿಸಿವೆಯೇ? ಉದ್ಯೋಗ ಸೃಷ್ಟಿ, ಕೌಶಲ್ಯಾಭಿವೃದ್ಧಿ, ಉತ್ಪಾದಕತೆಯ ವೃದ್ಧಿ ಮತ್ತು ಉದ್ಯಮಶೀಲತೆ ಮೂಲಕ ಅವಕಾಶಗಳನ್ನು ನಿರ್ಮಿಸುವ ಬದಲು ನೇರ ನೆರವಿನ ರಾಜಕಾರಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು.

ವಿಮರ್ಶಕರ ಅಭಿಪ್ರಾಯದಲ್ಲಿ, ಈ ಮಾದರಿಗೆ ರಾಜಕೀಯ ಆಯಾಮವೂ ಇದೆ. ಕೈಗಾರಿಕಾ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಯ ಫಲಿತಾಂಶಗಳು ದೀರ್ಘಾವಧಿಯಲ್ಲಿ ಗೋಚರಿಸುತ್ತವೆ; ಆದರೆ ನೇರ ಸೌಲಭ್ಯಗಳ ಲಾಭ ತಕ್ಷಣ ಮತದಾರರಿಗೆ ತಲುಪುತ್ತದೆ. ಹೀಗಾಗಿ ಗ್ಯಾರಂಟಿ ಯೋಜನೆಗಳು ಸಾಮಾಜಿಕ ಭದ್ರತೆಯ ಜೊತೆಗೆ ಪರಿಣಾ ಮಕಾರಿ ಚುನಾವಣಾ ತಂತ್ರವಾಗಿಯೂ ಕಾರ್ಯ ನಿರ್ವಹಿ ಸಿದವು ಎಂಬ ವಾದ ಕೇಳಿಬರುತ್ತದೆ. ಈ ಹಿನ್ನೆಲೆಯಲ್ಲಿ ವಿಮರ್ಶಕರು ಕೇಳುವ ಪ್ರಶ್ನೆ: ಗ್ಯಾರಂಟಿಗಳು ಇಂದಿನ ನೋವನ್ನು ತಗ್ಗಿಸಬಹುದು; ಆದರೆ ನಾಳೆಯ ಸಮೃದ್ಧಿಯನ್ನು ಕಟ್ಟಿಕೊಡಬಹುದೇ?

ಸಿದ್ದರಾಮಯ್ಯ 2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾದಾಗ ಕರ್ನಾಟಕದ ಸಾರ್ವಜನಿಕ ಸಾಲವು ಸುಮಾರು ₹2.2 ಲಕ್ಷ ಕೋಟಿ ಮಟ್ಟದಲ್ಲಿತ್ತು. 2025-26ರ ವೇಳೆಗೆ ರಾಜ್ಯದ ಒಟ್ಟು ಬಾಧ್ಯತೆಗಳು ₹7.6 ಲಕ್ಷ ಕೋಟಿಯಿಂದ ₹8.2 ಲಕ್ಷ ಕೋಟಿ ನಡುವಿನ ಮಟ್ಟಕ್ಕೆ ಏರಿವೆ. ಈ ಹಿನ್ನೆಲೆಯಲ್ಲಿ, ಸುಮಾರು ₹5 ಲಕ್ಷ ಕೋಟಿಗೂ ಅಧಿಕ ಹೆಚ್ಚುವರಿ ಸಾಲದ ಪ್ರತಿಫಲವಾಗಿ ಕರ್ನಾಟಕಕ್ಕೆ ಯಾವ ಶಾಶ್ವತ ಆರ್ಥಿಕ ಆಸ್ತಿಗಳು ನಿರ್ಮಾಣವಾದವು?

ಅಭಿವೃದ್ಧಿ ಅರ್ಥಶಾಸ್ತ್ರದ ದೃಷ್ಟಿಯಿಂದ, ಆ ಸಾಲದ ಗಣನೀಯ ಭಾಗವು ಉತ್ಪಾದಕ ಆಸ್ತಿಗಳ ಸೃಷ್ಟಿಗಿಂತ ಕಲ್ಯಾಣ ಯೋಜನೆಗಳು ಮತ್ತು ಆದಾಯ ವೆಚ್ಚಗಳಿಗೆ ಹೆಚ್ಚು ಬಳಕೆಯಾಗಿದ್ದರೆ, ಅದನ್ನು ಅತ್ಯುತ್ತಮ ಆರ್ಥಿಕ ತಂತ್ರವೆಂದು ಹೇಳುವುದು ಕಷ್ಟ ಎಂದು ವಿಮರ್ಶಕರು ವಾದಿಸುತ್ತಾರೆ. ಅವರ ಅಭಿಪ್ರಾಯದಲ್ಲಿ, ಇಂತಹ ಭಾರೀ ಸಾಲದ ಫಲವಾಗಿ ಈ ಮುಂದಿನ ರೀತಿಯ ಶಾಶ್ವತ ಆಸ್ತಿಗಳು ಮತ್ತು ಪರಿವರ್ತನಾತ್ಮಕ ಯೋಜನೆಗಳು ಸ್ಪಷ್ಟವಾಗಿ ಗೋಚರಿಸ ಬೇಕಾಗಿತ್ತು: ಪ್ರಮುಖ ಕೈಗಾರಿಕಾ ಕಾರಿಡಾರ್‌ಗಳು, ಜಾಗತಿಕ ಮಟ್ಟದ ಉತ್ಪಾದನಾ ವಲಯಗಳು, ಹೊಸ ಉದ್ಯೋಗ ನಗರಗಳು, ವಿಶ್ವಮಟ್ಟದ ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ನೀರಾವರಿ ಕ್ರಾಂತಿಗೆ ಕಾರಣವಾದ ಬೃಹತ್ ಯೋಜನೆಗಳು.

ವಿಮರ್ಶಕರ ಪ್ರಕಾರ, ಇವು ಸಿದ್ದರಾಮಯ್ಯ ಆಡಳಿತದ ವಿಶಿಷ್ಟ ಸಾಧನೆಯಾಗಿ ರಾಷ್ಟ್ರೀಯ ಮಟ್ಟದಲ್ಲಿ ಸ್ಥಾಪಿತವಾಗಿಲ್ಲ. ಸಾಲದ ದೊಡ್ಡ ಭಾಗವು ಕಲ್ಯಾಣ ಯೋಜನೆಗಳು, ಅನುದಾನಗಳು ಮತ್ತು ಆದಾಯ ವೆಚ್ಚಗಳಿಗೆ ತೆರಳಿರುವುದರಿಂದ ಅದರ ಫಲಿತಾಂಶ ದೀರ್ಘಾವಧಿಯ ಆರ್ಥಿಕ ಪರಿವರ್ತನೆಯಾಗಿ ಕಾಣಿಸಿಕೊಳ್ಳುವ ಬದಲು ತಾತ್ಕಾಲಿಕ ಉಪಶಮನದ ಮಟ್ಟದಲ್ಲೇ ಉಳಿದಿದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಬೆಂಬಲಿಗರ ಪ್ರಕಾರ ಈ ವೆಚ್ಚಗಳು ಬಡ ಕುಟುಂಬಗಳಿಗೆ ಸಾಮಾಜಿಕ ಭದ್ರತೆ, ಖರೀದಿ ಸಾಮರ್ಥ್ಯ ಮತ್ತು ಆರ್ಥಿಕ ನೆಮ್ಮದಿಯನ್ನು ಒದಗಿಸಿವೆ. ಹೀಗಾಗಿ ಚರ್ಚೆಯ ಮೂಲ ಪ್ರಶ್ನೆ ಸಾಲದ ಪ್ರಮಾಣವಲ್ಲ, ಅದರ ಶಾಶ್ವತ ಪರಿಣಾಮ. ₹2.2 ಲಕ್ಷ ಕೋಟಿ ಸಾಲದ ರಾಜ್ಯವನ್ನು ₹8 ಲಕ್ಷ ಕೋಟಿ ಸಾಲದ ರಾಜ್ಯವನ್ನಾಗಿಸಿದ ನಂತರ, ಕರ್ನಾಟಕದ ಆರ್ಥಿಕ ಶಕ್ತಿ,



ಉದ್ಯೋಗ ಸಾಮರ್ಥ್ಯ ಮತ್ತು ಉತ್ಪಾದಕ ಆಸ್ತಿಗಳಲ್ಲಿ ಅದೇ ಪ್ರಮಾಣದ ವೃದ್ಧಿ ಕಂಡುಬಂದಿದೆಯೇ? ಎಂಬ ಪ್ರಶ್ನೆಯೇ ಸಿದ್ದರಾಮಯ್ಯ ಅವರ ಆರ್ಥಿಕ ಪರಂಪರೆಯ ಕುರಿತ ಚರ್ಚೆಯ ಕೇಂದ್ರಬಿಂದುವಾಗಿದೆ.

ಅಭಿವೃದ್ಧಿ ಅರ್ಥಶಾಸ್ತ್ರದ ಮಾನದಂಡದಿಂದ ನೋಡಿದರೆ, ವಿಮರ್ಶಕರ ಅಭಿಪ್ರಾಯ ಹೀಗಿದೆ: ಸಿದ್ದರಾಮಯ್ಯರ ಕಲ್ಯಾಣ ನೀತಿಗಳು ಸಾಮಾಜಿಕವಾಗಿ ಜನಪ್ರಿಯ ವಾಗಿರಬಹುದು; ಆದರೆ ಅದೇ ಪ್ರಮಾಣದ ಒತ್ತು ಉದ್ಯೋಗ, ಕೌಶಲ್ಯಾಭಿವೃದ್ಧಿ, ಕೈಗಾರಿಕಾ ಹೂಡಿಕೆ ಮತ್ತು ಉತ್ಪಾದಕ ಆಸ್ತಿ ಸೃಷ್ಟಿಗೆ ನೀಡಿದ್ದರೆ ಕರ್ನಾಟಕಕ್ಕೆ ಹೆಚ್ಚು ಶಾಶ್ವತ ಮತ್ತು ವ್ಯಾಪಕ ಆರ್ಥಿಕ ಲಾಭವಾಗುತ್ತಿತ್ತು. ಸಾಲ ಎಷ್ಟು ಪಡೆದರು ಎಂಬುದಕ್ಕಿಂತ, ಆ ಸಾಲದಿಂದ ಎಷ್ಟು ಶಾಶ್ವತ ಸಮೃದ್ಧಿ ನಿರ್ಮಾಣವಾಯಿತು ಎಂಬುದೇ ಇತಿಹಾಸದ ಅಂತಿಮ ಮಾನದಂಡ.

ಅಹಿಂದ ರಾಜಕಾರಣ

ಅಹಿಂದ (ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು) ರಾಜಕಾರಣವು ಸಿದ್ದರಾಮಯ್ಯ ಅವರ ಅತ್ಯಂತ ಯಶಸ್ವಿ ಚುನಾವಣಾ ತಂತ್ರವಾಗಿತ್ತು. ಅವರ ಬೆಂಬಲಿಗರು ಇದನ್ನು ಸಾಮಾಜಿಕ ನ್ಯಾಯದ ರಾಜಕಾರಣ ಎಂದು ಕೊಂಡಾಡುತ್ತಾರೆ. ಆದರೆ ವಿಮರ್ಶಕರ ಅಭಿಪ್ರಾಯದಲ್ಲಿ, ಇದೇ ರಾಜಕಾರಣವು ಸಮಾಜವನ್ನು ಜಾತಿ ಮತ್ತು ಸಮುದಾಯ ಆಧಾರಿತ ರಾಜಕೀಯ ಗುರುತುಗಳಾಗಿ ವಿಭಜಿಸಿತು ಎನ್ನುತ್ತಾರೆ.

ವಿಮರ್ಶಕರು ಇಲ್ಲಿ ಒಂದು ಸೈದ್ಧಾಂತಿಕ ಪ್ರಶ್ನೆಯನ್ನು ಎತ್ತುತ್ತಾರೆ. ಭಾರತೀಯ ಸಂವಿಧಾನವು ಸಮಾನ ಪೌರತ್ವದ ತತ್ವವನ್ನು ಪ್ರತಿಪಾದಿಸುತ್ತದೆ. ಕಾಂಗ್ರೆಸ್ ಪಕ್ಷವೂ ತನ್ನನ್ನು ಜಾತ್ಯತೀತ ಮತ್ತು ಸಮಗ್ರ ರಾಜಕೀಯದ ಪ್ರತಿನಿಧಿಯಾಗಿ ಬಿಂಬಿಸಿಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ, ರಾಜಕೀ ಯವನ್ನು ನಿರ್ದಿಷ್ಟ ಸಾಮಾಜಿಕ ಒಕ್ಕೂಟಗಳ ಆಧಾರದ ಮೇಲೆ ಕಟ್ಟುವುದು ಸಾಮಾಜಿಕ ನ್ಯಾಯದ ಸಾಧನವೇ ಅಥವಾ ಹೊಸ ಮತಬ್ಯಾಂಕ್ ಸಮೀಕರಣವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಅವರು ಮತ್ತೊಂದು ಸಂಗತಿಯನ್ನು ಉಲ್ಲೇಖಿಸುತ್ತಾರೆ. ಸಿದ್ದರಾಮಯ್ಯ ಹಲವು ಬಾರಿ ಚಾಮುಂಡೇಶ್ವರಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದು, ಒಕ್ಕಲಿಗ ಸಮುದಾಯದ ಗಣನೀಯ ಮತಬೆಂಬಲವಿದ್ದ ಕ್ಷೇತ್ರದಲ್ಲೇ ತಮ್ಮ ರಾಜಕೀಯ ನೆಲೆಯನ್ನು ಬಲಪಡಿಸಿಕೊಂಡರು. ಅವರ ವಿರೋಧಿಗಳ ಪ್ರಕಾರ, ಆ ಕ್ಷೇತ್ರದ ಮತದಾರರು ಅವರನ್ನು ಜಾತಿಯ ಆಧಾರದ ಮೇಲೆ ಅಲ್ಲದೆ ನಾಯಕತ್ವ ಮತ್ತು ಸಾಮರ್ಥ್ಯದ ಆಧಾರದ ಮೇಲೆ ಬೆಂಬಲಿಸಿದ್ದರು. ಈ ಹಿನ್ನೆಲೆಯಲ್ಲಿ ವಿಮರ್ಶಕರು ಕೇಳುವ ಪ್ರಶ್ನೆ: ಚಾಮುಂಡೇಶ್ವರಿಯಲ್ಲಿ ಜಾತಿಯನ್ನು ಮೀರಿ ಗೆದ್ದ ನಾಯಕ, ಕರ್ನಾಟಕದಲ್ಲಿ ಜಾತಿ ಸಮೀಕರಣದ ರಾಜಕಾರಣವನ್ನು ಬಲಪಡಿಸಿದರೇ?ಸಿದ್ದರಾಮಯ್ಯ ಅವರ ನಾಯಕತ್ವ ಶೈಲಿಯ ಕುರಿತೂ ಟೀಕೆಗಳಿವೆ. ತಮ್ಮದೇ ಸಾಮಾಜಿಕ ನೆಲೆಯಿಂದ ಹೊರಹೊಮ್ಮಬಹುದಾದ ಪರ್ಯಾಯ ನಾಯಕತ್ವಕ್ಕೆ ಸಾಕಷ್ಟು ಅವಕಾಶ ನೀಡಲಿಲ್ಲ ಎಂಬ ಆರೋಪವನ್ನು ವಿರೋಧಿಗಳು ಮಾಡು ತ್ತಾರೆ. ಮತ್ತೊಂದೆಡೆ ಅದು ಸುಳ್ಳೆನ್ನುವಂತೆ ಜಮೀರ್ ಅಹ್ಮದ್ ಖಾನ್, ಎಂ.ಸಿ. ಮಹದೇವಪ್ಪ ಮತ್ತು ಬೈರತಿ ಸುರೇಶ್ ಅವರಂತಹ ನಾಯಕರಿಗೆ ಹೆಚ್ಚಿನ ಪ್ರಾಮುಖ್ಯ ದೊರೆತಿ ರುವುದು ಕಾಣಬರುತ್ತದೆ. ಇದರಿಂದ, ಸ್ವತಂತ್ರ ರಾಜಕೀಯ ವ್ಯಕ್ತಿತ್ವಕ್ಕಿಂತ ನಾಯಕನಿಗೆ ನಿಷ್ಠೆ ಪ್ರದರ್ಶಿಸುವ ಸಂಸ್ಕೃತಿಗೆ ಹೆಚ್ಚಿನ ಉತ್ತೇಜನ ದೊರೆಯಿತು ಎಂಬ ಟೀಕೆಯೂ ಕೇಳಿಬರುತ್ತದೆ.

ಸಿದ್ದರಾಮಯ್ಯ ಅವರು ಅಧಿಕಾರ ಪಡೆಯುವ ರಾಜಕಾರಣವನ್ನು ಅತ್ಯಂತ ಯಶಸ್ವಿಯಾಗಿ ಕಲಿತಿದ್ದರು; ಆದರೆ ಆ ಅಧಿಕಾರವನ್ನು ಶಾಶ್ವತ ಸಾಮಾಜಿಕ- ಆರ್ಥಿಕ ಪರಿವರ್ತನೆಗೆ ಎಷ್ಟರ ಮಟ್ಟಿಗೆ ಬಳಸಿದರು ಎಂಬ ಪ್ರಶ್ನೆ ಇನ್ನೂ ಚರ್ಚೆಗೆ ಗ್ರಾಸವಾಗಿದೆ. ದೇವರಾಜ ಅರಸು ಸಮಾಜದ ರಚನೆಯನ್ನು ಬದಲಿಸಲು ಪ್ರಯತ್ನಿಸಿದ ನಾಯಕನಾಗಿ ನೆನಪಾಗುತ್ತಾರೆ. ಸಿದ್ದರಾಮಯ್ಯ ಕಲ್ಯಾಣ ರಾಜಕಾರಣದ ಅತ್ಯಂತ ಯಶಸ್ವಿ ಪ್ರತಿನಿಧಿಯಾಗಿ ಗುರುತಿಸಿಕೊಂಡಿದ್ದಾರೆ. ಅರಸು ಹಕ್ಕು ಕೊಟ್ಟರು; ಸಿದ್ದರಾಮಯ್ಯ ನೆರವು ಕೊಟ್ಟರು.

ಆದರೆ ನೆನಪಿಟ್ಟುಕೊಳ್ಳಬೇಕಾದ ಇನ್ನೂ ಒಂದು ವಿಷಯ ಇದೆ. ಅರಸು ಹಿಂದುಳಿದವರ ಪರವಾದ ರಾಜಕಾರಣ ಮಾಡಿದರೂ, ಕಾಂಗ್ರೆಸ್ ಪಕ್ಷ ಅಂತಿಮವಾಗಿ ಅವರ ಜೊತೆಗೆ ನಿಲ್ಲಲಿಲ್ಲ. ಇಂದಿರಾ ಗಾಂಧಿ ಅವರ ಜೊತೆ ಹೋಗಿ ಕಾಂಗ್ರೆಸ್ (ಐ) ಅನ್ನು ಅವರು ಬಲಪಡಿಸಿದರೂ, ತಾತ್ವಿಕ ವಿರೋಧದ ಪರಿಣಾಮ ಕಾಂಗ್ರೆಸ್ ತೊರೆದು ಬೇರೆ ಪಕ್ಷ ಕಟ್ಟಿದಾಗ ಕಾಂಗ್ರೆಸ್‌ನ ಯಾರೂ ಅವರ ಜೊತೆಗೆ ಬರಲಿಲ್ಲ. ಆದರೆ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಗೌರವಯುತವಾಗಿ ನಡೆಸಿಕೊಂಡಿದೆ. ಕಾಂಗ್ರೆಸ್‌ಗೆ ಚುನಾವಣೆಯಲ್ಲಿ ಸಿದ್ದರಾ ಮಯ್ಯ ಅನುಕೂಲ ಮಾಡಿಕೊಟ್ಟಿದ್ದಾರೆ. ಅವರ ನಾಯಕ ತ್ವದಿಂದ ಕಾಂಗ್ರೆಸ್ ಅಧಿಕಾರ ಹಿಡಿದಿದೆ. ಹೀಗಾಗಿ ಅವರು ಪಕ್ಷಕ್ಕೆ ನೀಡಿದ ಬಲದ ನೆನಪು ಶಾಶ್ವತವಾಗಿ ಉಳಿಯಲಿದೆ.

ಪ್ರಸ್ತುತ

ಸಂದೀಪ್ ಶರ್ಮಾ

ರಾಜಕೀಯದ ನೇರ- ನಿಷ್ಠುರ ಯೋಗಿ

ಭಾರತೀಯ ರಾಜಕೀಯ ಅಖಾಡ ಎಂದರೆ ಅಲ್ಲಿ ಮಾತಿನ ಜಾಣ್ಮೆ, ರಾಜತಾಂತ್ರಿಕ ಒಗಟುಗಳು ಮತ್ತು ಜಾರಿಕೊಳ್ಳುವ ಉತ್ತರಗಳದ್ದೇ ಕಾರುಬಾರು. ಯಾವುದೇ ಕಠಿಣ ಪ್ರಶ್ನೆ ಎದುರಾದರೂ, ಕಾನೂನು ತನ್ನ ಕೆಲಸ ಮಾಡುತ್ತದೆ ಎಂಬ ಉತ್ತರ. 2017ರಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಗೋರಖನಾಥ್ ಪೀಠದ ಮಹಂತ್ ಯೋಗಿ ಆದಿತ್ಯನಾಥ್ ಅವರು ಗದ್ದುಗೆ ಏರಿದರು. ಅಲ್ಲಿಗೆ ಭಾರತೀಯ ರಾಜಕೀಯದ ಈ ಸಭ್ಯ ಹಾಗೂ ಸುರಕ್ಷಿತ ಭಾಷೆಯ ಇತಿಹಾಸವೇ ಬದಲಾಯಿತು!

ಮಾತಿನಲ್ಲಿ ಮುಲಾಜಿಲ್ಲ, ನಿರ್ಧಾರದಲ್ಲಿ ಹಿಂಜರಿಕೆಯಿಲ್ಲ. ಇಂಗ್ಲಿಷ್‌ನಲ್ಲಿ ‘ಕಾಲಿಂಗ್ ಎ ಸ್ಪೇಡ್ ಎ ಸ್ಪೇಡ್’ ಎನ್ನುವಂತೆ, ತಪ್ಪನ್ನು ತಪ್ಪು, ಸರಿಯನ್ನು ಸರಿ ಎಂದು ಮುಖಕ್ಕೆ ಹೊಡೆದಂತೆ ಹೇಳುವ ನವ ರಾಜಕೀಯ ಭಾಷೆಯನ್ನು ಯೋಗಿ ಭಾರತಕ್ಕೆ ಪರಿಚಯಿಸಿದರು. ಅವರ ರಾಜಕೀಯ ಜೀವನದಲ್ಲಿ ಅವರ ಇದಕ್ಕೆ ನೂರಾರು ಉದಾಹರಣೆಗಳು ಸಿಗುತ್ತವೆ. ಇತ್ತೀಚಿನ ದಿನಗಳಲ್ಲಿ ಇಡೀ ದೇಶದ ಗಮನ ಸೆಳೆದಿದ್ದು ಖ್ಯಾತ ಪತ್ರಕರ್ತ ರಜತ್ ಶರ್ಮಾ ಅವರ ‘ಆಪ್ ಕಿ ಅದಾಲತ್’ ಕಾರ್ಯಕ್ರಮದ ಸಂದರ್ಶನ. ಅಲ್ಲಿ ದಶಕಗಳ ಕಾಲ ಉತ್ತರ ಪ್ರದೇಶವನ್ನು ನಡುಗಿಸಿದ್ದ ಗ್ಯಾಂಗ್‌ಸ್ಟರ್ ಮುಖ್ತಾರ್ ಅನ್ಸಾರಿಯ ಜೈಲಿನೊಳಗಿನ ಸಾವಿನ ಬಗ್ಗೆ ಪ್ರಶ್ನೆ ಎದುರಾದಾಗ, ಯೋಗಿ ನೀಡಿದ ಉತ್ತರ ಇಡೀ ದೇಶವನ್ನೇ ಬೆಚ್ಚಿಬೀಳಿಸಿತ್ತು.

ಯಾವೊಬ್ಬ ಸಾಂಪ್ರದಾಯಿಕ ರಾಜಕಾರಣಿಯೂ ಸಾರ್ವಜನಿಕ ವೇದಿಕೆಯಲ್ಲಿ ನೀಡದಂತಹ ಅತ್ಯಂತ ಕಟು ಹಾಗೂ ನೇರ ಉತ್ತರ ಅದಾಗಿತ್ತು. ಅವನು ಹೇಗೂ ಸಾಯಲೇಬೇಕಿತ್ತು ಎಂದು ಯೋಗಿ ಮುಲಾಜಿಲ್ಲದೆ ಹೇಳಿದರು. ಹಲವಾರು ಮುಗ್ಧರ ಕೊಲೆಗೆ ಕಾರಣನಾದ ವ್ಯಕ್ತಿ ತನ್ನ ಕರ್ಮಫಲದಿಂದ ತಪ್ಪಿಸಿಕೊಳ್ಳಲು ಹೇಗೆ ಸಾಧ್ಯ? ಪ್ರಕೃತಿ ಮತ್ತು ಕಾನೂನು ತನ್ನದೇ ಆದ ರೀತಿಯಲ್ಲಿ ನ್ಯಾಯ ಒದಗಿಸುತ್ತದೆ ಎಂಬ ಅವರ ಆ ಮಾತು ರಾಜಕೀಯ ಇತಿಹಾಸದ ಪುಟ ಸೇರಿತು. ಕೆಲವರು ಇದನ್ನು ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಅತಿರೇಕದ ಮಾತು ಎಂದರೆ, ಇನ್ನು ದೊಡ್ಡ ವರ್ಗದ ಜನ ಇದು ನಿಜವಾದ ನಾಯಕನ ಧೈರ್ಯ ಮತ್ತು ಸಂತ್ರಸ್ತರ ಪರವಾಗಿ ನಿಲ್ಲುವ ಗಟ್ಟಿತನ ಎಂದು ಕೊಂಡಾಡಿದರು.

ಯೋಗಿ ಆದಿತ್ಯನಾಥ್ ಅವರ ಆಡಳಿತದ ಶೈಲಿ ಎಷ್ಟು ಕಠಿಣವಾಗಿದೆಯೋ, ಅವರ ಭಾಷೆಯೂ ಅಷ್ಟೇ ಕಠೋರ ಮತ್ತು ತೀಕ್ಷ್ಣ. ಉತ್ತರ ಪ್ರದೇಶದಲ್ಲಿ ಮಾಫಿಯಾಗಳ ವಿರುದ್ಧ ಅವರು ಕೈಗೊಂಡ ‘ಬುಲ್ಡೋಜರ್’ ಕಾರ್ಯಾಚರಣೆ ದೇಶಾದ್ಯಂತ ಸದ್ದು ಮಾಡಿದ್ದು ತಿಳಿದ ವಿಷಯವೇ ಆಗಿದೆ. ಭಾರತದ ಕಾನೂನು ವ್ಯವಸ್ಥೆಯಲ್ಲಿ ಅಪರಾಧದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ವರ್ಷಗಟ್ಟಲೆ ಹಿಡಿಯುತ್ತಿದ್ದ ಜಾಗದಲ್ಲಿ, ಯೋಗಿ ಸರಕಾರ ಕೆಲವೇ ಗಂಟೆಗಳಲ್ಲಿ ಅಕ್ರಮ ಕಟ್ಟಡಗಳನ್ನು ನೆಲಸಮಗೊಳಿಸುವ ಹೊಸ ಮಾದರಿಯನ್ನು ಸೃಷ್ಟಿಸಿತು. ‘ಬುಲ್ಡೋಜರ್ ಚಲಿಸುವುದು ಮಾಫಿಯಾಗಳ ಅಕ್ರಮ ಆಸ್ತಿಯ ಮೇಲೆಯೇ ಹೊರತು, ಬಡವರ ಗುಡಿಸಿಲುಗಳ ಮೇಲಲ್ಲ!’ - ಇದು ಟೀಕಾಕಾರರಿಗೆ ಯೋಗಿ ನೀಡಿದ ಸ್ಪಷ್ಟ ಸಂದೇಶವಾಗಿತ್ತು.

ಅಷ್ಟೇ ಅಲ್ಲ, ಅವರ ಸಾರ್ವಜನಿಕ ಭಾಷಣಗಳು ಅಪರಾಧಿಗಳ ಪಾಲಿಗೆ ಮರಣಶಾಸನದಂತೆ ಕೇಳಿಸುತ್ತವೆ. ‘ಅಪರಾಧಿಗಳು ಒಂದೋ ಜೈಲಿಗೆ ಹೋಗಬೇಕು, ಇಲ್ಲವೇ ದೇವರ ಪಾದ ಸೇರಬೇಕು’ ಎಂದು ಅವರು ಬಹಿರಂಗವಾಗಿಯೇ ಗುಡುಗಿದ್ದರು. ಭೂ ಮಾಫಿಯಾಗಳಿಗೆ ಮತ್ತು ಮಹಿಳೆಯರ ರಕ್ಷಣೆಗೆ ಧಕ್ಕೆ ತರುವ ಕಿಡಿಗೇಡಿಗಳಿಗೆ 24 ಗಂಟೆಗಳ ಗಡುವು ನೀಡುತ್ತಾ, ‘ನಾವು ಅಪರಾಧಿಗಳಿಗೆ ಆರತಿ ಬೆಳಗುವುದಿಲ್ಲ’ ಎಂದ ಯೋಗಿ ಅವರ ಮಾತುಗಳು ಕೇವಲ ಭಾಷಣಗಳಾಗಿ ಉಳಿಯ ಲಿಲ್ಲ, ಬದಲಿಗೆ ನೆಲದ ಮೇಲಿನ ಕಟು ವಾಸ್ತವಗಳಾದವು. ಈ ಬುಲ್ಡೋಜರ್ ಮಾದರಿಯನ್ನು ಇಂದು ಮಧ್ಯ ಪ್ರದೇಶ, ರಾಜಸ್ಥಾನದಂತಹ ಇತರ ರಾಜ್ಯಗಳೂ ಅಳವ ಡಿಸಿಕೊಳ್ಳುತ್ತಿರುವುದು ಯೋಗಿ ಶೈಲಿಯ ಜನಪ್ರಿಯತೆಗೆ ಸಾಕ್ಷಿ.

ಇಂತಹ ಕಠೋರ ಶಬ್ದಗಳ ಬಳಕೆ ಮತ್ತು ರಾಜಿ ಇಲ್ಲದ ಆಡಳಿತ ಉತ್ತರ ಪ್ರದೇಶದ ರಾಜಕೀಯ ಮತ್ತು ಕಾನೂನು ಸುವ್ಯವಸ್ಥೆಯಲ್ಲಿ ಭಾರಿ ಬದಲಾವಣೆ ತಂದಿದೆ ಎಂಬುದನ್ನು ನಿರಾಕರಿಸುವಂತಿಲ್ಲ. ಒಂದು ಕಾಲದಲ್ಲಿ ‘ಗೂಂಡಾರಾಜ್’ ಎಂದು ಕರೆಯಲ್ಪಡುತ್ತಿದ್ದ ಯುಪಿಯಲ್ಲಿ ಇಂದು ಉದ್ಯಮಿಗಳು ಭಯವಿಲ್ಲದೆ ಹೂಡಿಕೆ ಮಾಡುತ್ತಿದ್ದಾರೆ. ಸರ್ಕಾರಿ ಅಂಕಿ-ಅಂಶಗಳ ಪ್ರಕಾರ, ಯುಪಿಯಲ್ಲಿ ಸಂಘಟಿತ ಅಪರಾಧ, ಸುಲಿಗೆ ಮತ್ತು ಅಪಹರಣಗಳ ಪ್ರಮಾಣ ಗಣನೀಯವಾಗಿ ಕುಸಿದಿದೆ. ಅತೀಕ್ ಅಹ್ಮದ್, ಮುಖ್ತಾರ್ ಅನ್ಸಾರಿಯಂತಹ ದೊಡ್ಡ ಡಾನ್‌ಗಳ ದಶಕಗಳ ಕಾಲದ ಸಾಮ್ರಾಜ್ಯ ಧೂಳೀಪಟವಾಗಿದೆ. ಬುಲ್ಡೋಜರ್ ಕಾರ್ಯಾಚರಣೆಯ ಜೊತೆಜೊತೆಗೇ ರಾಜ್ಯದಲ್ಲಿ ಪೂರ್ವಾಂಚಲ್ ಮತ್ತು ಬುಂದೇಲ್‌ಖಂಡದಂತಹ ಬೃಹತ್ ಎಕ್ಸ್‌ಪ್ರೆಸ್‌ವೇಗಳು, ಜಾಗತಿಕ ಮಟ್ಟದ ವಿಮಾನ ನಿಲ್ದಾಣಗಳು, ಹೂಡಿಕೆಗಳು ವೇಗವಾಗಿ ಹರಿದುಬರುತ್ತಿವೆ.

ಆದರೆ ಈ ಕಠಿಣ ಭಾಷೆ ಮತ್ತು ನಡೆ ಕೇವಲ ಪ್ರಶಂಸೆಯನ್ನು ಮಾತ್ರ ಗಳಿಸಿಲ್ಲ. ಬದಲಿಗೆ ತೀವ್ರ ಸಾಮಾಜಿಕ ಮತ್ತು ಸಾಂವಿಧಾನಿಕ ವಿವಾದಗಳನ್ನೂ ಹುಟ್ಟುಹಾಕಿದೆ. ಈ ರೀತಿಯ ಭಾಷೆ ಮತ್ತು ನ್ಯಾಯಾಂಗ ರಹಿತ ಕ್ರಮಗಳು ಅಲ್ಪಸಂಖ್ಯಾತರಲ್ಲಿ ಭಯ ಹುಟ್ಟುಹಾಕುತ್ತವೆ. ಇದು ಕೋಮು ಧ್ರುವೀಕರಣಕ್ಕೆ ಕಾರಣವಾಗುತ್ತದೆ ಮತ್ತು ಪ್ರಜಾಪ್ರಭುತ್ವದ ಮೂಲ ಆಶಯವಾದ ‘ಕಾನೂನಿನ ಚೌಕಟ್ಟು’ ಮತ್ತು ಸೌಜನ್ಯದ ಸಂಪ್ರದಾಯವನ್ನು ನಾಶಪಡಿಸುತ್ತದೆ. ನ್ಯಾಯಾಲಯಗಳು ನೀಡಬೇಕಾದ ತೀರ್ಪನ್ನು ಸರ್ಕಾರವೇ ನೀಡುವುದು ಸರಿಯಲ್ಲ ಎಂಬುದು ಇವರ ಗಂಭೀರ ಆರೋಪ.

ಮತ್ತೊಂದೆಡೆ, ಸಾಮಾನ್ಯ ಜನರಿಗೆ ಈ ಭಾಷೆ ಅತ್ಯಂತ ಇಷ್ಟವಾಗುತ್ತಿದೆ. ಏಕೆಂದರೆ ಇದರಲ್ಲಿ ಯಾವುದೇ ರಾಜಕೀಯ ಕಪಟತನವಾಗಲಿ, ಮತಬ್ಯಾಂಕ್ ರಾಜಕೀಯದ ಹುಸಿ ಭರವಸೆಗಳಾಗಲಿ ಇಲ್ಲ. ಜಾತಿ, ಧರ್ಮ ನೋಡದೆ ಅಪರಾಧಿಗೆ ತಕ್ಕ ಶಿಕ್ಷೆ ನೀಡುವ, ಸಾಮಾನ್ಯ ಜನರ ಆಸ್ತಿ-ಪಾಸ್ತಿ ಮತ್ತು ಹೆಣ್ಣುಮಕ್ಕಳ ರಕ್ಷಣೆಗೆ ನಿಲ್ಲುವ ಗಟ್ಟಿ ನಾಯಕ ತಮಗೆ ಸಿಕ್ಕಿದ್ದಾನೆ ಎಂಬ ನಂಬಿಕೆ ಮತ್ತು ಆತ್ಮಾಭಿಮಾನ ಉತ್ತರ ಪ್ರದೇಶದ ಮತದಾರರಲ್ಲಿ ಮೂಡಿದೆ. ಈ ’ನೇರ ನಡೆ-ನೇರ ನುಡಿ’ಯ ರಾಜಕಾರಣ ಮುಂದೆ ಭಾರತೀಯ ರಾಜಕೀಯದ ದಿಕ್ಕನ್ನು ಹೇಗೆ ಬದಲಾಯಿಸಲಿದೆ ಎಂಬುದನ್ನು ಕಾಲವೇ ನಿರ್ಣಯಿಸಲಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:144

ಎಕ್ಸಿಸ್ ಬ್ಯಾಂಕ್

ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ,
ಆನಂದ್ ರಾವ್ ಸರ್ಕಲ್, ಬೆಂಗಳೂರು-560009.

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1.	**(1) ಶ್ರೀ ಸ್ವಾಮಿ ಜಿ ಎಸ್** ಬಿನ್ ಶ್ರೀ ಸಿದ್ದಲಿಂಗಯ್ಯ **(2) ಶ್ರೀಮತಿ ಗೀತಾ ಕೋಂ ಶ್ರೀ ಸ್ವಾಮಿ ಜಿ ಎಸ್** **ಇವರಿಬ್ಬರ ವಿಳಾಸ :** ನಂ.66, ಗುನ್ನೂರು ಕೈಲಾಂಚ ಹೋಬಳಿ, ಹುಲಿಕೆರೆಗುನ್ನೂರು, ರಾಮನಗರ-571511. **ಮತ್ತೊಂದು ವಿಳಾಸ :** ಐಟಂ ನಂ.1, ಖಾತಾ ನಂ.107 107 1, ರಾಜರಾಜೇಶ್ವರಿ ಚನ್ನಮನಹಳ್ಳಿ ಗ್ರಾಮ, ವಿಭೂತಿಕೆರೆ ಗ್ರಾಮ ಪಂಚಾಯತ್, ಕೈಲಾಂಚ್ ಹೋಬಳಿ, ರಾಮನಗರ-571511.	**ಶ್ರೀ ಸ್ವಾಮಿ ಜಿ ಎಸ್ ಅವರಿಗೆ ಸೇರಿದ ಆಸ್ತಿಯ ವಿವರ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಿವೇಶನ ನಂ.1, ಖಾತಾ ನಂ.107/107/1, ಸರ್ವೆ ನಂ.4/2 (ಹಳೆ ನಂ.4) ಮತ್ತು ಸರ್ವೆ ನಂ.4/3ರಲ್ಲಿ ನಿರ್ಮಿಸಲಾಗಿದೆ. ದಿನಾಂಕ 29.05.2019ರಂದು ಆದೇಶ ನಂ.ALN@CR.57/2018-19, letter No.LAND1009584 ರ ಪ್ರಕಾರ ಇದನ್ನು ಪರಿವರ್ತಿಸಲಾಗಿದೆ ಮತ್ತು ಲೇಔಟ್ ಪ್ಲಾನ್ No.RADA/TPM/LAO/102/2020-21, ಈ ಆಸ್ತಿಯು ಚನ್ನಮನಹಳ್ಳಿ ಗ್ರಾಮ, ಕೈಲಾಂಚ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 8.16+8.76/2 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 12.32+11,49/2 ಮೀಟರ್‌ಗಳು, ಒಟ್ಟು ವಿಸ್ತೀರ್ಣ 100.72 ಚದರ ಮೀಟರ್‌ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ.4/5, ಪಶ್ಚಿಮಕ್ಕೆ: ನಿವೇಶನ ನಂ.02, ಉತ್ತರಕ್ಕೆ: ಸರ್ವೆ ನಂ.4/1, ದಕ್ಷಿಣಕ್ಕೆ: 9 ಮೀಟರ್‌ಗಳ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಸುದರ್ಶನ್, ಮೊಬೈಲ್ ನಂ.9620703099ನ್ನು ಸಂಪರ್ಕಿಸಿ.**	19.05.2026 ಎನ್‌ಪಿಎ ದಿನಾಂಕ: 11.05.2026	POWER HOME BRE Loan A/c No. PHR000907604815 Amount : Rs.10,30,512/- Total Amount: Rs.9,90,168/- POWER HOME BRE Loan A/c No. PHR000907219472 Amount : Rs.35,88,104/- Total Amount: Rs.36,08,074/- ಒಟ್ಟು ಬಾಕಿ ಮೊತ್ತ: ರೂ.45,98,242/- ದಿನಾಂಕ: 18.05.2026ರಂದು ಇದ್ದಂತೆ.
2.	**(1) ಮೆ॥ ಎಸ್. ಎ ಇಂಡಸ್ಟ್ರೀಸ್, ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಬಿ ಎಸ್ ದಿಲೀಪ್ ಸಿಂಗ್,** ಫ್ಲಾಟ್ ನಂ.14, ಹಳೆ ನಂ.23/1, ರಾಜಗೋಪಾಲ್ ರಸ್ತೆ ಗೆದ್ದಲಹಳ್ಳಿ ಸಂಜಯ್ ನಗರ, ಬೆಂಗಳೂರು ನಗರ, ಬೆಂಗಳೂರು-560001. ಆಕ್ಸಿಸ್ ಬ್ಯಾಂಕ್ ಹತ್ತಿರ. **(2) ಮೆ॥ ಶ್ರೀ ಅನ್ನಪೂರ್ಣ ಇಂಡಸ್ಟ್ರೀಸ್, ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀಮತಿ ಪ್ರಿಯಾಂಕಾ ಸಿಂಗ್ ಡಿ, ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ ಬಿ ಎಸ್ ದಿಲೀಪ್ ಸಿಂಗ್,** ನೆಲ ಮಹಡಿ ನಂ.5, ಸರ್ವೆ ನಂ.520, ಬಳ್ಳಾರಿ ರಸ್ತೆ, ಮುದ್ದಾಪುರ 10 ಕಂಪ್ಲಿ ಬಳ್ಳಾರಿ ಮುದ್ದಾಪುರ, ಬಳ್ಳಾರಿ-583132. **(3) ಶ್ರೀ ಬಿ ಎಸ್ ದಿಲೀಪ್ ಸಿಂಗ್** ಬಿನ್ ಶ್ರೀ ಸತ್ಯನಾರಾಯಣ ಸಿಂಗ್ ಬಿ, 6ನೇ ವಾರ್ಡ್, ಬಿ ಹೆಚ್ ದೇವಾಲಯ ರಸ್ತೆ, ರಾಣಿಪೇಟೆ, ಹೊಸಪೇಟೆ, ಬಳ್ಳಾರಿ-583201. **(4) ಶ್ರೀಮತಿ ಪ್ರಿಯಾಂಕಾ ಸಿಂಗ್ ಡಿ ಕೋಂ** ಶ್ರೀ ಬಿ ಎಸ್ ದಿಲೀಪ್ ಸಿಂಗ್, 6ನೇ ವಾರ್ಡ್, ಬಿ ಹೆಚ್ ಟೆಂಪಲ್ ರಸ್ತೆ, ರಾಣಿಪೇಟೆ, ಹೊಸಪೇಟೆ, ಬಳ್ಳಾರಿ-583201.	**ಶ್ರೀ ಬಿ ಎಸ್ ದಿಲೀಪ್ ಸಿಂಗ್ ಅವರ ಹೆಸರಿನಲ್ಲಿರುವ ಆಸ್ತಿಯ ವಿವರ** Particulars / Details ಪ್ಲಾಟ್/ಸರ್ವೆ/ಜಿ.ನಂ./Khasra No.: ಆಸ್ತಿ ಪ್ಲಾಟ್ ನಂ.1 ಮತ್ತು 2 ರಸ್ತೆ/ಕಾಲೋನಿ/ಸೆಕ್ಟರ್/ಸ್ಥಳ/ಲ್ಯಾಂಡ್‌ಮಾರ್ಕ್: **ಆಸ್ತಿ ನಂ.I :** ಅಸೆಸ್‌ಮೆಂಟ್ ನಂ.1232, ಎನ್ ಎ ಸರ್ವೆ ನಂ.339, ಪೈಕ್ ವಿಸ್ತೀರ್ಣ 26.5 ಸೆಂಟ್ಸ್, ಈ ಆಸ್ತಿಯು ಹಳೆ ವಾರ್ಡ್ ನಂ.17, ಹೊಸ ವಾರ್ಡ್ ನಂ.35, ಸಂಡೂರು ರಸ್ತೆ, ಲ್ಯಾಂಡ್ ಆರ್ಮಿ ಕಛೇರಿ ಹಿಂಭಾಗ, ಪಾರ್ವತಿನಗರ ಪ್ರದೇಶ, ಹೊಸಪೇಟೆಯಲ್ಲಿದೆ. **ಆಸ್ತಿ ನಂ.II :** ಅಸೆಸ್‌ಮೆಂಟ್ ನಂ.1232/ಎ, ಎನ್ ಎ ಸರ್ವೆ ನಂ.333ಬಿ, ಪೈಕ್ ವಿಸ್ತೀರ್ಣ 13.4 ಸೆಂಟ್ಸ್, ಈ ಆಸ್ತಿಯು ಹಳೆ ವಾರ್ಡ್ ನಂ.17, ಹೊಸ ವಾರ್ಡ್ ನಂ.35, ಸಂಡೂರು ರಸ್ತೆ, ಲ್ಯಾಂಡ್ ಆರ್ಮಿ ಕಛೇರಿ ಹಿಂಭಾಗ, ಪಾರ್ವತಿನಗರ ಪ್ರದೇಶ, ಹೊಸಪೇಟೆಯಲ್ಲಿದೆ. ಗ್ರಾಮ/ಪಟ್ಟಣ/ನಗರ: ಸಿಎಂಸಿ ಹೊಸಪೇಟೆ ತಾಲ್ಲೂಕು, ಜಿಲ್ಲೆ, ರಾಜ್ಯ: ವಿಜಯನಗರ **ಒಟ್ಟು ವಿಸ್ತೀರ್ಣ (ಪ್ರದೇಶ ಚದರ ಮೀಟರ್‌ನಲ್ಲಿ ಮಾತ್ರ) ಆಸ್ತಿ ನಂ.I:** ಪ್ಲಾಟ್ ನಂ.1, ವಿಸ್ತೀರ್ಣ 26.5 ಸೇಂಟ್ಸ್, ಪೂರ್ವದಿಂದ ಪಶ್ಚಿಮಕ್ಕೆ: 175.5 ಅಡಿ, ಉತ್ತರದಿಂದ ದಕ್ಷಿಣಕ್ಕೆ: 155 ಅಡಿ, ಒಟ್ಟು: 11,567.50 ಚದರ ಅಡಿ (26.5 ಸೇಂಟ್ಸ್). ಆಸ್ತಿ ನಂ.1ರ ಚಕ್ಕುಬಂದಿ ವಿವರ, ಅಸೆಸ್‌ಮೆಂಟ್ ನಂ.1232. East: Land of Sy No.333/A1 and A2 / West: Sanduru Road / North: Sy No.338 pike 32.5 cents of Applicant Vendor / South: Sy No.333 B pike 0.50 Cents of Banada Huchappa **ಆಸ್ತಿ ನಂ.II :** ಉತ್ತರದಿಂದ-ದಕ್ಷಿಣಕ್ಕೆ (ಪೂರ್ವದ ಕಡೆ): 40 ಅಡಿ, ಉತ್ತರದಿಂದ ದಕ್ಷಿಣಕ್ಕೆ (ಪಶ್ಚಿಮದ ಕಡೆ) : 40 ಅಡಿ, ಪೂರ್ವದಿಂದ ಪಶ್ಚಿಮಕ್ಕೆ (ಉತ್ತರದ ಕಡೆ): 155 ಅಡಿ, ಪೂರ್ವದಿಂದ ಪಶ್ಚಿಮಕ್ಕೆ (ದಕ್ಷಿಣದ ಕಡೆ): 145 ಅಡಿ, ಒಟ್ಟು: 6,000 ಚದರ ಅಡಿ (13.4 ಸೇಂಟ್ಸ್). ಆಸ್ತಿ ನಂ.IIರ ಚಕ್ಕುಬಂದಿಯ ವಿವರ, ಅಸೆಸ್‌ಮೆಂಟ್ ನಂ.1232/ಎ. East: Land of Sy No.333/A1 and A2 / West: Sanduru Road / North: Property of N Nelakanta Shetty of Sy No.338 pike 26.5 Cents / South: Property of Sy No.333 B pike measuring 36 Cents of Applicant Vendor **ಯಾವುದೇ ಮಾಹಿತಿಗಾಗಿ ಅನೀಸ್ ವಾಜಿದ್, ಕಲೆಕ್ಷನ್ ಮ್ಯಾನೇಜರ್, ನಂ.6361990243ನ್ನು ಸಂಪರ್ಕಿಸಿ.**	19.05.2026 ಎನ್‌ಪಿಎ ದಿನಾಂಕ: 04.03.2026	SBB OVER DRAFT Loan A/c No. 923030066440519 Amount : Rs.65,00,000/- Total Amount: Rs.63,32,365 /- SBB OVER DRAFT Loan A/c No. 923030066437665 923060054302725 Amount : Rs.60,00,000/- & Rs.43,20,820/- Total Amount: Rs.1,02,18,479 /- ಒಟ್ಟು ಬಾಕಿ ಮೊತ್ತ: ರೂ.1,65,50,844/- ದಿನಾಂಕ: 15.05.2026ರಂದು ಇದ್ದಂತೆ.
3.	**(1) ಶ್ರೀ ಕುನಾಲ್ ಮಹಾದೇವರಾವ್ ಶಿಂಧೆ** ಬಿನ್ ಶ್ರೀ ಮಹಾದೇವರಾವ್ ಶಿಂಧೆ, ಪ್ಲಾಟ್ ನಂ.4389, ಚಾವತ್ ಗಲ್ಲಿ, ಬೆಳಗಾವಿ-590001. **ಮತ್ತೊಂದು ವಿಳಾಸ:** ಫ್ಲಾಟ್ ನಂ.414, ನಾಲ್ಕನೇ ಮಹಡಿ, ಸ್ಕೈ ಸಿಟಿ ಹೋಮ್ಸ್ ನಂ.446, 2ನೇ ಹಂತ, ಆರ್‌ಸಿ ನಗರ, ಬೆಳಗಾವಿ-590001. **(2) ಶ್ರೀ ನೀಲೇಶ್ ಮಾಧವರಾವ್ ಶಿಂಧೆ** ಬಿನ್ ಶ್ರೀ ಮಹಾದೇವರಾವ್ ಶಿಂಧೆ, ಸರ್ವೆ ನಂ.416/3, ಸಮರ್ಥ ನಗರ, 5ನೇ ಕ್ರಾಸ್ ಬೆಳಗಾಂ, ಬೆಳಗಾವಿ-590001. **ಮತ್ತೊಂದು ವಿಳಾಸ:** ಫ್ಲಾಟ್ ನಂ.414, ನಾಲ್ಕನೇ ಮಹಡಿ, ಸ್ಕೈ ಸಿಟಿ ಹೋಮ್ಸ್ ನಂ.446, 2ನೇ ಹಂತ, ಆರ್‌ಸಿ ನಗರ, ಬೆಳಗಾವಿ-590001.	**ಶ್ರೀ ಕುನಾಲ್ ಶಿಂಧೆ ಅವರಿಗೆ ಸೇರಿದ ಆಸ್ತಿಯ ವಿವರ** **ಷೆಡ್ಯೂಲ್ ಎ :** ಕೃಷಿಯೇತರ ಭೂಮಿಯ ಆರ್.ಎಸ್.ನಂ.688/1, ವಿಸ್ತೀರ್ಣ 35 ಗುಂಟೆಗಳು, ಅಂದರೆ 3540.95 ಚದರ ಮೀಟರ್‌ಗಳು, ಸಿಟಿಎಸ್ ನಂ.1347, ಒಟ್ಟು ವಿಸ್ತೀರ್ಣ 18,248.48 ಚದರ ಮೀಟರ್‌ಗಳು, ಈ ಆಸ್ತಿಯು ಪಾರ್ವತಿ ನಗರ, ಅಂಗೋಲ್ ತಾಲ್ಲೂಕು ಮತ್ತು ಬೆಳಗಾವಿ ಜಿಲ್ಲೆಯಲ್ಲಿದೆ ಮತ್ತು ದಕ್ಷಿಣ-ಬೆಳಗಾವಿ ಉಪ-ನೋಂದಣಿ ಅಧಿಕಾರದ ವ್ಯಾಪ್ತಿಯಲ್ಲಿದೆ ಮತ್ತು ಚಕ್ಕುಬಂದಿ [ಎನ್.ಎ ಆದೇಶದ ಪ್ರಕಾರ]: ಪೂರ್ವಕ್ಕೆ: ಆರ್.ಎಸ್.ನಂ.688/1 [ಭಾಗ], ಪಶ್ಚಿಮಕ್ಕೆ: ರಸ್ತೆ & ನಂತರ ಆರ್.ಎಸ್.ನಂ.689, ಉತ್ತರಕ್ಕೆ: ಆರ್.ಎಸ್.ನಂ.691, ದಕ್ಷಿಣಕ್ಕೆ: ಆರ್.ಎಸ್.ನಂ.688. **ಷೆಡ್ಯೂಲ್ ಬಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಫ್ಲಾಟ್ ನಂ.414, ಈ ಆಸ್ತಿಯು 4ನೇ ಮಹಡಿ, ವಿಸ್ತೀರ್ಣ 628 ಚದರ ಅಡಿ ಬಿಲ್ಟ್-ಅಪ್ ಪ್ರದೇಶ (784 ಚದರ ಅಡಿಗಳು ಸೂಪರ್ ಬಿಲ್ಟ್ ಅಪ್), "ಸ್ಕೈ ಸಿಟಿ ಹೋಮ್ಸ್", ಮತ್ತು ಬೆಳಗಾವಿ ಸಿಟಿ ಕಾರ್ಪೋರೇಷನ್ ಪಿಐಡಿ # 18063, ಷೆಡ್ಯೂಲ್ I ಆಸ್ತಿಯಲ್ಲಿದೆ. ಜೊತೆಗೆ ವೆಟ್ರಿಫೈಡ್ ಟೈಲ್ಸ್ ಫ್ಲೋರಿಂಗ್‌ನ್ನು ಒಳಗೊಂಡಿದ್ದು, ನಾಲ್ಕು ಚಕ್ರ ವಾಹನಗಳ ಪಾರ್ಕಿಂಗ್‌ನ್ನು ಖರೀದಿಸಿಲ್ಲ. ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಫ್ಲಾಟ್ ನಂ.413, ಪಶ್ಚಿಮಕ್ಕೆ: ಫ್ಲಾಟ್ ನಂ.415, ಉತ್ತರಕ್ಕೆ: ಫ್ಲಾಟ್ ನಂ.424, ದಕ್ಷಿಣಕ್ಕೆ: ಕಟ್ಟಡದ ಸೆಟ್‌ಬ್ಯಾಕ್. 204 ಚದರ ಅಡಿಗಳ ಅವಿಭಾಜಿತ ಭೂಮಿಯನ್ನು ಖರೀದಿದಾರರಿಗೆ ನೀಡಲಾಗಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ನಂ.8880041234ನ್ನು ಸಂಪರ್ಕಿಸಿ.**	22.05.2026 ಎನ್‌ಪಿಎ ದಿನಾಂಕ: 11.05.2026	POWER HOME VANILLA BRE Loan A/c No. PHR013807975020 Amount : Rs.17,16,706/- ಒಟ್ಟು ಬಾಕಿ ಮೊತ್ತ: ರೂ.16,85,273/- ದಿನಾಂಕ: 18.05.2026 ರಂದು ಇದ್ದಂತೆ.
4.	**(1) ಶ್ರೀ ಸಂತೋಷ್** ಮೈಲಾರೆ ಶ್ರೀ ಹಮಂತ್, **(2) ಶ್ರೀಮತಿ ಶಿಲ್ಪಾ ಕೋಂ** ಶ್ರೀ ಸಂತೋಷ್ ಮೈಲಾರೆ, **ಇವರಿಬ್ಬರ ವಿಳಾಸ:** 76 ಮುಧೋಳ ಬಿ ತಾಲ್ಲೂಕು, ಅವ್ರಾದ್ ಬೀದರ್, ಬೀದರ್ ಮುಧೋಳ, ಬೀದರ್-585443. **ಮತ್ತೊಂದು ವಿಳಾಸ:** ಪ್ಲಾಟ್ ನಂ.63, ಸಿಎಂಸಿ ನಂ.14-7-135/1, ಸರ್ವೆ ನಂ.51/136, Ex Servicement Housing Co-operative Society Layout, ಹಲ್ಡಕ್ಕೇರಿ ಕೆ ಬೀದರ್ -585443.	**ಶ್ರೀಮತಿ ಶಿಲ್ಪ ಅವರಿಗೆ ಸೇರಿದ ಆಸ್ತಿಯ ವಿವರ** ವಾಸಯೋಗ್ಯ ತೆರೆದ ಪ್ಲಾಟ್ ನಂ.63, ಸಿಎಂಸಿ ನಂ:14-7-135/1 (ಹೊಸ), ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12 ಮೀಟರ್ & ಉತ್ತರದಿಂದ ದಕ್ಷಿಣಕ್ಕೆ: 09 ಮೀಟರ್, ಸಮಾನವಾದ ಒಟ್ಟು ಪ್ರದೇಶದ ವಿಸ್ತೀರ್ಣ 108 ಚದರ ಮೀಟರ್ (1162 ಚದರ ಮೀಟರ್), ಭೂಮಿ ಸರ್ವೆ ನಂ.51/136ರಲ್ಲಿ ಲೇಔಟ್‌ಗಳನ್ನಾಗಿ ಅನುಮೋದಿಸಲಾಗಿದ್ದು, Ex- Servicesmen Housing Co-operative Socity Layout, ಹಳ್ಳಡ್ಕೇರಿ (ಕೆ) ಬೀದರ್‌ನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.56, ಪಶ್ಚಿಮಕ್ಕೆ: 9 ಮೀಟರ್ ಅಗಲದ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.62, ದಕ್ಷಿಣಕ್ಕೆ: ಪ್ಲಾಟ್ ನಂ.64. (ಇನ್ನು ಮುಂದೆ "ಮಾರಾಟ ಒಪ್ಪಂದದ ಪ್ರಕಾರ ತೆರೆದ ಪ್ಲಾಟ್" ಎಂದು ಕರೆಯಲಾಗುತ್ತದೆ.) **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, ಮೊಬೈಲ್ ನಂ.9916566630ನ್ನು ಸಂಪರ್ಕಿಸಿ.**	22.05.2026 ಎನ್‌ಪಿಎ ದಿನಾಂಕ: 11.05.2026	POWER HOME VANILLA BRE Loan A/c No. PHR034210396321 Amount : Rs.15,49,408/- ಒಟ್ಟು ಬಾಕಿ ಮೊತ್ತ: ರೂ.15,60,408/- ದಿನಾಂಕ: 18.05.2026 ರಂದು ಇದ್ದಂತೆ.
5.	**(1) ಶ್ರೀ ಮೊಹಮ್ಮದ್ ತಾಹೆರ್ ಪಟೇಲ್** ಬಿನ್ ಎಂ. ಖುರ್ಷಿದ್ ಪಟೇಲ್ **(2) ಶ್ರೀಮತಿ ನಜ್ರೀಮ್ ಬೇಗಂ** ಕೋಂ ಶ್ರೀ ಮೊಹಮ್ಮದ್ ತಾಹೆರ್ ಪಟೇಲ್, **ಇವರಿಬ್ಬರ ವಿಳಾಸ:** ನಂ.278 ಭೈಲಿಂಪುರ ಸುಲಪೇತ್ ಚಿಂಚೋಳಿ ಗುಲ್ಬರ್ಗಾ-585324. **ಮತ್ತೊಂದು ವಿಳಾಸ :** ಪ್ಲಾಟ್ ನಂ.2-907/122/125/ಎ, ಬಡೇಪುರ ಗುಲ್ಬರ್ಗಾ ಎಂಜಿ ರಸ್ತೆಯ ಹತ್ತಿರ, ಕರ್ನಾಟಕ-585101. **ಮತ್ತೊಂದು ವಿಳಾಸ :** ಪ್ಲಾಟ್ ನಂ.1-72, ಅಂಗಡಿ ನಂ.28, ಎರಡನೇ ಮಹಡಿ ಜಿಹೆಚ್‌ಕೆ ಶೆರಿಫ್ ಫಾರ್ಚೂನ್ ಮಾಲ್ ಪ್ರೈಮ್ ಮಾಲ್, ಶೀಟ್ ನಂ.104, ಬ್ಲಾಕ್ ನಂ. VIII, ಕೆಪಿಟಿಸಿಎಲ್ ಕಚೇರಿ, ಕಲಬುರ್ಗಿ, ಸಿಟಿಎಸ್ ನಂ.949, ಸಿಬಿಆರ್‌ಪಿ ನಂ.172/ಎಸ್‌ಎಫ್/28, ಜಿಇಎಸ್ ಕಾಮ್ ಕಚೇರಿ ಎದುರು, ಗುಲ್ಬರ್ಗಾ-585102.	**ಶ್ರೀ ಮೊಹಮ್ಮದ್ ತಾಹಿರ್ ಪಟೇಲ್ ಅವರಿಗೆ ಸೇರಿದ ಆಸ್ತಿಯ ವಿವರ** **ಆಸ್ತಿ-I :** ಪ್ಲಾಟ್ ನಂ.125/ಎ, ವಿಸ್ತೀರ್ಣ 2550 ಚದರ ಅಡಿ, ಈ ಆಸ್ತಿಯು ಸರ್ವೆ ನಂ.122, ಬಡೇಪುರ ಬಾಪುಗೌಡ ದರ್ಶನಾಪುರ ಅಭಿವೃದ್ಧಿ ಯೋಜನೆ ಹಂತ-II ಕಲಬುರ್ಗಿಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: 30 ಅಗಲದ ರಸ್ತೆ, ಪಶ್ಚಿಮಕ್ಕೆ: ಪಾರ್ಕ್ ಪ್ರದೇಶ, ಉತ್ತರಕ್ಕೆ: ಪ್ಲಾಟ್ ನಂ.125, ದಕ್ಷಿಣಕ್ಕೆ: 40' ಅಗಲದ ರಸ್ತೆ. **ಆಸ್ತಿ-II : ಷೆಡ್ಯೂಲ್ "ಎ" :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ಕಾರ್ಪೋರೇಷನ್ ಮನೆ ನಂ.1-72, ಸಿಟಿಎಸ್ ನಂ.949, 950 & 951, ಶೀಟ್ ನಂ.104, ಬ್ಲಾಕ್ ನಂ.VIII, ಒಟ್ಟು ವಿಸ್ತೀರ್ಣ 30990 ಚದರ ಅಡಿ, ಈ ಆಸ್ತಿಯು ಸ್ಟೇಷನ್ ರಸ್ತೆ, ಕಲಬುರ್ಗಿಯಲ್ಲಿದ್ದು, ಜಿ.ಹೆಚ್.ಕೆ. ಶೆರಿಫ್ ಫಾರ್ಚೂನ್ ಮಾಲ್ ಪ್ರಸ್ತುತ "ಪ್ರೈಮ್ ಮಾಲ್" ಅನ್ನು ನಿರ್ಮಿಸಲಾಗಿದೆ, ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ರೈಸುದ್ದೀನ್ ಚೂಹೆ ಮತ್ತು ಅವರ ಸಹೋದರಿ ಅವರಿಗೆ ಸೇರಿದ ಆಸ್ತಿಯ ಸಿಟಿಎಸ್ ನಂ.952 ರಿಂದ 957, ಪಶ್ಚಿಮಕ್ಕೆ: 100' ಅಗಲದ ಸರ್ಕಾರಿ ರಸ್ತೆ ಮತ್ತು ನಂತರದ ಆಸ್ತಿ ಸಿಟಿಎಸ್ ನಂ.1011, ಉತ್ತರಕ್ಕೆ: ಶ್ರೀ ಅಬ್ದುಲ್ ಮಜೀದ್ ಚೂಹೆ ಮತ್ತು ಸಹೋದರರಿಗೆ ಸೇರಿದ ಆಸ್ತಿಯ ಸಿಟಿಎಸ್ ನಂ.948, ದಕ್ಷಿಣಕ್ಕೆ: ಹೋಟೆಲ್ ಪರಿವಾರ್‌ನ ಲೇಟ್ ಶ್ರೀ ಮನೋಹರ್‌ರಾವ್ ರಾಯ್ಕರ್ ಅವರ ಆಸ್ತಿಯ ನಂ.1-73, ಸಿಟಿಎಸ್ ನಂ.961 & 960. **ಷೆಡ್ಯೂಲ್ "ಬಿ" :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಜಿ.ಹೆಚ್.ಕೆ. ಶೆರಿಫ್ ಫಾರ್ಚೂನ್ ಮಾಲ್ ಎಂದು ಕರೆಯಲ್ಪಡುವ ಕಟ್ಟಡದ ತಳಮಹಡಿಯಲ್ಲಿ ಪಾರ್ಕಿಂಗ್, ನೆಲ ಮಹಡಿ, ಮೊದಲನೇ ಮಹಡಿ, ಎರಡನೇ ಮಹಡಿ & ನಾಲ್ಕನೇ ಮಹಡಿಯ ಅಂಗಡಿಯ ಕಛೇರಿ ಆವರಣ ಇತ್ಯಾದಿ ಜೊತೆಗೆ ಟೆರೇಸ್ ಪ್ರಸ್ತುತ ಜಿ.ಹೆಚ್.ಕೆ. ಶೆರಿಫ್ ಫಾರ್ಚೂನ್ ಮಾಲ್ ಎಂದು ಕರೆಯಲಾಗುತ್ತದೆ, ಈ ಆಸ್ತಿಯು ಸ್ಟೇಷನ್ ರಸ್ತೆ, ಕಲಬುರ್ಗಿ ಜಿ.ಹೆಚ್.ಕೆ. ಶೆರಿಫ್ ಫಾರ್ಚೂನ್ ಮಾಲ್ ಆವರಣ ಪ್ರಸ್ತುತ "ಪ್ರೈಮ್ ಮಾಲ್" ಆಸ್ತಿಯ ಸಿಟಿಎಸ್ ನಂ.949, 950 & 951, ಶೀಟ್ ನಂ.104, ಬ್ಲಾಕ್ ನಂ.VIIIರಲ್ಲಿದೆ. **ಷೆಡ್ಯೂಲ್ (ಸಿ) ಮಾರಾಟದಲ್ಲಿರುವ ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಅಂಗಡಿ ನಂ.ಎಸ್‌ಎಫ್-28, ಕಾರ್ಪೋರೇಷನ್ ನಂ.1-72/ಎಸ್‌ಎಫ್/28, ವಿಸ್ತೀರ್ಣ 420 ಚದರ ಅಡಿ, ಎರಡನೇ ಮಹಡಿಯಲ್ಲಿ ಸಿಟಿಎಸ್ ನಂ.949ರ ಭಾಗ, ಶೀಟ್ ನಂ.104, ಬ್ಲಾಕ್ ನಂ.VIII, ಈ ಆಸ್ತಿಯು ಕೆಪಿಟಿಸಿಎಲ್ ಕಛೇರಿ ಎದುರು, ಸ್ಟೇಷನ್ ಮುಖ್ಯ ರಸ್ತೆ, ಕಲಬುರ್ಗಿ ಜಿ.ಹೆಚ್.ಕೆ. ಶೆರಿಫ್ ಫಾರ್ಚೂನ್ ಮಾಲ್ ಪ್ರಸ್ತುತ "ಪ್ರೈಮ್ ಮಾಲ್" ಆವರಣದಲ್ಲಿದೆ ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 35' ಮತ್ತು ಉತ್ತರದಿಂದ ದಕ್ಷಿಣಕ್ಕೆ: 12' ಮತ್ತು ಮೇಲೆ ತಿಳಿಸಿದ ಅಗಂಡಿಯ ಸೂಪರ್ ಬಿಲ್ಟ್ ಅಪ್ ಪ್ರದೇಶ ಮತ್ತು ಕಾರ್ಪೆಟ್ ಪ್ರದೇಶದ ವಿಸ್ತೀರ್ಣ 336 ಚದರ ಅಡಿ ಮತ್ತು ಯುಡಿಎಸ್ ಭೂಮಿಯ ವಿಸ್ತೀರ್ಣ 214 ಚದರ ಅಡಿ ಮತ್ತು ಆಸ್ತಿಯ ಒಟ್ಟು ವಿಸ್ತೀರ್ಣ 39.01 ಚದರ ಮೀಟರ್‌ಗಳು, ಚಕ್ಕುಬಂದಿ: ಪೂರ್ವಕ್ಕೆ: 10' ಅಗಲ ಸಾಮಾನ್ಯ ಕಾರಿಡಾರ್ & ಆಟ್ರಿನ್, ಪಶ್ಚಿಮಕ್ಕೆ: ಅದರ ಕೆಳಗೆ ಕಟ್ಟಡದ ತೆರೆದ ಸ್ಥಳ ನಂತರ ಸ್ಟೇಷನ್ ಮುಖ್ಯ ರಸ್ತೆ, ಉತ್ತರಕ್ಕೆ: ಅಂಗಡಿ ನಂ.ಎಸ್‌ಎಫ್-29 ರ ಸಾಮಾನ್ಯ ಗೋಡೆ, ದಕ್ಷಿಣಕ್ಕೆ: ಅಂಗಡಿ ನಂ.ಎಸ್‌ಎಫ್-27 ರ ಸಾಮಾನ್ಯ ಗೋಡೆ. **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, ಮೊಬೈಲ್ ನಂ..9916566630ನ್ನು ಸಂಪರ್ಕಿಸಿ.**	29.04.2026 ಎನ್‌ಪಿಎ ದಿನಾಂಕ: 12.03.2026	ASSET POWER BRE Loan A/c No. LPR034210749712 Amount : Rs.1,01,00,000/- Total Amount: Rs.92,41,479/- ASSET POWER BRE Loan A/c No. PCR034209127297 Amount : Rs.25,95,312/- Total Amount: Rs.23,47,309/- ಒಟ್ಟು ಬಾಕಿ ಮೊತ್ತ: ರೂ.1,15,88,788/- ದಿನಾಂಕ: 20.03.2026 ರಂದು ಇದ್ದಂತೆ.
6.	**(1) ಮೆ॥ ವಿನಾಯಕ್ ಲಾಜಿಸ್ಟಿಕ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ.ಸುರೇಶ್, ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀಮತಿ ಮಹಾನಂದ ಸುರೇಶ್ ನಾಗೂರ್,** ಅಂಗಡಿ ನಂ.273, ಮಹಾತ್ಮ ಗಾಂಧಿ ಟ್ರಕ್ ಟರ್ಮಿನಲ್ ಆಟೋ ನಗರ ರಿಂಗ್ ರೋಡ್ ಕಲಬುರ್ಗಿ ಗುಲ್ಬರ್ಗಾ-585104. **(2) ಶ್ರೀ ಸುರೇಶ** ಬಿನ್ ಶ್ರೀ ವಿಠ್ಠಲ್ ನಾಗೂರ್, ಪ್ಲಾಟ್ ನಂ.12,2 ಹೆಚ್‌ಐಜಿ ಹೈಕೋರ್ಟ್ ಹತ್ತಿರ ಅಕ್ಕಮಹಾದೇವಿ ಕಾಲೋನಿ, ಬಿದ್ದಾಪುರ, ಗುಲ್ಬರ್ಗಾ, ಕಲಬುರಗಿ-585103. **(3) ಶ್ರೀಮತಿ ಮಹಾನಂದ ಸುರೇಶ್ ನಾಗೂರ್** ಕೋಂ ಶ್ರೀ ಸುರೇಶ್ ನಾಗೂರ್, ಪ್ಲಾಟ್ ನಂ.12,2 ಹೆಚ್‌ಐಜಿ, ಹೈಕೋರ್ಟ್ ಹತ್ತಿರ, ಅಕ್ಕಮಹಾದೇವಿ ಕಾಲೋನಿ, ಬಿದ್ದಾಪುರ, ಗುಲ್ಬರ್ಗ, ಕಲಬುರಗಿ-585103.	**ಶ್ರೀ.ಸುರೇಶ್ ಮತ್ತು ಶ್ರೀಮತಿ.ಮಹಾನಂದ ಸುರೇಶ್ ನಾಗೂರ್ ಅವರಿಗೆ ಸೇರಿದ ಆಸ್ತಿಯ ವಿವರ** ಕೆಹೆಚ್‌ಬಿ ನಿವೇಶನ ನಂ.12/2 HIG-II W/W ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 18 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 216 ಚದರ ಮೀಟರ್‌ಗಳು (ಅಂದರೆ 2324.16 ಚದರ ಅಡಿ), ಈ ಆಸ್ತಿಯು ಕೆಹೆಚ್‌ಬಿ ಅಕ್ಕಮಹಾದೇವಿ ಕಾಲೋನಿ, ಏರ್‌ಪೋರ್ಟ್ ಭೂಮಿ, ಬಿದ್ದಾಪುರ, ಕಲಬುರ್ಗಿಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: 30'ಅಗಲದ ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.19 HIG-II W/W, ಉತ್ತರಕ್ಕೆ: ನಿವೇಶನ ನಂ.11 HIG-II W/W, ದಕ್ಷಿಣಕ್ಕೆ: ನಿವೇಶನ ನಂ.13 HIG-II W/W. **ಯಾವುದೇ ಮಾಹಿತಿಗಾಗಿ ಅನೀಸ್ ವಾಜಿದ್, ಕಲೆಕ್ಷನ್ ಮ್ಯಾನೇಜರ್, ನಂ.6361990243ನ್ನು ಸಂಪರ್ಕಿಸಿ.**	19.05.2026 ಎನ್‌ಪಿಎ ದಿನಾಂಕ: 24.07.2025	SBB OVER DRAFT Loan A/c No. 920030074639476 Amount : Rs.20,00,000/- ಒಟ್ಟು ಬಾಕಿ ಮೊತ್ತ: ರೂ.13,22,998 /- ದಿನಾಂಕ: 15.05.2026 ರಂದು ಇದ್ದಂತೆ.
7.	**(1) ಮೆ॥ ಶ್ರೀ ಸಾಯಿ ಎಂಟರ್‌ಪ್ರೈಸಸ್ ಇದನ್ನು ಪ್ರತಿನಿಧಿಸುವವರು ಶ್ರೀ ಟಿ ಎಸ್ ಗಿರೀಶ್** ಸೆಲ್ಲರ್ ಭಾಗ, ಸರ್ವೆ ನಂ.19/37, ಅಣ್ಣಪ್ಪ ಆರ್ಕೇಡ್, ಅರವತೊಕ್ಲು ಗ್ರಾಮ, ವಜ್ರಪೇಟೆ, ಗೋಣಿಕೊಪ್ಪಲ್, ಕೊಡಗು-571213. **(2) ಶ್ರೀ ಟಿ ಎಸ್ ಗಿರೀಶ್ ಬಿನ್** ಶ್ರೀ ಟಿ ಎ ಶಿವಣ್ಣ, ರಾಂದೂರು ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು, ಕಂಪಲಾಪುರ ಪೋಸ್ಟ್, ಮೈಸೂರು-571107.	**ಶ್ರೀ ಟಿ ಎಸ್ ಗಿರೀಶ್ ರವರಿಗೆ ಸೇರಿದ ಆಸ್ತಿಯ ವಿವರ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.1028, ಜೆ.ಎನ್.ನಂ.1020, ಈ ಆಸ್ತಿಯು ಕಂಪಲಪುರ ಗ್ರಾಮ, ರಾವಂದೂರು ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿದೆ, ವಿಸ್ತೀರ್ಣ 17.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 23.00 ಮೀಟರ್‌ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ನಿಂಗರಾಜು ರವರ ಆಸ್ತಿ, ಪಶ್ಚಿಮಕ್ಕೆ: ಜನತಾ ನಿವೇಶನ, ಉತ್ತರಕ್ಕೆ: ಸರ್ಕಾರಿ ರಸ್ತೆ, ದಕ್ಷಿಣಕ್ಕೆ: ಶ್ರೀ ನಿಂಗರಾಜು ರವರ ಆಸ್ತಿ. **ಯಾವುದೇ ಮಾಹಿತಿಗಾಗಿ ಅನೀಸ್ ವಾಜಿದ್, ಕಲೆಕ್ಷನ್ ಮ್ಯಾನೇಜರ್ 6361990243ನ್ನು ಸಂಪರ್ಕಿಸಿ.**	19.05.2026 ಎನ್‌ಪಿಎ ದಿನಾಂಕ: 02.06.2024	SBB OVERD RAFT Loan A/c No. 920030012417874 Amount : Rs.43,00,000/- Total Amount: Rs. 39,55,404/- OVERD RAFT Loan A/c No. 920020014552262 ಒಟ್ಟು ಬಾಕಿ ಮೊತ್ತ: ರೂ. 39,55,404/- ದಿನಾಂಕ: 15.05.2026ರಂದು ಇದ್ದಂತೆ.

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್-13 ರ ಉಪ-ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ-ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 08.06.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಕದನ ವಿರಾಮದ ಬಳಿಕ ಮೊದಲ ಬಾರಿ ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ
ಟ್ರಂಪ್ ಎಚ್ಚರಿಕೆ ನಡುವೆಯೇ ಇರಾನಿನ 20 ನಗರಗಳ ಮೇಲೆ ಇಸ್ರೇಲ್ ಪ್ರತಿದಾಳಿ

ಕೊಲ್ಲಿಯಲ್ಲಿ ಮತ್ತೆ ಭುಗಿಲೆದ್ದ ಯುದ್ಧ

ಟೆಲ್ ಅವಿವ್/ಜೆರುಸಲೇಂ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶಾಂತಿ ಮಂತ್ರದ ನಡುವೆಯೇ ಇರಾನ್ ಮತ್ತು ಇಸ್ರೇಲ್ ನಡುವೆ ಯುದ್ಧ ಮತ್ತೆ ಭುಗಿಲೆದ್ದಿದೆ. ಏಪ್ರಿಲ್‌ನಲ್ಲಿ ಕದನ ವಿರಾಮ ಜಾರಿಗೆ ಬಂದ ನಂತರ ಇರಾನ್ ಮೊದಲ ಬಾರಿಗೆ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಇದರ ಬೆನ್ನಿಗೇ ಇಸ್ರೇಲ್ ಸೇನೆ ಕೂಡ ಇರಾನ್‌ನ 20 ಸ್ಥಳಗಳನ್ನು ಗುರಿಯಾಗಿಸಿ ಪ್ರತಿದಾಳಿ ನಡೆಸಿದೆ. ಇದರೊಂದಿಗೆ ಮಧ್ಯಪ್ರಾಚ್ಯದಲ್ಲಿ ಮತ್ತೆ ಉದ್ವಿಗ್ನತೆ ತಲೆದೋರಿದೆ.

ಕಳೆದ ಕೆಲ ದಿನಗಳಿಂದ ಶಾಂತಿ ಒಪ್ಪಂದ ಕುರಿತ ಅಮೆರಿಕದ ವಿನಂತಿಗಳನ್ನು ಧಿಕ್ಕರಿಸುತ್ತಲೇ ಬಂದ ಇರಾನ್ ಭಾನುವಾರ ರಾತ್ರಿ ಇಸ್ರೇಲ್‌ನ ದಕ್ಷಿಣ ಉಪನಗರಗಳನ್ನು ಗುರಿಯಾಗಿಸಿ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಇದರಿಂದ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಅನಿಶ್ಚಿತತೆ ಮುಂದುವರಿದಿದೆ. ಇರಾನ್ ಕ್ಷಿಪಣಿ ದಾಳಿ ನಡೆಸಿದ ಬೆನ್ನಲ್ಲೇ ಸಂಭವನೀಯ ಪ್ರತಿಕ್ರಿಯೆಗಾಗಿ ತನ್ನ ಪಶ್ಚಿಮ ವಾಯುಪ್ರದೇಶವನ್ನು ಇರಾನ್ ಮುಚ್ಚಿದೆ. ಸಂಭಾವ್ಯ ಇಸ್ರೇಲ್ ಆಕ್ರಮಣಕ್ಕೆ ಸಿದ್ಧವಾಗಲು ನೆರೆಯ ಇರಾಕ್ ಮತ್ತು ಸಿರಿಯಾ ಕೂಡ ತಮ್ಮ ವಾಯುಸೀಮೆಯನ್ನು ಬಂದ್ ಮಾಡಿವೆ.

ಇಸ್ರೇಲ್ ಯಾವುದೇ ಎಚ್ಚರಿಕೆ ನೀಡದೆ ಬೇರುತ್ ಸೇರಿದಂತೆ ಲೆಬನಾನಿನ ದಕ್ಷಿಣ ಉಪನಗರಗಳ ಮೇಲೆ ದಾಳಿ ಮಾಡಿದೆ. ಇದಕ್ಕೆ ಪ್ರತಿಯಾಗಿ ಈ ದಾಳಿ ನಡೆಸಲಾಗಿದೆ ಎಂದು ಇರಾನ್ ತನ್ನ ನಡೆಯನ್ನು ಸಮರ್ಥಿಸಿಕೊಂಡಿದೆ.

ಇಸ್ರೇಲ್ ಪ್ರತಿದಾಳಿ : ಇರಾನ್ ಕ್ಷಿಪಣಿ ದಾಳಿಯ ಬೆನ್ನಲ್ಲೇ ಇಸ್ರೇಲಿ ಸೇನೆ ಕೂಡ ಇರಾನ್‌ನ 20 ಸ್ಥಳಗಳನ್ನು ಗುರಿಯಾಗಿಸಿ ಪ್ರತಿದಾಳಿ ನಡೆಸಿದೆ. ಇಸ್ರೇಲ್ ಸೇನೆ ಬಿಡುಗಡೆ ಮಾಡಿದ ಪ್ರಕಟಣೆಯ ಪ್ರಕಾರ, ಇರಾನ್‌ನ ಪಶ್ಚಿಮ ಮತ್ತು ಮಧ್ಯ ಭಾಗದಲ್ಲಿರುವ ಸೇನಾ ಗುರಿಗಳನ್ನು ಗುರಿಯಾಗಿಸಿಕೊಂಡು ಬಾಂಬ್ ದಾಳಿ ನಡೆಸಲಾಗಿದೆ. ಇರಾನ್ ಆಡಳಿತಕ್ಕೆ ಸೇರಿದ ಸೇನಾ ಮೂಲ ಸೌಕರ್ಯಗಳ ಮೇಲೆ ನಿಖರ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದರೂ, ಯಾವ ಪ್ರದೇಶಗಳನ್ನು ಹೊಡೆದುರುಳಿಸಲಾಗಿದೆ ಎಂಬ ವಿವರಗಳನ್ನು ಇನ್ನೂ ಬಹಿರಂಗಪಡಿಸಿಲ್ಲ. ದಾಳಿಯ ಬಳಿಕ ಇರಾನ್‌ನ ಇಸ್ಫಹಾನ್, ಕರಾಜ್, ತಬ್ರೀಜ್ ಹಾಗೂ ರಾಜಧಾನಿ ಟೆಹ್ರಾನ್ ಸೇರಿದಂತೆ ಹಲವು ನಗರಗಳಲ್ಲಿ ಸ್ಫೋಟಗಳ ಶಬ್ದ ಕೇಳಿಬಂದಿರುವುದಾಗಿ ಸರಕಾರಿ ಮಾಧ್ಯಮಗಳು ವರದಿ ಮಾಡಿವೆ. ತನ್ನ ಮೇಲೆ ದಾಳಿ ಮಾಡುವ ಮೂಲಕ ಇರಾನ್ 'ಗಂಭೀರ ತಪ್ಪು' ಮಾಡಿದೆ ಎಂದು ಇಸ್ರೇಲ್‌ನ ಮಿಲಿಟರಿ ಹೇಳಿದೆ. ಇರಾನ್‌ನ 11 ಕ್ಷಿಪಣಿಗಳನ್ನು ಹೊಡೆದು ರುಳಿಸಲಾಗಿದೆ ಎಂದು ತಿಳಿಸಿದೆ. ಜ್‌ಬುಲ್ಲಾ ಬಂಡು ಕೋರರ ಗುಂಪು ಉತ್ತರ ಇಸ್ರೇಲ್ ಕಡೆಗೆ ಗುಂಡಿನ ದಾಳಿ ನಡೆಸಿದ್ದಕ್ಕೆ ಪ್ರತೀಕಾರವಾಗಿ ದಕ್ಷಿಣ ಬೇರೂತ್‌ನ ಉಪನಗರಗಳ ಮೇಲೆ ವೈಮಾನಿಕ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿಕೊಂಡಿದ್ದಾರೆ.

ಟ್ರಂಪ್ ಎಚ್ಚರಿಕೆಗೆ ಕ್ಯಾರೇ ಎನ್ನದ ಬೆಂಜಮಿನ್

ಅಮೆರಿಕದ ಅಧ್ಯಕ್ಷ ಡೊನಾಲ್ಡ್, ಇರಾನ್‌ನ ಕ್ಷಿಪಣಿ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳಬೇಡಿ, ರಾಜತಾಂತ್ರಿಕತೆಗೆ ಹೆಚ್ಚಿನ ಸಮಯ ನೀಡಬೇಕೆಂದು ಅಧ್ಯಕ್ಷ ಬೆಂಜಮಿನ್ ನೆತನ್ಯಾಹುಗೆ ತಿಳಿಸಿದ ಬಳಿಕವೂ ಇಸ್ರೇಲ್ ತನ್ನ ದಾಳಿ ಮುಂದುವರಿಸಿದೆ. ಲೆಬನಾನ್ ಮೇಲೆ ದಾಳಿ ಮುಂದುವರಿಸಿರುವ ಇಸ್ರೇಲ್ ನಡೆಯನ್ನು ಖಂಡಿಸಿದ್ದ ಕಳೆದ ವಾರ ಖುದ್ದಾಗಿ ನೆತನ್ಯಾಹುಗೆ ಕರೆ ಮಾಡಿ ತರಾಟೆಗೆ ತೆಗೆದುಕೊಂಡಿದ್ದರು. ಆದರೆ ಇಸ್ರೇಲ್ ಆಗಲಿ, ಇರಾನ್ ಆಗಲಿ ಈಗ ಟ್ರಂಪ್ ಮಾತು ಕೇಳದೆ ಯುದ್ಧ ಮುಂದುವರಿಸಲು ಸಜ್ಜಾಗಿವೆ. ತಾನೇ ಆರಂಭಿಸಿದ ಯುದ್ಧವನ್ನು ಹೇಗಾದರೂ ಮಾಡಿ ನಿಲ್ಲಿಸಬೇಕೆಂಬ ಟ್ರಂಪ್ ಆಶಯಕ್ಕೆ ಸದ್ಯದ ಪರಿಸ್ಥಿತಿ ವಿರುದ್ಧವಾಗಿದೆ.

ಇರಾನ್ ತೊರೆಯಲು ಭಾರತೀಯರಿಗೆ ಸೂಚನೆ

ದೆಹಲಿ: ಪಶ್ಚಿಮ ಏಷ್ಯಾದಲ್ಲಿ ಉದ್ಭವಿಸಿರುವ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಭಾರತ ಸರಕಾರವು ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳಿಗೆ ತಕ್ಷಣವೇ ಆ ದೇಶವನ್ನು ತೊರೆಯುವಂತೆ ಮತ್ತೊಮ್ಮೆ ಸಲಹೆ ನೀಡಿದೆ. ಪ್ರಾಂತ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ ಮತ್ತು ಸಂಘರ್ಷದ ಸಾಧ್ಯತೆಯನ್ನು ಪರಿಗಣಿಸಿ, ಭಾರತೀಯ ನಾಗರಿಕರು ಇರಾನ್‌ನಲ್ಲಿ ತಮ್ಮ ಸುರಕ್ಷತೆಯ ಬಗ್ಗೆ ಅತ್ಯಂತ ಜಾಗರೂಕರಾಗಿರಬೇಕು. ಸಾಧ್ಯವಾದಷ್ಟು ಬೇಗ ದೇಶವನ್ನು ತೊರೆಯಬೇಕೆಂದು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸಲಹೆ ನೀಡಿದೆ. ಇರಾನ್‌ಗೆ ಅಗತ್ಯವಿಲ್ಲದ ಪ್ರಯಾಣವನ್ನು ಮಾಡದಂತೆಯೂ ಸರಕಾರ ದೇಶವಾಸಿಗಳಿಗೆ ಸೂಚಿಸಿದೆ. ಇರಾನ್‌ನಲ್ಲಿರುವ ಭಾರತೀಯ ನಾಗರಿಕರು ಅಲ್ಲಿನ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿರಲು ಮತ್ತು ಅಲ್ಲಿನ ಹೈ ಕಮಿಷನ್ ನೀಡುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಕೋರಲಾಗಿದೆ. ಪ್ರಸ್ತುತ ಇರಾನ್‌ನಲ್ಲಿರುವವರು ಲಭ್ಯವಿರುವ ಯಾವುದೇ ಮಾರ್ಗಗಳ ಮೂಲಕ ದೇಶವನ್ನು ತೊರೆಯುವಂತೆಯೂ ಅದು ಒತ್ತಾಯಿಸಿದೆ.

ಪ್ರಬಲ ಭೂಕಂಪದಲ್ಲಿ ನಡುಗಿದ ಫಿಲಿಪ್ಪೈನ್ಸ್: 32ಕ್ಕೂ ಅಧಿಕ ಸಾವು

ನಾಲ್ಕು ದೇಶಗಳಲಿ ಸುನಾಮಿ ಭೀತಿ

ಮನಿಲಾ: ದಕ್ಷಿಣ ಫಿಲಿಪೈನ್ಸ್‌ನ ಮಿಂಡಾನಾವೊ ಪ್ರದೇಶದಲ್ಲಿ ಸೋಮವಾರ ಮುಂಜಾನೆ ಸಂಭವಿಸಿದ 7.8 ತೀವ್ರತೆಯ ಭೀಕರ ಭೂಕಂಪಕ್ಕೆ ಕನಿಷ್ಠ 32 ಜನರು ಬಲಿಯಾಗಿದ್ದು, 130ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಕರಾವಳಿ ತೀರಗಳಿಗೆ 1 ಮೀಟರ್ ಎತ್ತರದ ಸುನಾಮಿ ಅಲೆಗಳು ಅಪ್ಪಳಿಸಿದ್ದು, ಅಧಿಕಾರಿಗಳು ಜನರನ್ನು ತಕ್ಷಣವೇ ಸುರಕ್ಷಿತ ಹಾಗೂ ಎತ್ತರದ ಪ್ರದೇಶಗಳಿಗೆ ಸ್ಥಳಾಂತರಗೊಳ್ಳುವಂತೆ ಸೂಚಿಸಿದ್ದಾರೆ. ಮುಂಜಾನೆ 7:37 ರ ಸುಮಾರಿಗೆ ಜನರಲ್ ಸ್ಯಾಂಟೋಸ್ ನಗರದಿಂದ ನೈಋತ್ಯಕ್ಕೆ 13 ಕಿಮೀ ದೂರದಲ್ಲಿ, ಸಮುದ್ರದ ಆಳದಲ್ಲಿ ಈ ಭೂಕಂಪನ ಕೇಂದ್ರಿಕೃತವಾಗಿತ್ತು. ಭೂಕಂಪದ ತೀವ್ರತೆಗೆ ಸರಾಂಗಣಿ ಪ್ರಾಂತ್ಯದ ಗ್ಲಾನ್ ಎಂಬ ಪರ್ವತ ಪ್ರದೇಶದಲ್ಲಿ ಭಾರಿ ಭೂಕುಸಿತ ಸಂಭವಿಸಿ 13 ಮಂದಿ ಜೀವಂತ ಸಮಾಧಿಯಾಗಿದ್ದಾರೆ. ಜನರಲ್ ಸ್ಯಾಂಟೋಸ್ ನಗರದಲ್ಲಿ ವಾಣಿಜ್ಯ ಸಂಕೀರ್ಣಗಳು, ಹೋಟೆಲ್‌ಗಳು ಮತ್ತು ಪ್ರಮುಖ ಸೇತುವೆಯೊಂದು ಭಾಗಶಃ ಕುಸಿದಿವೆ. ವಿಮಾನ ನಿಲ್ದಾಣವನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದ್ದು, ಹಲವು ವಿಮಾನಯಾನಗಳನ್ನು ರದ್ದುಗೊಳಿಸಲಾಗಿದೆ. ನೆರೆರಾಷ್ಟ್ರಗಳಲ್ಲೂ ಆತಂಕ

ಪೆಸಿಫಿಕ್ ಸುನಾಮಿ ಎಚ್ಚರಿಕೆ ಕೇಂದ್ರವು 3 ಮೀಟರ್‌ವರೆಗೆ ಅಲೆಗಳು ಏಳುವ ಸಾಧ್ಯತೆಯಿದೆ ಎಂದು ಎಚ್ಚರಿಸಿದೆ. ಇದರ ಬೆನ್ನಲ್ಲೇ ನೆರೆಯ ಇಂಡೋನೇಷ್ಯಾ, ಮಲೇಷ್ಯಾ ಮತ್ತು ಜಪಾನ್ ದೇಶಗಳಲ್ಲೂ ಸಣ್ಣ ಪ್ರಮಾಣದ ಸುನಾಮಿ ಅಲೆಗಳು ಪತ್ತೆಯಾಗಿದ್ದು, ಅಲ್ಲಿಯೂ ಕಟ್ಟೆಚ್ಚರ ವಹಿಸಲಾಗಿದೆ. ಫಿಲಿಪೈನ್ಸ್ ಅಧ್ಯಕ್ಷ ಫರ್ಡಿನೆಂಡ್ ಮಾರ್ಕೋಸ್ ಜೂನಿಯರ್ ಅವರು ರಕ್ಷಣಾ ಕಾರ್ಯಾಚರಣೆಗೆ ಸಂಪೂರ್ಣ ಬೆಂಬಲ ಘೋಷಿಸಿದ್ದಾರೆ. ಭೂಕಂಪದಲ್ಲಿ ಆದ ಸಾವು ನೋವಿಗೆ ಭಾರತ ಸಂತಾಪ ವ್ಯಕ್ತಪಡಿಸಿದ್ದು, ಫೆಸಿಫಿಕ್ ದೇಶಕ್ಕೆ ಅಗತ್ಯವಿರುವ ಎಲ್ಲ ನೆರವು ನೀಡುವುದಾಗಿ ಘೋಷಿಸಿದೆ.



ಬೆಂಕಿ ವರ್ತುಲದಲ್ಲಿ ಪೆಸಿಫಿಕ್

ಫಿಲಿಪೈನ್ಸ್ ಪೆಸಿಫಿಕ್ 'ರಿಂಗ್ ಆಫ್ ಫೈರ್' ವಲಯದಲ್ಲಿ ಇರುವುದರಿಂದ ಇಲ್ಲಿ ಭೂಕಂಪಗಳು ಸಾಮಾನ್ಯ. ಕಳೆದ ವರ್ಷವೂ ಎರಡು ಬಾರಿ ಭಾರೀ ಭೂಕಂಪ ಸಂಭವಿಸಿ ಸಾವು ನೋವು ಉಂಟಾಗಿತ್ತು. 2025ರ ಸೆಪ್ಟೆಂಬರ್ 30ರಂದು ಸೆಬು ಪ್ರಾಂತ್ಯದಲ್ಲಿ ಸಂಭವಿಸಿದ 6.9 ತೀವ್ರತೆಯ ಭೂಕಂಪಕ್ಕೆ 70ಕ್ಕೂ ಹೆಚ್ಚು ಜನರು ಬಲಿಯಾಗಿದ್ದರು. ಇದರ ಬೆನ್ನಿಗೇ ಅಕ್ಟೋಬರ್ 10ರಂದು ಮಿಂಡಾನಾವೊ ಪ್ರದೇಶದಲ್ಲಿ ಕೆಲವು ಗಂಟೆಗಳ ಅಂತರದಲ್ಲಿ 7.4 ಮತ್ತು 6.8 ತೀವ್ರತೆಯ ಅವಳಿ ಭೂಕಂಪಗಳು ಸಂಭವಿಸಿ 10ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು. 1990ರ ಜುಲೈ 16ರಂದು ಲುಜಾನ್ ದ್ವೀಪದಲ್ಲಿ ಸಂಭವಿಸಿದ 7.8 ತೀವ್ರತೆಯ ಭೂಕಂಪಕ್ಕೆ ಬರೊಬ್ಬರಿ 2,400ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದರು

ಅಡುಗೆ ಎಣ್ಣೆ ಪ್ಯಾಕೆಟ್‌ಗೆ ನಿರ್ದಿಷ್ಟ ಗಾತ್ರ ನಿಗದಿ

ದೆಹಲಿ: ಅಡುಗೆ ಎಣ್ಣೆ ಪೊಟ್ಟಣದ ಗಾತ್ರವನ್ನು ನಿಗದಿಪಡಿಸಿ ಕೇಂದ್ರ ಸರಕಾರ ಹೊಸ ಆದೇಶ ಹೊರಡಿಸಿದೆ. ಕಂಪನಿಗಳು ತಮಗೆ ಇಷ್ಟ ಬಂದಂತೆ ಗಾತ್ರ ಮತ್ತು ಪ್ರಮಾಣದಲ್ಲಿ ಎಣ್ಣೆ ಮಾರಾಟ ಮಾಡಲು ಅವಕಾಶ ಇರುವುದಿಲ್ಲ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ಸೂಚಿಸಿದೆ.

ಇದರಿಂದಾಗಿ ಗ್ರಾಹಕರಿಗೆ ಖಾದ್ಯ ತೈಲದ ವಿವಿಧ ಕಂಪನಿ, ಬ್ರ್ಯಾಂಡ್‌ಗಳ ಮಾರಾಟ ದರವನ್ನು ಹೋಲಿಸಿ ಖರೀದಿಸಲು ಅನುಕೂಲವಾಗಲಿದೆ ಅಂತ ಸಚಿವಾಲಯ ತಿಳಿಸಿದೆ. ಅಡುಗೆ ಎಣ್ಣೆ ಪೊಟ್ಟಣದ ಗಾತ್ರ ಮತ್ತು ಅವುಗಳಲ್ಲಿ ಭರ್ತಿ ಮಾಡುವ ತೈಲದ ಪ್ರಮಾಣಕ್ಕೆ ಸಂಬಂಧಿಸಿದಂತೆ ಪ್ರಮಾಣಿತ ಕಾರ್ಯಾಚರಣೆಗೆ ವಿಧಾನಕ್ಕೆ (ಎಸ್‌ಒಪಿ) ಇಲಾಖೆಯು ತಿದ್ದುಪಡಿ ಮಾಡಿದೆ.

ಎಣ್ಣೆ ತಯಾರಕರು, ಪ್ಯಾಕ್ ಮಾಡುವವರು, ಆಮದುದಾರರು 3 ತಿಂಗಳಲ್ಲಿ ಈ ಹೊಸ ನಿಯಮ ಅಳವಡಿಸಿಕೊಳ್ಳಬೇಕು ಅಂತ ಗಡುವು ವಿಧಿಸಿದೆ. ಪರಿಷ್ಕೃತ ಎಸ್ ಓಪಿ ಪ್ರಕಾರ 9 ಬಗೆಯ ಪೊಟ್ಟಣಗಳಲ್ಲಿ ಮಾರಬಹುದಾಗಿದೆ. 200 ಗ್ರಾಂ, 500 ಗ್ರಾಂ, 1 ಲೀಟರ್/ ಕೆಜಿ, 2 ಲೀಟರ್/ ಕೆಜಿ, 3 ಲೀಟರ್/ಕೆಜಿ, 4 ಲೀಟರ್/ಕೆಜಿ, 5 ಲೀಟರ್/ಕೆಜಿ, 15 ಲೀಟರ್/ಕೆಜಿ, 20 ಲೀಟರ್/ ಕೆಜಿಯ ಪೊಟ್ಟಣಗಳಲ್ಲಿ ಮಾರಾಟ ಮಾಡಬಹುದಾಗಿದೆ.

ತಾಳೆ ಎಣ್ಣೆ (ಪಾಮ್ ಆಯಿಲ್), ಸೋಯಾಬೀನ್, ಸೂರ್ಯಕಾಂತಿ, ಶೇಂಗಾ, ಸಾಸಿವೆ, ಎಳ್ಳು, ಅಕ್ಕಿ ಹೊಟ್ಟಿನಿಂದ ಮಾಡಿದ ಎಣ್ಣೆ, ಹತ್ತಿ, ಜೋಳದ ಎಣ್ಣೆಗಳಿಗೆ ಈ ಎಸ್‌ಒಪಿ ಅನ್ವಯ ಆಗಲಿದೆ. 200 ಎಂಎಲ್‌ಗಿಂತ ಕಡಿಮೆ ಇರುವ ಪ್ಯಾಕ್‌ಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ.

ಸರ್ವ ಪಕ್ಷ ಸಭೆ, ಪ್ರಧಾನ್ ರಾಜೀನಾಮೆಗೆ ಒತ್ತಾಯಿಸಿ ನಿರ್ಣಯ , ಡಿಎಂಕೆ, ಆಪ್ ದೂರ

ಟಿಎಂಸಿ ಬಿಕ್ಕಟ್ಟಿನ ನಡುವೆ ಇಂಡಿಯ ಸಭೆ

ದೆಹಲಿ: ತೃಣಮೂಲ ಪಕ್ಷದ ಇಬ್ಭಾಗ ಮತ್ತು ಡಿಎಂಕೆ ಮತ್ತು ಆಪ್ ಪಕ್ಷಗಳ ವಿದಾಯದ ನಡುವೆ ಇಂಡಿಯ (ಐಎನ್‌ಡಿಐಎ) ಮೈತ್ರಿಕೂಟ ಪಕ್ಷಗಳ 'ಜನಬಂಧನ್' ಸಭೆ ಸೋಮವಾರ ದೆಹಲಿಯಲ್ಲಿ ನಡೆದಿದ್ದು, ಸಭೆಯಲ್ಲಿ ಮತ ಕಳ್ಳತನದ ವಿರುದ್ಧ ಸಿಜೆಐಗೆ ಪತ್ರ, ನೀಟ್-ಸಿಬಿಎಸ್‌ಇ ವಿವಾದ ಸಂಬಂಧ ಶಿಕ್ಷಣ ಸಚಿವರ ರಾಜೀನಾಮೆ ಆಗ್ರಹ, ಸರ್ವಪಕ್ಷಗಳ ಸಭೆಗೆ ಒತ್ತಾಯ ಹಾಗೂ ಆಗಸ್ಟ್‌ನಲ್ಲಿ ಹೈದರಾಬಾದ್‌ನಲ್ಲಿ ಮುಂದಿನ ಸಭೆ ನಡೆಸುವಿಕೆ ಸೇರಿದಂತೆ 5 ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಯಿತು.

ಆಡಳಿತಾರೂಢ ಎನ್‌ಡಿಎ ಸರಕಾರದ ವಿರುದ್ಧ ಹೋರಾಟ ಮತ್ತು 2029ರ ಲೋಕಸಭಾ ಚುನಾವಣೆಗೆ ಕಾರ್ಯತಂತ್ರ ಸಿದ್ಧಡಿಸುವ ಸಲುವಾಗಿ ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ಇಂಡಿಯಾ ಸಭೆಯಲ್ಲಿ 23 ಪಕ್ಷಗಳ 27 ಮುಖಂಡರು ಭಾಗವಹಿಸಿದ್ದರು. ಒಕ್ಕೂಟದ ಪ್ರಬಲ ಪಕ್ಷಗಳಾಗಿದ್ದ ಡಿಎಂಕೆ ಮತ್ತು ಆಪ್ ಸಭೆಯಿಂದ ದೂರವುಳಿದವು. ಟಿಎಂಸಿ ಇಬ್ಭಾಗವಾದರೂ ಪಕ್ಷ ನಾಯಕಿ ಮಮತಾ ಬ್ಯಾನರ್ಜಿ ಸಭೆಯಲ್ಲಿ ಭಾಗವಹಿಸಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿ, ಟಿಎಂಸಿಯ ಅಭಿಷೇಕ್ ಬ್ಯಾನರ್ಜಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಆರ್‌ಜೆಡಿಯ ತೇಜಸ್ವಿ ಯಾದವ್ ಮತ್ತು ಶಿವಸೇನೆಯ (ಯುಬಿಟಿ) ಉದ್ಧವ್ ಠಾಕ್ರೆ ಸೇರಿದಂತೆ ವಿರೋಧ ಪಕ್ಷಗಳ ಪ್ರಮುಖ ನಾಯಕರು, ಎಡಪಕ್ಷಗಳು ಮತ್ತು ಸಣ್ಣ ಪಕ್ಷಗಳ ನಾಯಕರು ಕಾನ್ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದರು. ಶಿವಸೇನೆ-ಯುಬಿಟಿಯ ಉದ್ಧವ್ ಠಾಕ್ರೆ, ಜೆಎಂಎಂನ ಹೇಮಂತ್ ಸೊರೆನ್ ಆನ್‌ಲೈನ್ ಮೂಲಕ ವಿರೋಧ ಪಕ್ಷದ ಸಭೆಗೆ ಸೇರಿದರು ಎಂದು ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಮಾಹಿತಿ ನೀಡಿದ್ದಾರೆ. ಕೇರಳ ಚುನಾವಣೆಯಲ್ಲಿ ಕಾಂಗ್ರೆಸ್-ಬಿಜೆಪಿ ಒಳಮೈತ್ರಿ ಮಾಡಿಕೊಂಡಿವೆ ಎಂದು ಆರೋಪಿಸಿದ್ದ ಎಡಪಕ್ಷ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು. ಜೂನ್ 2024 ರಲ್ಲಿ ಲೋಕಸಭಾ ಚುನಾವಣೆಗೆ ಮುನ್ನ ಮೈತ್ರಿಕೂಟದ ನಾಯಕರು ಕೊನೆಯ ಬಾರಿಗೆ ಭೇಟಿಯಾಗಿದ್ದರು. ಆ ಬಳಿಕ ಇಂಡಿಯ ಮೈತ್ರಿಕೂಟದ ಮೊದಲ ಅಧಿಕೃತ ಸಭೆ ಇದಾಗಿದೆ. ಇನ್ನು ಮುಂದೆ ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ಸೇರಲು ಮೈತ್ರಿಕೂಟದ ನಾಯಕರು ನಿರ್ಧರಿಸಿದ್ದಾರೆ. ಮುಂದಿನ ಸಭೆಯು ಆಗಸ್ಟ್‌ನಲ್ಲಿ ಹೈದರಾಬಾದ್‌ನಲ್ಲಿ ನಡೆಯಲಿದೆ. ಇದೇ ವೇಳೆ ಮತ ಕಳ್ಳತನದ ಕುರಿತು ಭಾರತದ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆಯಲು ಸಭೆಯಲ್ಲಿ ನಿರ್ಧರಿಸಲಾಯಿತು. ಲಕ್ಷಾಂತರ ನೀಟ್ ಮತ್ತು ಸಿಬಿಎಸ್‌ಇ ವಿದ್ಯಾರ್ಥಿಗಳಿಗೆ ದ್ರೋಹ ಬಗೆದಿರುವ ಹಿನ್ನೆಲೆಯಲ್ಲಿ ಶಿಕ್ಷಣ ಸಚಿವರು ತಕ್ಷಣ ರಾಜೀನಾಮೆ ನೀಡಲು ಮತ್ತು ಜನರ ಸಮಸ್ಯೆಗಳ ಕುರಿತು ಚರ್ಚಿಸಲು ತಕ್ಷಣವೇ ಸರ್ವಪಕ್ಷಗಳ ಸಭೆಯನ್ನು ಕರೆಯಲು ಕೇಂದ್ರ ಸರಕಾರವನ್ನು ಒತ್ತಾಯಿಸಿ ನಿರ್ಣಯ ಅಂಗೀಕರಿಸಲಾಯಿತು.

20 ಸಂಸದರ ಬಂಡಾಯ: ದೀದಿಗೆ ಶಾಕ್

ದೆಹಲಿ: ಮಮತಾ ಬ್ಯಾನರ್ಜಿ ದೆಹಲಿಯಲ್ಲಿ ಇಂಡಿಯ ಒಕ್ಕೂಟದೊಂದಿಗೆ ಸಭೆ ನಡೆಸುತ್ತಿರುವಾಗಲೇ ತೃಣಮೂಲ ಕಾಂಗ್ರೆಸ್‌ನ 20 ಬಂಡಾಯ ಸಂಸದರು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದು ಬಿಜೆಪಿಯ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ಸೇರಲು ಇಚ್ಛಿಸಿರುವುದಾಗಿ ಹೇಳಿದ್ದು, ದೀದಿಗೆ ಆಘಾತ ನೀಡಿದ್ದಾರೆ.ತಾವು ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿಯಿಂದ ಹೊರಬಂದಿರುವುದರಿಂದ ನಮಗೆ ಸಂಸತ್ತಿನಲ್ಲಿ ಪ್ರತ್ಯೇಕವಾಗಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿಕೊಡಬೇಕು ಮತ್ತು ಟಿಎಂಸಿ ಸಂಸದೀಯ ನಾಯಕರಾಗಿರುವ ಅಭಿಷೇಕ್ ಬ್ಯಾನರ್ಜಿ ಅವರ ನಾಯಕತ್ವವನ್ನು ನಾವು ಒಪ್ಪುವುದಿಲ್ಲ ಎಂದು ಈ ಬಂಡಾಯ ಸಂಸದರು ಮನವಿ ಮಾಡಿದ್ದಾರೆ. ಬಂಡಾಯ ಬಣದ ನಾಯಕಿಯಾಗಿ ಕಾಕೋಲಿ ಘೋಷ್ ದಸ್ತಿದಾರ್ ಅವರನ್ನು ಗುರುತಿಸಬೇಕೆಂದು ಸ್ಪೀಕರ್ ಅವರಿಗೆ ಕೋರಲಾಗಿದೆ. ಪತ್ರಕ್ಕೆ ಸಹಿ ಹಾಕಿದವರಲ್ಲಿ ಅರೂಪ್ ಚಕ್ರ ವರ್ತಿ, ಪಾರ್ಥ ಭೌಮಿಕ್, ಶತಬ್ದಿ ರಾಯ್, ಜಗದೀಶ್ ವಸುನಿಯಾ, ಜೂನ್ ಮಾಲಿಯಾ ಸೇರಿದಂತೆ ಪ್ರಮುಖ ನಾಯಕರಿದ್ದಾರೆ. ಲೋಕಸಭೆಯಲ್ಲಿ ಟಿಎಂಸಿ ಒಟ್ಟು 28 ಸಂಸದರನ್ನು ಹೊಂದಿದ್ದು, ಅವರಲ್ಲಿ 20 ಸಂಸದರು ಬಂಡಾಯ ಎದ್ದಿರುವುದರಿಂದ ಮಮತಾ ಅವರಿಗೆ ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಭಾರೀ ಹಿನ್ನಡೆಯಾಗಿದೆ.

ಸಮಾಚಾರ ಸಣ್ಣದಲ್ಲ

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಚಾಮರಾಜನಗರ: ನಗರದ ಸರಕಾರಿ ಎಂಜಿನಿಯರಿಂಗ್ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ಇಂದು ವಿಶ್ವ ಪರಿಸರ ದಿನವನ್ನು "ಪ್ರಕೃತಿಯಿಂದ ಪ್ರೇರಿತಗೊಂಡು ಉತ್ತಮ ಹವಾಮಾನಕ್ಕಾಗಿ ಹಾಗೂ ನಮ್ಮ ಭವಿಷ್ಯಕ್ಕಾಗಿ" ಎಂಬ ಘೋಷವಾಕ್ಯದಡಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಡಿ. ಮಧು ಅವರು ಮಾತನಾಡಿ ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಪರಿಸರವನ್ನು ಬೆಳೆಸಿ ಉಳಿಸಿದರೆ ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ. ತ್ಯಾಜ್ಯ ವಸ್ತುಗಳ ಸಮರ್ಪಕ ನಿರ್ವಹಣೆಗೆ ಎಲ್ಲರೂ ಮುಂದಾಗಬೇಕು. ಹೆಚ್ಚಿನ ಗಿಡಗಳನ್ನು ಬೆಳೆಸುವುದರಿಂದ ಪರಿಸರ ಮಾಲಿನ್ಯ ಕಡಿಮೆಯಾಗುವುದರ ಜೊತೆಗೆ ಅನೇಕ ರೋಗಗಳನ್ನು ತಡೆಗಟ್ಟಬಹುದು ಎಂದು ವಿದ್ಯಾರ್ಥಿಗಳಿಗೆ ಸಂದೇಶ ನೀಡಿದರು. ಪರಿಸರ ಪ್ರೇಮಿ ಬೀರೇಶ್ ಅವರು ಮಾತನಾಡಿದರು. ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ನಿರ್ದೇಶಕರಾದ ಪ್ರೊ. ದೇವೇಂದ್ರ ಕುಮಾರ್, ಡಾ. ಪಿ.ಸಿ. ಶ್ರೀನಿವಾಸ್, ಡಾ. ಇಮ್ರಾನ್ ಖಾನ್, ಪ್ರೊ. ಚೈತ್ರ ಬನಸವಾಡಿ, ಡಾ. ಎಸ್. ಪ್ರದೀಪ್, ಡಾ. ಮನೀಲ್ ರಾಜ್, ಡಾ. ಸಂದೀಪ್, ಡಾ. ರವೀಂದ್ರ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ನಾಗೇಶ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಣ್ಣುಗಳ ಆರೋಗ್ಯದತ್ತ ಗಮನ ಹರಿಸಿ

ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು. ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 415 ಮಂದಿ ತಪಾಸಣೆ ಮಾಡಿಸಿಕೊಂಡರು. 220 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು. ರೋಟರಿ ಸಂಸ್ಥಾಪಕ ಸದಸ್ಯ ಸಿ.ವಿ.ಶ್ರೀನಿವಾಸಶೆಟ್ಟಿ, ರೋಟರಿ ಸಂಸ್ಥೆ ಅಧ್ಯಕ್ಷ ಸಿ.ಕಾಳಪ್ಪ ಚಂದು ಮಾತನಾಡಿದರು. ಶಿಬಿರದಲ್ಲಿ ರೋಟರಿ ಸಂಸ್ಥೆಯ ಸಂಸ್ಥಾಪಕ ಸದಸ್ಯ ಅಶ್ವಥ್ ನಾರಾಯಣ್, ಮುಂದಿನ ಸಾಲಿನ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ಮಾಜಿ ಅಧ್ಯಕ್ಷರಾದ ನಾಗರಾಜು, ಯೋಗರಾಜು, ಎ.ಶ್ರೀನಿವಾಸನ್, ಸುರೇಶ್, ಎಸ್ ಆರ್‌ಎಸ್ ಶ್ರೀನಿವಾಸ, ಕೆಂಪನಪುರ ಮಹಾದೇವ ಸ್ವಾಮಿ, ಸುರೇಶ್ ಕುಮಾರ್, ಮುಂದಿನ ಸಾಲಿನ ಕಾರ್ಯದರ್ಶಿ ಅಂಕಶೆಟ್ಟಿ, ಸಿದ್ದಮಲ್ಲಪ್ಪ, ನೆಮಿರಾಜ್, ಸುತಾ, ಪಿಆರ್‌ಓ ವಿಜಯಕುಮಾರ್ ಇತರರು ಹಾಜರಿದ್ದರು.

ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆ

ಚಾಮರಾಜನಗರ: ತಾಲೂಕಿನ ಕುಳ್ಳೂರು ಕ್ರಾಸ್ ಸಮೀಪದ ಅರಣ್ಯದಲ್ಲಿ ಕೊಳೆತ ಸ್ಥಿತಿಯಲ್ಲಿ ವ್ಯಕ್ತಿಯ ಶವ ಪತ್ತೆಯಾಗಿದೆ. ಕುಳ್ಳೂರು ಕ್ರಾಸ್ ಹತ್ತಿರ ಇರುವ ಕೆ.ಗುಡಿ ಅರಣ್ಯ ವಲಯದ ರಾಮಾಪುರ ಗಸ್ತಿನಲ್ಲಿ ಬರುವ ಅಡ್ಡದಾರಿ ಹಳ್ಳದ ಕಡೆಯಲ್ಲಿ ಅರಣ್ಯ ಸಿಬ್ಬಂದಿಗಳಾದ ಪ್ರಕಾಶ್ ಹಾಗೂ ಇತರೆ ಸಿಬ್ಬಂದಿಗಳು ಗಸ್ತಿನಲ್ಲಿದ್ದಾಗ ಅರಣ್ಯ ಪ್ರದೇಶದಲ್ಲಿ ಕೆಟ್ಟ ವಾಸನೆ ಬರುತ್ತಿದ್ದನ್ನು ಗಮನಿಸಿದ್ದಾರೆ. ಈ ಸಂಬಂಧ ಅರಣ್ಯ ಪ್ರದೇಶದಲ್ಲಿ ಪರಿಶೀಲಿಸಲಾಗಿ ರಾಮಾಪುರ ಗಸ್ತಿನ ಅರಣ್ಯದಲ್ಲಿ ಮಳೆ ನೀರು ಹರಿಯುವಂತ ಹಳ್ಳವಾದ ಅಡ್ಡದಾರಿ ಹಳ್ಳದಲ್ಲಿ ಸ್ಥಳಕ್ಕೆ ಹೋಗಿ ನೋಡಿದಾಗ ಅಂದಾಜು ಸುಮಾರು 35-40 ವರ್ಷ ವಯಸ್ಸಿನ ಅಪರಿಚಿತ ಗಂಡಸಿನ ಶವವು ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಈ ಅಪರಿಚಿತ ಮೃತ ಗಂಡಸು ಸುಮಾರು 25 ದಿನಗಳು ಅಥವಾ 1 ತಿಂಗಳ ಹಿಂದೆ ಸಾವನ್ನಪ್ಪಿದ್ದು ಮೃತ ದೇಹವು ಕೊಳೆತು ಗುರುತು ಸಿಗದ ಸ್ಥಿತಿಯಲ್ಲಿದೆ. ಚಾಮರಾಜನಗರ ಪೂರ್ವ ಠಾಣೆಯಲ್ಲಿ ಕೇಸ್ ದಾಖಲಾಗಿದೆ.

ಗಿಡ ನೆಟ್ಟು ಪೋಷಿಸಿ: ಮಾಜಿ ಶಾಸಕ

ಮದ್ದೂರು: ತಾಲೂಕಿನ ಕೆ.ಹೊನ್ನಲಗೆರೆ ಗ್ರಾಮದ ಆರ್.ಕೆ.ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ವಿಶಿಷ್ಟವಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಆರ್.ಕೆ.ವಿದ್ಯಾಸಂಸ್ಥೆಯ ಆವರಣದಲ್ಲಿ ವಿವಿಧ ಬಗೆಯ ಸಸಿಗಳನ್ನು ನೆಟ್ಟು ವಿದ್ಯಾರ್ಥಿಗಳಿಗೆ ಮತ್ತು ನಾಗರಿಕರಿಗೆ ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಿದರು. ಬಳಿಕ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮವನ್ನು ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶೌಚಗೃಹ ಶುಚಿ ಮಾಡುವ ಮಂಜುಳಾ ಕಾರ್ಯಕ್ರಮ ಉದ್ಘಾಟಿಸಿದ್ದು ವಿಶೇಷವಾಗಿತ್ತು.

{ಡಿ.ಕೆ.ಶಿವಕುಮಾರ್} ಮುಖ್ಯಮಂತ್ರಿ

ನಮ್ಮ ಬದುಕು ಶಾಶ್ವತವಲ್ಲ. ನಾವು ಬಿಟ್ಟು ಹೋಗುವ ಸಾಕ್ಷಿ ಗುಡ್ಡೆಗಳೇ ಶಾಶ್ವತ. ನಾನು ಕೇವಲ ಎರಡು ವರ್ಷ ಮಾತ್ರ ಸಿಎಂ ಆಗಿರಬೇಕಾ...? ನಿಮ್ಮ ಆಶೀರ್ವಾದದಿಂದ 2028 ರಲ್ಲಿ ಮತ್ತೆ ನಾವು ಮತ್ತು ನಮ್ಮ ಪಕ್ಷ ಗೆಲ್ಲಬೇಕು. ಆದಕ್ಕೆ ನೀವು ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡೋಣ. ಒಳ್ಳೆ ರೀತಿ ಅಧಿಕಾರ, ಆಡಳಿತ ನಡೆಸಿ ಸಾಕ್ಷಿ ಗುಡ್ಡೆಗಳನ್ನು ಬಿಟ್ಟು ಹೋಗೋಣ.

ಡಿಸಿ ಕಚೇರಿ ಸಭಾಂಗಣದಲ್ಲಿ ಯೋಗ ದಿನದ ಪೂರ್ವಭಾವಿ ಸಭೆ | ಎಡಿಸಿ ಐಶ್ವರ್ಯ ಹೇಳಿಕೆ

ಆರೋಗ್ಯಯುತ ಜೀವನಕ್ಕೆ ಯೋಗ ಸಹಕಾರಿ

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅಪರ ಜಿಲ್ಲಾಧಿಕಾರಿ ಐಶ್ವರ್ಯ ಅವರು ಮಾತನಾಡಿದರು.

ಮೈಸೂರು: ಜಿಲ್ಲಾಡಳಿತದ ವತಿಯಿಂದ ಜೂ.21ರಂದು ಮೈಸೂರು ಅರಮನೆ ಆವರಣದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಐಶ್ವರ್ಯ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನರು ಯೋಗವನ್ನು ಯೋಗದಿನಕ್ಕೆ ಮಾತ್ರ ಮೀಸಲಿಡದೆ ಯೋಗಾಭ್ಯಾಸವನ್ನು ಪ್ರತಿದಿನ ಅಳವಡಿಸಿಕೊಳ್ಳಬೇಕು. ಯೋಗದ ವಿವಿಧ ಆಸನಗಳಿಂದ ದೇಹದ ಎಲ್ಲಾ ಸ್ನಾಯು ಹಾಗೂ ನರಗಳಿಗೆ ವ್ಯಾಯಾಮ ನೀಡಿ ಆರೋಗ್ಯಯುತ ಜೀವನಕ್ಕೆ ಸಹಾಯಕವಾಗುತ್ತದೆ ಎಂದರು.

ಜೂನ್ 21ರಂದು ಬೆಳಗ್ಗೆ 6ರಿಂದ 8ರವರೆಗೆ ವಿವಿಧ ಆಸನಗಳನ್ನು ಪ್ರದರ್ಶಿಸಲಾಗುವುದು. ಜಿಲ್ಲೆಯ ವಿವಿಧ ಯೋಗ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ಕಾರ್ಯಕ್ರಮದಲ್ಲಿ ಯಾವುದಾದರೂ ಹೊಸತನವನ್ನು ತರಬಯಸಿದರೆ, ಈ ಕುರಿತು ಮುಕ್ತವಾಗಿ ಚರ್ಚಿಸುವಂತೆ ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಅರಮನೆ ಆವರಣದ ಸ್ವಚ್ಛತೆ, ಕುಡಿಯುವ ನೀರು, ಅರಮನೆ ಮಂಡಳಿ ವತಿಯಿಂದ ವೇದಿಕೆ, ಧ್ವನಿವರ್ಧಕ, ಪೊಲೀಸ್ ಇಲಾಖೆಯಿಂದ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು ಎಂದರು.

> ಜೂನ್ 21ರಂದು ಬೆಳಗ್ಗೆ 6ರಿಂದ 8ರವರೆಗೆ ವಿವಿಧ ಆಸನಗಳನ್ನು ಪ್ರದರ್ಶಿಸಲಾಗುವುದು. ಜಿಲ್ಲೆಯ ವಿವಿಧ ಯೋಗ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ಕಾರ್ಯಕ್ರಮದಲ್ಲಿ ಯಾವುದಾದರೂ ಹೊಸತನವನ್ನು ತರಬಯಸಿದರೆ, ಈ ಕುರಿತು ಮುಕ್ತವಾಗಿ ಚರ್ಚೆ ಸಬೇಕು.
> -ಐಶ್ವರ್ಯ, ಅಪರ ಜಿಲ್ಲಾಧಿಕಾರಿ

ಜಿಲ್ಲಾ ಆಯುಷ್ ಅಧಿಕಾರಿ ಡಾ. ರೇಣುಕಾ ದೇವಿ ಮಾತನಾಡಿ, ಈಗಾಗಲೇ ಯೋಗದಿನವನ್ನು ಪ್ರತಿದಿನ ಅಭ್ಯಾಸ ಮಾಡಲು ದಿನನಿತ್ಯ ಯೋಗ ಯೋಜನೆಯಡಿ ಜೂನ್ 22ರಿಂದ ವರ್ಷದ 365 ದಿನವೂ ಜನರಿಗೆ ಆನ್ಲೈನ್ ಮೂಲಕ ಲಿಂಕ್ ಒದಗಿಸಲಾಗುವುದು ಎಂದರು.

ಯೋಗ ಫೆಡರೇಷನ್ ಮುಖ್ಯಸ್ಥ ಶ್ರೀಹರಿ ಮಾತನಾಡಿ, ಮೈಸೂರನ್ನು ಯೋಗ ಹಬ್ ಮಾಡಲು ಜೂನ್ 21ರಂದು 120 ಸ್ಥಳಗಳಲ್ಲಿ ಯೋಗ ಪ್ರದರ್ಶನ ನೀಡಲು ಯೋಜಿಸಲಾಗಿದೆ. 1200 ತರಬೇತುದಾರರೊಂದಿಗೆ 1,20,000 ಜನರು ಭಾಗವಹಿಸುವಂತೆ ಮಾಡಲು ಉದ್ದೇಶಿಸಲಾಗಿದೆ ಎಂದರು.

ಇದೇ ಸಂಧರ್ಭದಲ್ಲಿ ಯೋಗದಿನದ ಪೋಸ್ಟರ್‌ಬಿಡುಗಡೆ ಮಾಡಲಾಯಿತು. ಸಭೆಯಲ್ಲಿ ಸಹಾಯಕ ಪೊಲೀಸ್ ಆಯುಕ್ತ ರಾಘವೇಂದ್ರ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭು, ವಿವಿಧ ಯೋಗ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

13ರಂದು ವಧು- ವರರ ಸಮಾವೇಶ

ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಚೊಕ್ಕಾಡಿ ಎನ್.ಅಪ್ಪಯ್ಯ ಅವರು ಮಾತನಾಡಿದರು.

ಮಡಿಕೇರಿ: ಕೊಡಗು ಗೌಡ ನಿವೃತ್ತ ನೌಕರರ ಸಂಘದ ವತಿಯಿಂದ ಜೂ.13 ರಂದು ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮುದಾಯದ ವಧು- ವರರ ಸಮಾವೇಶ ನಡೆಯಲಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸಂಘದ ಅಧ್ಯಕ್ಷ ಚೊಕ್ಕಾಡಿ ಎನ್.ಅಪ್ಪಯ್ಯ ಅವರು ಶನಿವಾರ ಬೆಳಗ್ಗೆ 10 ಗಂಟೆಗೆ ಮಡಿಕೇರಿಯ ಕೊಡಗು ಗೌಡ ಸಮಾಜದ ಸಭಾಂಗಣದಲ್ಲಿ ಸಮಾವೇಶ ನಡೆಯಲಿದ್ದು, 9.30ಕ್ಕೆ ವಧು- ವರರ ನೋಂದಣಿ ಪ್ರಕ್ರಿಯೆಯನ್ನು ಆರಂಭಿಸಲಾಗುವುದು ಎಂದರು.

ನೋಂದಣಿ ಶುಲ್ಕ ರೂ.500 ಪಾವತಿಸಬೇಕು, ವಧು- ವರರು ಕಡ್ಡಾಯವಾಗಿ ಭಾಗವಹಿಸಬೇಕು, ವಧುವಿಗೆ 18 ಹಾಗೂ ವರನಿಗೆ 21 ವರ್ಷವಾಗಿರಬೇಕು, ಪೋಸ್ಟ್ ಕಾರ್ಡ್ ಅಳತೆಯ ಫೋಟೋ, ಜಾತಕ, ಆಧಾರ್ ಕಾರ್ಡ್, ವಿದ್ಯಾರ್ಹತೆ, ಉದ್ಯೋಗ ಮತ್ತಿತರ ಮಾಹಿತಿ ನೀಡಬೇಕು. ಈ ಸಮಾವೇಶದಲ್ಲಿ ವಿಶೇಷ ಚೇತನರು, ವಿದುರ, ವಿಧವೆಯರು, ಮರು ವಿವಾಹ ಬಯಸುವವರು, ವಿಚ್ಛೇದಿತರು ಭಾಗವಹಿಸಬಹುದು. ವಿದೇಶಗಳಲ್ಲಿ ಅಥವಾ ಹೊರ ರಾಜ್ಯಗಳಲ್ಲಿ ನೆಲೆಸಿರುವ ಜನಾಂಗದ ಬಂಧುಗಳು ಪಾಲ್ಗೊಳ್ಳಬಹುದು ಎಂದು ತಿಳಿಸಿದರು. ಹೆಚ್ಚಿನ ಮಾಹಿತಿಗೆ 9448884673, 9844440266 ನ್ನು ಸಂಪರ್ಕಿಸಬಹುದಾಗಿದೆ.

ಕೃಷಿಕರನ್ನು ವಿವಾಹವಾಗಿ: ಗೌಡ ಸಮುದಾಯದಲ್ಲಿ ಕೃಷಿಕ ವರರನ್ನು ವಿವಾಹವಾಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಕೃಷಿ ಕಾಯಕದಲ್ಲಿ ತೊಡಗಿರುವ ಯುವಕರು ವಿವಾಹದಿಂದ ವಂಚಿತರಾಗುತ್ತಿದ್ದಾರೆ. ಯುವತಿಯರು ನಗರದೆಡೆಗೆ ಆಕರ್ಷಿತರಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ ಚೊಕ್ಕಾಡಿ ಎನ್. ಅಪ್ಪಯ್ಯ ಕೃಷಿಕ ಯುವಕರನ್ನು ವಿವಾಹವಾಗುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಕೆಚ್ಚೆಟ್ಟಿರ ಗಣಪತಿ, ಖಜಾಂಚಿ ಕುಯ್ಯಮುಡಿ ಅಶ್ವಿನಿ ಕುಮಾರ್, ಕಾರ್ಯದರ್ಶಿ ಕುಂಜಿಲನ ರತ್ನ ಕುಮಾರಿ, ಸಹ ಕಾರ್ಯದರ್ಶಿ ಕಟ್ಟತನ ಲಲಿತಾ ಅಯ್ಯಣ್ಣ ಹಾಗೂ ನಿರ್ದೇಶಕ ಸೂರ್ತಲೆ ರಾಮಚಂದ್ರ ಉಪಸ್ಥಿತರಿದ್ದರು.

ನಿಗದಿತ ಅವಧಿಗೆ ರಸ್ತೆ ಕಾಮಗಾರಿ ಮುಗಿಸಿ

ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಚಾಮರಾಜನಗರ: ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಅನುದಾನ 5 ಕೋಟಿ ರೂ.ವೆಚ್ಚದಲ್ಲಿ ತಾಲೂಕಿನ ಮರಿಯಾಲ ಮುಖ್ಯ ರಸ್ತೆ, ಯಾನಗಹಳ್ಳಿ, ನರಸಮಂಗಲ ಗ್ರಾಮಗಳ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

ಇದೇ ವೇಳೆ ಅವರು ಮಾತನಾಡಿ, ಒಂದು ಗ್ರಾಮದಿಂದ ಮತ್ತೊಂದು ಗ್ರಾಮದ ರಸ್ತೆಗೆ ತೆರಳಲು ಉತ್ತಮ ರಸ್ತೆಗಳ ಅಗತ್ಯತೆ ಇದೆ. ಆ ನಿಟ್ಟಿನಲ್ಲಿಂದು ಚಾಮರಾಜನಗರ ತಾಲೂಕಿನ ಮರಿಯಾಲ ಗ್ರಾಮದ ಮುಖ್ಯ ರಸ್ತೆಗೆ 2 ಕೋಟಿ, ಯಾನಗಹಳ್ಳಿ, ನರಸಮಂಗಲ ಗ್ರಾಮಗಳ ಸಂಪರ್ಕ ರಸ್ತೆ ಅಭಿವೃದ್ಧಿಗೆ ತಲಾ 1.50ಕೋಟಿಯಂತೆ 3 ಕೋಟಿ, ಒಟ್ಟು 5 ಕೋಟಿ ರೂ.ವೆಚ್ಚದಲ್ಲಿ ಮೂರು ಗ್ರಾಮಗಳ ರಸ್ತೆ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ.

ಆಯಾಯ ಗ್ರಾಮಸ್ಥರು ಮುಂದೆ ನಿಂತು ಗುಣಮಟ್ಟದ ರಸ್ತೆ ನಿರ್ಮಿಸಿಕೊಳ್ಳಬೇಕು, ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ಕಾಮಗಾರಿ ಮುಗಿಸಿ, ಜನರ ಉಪಯೋಗಕ್ಕೆ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಮರಿಯಾಲ ಗ್ರಾಮದ ಮುರುಘರಾಜೇಂದ್ರ ಮಠದ ಇಮ್ಮಡಿ ಮುರುಘ ರಾಜೇಂದ್ರಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಸದಸ್ಯ ಮರಿಯಾಲದ ಹುಂಡಿಕುಮಾರ್, ತಾಪಂ ಕೆಡಿಪಿ ಸದಸ್ಯ ಶ್ರೀನಿವಾಸ್, ಮಹದೇಶ್ವರ ಬೆಟ್ಟ ಪ್ರಾಧಿಕಾರದ ಸದಸ್ಯ ಮರಿಸ್ವಾಮಿ, ಎಪಿಎಂಸಿ ಮಾಜಿ ಸದಸ್ಯ ದಳಪತಿ ವೀರಭದ್ರ, ಗುರುಪ್ರಸಾದ್, ಚನ್ನಬಸಪ್ಪ, ಚಂದ್ರು, ಗೌಡಿ ಕೆಂಪರಾಜ್, ರಾಮೇಗೌಡ, ಮಲ್ಲೇಶ್, ರಾಜೇಶ್, ಕೆಲ್ಲಂಬಳ್ಳಿ ಸೋಮೇಶ್ವರ್, ಎಲ್.ಸಿ.ನಾಗರಾಜು, ಯಾನಗಹಳ್ಳಿ ಶಂಭಪ್ಪ, ಚನ್ನಬಸಪ್ಪ, ಎಲ್. ಲಿಂಗರಾಜು, ರಂಗಸ್ವಾಮಿ, ಮಹೇಂದ್ರ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಎಚ್.ಸಿ.ಮಹದೇವಪ್ಪಗೆ ಸಚಿವ ಸ್ಥಾನ ನೀಡಿ

ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್‌ಅವರು ಮಾತನಾಡಿದರು.

ತಿ.ನರಸೀಪುರ: ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ, ದಲಿತ ಸಮಾಜದ ಬಲಿಷ್ಠ ಸಮುದಾಯದ ನಾಯಕ ಡಾ.ಎಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡಲು ದಲಿತ ಸಂಘರ್ಷ ಸಮಿತಿ ಮತ್ತು ವರುಣ ಕ್ಷೇತ್ರ ದಲಿತ ಮುಖಂಡರು ಆಗ್ರಹಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಡಾ.ಎಚ್.ಸಿ. ಮಹದೇವಪ್ಪ ಅವರು ಕಾಂಗ್ರೆಸ್ ಪಕ್ಷಕ್ಕೆ ಸಲ್ಲಿಸಿದ ಸೇವೆ ಮತ್ತು ರಾಜಕೀಯ ಹಿರಿತನವನ್ನು ಪರಿಗಣಿಸಿ ಅವರಿಗೆ ಉನ್ನತಮಟ್ಟದ ಸಚಿವ ಸ್ಥಾನ ನೀಡಬೇಕಿತ್ತು. ಹಾಗಾಗಿ ಎರಡನೇ ಪಟ್ಟಿಯಲ್ಲಿ ಡಾ.ಎಚ್.ಸಿ. ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು. ಇಲ್ಲವಾದರೆ ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ದಲಿತ ಸಮುದಾಯ ಮತಗಳು ಕಾಂಗ್ರೆಸ್ ಪಕ್ಷಕ್ಕೆ ಕೈ ತಪ್ಪಲಿವೆ ಎಂದರು. ಇದೇ 10ರಂದು ಸುತ್ತೂರಿನಲ್ಲಿ ದಲಿತ ಸಂಘರ್ಷ ಸಮಿತಿ ವತಿಯಿಂದ ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡುವಂತೆ ಹಕ್ಕೊತ್ತಾಯ ಸಭೆಯನ್ನು ನಡೆಸಲಿದ್ದೇವೆ ಎಂದರು. ಜಿಲ್ಲಾ ದಸಂಸ ಸಂಚಾಲಕ ಬಸವಣ್ಣ, ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕ ಬನ್ನಳ್ಳಿ ಸೋಮಣ್ಣ ಮಾತನಾಡಿದರು. ವರುಣ ಕ್ಷೇತ್ರದ ದಲಿತ ಮುಖಂಡರಾದ ಡಿ.ಆರ್.ಮೂರ್ತಿ, ಇಂಡವಾಳು ಹೊನ್ನಯ್ಯ, ನಾಗರಾಜು, ದಂಡಿಕೆರೆ ಧಮ್ಮ ಅಶೋಕ, ರಂಗಸ್ವಾಮಿ, ರಂಗಸ್ವಾಮಿ, ನಂಜುಂಡ, ಹಿಟ್ಟುವಳ್ಳಿ ಮಹದೇವಸ್ವಾಮಿ ಕುರುಗಲೂರು ರಜನಿ, ಡಣಾಯಕನಪುರ ಮರಿಸಿದ್ದಯ್ಯ, ಮಾದಪ್ಪ, ಮರಯ್ಯ, ಹೊಸಕೋಟೆ ಕುಮಾರ್, ಬನ್ನಳ್ಳಿ ಬಸವರಾಜು, ಬಿಳಿಗಿರಿ ರಾಜಶೇಖರ್,ಸುತ್ತೂರು ಜ್ಯೋತಿ ಪ್ರಕಾಶ್, ದಲಿತ ಸಂಘರ್ಷ ಸಮಿತಿಯ ತಾಲ್ಲೂಕು ಸಂಚಾಲಕರಾದ ಯಾಚೇನಹಳ್ಳಿ ಸೋಮಶೇಖರ್, ಮಹದೇವ, ವಾಟಾಳು ನಾಗರಾಜು, ತೊಟ್ಟವಾಡಿ ಮಹದೇವ, ಬನ್ನಳ್ಳಿಹುಂಡಿ ಉಮೇಶ್, ಕುರುಬೂರು ಚೆಲುವರಾಜು, ಬಿಳಿಗೆರೆಹುಂಡಿ ಶಿವಕುಮಾರ್, ಆಲಗೂಡು ನಾಗರಾಜು, ಶಾಂತರಾಜು ಇದ್ದರು.

ಜೂ.13ರಂದು ಬಸವ ಜಯಂತಿ ಆಚರಣೆ

ಸುದ್ದಿಗೋಷ್ಠಿಯಲ್ಲಿ ತಪೋಕ್ಷೇತ್ರ ಮನೆಹಳ್ಳಿ ಮಠದ ಮಹಾಂತ ಶಿವಲಿಂಗ ಸ್ವಾಮಿಗಳು ಅವರು ಮಾತನಾಡಿದರು.

ಮಡಿಕೇರಿ: ಕೊಡಗು ಜಿಲ್ಲಾ ವೀರಶೈವ ಲಿಂಗಾಯತ ಸಮಾಜ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತ್ತು ಯುವ ಘಟಕದ ಸಂಯುಕ್ತಾಶ್ರಯದಲ್ಲಿ ಬಸವ ಜಯಂತಿ, ಸಿದ್ದಗಂಗಾ ಮಠದ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳ ಜಯಂತಿ, ಜಗದ್ಗುರು ರೇಣುಕಾಚಾರ್ಯ ಜಯಂತಿ 250 ವರ್ಷ ಕೊಡಗನ್ನು ಆಳಿದ ಹಾಲೇರಿ ಅರಸರ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಹೆಮ್ಮನೆ ಪುಟ್ಟಬಸಪ್ಪ(ಕಲ್ಯಾಣಸ್ವಾಮಿ) ಅವರ ಸಂಸ್ಮರಣೋತ್ಸವ ಕಾರ್ಯಕ್ರಮ ಜೂ.13 ರಂದು ನಡೆಯಲಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ತಪೋಕ್ಷೇತ್ರ ಮನೆಹಳ್ಳಿ ಮಠದ ಮಹಾಂತ ಶಿವಲಿಂಗ ಸ್ವಾಮಿಗಳು ಶನಿವಾರ ಶನಿವಾರಸಂತೆಯ ಗುಡುಗಳಲೆ ಜಯದೇವ ಜಾತ್ರಾ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದರು.

ಬೆಳಗ್ಗೆ 8 ಗಂಟೆಗೆ ಮದ್ದಪಟ್ಟೆ ವಿಶ್ವೇಶ್ವರ ದೇವಾಲಯದಿಂದ ಗುಡುಗಳಲೆ ಜಾತ್ರಾ ಮೈದಾನದವರೆಗೆ ಶ್ರೀ ರೇಣುಕಾಚಾರ್ಯರ, ಜಗಜ್ಯೋತಿ ಬಸವೇಶ್ವರರ, ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರ, ಮನೆಹಳ್ಳಿ ಮಠದ ಅನಘ ನಿರಂಜನ ಶ್ರೀ ಗುರು ಸಿದ್ಧವೀರೇಶ್ವರ ಸ್ವಾಮಿಗಳ ಪ್ರಸ್ತುತ ಕೊಡಗಿನ ವೀರಶೈವ ಲಿಂಗಾಯತ ಮಠಗಳ ಪೂಜ್ಯರುಗಳ, ಹಾಲೇರಿ ಅರಸರ ಮತ್ತು ಸ್ವಾತಂತ್ರ್ಯ ಹೋರಾಟಗಾರ ಹೆಮ್ಮನೆ ಶ್ರೀ ಪುಟ್ಟಬಸಪ್ಪನವರ ಭಾವಚಿತ್ರಗಳೊಂದಿಗೆ ಹಾಗೂ ಕಳಸ-ಕನ್ನಡಿ, ಷಟ್‌ಸ್ಥಲ ಧ್ವಜ, ವೀರಗಾಸೆ ಕುಣಿತ ಹಾಗೂ ವಾದ್ಯ-ವೃಂದಗಳೊಂದಿಗೆ ಆಕರ್ಷಕ ಮೆರವಣಿಗೆ ಸಾಗಲಿದೆ.

ಬೆಳಗ್ಗೆ 10.30 ಗಂಟೆಗೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ತುಮಕೂರು ಶ್ರೀ ಸಿದ್ದಗಂಗಾ ಮಠದ ಶಿವ ಸಿದ್ದೇಶ್ವರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಮಹಾಂತ ಶಿವಲಿಂಗ ಸ್ವಾಮಿಗಳು ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಗ್ರಾಮಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಶಾಂತಮಲ್ಲಿಕಾರ್ಜುನ ಮಹಾಸ್ವಾಮಿ, ಚನ್ನಬಸವ ದೇಶಿಕೇಂದ್ರ ಮಹಾಸ್ವಾಮಿ, ಮಹಾಂತ ಮಹಾಸ್ವಾಮಿ, ಸದಾಶಿವ ಮಹಾಸ್ವಾಮಿ, ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿ, ಇಮ್ಮಡಿ ಶಿವಲಿಂಗ ಮಹಾಸ್ವಾಮಿಗಳವರು, ಮಲ್ಲೇಶ ಮಹಾಸ್ವಾಮಿ, ಸ್ವತಂತ್ರ ಬಸವಲಿಂಗ ಮಹಾಸ್ವಾಮಿ, ರುದ್ರಮುನಿ ಮಹಾಸ್ವಾಮಿ, ನಿಶ್ಚಲ ನಿರಂಜನ ದೇಶೀಕೇಂದ್ರ ಮಹಾಸ್ವಾಮಿ ಮತ್ತಿತರ ಪ್ರಮುಖರು ಉಪಸ್ಥಿತರಿರುವರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯಾಧ್ಯಕ್ಷ ಶಂಕರ ಬಿದರಿ ಅವರು ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪುಸ್ತಕ ಬಿಡುಗಡೆ ಹಾಗೂ ಮಡಿಕೇರಿ ಶಾಸಕ ಡಾ.ಮಂತರ್ ಗೌಡ ಅವರು ಭಾವಚಿತ್ರ ಅನಾವರಣ ಮಾಡಲಿದ್ದಾರೆ. ಇನ್ನೂ ಹೆಚ್ಚಿನ ಸಂಖ್ಯೆಯ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಹಾಂತ ಶಿವಲಿಂಗ ಸ್ವಾಮಿಗಳು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಉಪಾಧ್ಯಕ್ಷ ಮಾಯಮುಡಿ ಸುರೇಶ್, ಕಾರ್ಯದರ್ಶಿ ಸೋಮಶ್ ಸಿ.ಎನ್, ಖಜಾಂಚಿ ಭರತ್ ಸಿ.ಎಸ್ ಹಾಗೂ ಯುವ ಘಟಕದ ಅಧ್ಯಕ್ಷ ಮೋಕ್ಷಿಕ್ ರಾಜ್ ಉಪಸ್ಥಿತರಿದ್ದರು.

ವಿವಿಧತೆಯಲ್ಲಿ ಏಕತೆ ಸಾಧಿಸಿದ ಏಕೈಕ ದೇಶ ಭಾರತ

ಪಟ್ಟಣದ ರಾಮದಾಸ್ ಹೋಟೆಲ್ ನ ಸುಲೋಚನಾ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಾಮಾಜಿಕ ಸದ್ಭಾವನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಕೆ ಆರ್‌ಪೇಟೆ: ಪಟ್ಟಣದ ರಾಮದಾಸ್ ಹೋಟೆಲ್ ನ ಸುಲೋಚನಾ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಾಮಾಜಿಕ ಸದ್ಭಾವನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಕೆ ಆರ್‌ಪೇಟೆ ತಾಲೂಕು ಸಾಮಾಜಿಕ ಸದ್ಭಾವನಾ ಸಮಿತಿ ಕಾರ್ಯಕ್ರಮವನ್ನು ಏರ್ಪಡಿಸಿತ್ತು. "ಕುಟುಂಬ ಜೀವನ ಮೌಲ್ಯಗಳು ಮತ್ತು ಸಾಮಾಜಿಕ ಸಮರಸತೆ" ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಬೆಂಗಳೂರಿನ ಧರ್ಮ ಜಾಗರಣ ಪ್ರಾಂತ ಸಂಯೋಜಕರಾದ ರಾಘವೇಂದ್ರ ಉಪನ್ಯಾಸ ನೀಡಿದರು. ಅವರು ಮಾತನಾಡಿ ಭಾರತ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ವಿಶಿಷ್ಟ ದೇಶವಾಗಿದೆ. ಹಲವಾರು ಭಾಷೆಗಳು, ಆಹಾರ ಪದ್ಧತಿಗಳು, ವೇಷಭೂಷಣಗಳು, ಆಚಾರ ಪದ್ಧತಿಗಳು, ಮತ ಸಂಪ್ರದಾಯಗಳು, ಪೂಜಾ ಪದ್ಧತಿಗಳು ನಾನಾ ರೀತಿಯಲ್ಲಿ ಇದ್ದರೂ ಭಾರತ ಐಕ್ಯತೆಯನ್ನು ಸಾಧಿಸಿದೆ. ಮೂಲದಲ್ಲಿ ಇರುವ ಆಚಾರ ವಿಚಾರ ಮತ್ತು ಸಂಸ್ಕೃತಿಗಳು ಒಂದೇ ಭಾವ ಎಂಬುದು ಸಹಜವಾಗಿಯೇ ನಮ್ಮ ಸಮಾಜದಲ್ಲಿದೆ. ಸಾವಿರಾರು ವರ್ಷಗಳ ವಿದೇಶಿ ಆಕ್ರಮಣ ಆಳ್ವಿಕೆಗಳ ಕಾರಣಕ್ಕಾಗಿ ನಮ್ಮ ವಿಚಾರದಲ್ಲಿ ಹಲವಾರು ಗೊಂದಲಗಳು ಸಮಸ್ಯೆಗಳು ಉಂಟಾಗಿವೆ. ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ಪಿಡುಗುಗಳು ಆಚರಣೆಗಳು, ನಮ್ಮ ಸಮಾಜ ಎದುರಿಸುತ್ತಿರುವ ಪ್ರಸ್ತುತ ಸವಾಲುಗಳಾಗಿವೆ ಸಮಸ್ಯೆಗಳನ್ನು ಹುಡುಕಿ ಅವುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವುದು ನಮ್ಮ ಮೂಲ ಕರ್ತವ್ಯವಾಗಿದೆ. ಆಧುನಿಕ ಜಗತ್ತಿನಲ್ಲಿ ಭಾರತ ಮುಂದುವರಿದ ದೇಶಗಳೊಂದಿಗೆ ಭುಜಕ್ಕೆ ಭುಜಕೊಟ್ಟು ಮುಳುಗುತ್ತಿರುವ ಪ್ರಮುಖ ಶಕ್ತಿಯಾಗಿ ಹೊರಹೊಂದಿದೆ. ಭಾರತವನ್ನು ಇನ್ನಷ್ಟು ಅಭಿವೃದ್ಧಿ ಗೊಳಿಸುವ ಸಲುವಾಗಿ ನಾವೆಲ್ಲರೂ ಸಾಮಾಜಿಕ ಸಮರಸತೆಯನ್ನು ಮೈಗೂಡಿಸಿಕೊಳ್ಳುವಂತನ್ನು ಹೊಂದುವುದು ಅವಶ್ಯಕತೆ ಇದೆ. ನಮ್ಮೆಲ್ಲರ ರಾಷ್ಟ್ರೀಯ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಸದ್ಭಾವನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ರಾಘವೇಂದ್ರ ಹೇಳಿದರು. ಜೈಶಕ ಕೃಷ್ಣ ತಜ್ಞ ವಿಠಲಾಪುರ ಸುಬ್ಬೇಗೌಡ ಹಿರಿಯ ಮುಖಂಡರಾದ ನಾಯಕನಹಳ್ಳಿ ನಂಜಪ್ಪ ನಿವೃತ್ತ ಪ್ರಾಂಶುಪಾಲರು ಹಾಗೂ ಪ್ರಾಂಶುಪಾಲ ಹಾಗೂ ಹಿರಿಯ ಪತ್ರಕರ್ತ ಕೆ ಕಾಳೇಗೌಡ ಭಾರತೀಯ ಜೈ ಕಿಸಾನ್ ವಿಭಾಗದ ಮುಖ್ಯಸ್ಥ ಹರಿಶ್ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರವೀಣ್ ಮುಖಂಡರಾದ ಮಧುಸೂದನ್ ಪಾಲ್ಗೊಂಡಿದ್ದರು.

ಶ್ರೀಸಿದ್ಧರಾಮೇಶ್ವರಸ್ವಾಮಿ ದೇಗುಲದ ಪೂಜಾ ವಾರ್ಷಿಕೋತ್ಸವ

ಮದ್ದೂರು: ಮದ್ದೂರು ತಾಲೂಕಿನ ಮಾದನಾಯಕನಹಳ್ಳಿ ಗ್ರಾಮದ ಶ್ರೀಸಿದ್ಧರಾಮೇಶ್ವರಸ್ವಾಮಿ ದೇವಾಲಯದ ಮೊದಲನೇ ವರ್ಷದ ಪೂಜಾ ವಾರ್ಷಿಕೋತ್ಸವ ಮತ್ತು ಸಹಸ್ರ ಕುಂಭಾಭಿಷೇಕ ಪೂಜಾ ವಿಧಿ ವಿಧಾನಗಳು ಅಪಾರ ಸಂಖ್ಯೆಯ ಭಕ್ತಾದಿಗಳ ಸಮ್ಮುಖದಲ್ಲಿ ಸೋಮವಾರ ವಿಜ್ರಂಭಣೆಯಿಂದ ನೆರವೇರಿದವು. ಪೂಜಾ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ಬೆಳಗ್ಗೆ ಗಣಪತಿ ಪೂಜೆಯೊಂದಿಗೆ ಆರಂಭಗೊಂಡ ಧಾರ್ಮಿಕ ಕಾರ್ಯಕ್ರಮಗಳು 1008 ಶಂಖ ಸ್ಥಾಪನೆ ಮತ್ತು ಅರ್ಚನೆ ಆರಾಧನೆ, ಹೋಮಹವನ, ಸುಬ್ರಹ್ಮಣ್ಯ ಹೋಮ, ಕಾಲಭೈರವ, ಮಹಾಲಕ್ಷ್ಮಿ ರುದ್ರ, ದುರ್ಗಾ ಹೋಮ ಸೇರಿದಂತೆ ಇನ್ನಿತರೆ ಪೂಜಾ ವಿಧಿ ವಿಧಾನಗಳು ನೆರವೇರಿದವು. ಸೋಮವಾರ ಬೆಳಗ್ಗೆ 7 ಗಂಟೆಗೆ ಮಹಾಗಣಪತಿ ಪೂಜೆ, ಸಿದ್ಧರಾಮೇಶ್ವರಸ್ವಾಮಿ ವಿಗ್ರಹ ಮೂರ್ತಿಗೆ ಪಂಚಾಮೃತ ಅಭಿಷೇಕ, ಶತ ರುದ್ರಾಭಿಷೇಕ ಇನ್ನಿತರೆ ಪೂಜಾ ಕೈಂಕರ್ಯಗಳ ಬಳಿಕ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ಆಯೋಜಿಸಲಾಗಿತ್ತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ತೈಲೂರು ಗ್ರಾಮದ ತೈಲೂರಮ್ಮ, ಮಂಚಮ್ಮ, ಬೂದನೂರು ಶ್ರೀ ಅಂಕನಾಥೇಶ್ವರ, ಸಿದ್ದರಾಮೇಶ್ವರ ಹಾಗೂ ಮಲ್ಲಮ್ಮ ದೇವರುಗಳ ಉತ್ಸವವು ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ನೆರವೇರಿತು. ಪೂಜಾ ವಿಧಿ ವಿಧಾನಗಳ ವೇಳೆ ಪಾಲ್ಗೊಂಡ ಭಕ್ತಾದಿಗಳಿಗೆ ದೇವಾಲಯ ಟ್ರಸ್ಟ್ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಪಟ್ಟಲದಮ್ಮ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಾದನಾಯಕನಹಳ್ಳಿ ರಾಜಣ್ಣ, ಕಾರ್ಯದರ್ಶಿ ಮಹೇಶ್, ಪದಾಧಿಕಾರಿಗಳಾದ ಗಿರೀಶ್, ತೈಲೂರು ವೆಂಕಟಕೃಷ್ಣ, ನಂದೀಶ್ ಇತರರಿದ್ದರು.

ನೂತನವಾಗಿ ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಯತೀಂದ್ರ ಸಿದ್ದರಾಮಯ್ಯರವರನ್ನು ಕೆಪಿಸಿಸಿ ಕಾನೂನು ವಿಭಾಗದ ಕಾರ್ಯದರ್ಶಿ ವಕೀಲ ಚೆನ್ನಪ್ಪ ಅವರು ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಅಭಿನಂದಿಸಿದರು. ಈ ವೇಳೆ ಮುಖಂಡರಾದ ಕುದೇರು ಲಿಂಗಣ್ಣ ಸೂತನ ಹುಂಡಿ ಸೋಮಣ್ಣ ಇತರರು ಇದ್ದರು.

ಹಲ್ಲೆ: ಪ್ರಕರಣ ದಾಖಲು

ಚಾಮರಾಜನಗರ: ಗುಂಡ್ಲುಪೇಟೆ ತಾಲೂಕಿನ ಬೇರಂಬಾಡಿ ಗ್ರಾಮದ ನಾಯಕ ಸಮುದಾಯದ ದಾಸನಾಯಕ ಮತ್ತು ಲಕ್ಷ್ಮಮ್ಮ ಎಂಬುವರ ಮೇಲೆ ಹಲ್ಲೆ ಮಾಡಿ ಜಾತಿ ನಿಂದನೆ ಸಂಬಂಧ 4 ಮಂದಿ ಸವರ್ಣೀಯರ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಅಟ್ರಾಸಿಟಿ(ಎಸ್.ಸಿ, ಎಸ್.ಟಿ ದೌರ್ಜನ್ಯ) ಪ್ರಕರಣ ದಾಖಲಾಗಿದೆ.

ಬೇರಂಬಾಡಿ ಗ್ರಾಮದ ಬೀಚನಹಳ್ಳಿ ಸರ್ವೆ ನಂಬರ್283/1 ರಲ್ಲಿ ಎರಡು ಎಕರೆ ಜಮೀನು ಇದ್ದು, ಇತ್ತೀಚೆಗೆ ನಮ್ಮ ಪಕ್ಕದ ಜಮೀನನ್ನು ಬೇರಂಬಾಡಿ ಗ್ರಾಮದ ಲಿಂಗಾಯತ ಸಮುದಾಯದ ನಂದೀಶ್ ಎಂಬುವರು ಖರೀದಿ ಮಾಡಿದ್ದಾರೆ. ಆದರಲ್ಲಿ ಬೇಲಿಯನ್ನು ಹಾಕುವಾಗ ನಮಗೆ ಸೇರಿದ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಸುಮಾರು ಹೋಗಿರುತ್ತಾರೆ. ಇದರಿಂದ ನಮಗೆ ಅಪಮಾನ ಬಂದು ಜೂ.4ರಂದು ಸರ್ವೇಯರ್‌ಮೂಲಕ ಸರ್ವೆ ಮಾಡಿಸಿ ಮನೆಗೆ ಹೊರಡುವ ಸಂದರ್ಭದಲ್ಲಿ ನಂದೀಶ್ ಎಂಬಾತ ನಮ್ಮ ಮೇಲೆ ಕಾಣದ ಬೇಲಿ ಹಾಕುವ ಬಗ್ಗೆ, ಪದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದಾರೆ. ನಂದೀಶ್ ಜೊತೆಗೆ ಶಿವಾನಂದ್ ಬಿನ್ ರಾಮಪ್ಪ, ಮಣಿಕಂಠ ಬಿನ್ ಕಾಶಪ್ಪ, ನಿಂಗರಾಜು ಬಿನ್ ಕುಮಾರಪ್ಪ ಎಂಬುವವರು ಸಹ ಸೇರಿದಂತೆ ನಮಗೆ ಹಲ್ಲೆ ಮಾಡಿ ಜಾತಿ ನಿಂದನೆ ಮಾಡಿದ್ದಾರೆ.

ನಿಮ್ಮ ಜಮೀನನ್ನು ನನಗೆ ಮಾರಾಟ ಮಾಡಿ ಊರು ಬಿಟ್ಟು ಹೋಗಿ. ಇಲ್ಲವಾದಲ್ಲಿ ನಿಮ್ಮಗಳನ್ನು ಕೊಲೆ ಮಾಡುತ್ತೇನೆ ಎಂದು ನಮಗೆ ಬೆದರಿಕೆ ಹಾಕಿದ್ದಾರೆ. ಇದು ನಮ್ಮ ಜಮೀನನ್ನು ಕಬಳಿಸುವ ಹುನ್ನಾರವಾಗಿದೆ.

ಸಮಾಚಾರ ಸಣ್ಣದಲ್ಲ

ಕೇಂದ್ರದ ವಿರುದ್ಧ ರೈತರ ಪ್ರತಿಭಟನೆ

ಚಂಡೀಗಢ: ರಸಗೊಬ್ಬರದ ಕೊರತೆ, ಇಂಧನ ಬೆಲೆ ಹೆಚ್ಚಳ ಹಾಗೂ ಭೂ ಸ್ವಾಧೀನ ಪ್ರಕ್ರಿಯೆಗಳ ವಿರುದ್ಧ ಅಖಿಲ ಭಾರತ ಕಿಸಾನ್ ಮಜ್ದೂರ್ ಮೋರ್ಚಾ ನೇತೃತ್ವದಲ್ಲಿ ಸೋಮವಾರದಿಂದ ದೇಶದಾದ್ಯಂತ ಹಲವಡೆ ಪ್ರತಿಭಟನೆ ಆರಂಭವಾಗಿದೆ. ಪಂಜಾಬ್‌ನ 17 ಜಿಲ್ಲೆಗಳು ಸೇರಿದಂತೆ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಪ್ರತಿಭಟನೆಗೆ ಕರೆ ನೀಡಲಾಗಿದೆ. ಪ್ರತಿಭಟನೆಗೆ ಹರಿಯಾಣ, ರಾಜಸ್ಥಾನ, ಮಧ್ಯ ಪ್ರದೇಶ ಮತ್ತು ಬಿಹಾರದ ರೈತರು ಕೂಡ ಕೈಜೋಡಿ ಸುತ್ತಿದ್ದಾರೆ. ರಸಗೊಬ್ಬರದ ಕೊರತೆಯ ಸಮಸ್ಯೆ ಕೇವಲ ಒಂದು ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ, ಬದಲಾಗಿ ಇಡೀ ದೇಶ ಈ ಸಮಸ್ಯೆ ಎದುರಿಸುತ್ತಿದೆ. ಜಾಗತಿಕ ಪೂರೈಕೆಯಲ್ಲಿನ ಅಡಚಣೆಗಳು ಮತ್ತು ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ರಸ ಗೊಬ್ಬರ ಸಿಗುತ್ತಿಲ್ಲ, ಇದರಿಂದಾಗಿ ರೈತರಿಗೆ ಬಿತ್ತನೆ ಸಮಯದಲ್ಲೇ ಅಗತ್ಯ ಕೃಷಿಪರಿಕರಗಳ ಕೊರತೆ ಯುಂಟಾಗಿದೆ ಎಂದು ಕಿಸಾನ್ ನಾಯಕ ಸರ್ವನ್ ಸಿಂಗ್ ಪಂಧೇರ್ ತಿಳಿಸಿದ್ದಾರೆ. ಬೃಹತ್ ಪ್ರತಿಭಟನೆ ಯಲ್ಲಿ ದೇಶದ ಎಲ್ಲಾ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸು ವಂತೆ ರೈತ ಮುಖಂಡರು ಕರೆ ನೀಡಿದ್ದಾರೆ. ಸರಕಾರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಮುಂಬರುವ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ

ನೇಪಾಳದ ಗಡಿಯಲ್ಲಿ ಟಿಎಂಸಿ ನಾಯಕ ಸೆರೆ

ಕೋಲ್ಕತಾ: ಹಲವು ದಿನಗಳಿಂದ ತಲೆ ಮರೆಸಿಕೊಂಡಿದ್ದ ತೃಣಮೂಲ ಕಾಂಗ್ರೆಸ್ ನಾಯಕ ಜಹಾಂಗೀರ್ ಖಾನ್ ಅವರನ್ನು ಸೋಮವಾರ ಮುಂಜಾನೆ ಪಶ್ಚಿಮ ಬಂಗಾಳ ರಾಜ್ಯ ಪೊಲೀಸ್ ವಿಶೇಷ ಕಾರ್ಯಪಡೆ ಬಂಧಿಸಿದೆ. ಪೊಲೀಸರ ಪ್ರಕಾರ, ಪಶ್ಚಿಮ ಬಂಗಾಳದ ದಕ್ಷಿಣ-24 ಪರಗಣ ಜಿಲ್ಲೆಯ ಫಾಲ್ಟಾ ಪೊಲೀಸ್ ಠಾಣೆಯಲ್ಲಿ ಖಾನ್ ವಿರುದ್ಧ 7 ಎಫ್‌ಐಆರ್‌ಗಳು ದಾಖಲಾಗಿವೆ. ಪೊಲೀಸರ ತೀವ್ರ ಕಾರ್ಯಾಚರಣೆಯ ಹೊರತಾಗಿಯೂ ಆತ ತಲೆ ಮರೆಸಿಕೊಂಡು ತಿರುಗುತ್ತಿದ್ದ. ಗುಪ್ತಚರ ಮಾಹಿತಿಗಳ ಆಧಾರದ ಮೇಲೆ ಖಾನ್ ಚಲನವಲನಗಳ ಬಗ್ಗೆ ತೀವ್ರ ನಿಗಾ ಇಟ್ಟಿದ್ದ ಎಸ್‌ಟಿಎಫ್, ಸೋಮವಾರ ಮುಂಜಾನೆ ನೇಪಾಳ ಗಡಿಯಲ್ಲಿ ಬಂಧಿಸಿದೆ. ಈ ಸಂಬಂಧ ಹೆಚ್ಚಿನ ತನಿಖೆ ನಡೆಯುತ್ತಿದೆ.

3 ಏರ್ ಇಂಡಿಯಾ ವಿಮಾನಗಳಿಗೆ ಹಾನಿ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸುರಿದ ಭಾರೀ ಮಳೆ ಹಾಗೂ ಬಿರುಗಾಳಿಯ ಪರಿಣಾಮವಾಗಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2ರಲ್ಲಿ ನಿಲುಗಡೆಗೊಂಡಿದ್ದ ಮೂರು ಏರ್ ಇಂಡಿಯಾ ವಿಮಾನಗಳು ಹಾನಿಗೊಳಗಾದ ಘಟನೆ ಬೆಳಕಿಗೆ ಬಂದಿದೆ. ಮಾಹಿತಿಯ ಪ್ರಕಾರ, ಏರ್ ಇಂಡಿಯಾ ಎಂಜಿನಿಯರಿಂಗ್ ಮತ್ತು ಇಂಡಿಗೋ ಸಂಸ್ಥೆಗಳಿಗೆ ಸೇರಿದ ಗ್ರೌಂಡ್ ಸಪೋರ್ಟ್ ಉಪಕರಣಗಳು ಬಲವಾದ ಗಾಳಿ ಮತ್ತು ಮಳೆಯ ಹೊಡೆತಕ್ಕೆ ಸಿಲುಕಿ ತಮ್ಮ ಸ್ಥಾನದಿಂದ ಜಾರಿಬಂದಿವೆ. ಈ ವೇಳೆ ನಿಲ್ಲಿಸಲಾಗಿದ್ದ ಮೂರು ಏರ್ ಇಂಡಿಯಾ ನ್ಯಾರೋಬಾಡಿ ವಿಮಾನಗಳಿಗೆ ಡಿಕ್ಕಿ ಹೊಡೆದು ಹಾನಿ ಉಂಟು ಮಾಡಿವೆ. ಘಟನೆಯ ಬಳಿಕ ಮುನ್ನೆಚ್ಚರಿಕಾ ಕ್ರಮವಾಗಿ ಹಾನಿಗೊಳಗಾದ ಮೂರು ವಿಮಾನಗಳನ್ನು ತಕ್ಷಣವೇ ಸೇವೆಯಿಂದ ಹೊರಗಿಡಲಾಗಿದೆ. ತಾಂತ್ರಿಕ ತಜ್ಞರು ವಿಮಾನಗಳ ಸ್ಥಿತಿಯನ್ನು ಪರಿಶೀಲಿಸುತ್ತಿದ್ದು, ದುರಸ್ತಿ ಕಾರ್ಯವೂ ಆರಂಭವಾಗಿದೆ ಎಂದು ತಿಳಿದು ಬಂದಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ನರೇಂದ್ರ ಮೋದಿ } ಪ್ರಧಾನಿ
ಕಳೆದ 12 ವರ್ಷಗಳಲ್ಲಿ ಭಾರತದಲ್ಲಿ ಮಹತ್ವದ ಬದಲಾವಣೆಗಳು ಸಂಭವಿಸಿವೆ. ಈ ಎಲ್ಲ ಅಭಿವೃದ್ಧಿಗಳ ಹೃದಯಭಾಗದಲ್ಲಿ ಬಡವರು ಮತ್ತು ವಂಚಿತ ವರ್ಗಗಳ ಕಲ್ಯಾಣವಿದೆ. ಹಲವು ದಶಕಗಳಿಂದ ಅಭಿವೃದ್ಧಿಯಿಂದ ವಂಚಿತರಾಗಿದ್ದ ಜನರಿಗೆ ಅದರ ಲಾಭ ತಲುಪಿಸುವುದು ನಮ್ಮ ನಿರಂತರ ಪ್ರಯತ್ನವಾಗಿದೆ.

ನೈಜ ಮತದಾರರಿಗೆ ಜರಡಿ ಹಿಡಿಯಲಿದೆ ಎಸ್‌ಐಆರ್

ರಾಜ್ಯ ಸರಕಾರದ ವಿರೋಧದ ನಡುವೆ 5.50 ಕೋಟಿ ಮತದಾರರ ಎಸ್‌ಐಆರ್‌ಗೆ ಸಿದ್ಧತೆ

ಎಸ್‌ಐಆರ್‌ನಿಂದ ಮಮತಾ ಯುಗಾಂತ್ಯ?

ಕರಿಯಪ್ಪ ಹೆಗ್ಗಡದಿನ್ನಿ



ಪ್ರತಿಯೊಬ್ಬ ಅರ್ಹ ನಾಗರಿಕನು ಕೂಡ ಮತದಾರರ ಪಟ್ಟಿಯಲ್ಲಿ ಸೇರ್ಪಡೆ, ಮುಂಬರುವ ಚುನಾವಣೆಗಳಿಗೆ ಮತದಾರರ ಪಟ್ಟಿಯ ನಿಖರತೆ, ಪಾರದರ್ಶಕತೆಯನ್ನು ಸುಧಾರಿಸುವುದು. ನೋಂದಣಿಯನ್ನು ಸುಲಭ ಪ್ರಕ್ರಿಯೆಯಲ್ಲಿ ಮಾಡುವ ಮೂಲಕ ಮತದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು ಎಸ್‌ಐಆರ್, ಮತಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಮೂಲ ಉದ್ದೇಶ.

ಹೊಸದೇನೂ ಅಲ್ಲ

ಎಸ್‌ಐಆರ್ ಪ್ರಕ್ರಿಯೆ ಹೊಸದೇನೂ ಅಲ್ಲ. 1947 ರಿಂದ 2024ರವರೆಗೆ ಒಟ್ಟು 12 ಬಾರಿ ದೇಶದಲ್ಲಿ ಎಸ್‌ಐಆರ್ ನಡೆಸಲಾಗಿದೆ. ಅದರಲ್ಲು 12 ರಿಂದ 11 ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರ ಆಡಳಿತ ಇರುವಾಗಲೇ ಎಸ್‌ಐಆರ್ ನಡೆದಿದೆ.

1952, 1957, 1961ರ ಅವಧಿಯಲ್ಲಿ ಜವಹರಲಾಲ್ ನೆಹರೂ ಪ್ರಧಾನಿ ವೇಳೆ. 1965 ಲಾಲ್ ಬಹಾದ್ದೂರ್ ಶಾಸ್ತ್ರಿ, 1966, 1983 ಇಂದಿರಾಗಾಂಧಿ, 1987, 1989 ರಾಜೀವ್ ಗಾಂಧಿ, 1993, 1995 ಪಿ.ವಿ. ನರಸಿಂಹರಾವ್, 2002 ಅಟಲ್ ಬಿಹಾರಿ ವಾಜಪೇಯಿ, (ಕಾಂಗ್ರೆಸ್ಸೇತರ ಕೇಂದ್ರ ಸರಕಾರ) 2004 ಡಾ.ಮನಮೋಹನ್ ಸಿಂಗ್ ಅವರು ಪ್ರಧಾನ ಮಂತ್ರಿ ಆಗಿದ್ದ ಅವಧಿಯಲ್ಲಿ ಎಸ್‌ಐಆರ್ ಆಗಿದೆ.

ಉದ್ದೇಶಗಳು

ಮತದಾರರ ಪಟ್ಟಿಯನ್ನು ನಿಖರ, ಸಂಪೂರ್ಣ ಮತ್ತು ನವೀಕೃತಗೊಳಿಸುವ ಸಲುವಾಗಿ ಭಾರತೀಯ ಚುನಾವಣಾ ಆಯೋಗ ಕೈಗೊಳ್ಳುವ ವಿಶೇಷ ಅಭಿಯಾನ. ಇದರಲ್ಲಿ ಚುನಾವಣಾ ಆಯೋಗದ ಮೂಲಕ ನಿಯೋಜಿಸುವ ಸಿಬ್ಬಂದಿಗಳು ಮನೆಮನೆಗೆ ತೆರಳಿ ಮತದಾರ ಪಟ್ಟಿಯನ್ನು ಪರಿಶೀಲನೆ ಮಾಡುತ್ತಾರೆ. ಮತದಾರ ಪಟ್ಟಿಯ ಪರಿಷ್ಕರಣೆ ನಡೆಸುವ ಸಿಬ್ಬಂದಿ, ಸಂಶಯಾಸ್ಪದ ಮತದಾರರ ಅರ್ಹ ದಾಖಲೆ ಕೇಳುವ ಅಧಿಕಾರ ಹೊಂದಿರುತ್ತಾರೆ. ಅರ್ಹ ಮತದಾರರನ್ನು ಪರಿಶೀಲಿಸಿ, ಹೊಸ ಮತದಾರರ ಪಟ್ಟಿಗೆ ಸೇರಿಸುತ್ತಾರೆ. ಮೃತರಾದ ಅಥವಾ ಸ್ಥಳಾಂತರಗೊಂಡ, ವಲಸೆ ಹೋದ ವ್ಯಕ್ತಿಗಳ ಹೆಸರನ್ನು ಮತದಾರರ ಹೆಸರನ್ನು ಮತಪಟ್ಟಿಯಿಂದ ತೆಗೆದು ಹಾಕುತ್ತಾರೆ. 18 ವಯಸ್ಸು ಪೂರೈಸಿದವರನ್ನು ಮತದಾರರ ಪಟ್ಟಿಗೆ ಸೇರಿಸಿ, ಪರಿಷ್ಕರಣೆ ವೇ ಳೆ ಕಂಡು ಬಂದ ನಕಲಿ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗುತ್ತದೆ.

ಬಿಹಾರ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಮೊದಲ ಮತ್ತು 2ನೇ ಹಂತದ ಎಸ್‌ಐಆರ್ ಮುಗಿದು, ಕರ್ನಾಟಕ ಸೇರಿ 16 ರಾಜ್ಯಗಳಲ್ಲಿ 3ನೇ ಹಂತದ ಎಸ್‌ಐಆರ್ ನಡೆದಿದೆ. ರಾಜ್ಯದ 5.50 ಕೋಟಿ ಮತದಾರರ ಎಸ್‌ಐಆರ್ ಆಗಲಿದ್ದು, ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ರಾಜ್ಯ ಕಾಂಗ್ರೆಸ್ ಸರಕಾರ ವಿರೋಧ ವ್ಯಕ್ತಪಡಿಸಿದೆ. ಇದರ ನಡುವೆಯೂ ಚುನಾವಣಾ ಆಯೋಗ ಎಸ್‌ಐಆರ್ ಆರಂಭಿಸಿದೆ. ಏನಿದು ಎಸ್‌ಐಆರ್? ಬಿಹಾರ, ಪಶ್ಚಿಮ ಬಂಗಾಳದಂತೆ ರಾಜ್ಯದಲ್ಲೂ ಎಸ್‌ಐಅರ್‌ಗೆ ಯಾಕೆ ವಿರೋಧ? ಎನ್ನುವುದನ್ನು ಇಲ್ಲಿ ನೋಡೋಣ.

ಕಾನೂನು ಏನು ಹೇಳುತ್ತದೆ?

ಚುನಾವಣಾ ಆಯೋಗಕ್ಕೆ ಎಸ್‌ಐಆರ್ ಮಾಡುವ ಅಧಿಕಾರವನ್ನು 1950ರ ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 21-ಸೆಕ್ಷನ್ 21ಕ್ಲಾಸ್ ಮೂರರಲ್ಲಿ ಉಲ್ಲೇಖಿಸಲಾಗಿದೆ. ನಿಖರತೆ ಮತ್ತು ನ್ಯಾಯಸಮ್ಮತೆಯನ್ನ ಕಾಪಾಡಿಕೊಳ್ಳಲು ಅಗತ್ಯವೆಂದರೆ, ಯಾವುದೇ ಕ್ಷೇತ್ರದಲ್ಲಿ ಯಾವುದೇ ಸಮಯದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸಲು ಸಂವಿಧಾನ ಬದ್ಧ ಸಂಸ್ಥೆ ಭಾರತೀಯ ಚುನಾವಣಾ ಆಯೋಗಕ್ಕೆ ಈ ಅಧಿಕಾರ ಇದೆ.

ಈ ಹಿಂದೆ ಯಾವಾಗ ಎಸ್‌ಐಆರ್?

ಯಾವಾಗ	ಪ್ರಧಾನ ಮಂತ್ರಿ	ಸರಕಾರ
1952 1957 1961	ಜವಹರಲಾಲ್ ನೆಹರೂ	ಕಾಂಗ್ರೆಸ್
1965 1966	ಲಾಲ್ ಬಹಾದ್ದೂರ್ ಶಾಸ್ತ್ರಿ	ಕಾಂಗ್ರೆಸ್
1983	ಇಂದಿರಾಗಾಂಧಿ	ಕಾಂಗ್ರೆಸ್
1987 1989	ರಾಜೀವ್ ಗಾಂಧಿ	ಕಾಂಗ್ರೆಸ್
1993 1995	ಪಿ.ವಿ.ನರಸಿಂಹರಾವ್	ಕಾಂಗ್ರೆಸ್
2002	ವಾಜಪೇಯಿ	ಬಿಜೆಪಿ
2004	ಮನಮೋಹನ್ ಸಿಂಗ್	ಕಾಂಗ್ರೆಸ್

ಹೇಗೆ ನಡೆಯಲಿದೆ?

ಎಸ್‌ಐಆರ್‌ನಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಎಂದರೆ ಬಿಎಲ್‌ಒಗಳು ಮತದಾರರ ವಿವರಗಳನ್ನು ದೃಢೀಕರಿಸಲು ಮನೆಮನೆಗೆ ತೆರಳಿ ಮತದಾರರನ್ನು ಪರಿಶೀಲನೆ ನಡೆಸುತ್ತಾರೆ. ತರ ಮತದಾರರ ಮಾಹಿತಿಗಳನ್ನ ಸೇರಿಸಲು, ಅಳಿಸಲು ಅಥವಾ ಸರಿಪಡಿಸಲು ನಾಗರಿಕರಿಗೆ ಅರ್ಜಿಗಳನ್ನು ನೀಡಿ ಅಗತ್ಯ ಪ್ರಶ್ನೆಗಳನ್ನು ಕೇಳಲಾಗುತ್ತದೆ.

ಈ ವೇಳೆ ಅಸಲಿ ಹಾಗೂ ನಕಲಿ ಮತದಾರರನ್ನು ಪತ್ತೆ ಮಾಡಿ, ಅಸಲಿ ಮತದಾರರನ್ನು ಮಾತ್ರ ಹೊಸ ಪಟ್ಟಿಗೆ ಸೇರಿಸಲು ಶಿಫಾರಸು ಮಾಡಲಾಗುತ್ತದೆ. ಪರಿಷ್ಕರಣೆಯಲ್ಲಿ ಏನಾದರೂ ಲೋಪ ದೋಷಗಳು ಕಂಡುಬಂದರೆ ಬಿಎಲ್‌ಒ ಅಧಿಕಾರಿಗಳೇ ಆಕ್ಷೇಪಣೆಯನ್ನು ಸಲ್ಲಿಸುವ ಅಧಿಕಾರವನ್ನು ಕೂಡ ಹೊಂದಿರುತ್ತಾರೆ. ಇದೆಲ್ಲವೂ ಅತ್ಯಂತ ಪಾರದರ್ಶಕವಾಗಿ ನಡೆಯುತ್ತದೆ ಮತ್ತು ಇದರಲ್ಲಿ ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶ ಇರುವುದಿಲ್ಲ.

ಅಲ್ಪಸಂಖ್ಯಾತರ ಮೇಲಿನ ಹುನ್ನಾರವೇ?

ಬಿಹಾರದಲ್ಲಿ ನಡೆದ ಮೊಲದ ಹಂತದ ಎಸ್‌ಐಆರ್‌ನಲ್ಲಿ ಸುಮಾರು 45 ಲಕ್ಷ ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಹೊರಗಿಡಲಾಗಿದೆ. ಬಿಎಲ್‌ಒಗಳು ಕೇಳಿದ ಅಧಿಕೃತ ದಾಖಲೆ ಕೊಟ್ಟಿಲ್ಲ. ವಿಳಾಸ ಅಥವಾ ಫೋಟೋ ಗುರುತಿನ ಚೀಟಿಗಳು ಮಾನ್ಯತೆ ಪಡೆದಿಲ್ಲ. ಇದರಿಂದ ಬಿಹಾರದಲ್ಲಿ ನಡೆದ ಎಸ್‌ಐಆರ್‌ನಲ್ಲಿ 45 ಲಕ್ಷ ಮತದಾರರನ್ನು ಕೈಬಿಡಲಾಗಿದೆ ಎಂದು ಚುನಾವಣಾ ಆಯೋಗ ಸಮರ್ಥಿಸಿಕೊಂಡಿತ್ತು. ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಮತಾ ಬ್ಯಾನರ್ಜಿ, ಸಿದ್ದರಾಮಯ್ಯ ಸೇರಿ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದರು. ಮತದಾರರ ಪಟ್ಟಿಯನ್ನು ವಿಶೇಷ ಪರಿಷ್ಕರಣೆ ಮಾಡಿರುವುದೇ ಹಿಂದುಳಿದವರನ್ನು, ಅಲ್ಪಸಂಖ್ಯಾತರ ಮತದಾರರ ಹಕ್ಕನ್ನು ಕಸಿದುಕೊಳ್ಳುವ ಉದ್ದೇಶಕ್ಕೆ. ಆದರೆ, ವಿಪಕ್ಷದ ಆರೋಪಗಳಿಗೆ ಕೇಂದ್ರ ಸರಕಾರ ಹಾಗೂ ಚುನಾವಣಾ ಆಯೋಗ ಸಮರ್ಥಿಸಿಕೊಂಡಿದ್ದು, ಮತದಾರರ ಪಟ್ಟಿ ಪರಿಷ್ಕರಣೆ ಮೂಲ ಉದ್ದೇಶ ಅಕ್ರಮ ವಲಸಿಗರು ಹಾಗೂ ನಕಲಿ ಮತದಾರರನ್ನು ಗುರುತಿಸುವುದಾಗಿ ಎಂದು ಸ್ಪಷ್ಟನೆ ನೀಡಿದೆ.

ಎಲ್ಲೆಲ್ಲಿ ಎಸ್‌ಐಆರ್?

3ನೇ ಹಂತದ ಮತದಾರರ ಪಟ್ಟಿ ಪರಿಷ್ಕರಣೆಗೆ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಹರಿಯಾಣ, ಪಂಜಾಬ್, ಒಡಿಶಾ, ಜಾರ್ಖಂಡ್, ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ಉತ್ತರಾಖಂಡ ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ, ಚಂಡೀಗಢ, ದಾದರ್ ಮತ್ತು ನಗರ ಹವೇಲಿ ಹಾಗೂ ದಮನ್ ಮತ್ತು ದಿಯುನಲ್ಲಿ ನಡೆಯಲಿದೆ.

ಸುಪ್ರೀಂನಲ್ಲಿ ಮಮತಾ ವಾದ

ಪಶ್ಚಿಮ ಬಂಗಾಳದಲ್ಲಿ ನಡೆದ 2ನೇ ಹಂತದ ಮತದಾರರ ಪಟ್ಟಿ ಪರಿಷ್ಕರಣೆ ವಿರೋಧಿಸಿ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಸುಪ್ರೀಂ ಮೊರೆ ಹೋಗಿದ್ದರು. ಚುನಾವಣೆಗೂ ಮುನ್ನ ಪಶ್ಚಿಮ ಬಂಗಾಳವನ್ನು ಕೇಂದ್ರ ಸರಕಾರ ಟಾರ್ಗೆಟ್ ಮಾಡುತ್ತಿದೆ. 2 ವರ್ಷ ಹಿಡಿಯುವ ಪ್ರಕ್ರಿಯೆಯನ್ನು ಎರಡೇ ತಿಂಗಳಲ್ಲಿ ಮಾಡುವುದು ಹೇಗೆ? ಹಬ್ಬಹರಿದಿನಗಳ ಕಾಲದಲ್ಲೂ ಮನೆ ಮನೆಗೆ ತೆರಳಿ ಬಿಎಲ್‌ಒಗಳು ಜನಸಾಮಾನ್ಯರಿಗೆ ಕಿರುಕುಳ ಕೊಡುತ್ತಿದ್ದಾರೆ. 24 ವರ್ಷಗಳ ಕಾಲ ಮಾಡದೆ ಹೋದ ಎಸ್‌ಐಆರ್ ಅನ್ನು ಮೂರು ತಿಂಗಳಲ್ಲಿ ಮಾಡಲು ಕೇಂದ್ರ ಹೊರಟ್ಟಿದ್ದು ಯಾಕೆ ಎಂದು ಸ್ವತಃ ತಾವೇ ವಾದ ಮಾಡಿದ ಮಮತಾ ಅವರು ಕೇಂದ್ರ ಹಾಗೂ ಚುನಾವಣಾ ಆಯೋಗವನ್ನು ಸುಪ್ರೀಂನಲ್ಲಿ ತೀವ್ರ ತರಾಟೆಗೆ ತೆಗೆದುಕೊಂಡಿದ್ದರು. ಸದ್ಯ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ 207 ಸ್ಥಾನ ಗೆದ್ದು, ಮಮತಾ ಅವರ 15 ವರ್ಷದ ಆಡಳಿತ ಕೊನೆಗಾಣಿಸಿದೆ ಬಿಜೆಪಿಯ ಸುವೇಂದು ಅಧಿಕಾರಿ ಸಿಎಂ ಆಗಿದ್ದಾರೆ. ಇಲ್ಲಿ ತೃಣಮೂಲ ಕಾಂಗ್ರೆಸ್ ಪರಾಭವಕ್ಕೆ ಎಸ್‌ಐಅರ್ ಪ್ರಮುಖ ಕಾರಣ ಎನ್ನಲಾಗುತ್ತಿದೆ.

ರಾಜ್ಯದಲ್ಲಿ ಎಸ್‌ಐಆರ್ ತಡೆಗೆ ಆಗ್ರಹ

ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶದ ಬೆನ್ನಲ್ಲೇ ನಡೆದ ಈ ಹಿಂದೆ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮತದಾರರ ಪಟ್ಟಿಯ ಎಸ್‌ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ಪ್ರಕ್ರಿಯೆ ಸ್ಥಗಿತಗೊಳಿಸಲು ವಿವಿಧ ಸಂಘಟನೆಗಳ ಮುಖಂಡರು ಆಗ್ರಹ ಮಾಡಿದ್ದರು. ಜಿಬಿಎ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಹೊಸ್ತಿಲಲ್ಲೇ ಎಸ್‌ಐಆರ್ ಬಗ್ಗೆ ಕೇಳಿಬರುತ್ತಿರುವ ಅಪಸ್ವರಗಳ ಕುರಿತು ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಎಸ್‌ಐಆರ್‌ನಿಂದ ಎದುರಾಗಬಹುದಾದ ಸಮಸ್ಯೆಗಳು, ನೆರೆ ರಾಜ್ಯಗಳಲ್ಲಾದ ವಿವಾದಗಳು ಹಾಗೂ ಅದರ ಪರಿಣಾಮಗಳ ಕುರಿತು ಚರ್ಚಿಸಲಾಗಿತ್ತು. ಬೇರೆ ಬೇರೆ ರಾಜ್ಯಗಳಲ್ಲಾದ ಎಸ್‌ಐಆರ್ ಸಮಸ್ಯೆಗಳ ಗಂಭೀರತೆ ಕುರಿತು ಗಮನಸೆಳೆದು, 'ಈ ಪ್ರಕ್ರಿಯೆಯಿಂದ ಪಶ್ಚಿಮ ಬಂಗಾಳದಲ್ಲೇ 120ಕ್ಕೂ ಹೆಚ್ಚು ಸೀಟುಗಳನ್ನು ಬಿಜೆಪಿ ಗೆದ್ದಿದೆ. ಜನ ತಮ್ಮ ಹಕ್ಕುಗಳನ್ನೇ ಕಳೆದುಕೊಂಡಿದ್ದಾರೆ. ರಾಜ್ಯದಲ್ಲೂ ಅಂತಹ ಅನಾಹುತಗಳು ಆಗುವ ಸಾಧ್ಯತೆ ಇದೆ. ಆಗಾಗಿ ಎಸ್‌ಐಆರ್ ನಿಲ್ಲಿಸಬೇಕು ಎಂದು ಸಿದ್ದರಾಮಯ್ಯ ಅವರಲ್ಲಿ ಹಲವಾರು ಸಂಘಟನೆಗಳು ಅಹವಾಲು ಸಲ್ಲಿಸಿದ್ದವು.

ಕನ್ನಡಿಗರ ದಂಡು: ಕೊಟ್ಟಿಯೂರು ಸ್ತಬ್ಧ

ಕಣ್ಣೂರು:2 ಕೇರಳದ ಕಣ್ಣೂರು ಜಿಲ್ಲೆಯ ಕೊಟ್ಟಿಯೂರು ಶಿವ ದೇವಸ್ಥಾನದಲ್ಲಿ ವೈಶಾಖ ಮಹೋತ್ಸವ ಶುರುವಾಗಿದೆ. ಹಾಗಾಗಿ ಕೊಟ್ಟಿಯೂರಿಗೆ ಭೇಟಿ ನೀಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಮ್ಮ ರಾಜ್ಯಕ್ಕೂ ಸಮೀಪ ಇರುವುದರಿಂದ ಕರ್ನಾಟಕದ ಹಲವು ಭಾಗಗಳಿಂದ ಭಕ್ತಾದಿಗಳು ಕೊಟ್ಟಿಯೂರಿಗೆ ಭೇಟಿ ನೀಡುತ್ತಿದ್ದಾರೆ.

ಕಳೆದ ವರ್ಷ ಕೇರಳದ ಕೊಟ್ಟಿಯೂರು ಶಿವ ದೇವಸ್ಥಾನದ ಖ್ಯಾತಿ ಬಗ್ಗೆ ಸೋಶಿಯಲ್ ಮೀಡಿಯಾಗಳಲ್ಲಿ ಭಾರೀ ವೈರಲ್ ಆಗಿತ್ತು. ಇದಾದ ನಂತರ ನಮ್ಮ ರಾಜ್ಯದ ಹಲವು ಭಾಗಗಳಿಂದ ಭಕ್ತಾದಿಗಳು ಬಸ್ಸು, ಕಾರು ಮತ್ತು ಬೈಕ್‌ಗಳ ಮೂಲಕ ಕೊಟ್ಟಿಯೂರಿಗೆ ಹೋಗಿ ದೇವರ ದರ್ಶನ ಪಡೆದಿದ್ದರು.

ಈ ಸಲ ಪ್ರತೀ ದಿನ ಕೊಟ್ಟಿಯೂರಿನ ಶಿವ ಸನ್ನಿಧಿಯಲ್ಲಿ ಭಕ್ತರ ಸಂಖ್ಯೆ ಹೆಚ್ಚುತ್ತಲೇ ಇದೆ, ಹಾಗಾಗಿ ದೇವರ ದರ್ಶನಕ್ಕೆ ಪರದಾಡುವಂತಾಗಿದೆ. ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಭದ್ರತಾ ಸಿಬ್ಬಂದಿ ವರ್ತನೆಗೆ ಕರ್ನಾಟಕದ ಭಕ್ತರು ಆಕ್ರೋಶ ಹೊರಹಾಕಿದ್ದಾರೆ. ಸದ್ಯ ಜಾಲತಾಣದಲ್ಲಿ ಅಂತಹ ವಿಡಿಯೋಗಳು ಹರಿದಾಡುತ್ತಿವೆ. ಕರ್ನಾಟಕದ ಭಕ್ತರ ಮೇಲೆ ದುರ್ವರ್ತನೆ ನಡೆಯುತ್ತಿರುವ ಆರೋಪ ಕೇಳಿಬಂದಿದ್ದು, ಜಾಲತಾಣದಲ್ಲಿ ಆಕ್ರೋಶ ವ್ಯಕ್ತವಾಗಿದೆ. ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಭದ್ರತಾ ಸಿಬ್ಬಂದಿ ಭಕ್ತರ ಮೇಲೆ ದುರ್ವತನೆ ತೋರುತ್ತಿದ್ದಾರೆ ಎಂದು ಕನ್ನಡಿಗರು ತೀವ್ರ ಅಸಮಾಧಾನ ಹೊರಹಾಕುತ್ತಿದ್ದಾರೆ.

ಒಂದು ದಿನಕ್ಕೆ 1.25 ಲಕ್ಷ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಲು ಅವಕಾಶವಿದೆ. ಆದರೆ ಮೊನ್ನೆ ಭಾನುವಾರ 1.70 ಲಕ್ಷಕ್ಕೂ ಹೆಚ್ಚು ಭಕ್ತರು ಬಂದಿದ್ದರು. ಇದರಿಂದಾಗಿ ದೇವರ ದರ್ಶನ ಪಡೆಯಲು ವಿಳಂಬವಾಗಿ ಭಕ್ತರು ಆಕ್ರೋಶಗೊಂಡಿದ್ದಾರೆ ಎಂದು ಕೇರಳದ ಕಣ್ಣೂರು ವಲಯದ ಡಿಐಜಿ ಕನ್ನಡಿಗ ಯತೀಶ್ಚಂದ್ರ ಹೇಳಿದ್ದಾರೆ.

ಕೊಟ್ಟಿಯೂರಿನಲ್ಲಿ 2 ದೇವಸ್ಥಾನಗಳಿಗೆ ಒಂದು ದೇವಸ್ಥಾನದಿಂದ ಶಿವನ ಮೂರ್ತಿ ತಂದು ಮತ್ತೊಂದು ದೇವಸ್ಥಾನದಲ್ಲಿ ಪೂಜೆ ಮಾಡುವುದು ಪದ್ಧತಿ. ಆದರೆ ಕಳೆದ ಭಾನುವಾರ ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ದೇವಾಸ್ಥಾನಕ್ಕೆ ಬಂದಿದ್ದಾರೆ. ಇದೇ ಮೊದಲ ಬಾರಿಗೆ ದೇವಸ್ಥಾನಕ್ಕೆ ಅಷ್ಟೊಂದು ಸಂಖ್ಯೆಯ ಭಕ್ತಾದಿಗಳು ಬಂದಿರುವುದಾಗಿದೆ. ಕಳೆದ ಎರಡು ವರ್ಷಗಳಿಂದ ಹೆಚ್ಚು ಜನ ಬರುತ್ತಿದ್ದಾರೆ. ಸಾವಿರಾರು ವಾಹನಗಳಲ್ಲಿ ಭಕ್ತಾದಿಗಳು ಕರ್ನಾಟಕದಿಂದ ಬಂದಿದ್ದಾರೆ ಎಂದು ಡಿಐಜಿ ಹೇಳಿದ್ದಾರೆ.

ಮಾಹಿತಿ ಕೊರತೆಯಿಂದ ಸಮಸ್ಯೆ: ದೇವಸ್ಥಾನದ ಪೂಜಾ ಕಾರ್ಯ ನಡೆಯುವಾಗ ಅರ್ಧಗಂಟೆ ದೇವಾಸ್ಥಾನದ ಬಾಗಿಲು ಹಾಕಬೇಕಾಗುತ್ತದೆ. 10 ನಿಮಿಷ ದೇವರ ಮೂರ್ತಿ ಶುದ್ಧೀಕರಿಸಬೇಕಾಗುತ್ತದೆ. ಶಿವೇಲಿ ಪದ್ಧತಿಯಂತೆ ದೇವರನ್ನು ಆನೆ ಮೇಲೆ ಕೂರಿಸಿಕೊಂಡು ಹೋಗುತ್ತಾರೆ, ಅದಾದ ಮೇಲೆ ಯಾರೂ ಕೂಡ ನೀರಿನೊಳಗೆ ಇಳಿಯುವ ಹಾಗಿಲ್ಲ. ಮೊದಲಿಂದಲೂ ಈ ರೀತಿಯ ಕೆಲವು ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಬರಲಾಗಿದೆ. ಹೊರಗಿನಿಂದ ಬಂದಿರುವ ಭಕ್ತಾದಿಗಳಿಗೆ ಈ ಬಗ್ಗೆ ಮಾಹಿತಿ ಇಲ್ಲ ಹಾಗಾಗಿ ಸಮಸ್ಯೆಯಾಗಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ದೂರು ಕೊಟ್ಟರೆ ಕ್ರಮ: ಸ್ಥಳೀಯರು ಗೂಂಡಾ ರೀತಿ ವರ್ತಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಕಣ್ಣೂರು ಜಿಲ್ಲಾ ಎಸ್ಪಿ, ವೀಡಿಯೋವನ್ನು ಸಮಗ್ರವಾಗಿ ಪರಿಶೀಲನೆ ನಡೆಸುತ್ತಿದ್ದು, ಆ ರೀತಿ ವರ್ತಿಸಿದ್ದು ದೇವಸ್ಥಾನದ ಆಡಳಿತ ಮಂಡಳಿಯವರಾ ಅಥವಾ ಬೇರೆ ಯಾರಾದರೂ ಆಗಿರಬಹುದೇ ಎಂಬುವುದು ತಿಳಿಯಬೇಕಿದೆ. ಯಾರೇ ಆಗಿದ್ದರೂ ಅಂತಹವರ ವಿರುದ್ಧ ಕ್ರಮ ತಗೊಳ್ಳುತ್ತೇವೆ ಎಂದು ಕಣ್ಣೂರು ಪೊಲೀಸ್ ಇಲಾಖೆ ಹೇಳಿದೆ.

ಕನ್ನಡ ಮಾತನಾಡುವ ಪೊಲೀಸರ ನಿಯೋಜನೆ

ಕಾಸರಗೋಡಿನಿಂದ ಕನ್ನಡ ಮಾತನಾಡುವ 15 ಜನ ಪೊಲೀಸರನ್ನು ಕೊಟ್ಟಿಯೂರಿನಲ್ಲಿ ನಿಯೋಜಿಸಲಾಗಿದೆ. ಮುಂಬರುವ ದಿನಗಳಲ್ಲಿ ಪೊಲೀಸ್ ಇಲಾಖೆ ಮುನ್ನೆಚ್ಚರಿಕಾ ಕ್ರಮಗಳ ಭಾಗವಾಗಿ ದೇವಸ್ಥಾನದ ಆಡಳಿತ ಮಂಡಳಿ ಮತ್ತು ಸ್ಥಳೀಯರೊಂದಿಗೆ ಕೈ ಜೋಡಿಸಿ ಅಗತ್ಯ ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೇವಸ್ಥಾನದಲ್ಲಿ ಒಂದು 1 ಲಕ್ಷ 25 ಸಾವಿರ ಮಾತ್ರ ಮಂದಿ ದರ್ಶನ ಮಾಡಬಹುದಾಗಿದೆ. ಹಾಗಾಗಿ ವಾರಾಂತ್ಯದಲ್ಲಿ ಈ ರೀತಿ ಹೆಚ್ಚು ಜನ ಬಂದಾಗ ಕಾಯಲೇಬೇಕಾಗುತ್ತದೆ ಮಾತ್ರವಲ್ಲ ಅನನುಕೂಲತೆ ಹೆಚ್ಚಾಗುತ್ತದೆ ಎಂಬುದು ವಾಸ್ತವಾಂಶ.

ಬಾರ್‌ಗಳಿಗೆ ನೋಟಿಸ್ ನೀಡಲು ಪೊಲೀಸರಿಗೆ ಸಚಿವ ಪ್ರಿಯಾಂಕ್ ಸೂಚನೆ

ಬಾರ್, ಕ್ಲಬ್‌ಗಳಲ್ಲಿ ವಯಸ್ಸಿನ ಪರಿಶೀಲನೆ ಕಡ್ಡಾಯ

ಬೆಂಗಳೂರು: ಅಪ್ರಾಪ್ತ ವಯಸ್ಕರ ಪ್ರವೇಶವನ್ನು ಕಟ್ಟುನಿಟ್ಟಾಗಿ ತಡೆಯಲು ಮತ್ತು ಅವರಿಗೆ ಮದ್ಯ ಸರಬರಾಜು ಮಾಡುವುದನ್ನು ನಿಷೇಧಿಸಲು ಬೆಂಗಳೂರಿನ ಎಲ್ಲಾ ಪಬ್‌ಗಳು, ಬ್ರೆವರೀಸ್, ಬಾರ್‌ಗಳು, ಕ್ಲಬ್‌ಗಳು, ಲಾಂಜ್‌ಗಳು, ರೆಸ್ಟೋರೆಂಟ್‌ಗಳು ಹಾಗೂ ಮದ್ಯ ಸರಬರಾಜು ಮಾಡುವ ಇತರ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡುವಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಬೆಂಗಳೂರಿನಲ್ಲಿ ಹದಿಹರೆಯದವರು ಮತ್ತು ಯುವ ಜನರಲ್ಲಿ ಹೆಚ್ಚುತ್ತಿರುವ ಮದ್ಯಪಾನ ಹಾಗೂ ಮಾದಕ ದ್ರವ್ಯಗಳ ಬಳಕೆಯ ಬಗೆಗಿನ ಆತಂಕದ ಹಿನ್ನೆಲೆಯಲ್ಲಿ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರಿನ ನಾಲ್ಕು ಪ್ರಮುಖ ಶಿಕ್ಷಣ ಸಂಸ್ಥೆಗಳ ಪದವಿಪೂರ್ವ, ಪದವಿ ಮತ್ತು ಉನ್ನತ ಪ್ರೌಢ ತರಗತಿಗಳ 4,093 ವಿದ್ಯಾರ್ಥಿಗಳ ನಡುವೆ ಇತ್ತೀಚೆಗೆ ನಡೆಸಿದ ಸಂಶೋಧನೆಯಲ್ಲಿ, ನಗರದ ಪ್ರತಿ ಮೂವರು ಹದಿಹರೆಯದವರಲ್ಲಿ ಒಬ್ಬರು ಮದ್ಯ ಅಥವಾ ತಂಬಾಕು ಬಳಕೆಯಿಂದಾಗಿ ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ಅಪಾಯದಲ್ಲಿದ್ದಾರೆ ಎಂಬ ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ.

ಈ ಅಧ್ಯಯನವನ್ನು ಬೆಂಗಳೂರಿನ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಕ್ರೈಸ್ಟ್ ವಿಶ್ವವಿದ್ಯಾಲಯ ಮತ್ತು ಮಣಿಪಾಲದ ಕಸ್ತೂರ ಬಾ ಮೆಡಿಕಲ್ ಕಾಲೇಜಿನ ಸಂಶೋಧಕರು ನಡೆಸಿದ್ದಾರೆ.

ಈ ಅಧ್ಯಯನದ ಪ್ರಕಾರ, ಸಮೀಕ್ಷೆಗೆ ಒಳಪಟ್ಟ ಯುವಕರಲ್ಲಿ ಶೇ. 33 ರಷ್ಟು ಮಂದಿ ಮದ್ಯವನ್ನು ಬಳಸುತ್ತಿದ್ದರೆ, ಸುಮಾರು ಶೇ. 18 ರಷ್ಟು ಮಂದಿ ತಂಬಾಕು ಚಟಕ್ಕೆ ದಾಸರಾಗಿದ್ದಾರೆ. ಇದು ತಂಬಾಕು ಬಳಕೆಯ ರಾಷ್ಟ್ರೀಯ ಸರಾಸರಿ (ಶೇ. 8.7) ಮತ್ತು ಮದ್ಯಪಾನದ ರಾಷ್ಟ್ರೀಯ ಸರಾಸರಿಗಿಂತ (ಶೇ. 7.9) ಗಣನೀಯವಾಗಿ ಹೆಚ್ಚಾಗಿದೆ. ಅಷ್ಟೇ ಅಲ್ಲದೆ, ಇದು ಕರ್ನಾಟಕದ ಒಟ್ಟಾರೆ ಸರಾಸರಿಯಾದ ಶೇ. 4.7 (ತಂಬಾಕು) ಮತ್ತು ಶೇ. 8.5 ಕ್ಕಿಂತಲೂ (ಮದ್ಯಪಾನ) ತೀರಾ ಹೆಚ್ಚಾಗಿದೆ. ಬೆಂಗಳೂರಿನಲ್ಲಿ ಹದಿಹರೆಯದವರು ಮದ್ಯಪಾನ ಮಾಡಲು ಪ್ರಾರಂಭಿಸುವ ಸರಾಸರಿ ವಯಸ್ಸು 17 ವರ್ಷವಾಗಿದ್ದು, ಕೆಲವರು ಕೇವಲ 8 ವರ್ಷ ವಯಸ್ಸಿನಲ್ಲೇ ಮದ್ಯಪಾನದ ಹವ್ಯಾಸ ಆರಂಭಿಸಿದ್ದಾರೆ ಎಂದು ವರದಿ ತಿಳಿಸಿದೆ.

ಯುವಕರ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯದ ಬಗ್ಗೆ ಕಾಳಜಿ : ಈ ಗಂಭೀರ ಸಂಶೋಧನಾ ವರದಿಯ ಹಿನ್ನೆಲೆಯಲ್ಲಿ, ಸಚಿವ ಪ್ರಿಯಾಂಕ್ ಖರ್ಗೆ ಅವರು ಅಪ್ರಾಪ್ತ ವಯಸ್ಕರ ಮದ್ಯಪಾನವನ್ನು ಕೇವಲ ಪರವಾನಗಿ ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸದೆ, ಇದನ್ನು ಯುವಕರ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯದ ಗಂಭೀರ ಕಾಳಜಿ ಎಂದು ಪರಿಗಣಿಸುವಂತೆ ಪೊಲೀಸರಿಗೆ ಸೂಚಿಸಿದ್ದಾರೆ.

ಮದ್ಯ ಸರಬರಾಜು ಮಾಡುವ ಎಲ್ಲಾ ಸಂಸ್ಥೆಗಳು ಪ್ರವೇಶ ದ್ವಾರದಲ್ಲಿ ಮತ್ತು ಮದ್ಯವನ್ನು ನೀಡುವ ಮೊದಲು ಕಟ್ಟುನಿಟ್ಟಾದ ವಯಸ್ಸಿನ ಪರಿಶೀಲನಾ ನಿಯಮಗಳನ್ನು ಜಾರಿಗೆ ತರಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಆದೇಶಿಸಿದ್ದಾರೆ.

ನಿರ್ದೇಶನಗಳೇನು?

- ಐಡಿ ಇಲ್ಲದಿದ್ದರೆ, ಪ್ರವೇಶವಿಲ್ಲ
- ಕಡ್ಡಾಯ ವಯಸ್ಸಿನ ಪರಿಶೀಲನೆ
- ನಿಯಮ ಉಲ್ಲಂಘನೆಗೆ ಕಠಿಣ ಕ್ರಮ
- ವ್ಯವಸ್ಥಾಪಕರ ಹೊಣೆಗಾರಿಕೆ
- ಸಿಸಿಟಿವಿ ನಿಯಮ ಪಾಲನೆ
- ಯುವ ಪೀಳಿಗೆ ರಕ್ಷಣೆಗೆ ವಿಶೇಷ ಗಮನ
- ಶೂನ್ಯ ಸಹಿಷ್ಣುತೆ ನೀತಿ ಅಳವಡಿಕೆ

ವಿವಾಹಪೂರ್ವ ಸೆಕ್ಸ್ ಕೆಟ್ಟ ಚಾರಿತ್ರ್ಯ ಅಂತಲ್ಲ: ಸುಪ್ರೀಂ

ದೆಹಲಿ: ತೆಲಂಗಾಣದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ಮಹತ್ವದ ತೀಪು ನೀಡಿದೆ.

ಮದುವೆಗೂ ಮುನ್ನ ಸೆಕ್ಸ್ ಗೆ ಒಪ್ಪಿದಾಕ್ಷಣ ಅದು ಕೆಟ್ಟ ಚಾರಿತ್ರ್ಯ ಅಂತಲ್ಲ, ಅದನ್ನು ಪ್ರಶ್ನಿಸಲು ಆಧಾರವಾಗುವುದಿಲ್ಲ ಎಂದು ಹೇಳಿದೆ. ಅಭ್ಯರ್ಥಿಯ ಆಯ್ಕೆಯನ್ನು ರದ್ದುಗೊಳಿಸುವ ನಿರ್ಧಾರವನ್ನು ನ್ಯಾಯಾಲಯ ರದ್ದುಗೊಳಿಸಿತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಮನಮೋಹನ್ ಮತ್ತು ಮನೋಜ್ ಮಿಶ್ರಾ ಅವರ ಪೀಠವು, ತೆಲಂಗಾಣ ರಾಜ್ಯ ಮಟ್ಟದ ಪೊಲೀಸ್ ನೇಮಕಾತಿ ಮಂಡಳಿಯು ಅಭ್ಯರ್ಥಿಯ ತಾತ್ಕಾಲಿಕ ಆಯ್ಕೆಯನ್ನು ರದ್ದುಗೊಳಿಸಿದ್ದು ತಪ್ಪು ಎಂದು ಹೇಳಿದೆ.

ಉಕ್ಕು ಸ್ಥಾವರದಲ್ಲಿ ಬೆಂಕಿ: 9 ಕಾರ್ಮಿಕರ ಸಾವು

ವಿಶಾಖಪಟ್ಟಣಂ: ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿರುವ ಉಕ್ಕಿನ ಕಾರ್ಖಾನೆಯಲ್ಲಿ ಸೋಮವಾರ ಸಂಜೆ ಕರಗಿದ ಲೋಹವು ಅಲ್ಲಿದ್ದವರ ಮೇಲೆ ಬಿದ್ದ ಪರಿಣಾಮವಾಗಿ ಕನಿಷ್ಠ ಒಂಬತ್ತು ಕಾರ್ಮಿಕರು ಸಾವನ್ನಪ್ಪಿದ್ದಾರೆ, ಘಟನೆಯಲ್ಲಿ ಇನ್ನೂ ಹಲವರು ಗಾಯಗೊಂಡಿದ್ದಾರೆ. ಅಧಿಕಾರಿಗಳ ಪ್ರಕಾರ, ಸಂಜೆ 4.30ರ ಸುಮಾರಿಗೆ ಭಾರವಾದ ಒಂದು ಲೋಹದ ಲ್ಯಾಡಲ್ ಅಸಮರ್ಪಕ ಕಾರ್ಯ ನಿರ್ವಹಣೆಯಿಂದ ಕುಸಿದು ಬಿದ್ದು ಕಾರ್ಮಿಕರ ಮೇಲೆ ಚೆಲ್ಲಿದ ಪರಿಣಾಮ ಈ ಘಟನೆ ನಡೆದಿದೆ.

1,500 ಡಿಗ್ರಿಗಳಷ್ಟು ತೀವ್ರವಾದ ಶಾಖದಿಂದ ಕೂಡಿದ್ದ ದ್ರವವು ಕಾರ್ಮಿಕರನ್ನು ಅಪಾಯದಲ್ಲಿ ಸಿಲುಕಿ ಅನೇಕ ಸಾವು ನೋವುಗಳಿಗೆ ಕಾರಣವಾಯಿತು. ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ತುರ್ತು ಪ್ರತಿಕ್ರಿಯೆ ತಂಡಗಳು ತಕ್ಷಣವೇ ರಕ್ಷಣಾ ಮತ್ತು ಅಗ್ನಿಶಾಮಕ ಕಾರ್ಯಾಚರಣೆಗಳನ್ನು ಪ್ರಾರಂಭಿಸಿವೆ. ಗಾಯಗೊಂಡ ಕಾರ್ಮಿಕರನ್ನು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ. ಘಟನೆಯ ನಂತರ, ಇತರ ಕಾರ್ಮಿಕರು ಭಯಭೀತರಾಗಿ ಸುತ್ತಮುತ್ತಲಿನ ಪ್ರದೇಶದಿಂದ ಓಡಿಹೋಗಿ ಪ್ರಾಣ ಕಾಪಾಡಿಕೊಂಡಿದ್ದಾರೆ.

ಪ್ರಧಾನಿ ಸಂತಾಪ, ಪರಿಹಾರ: ದುರಂತದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ಸಂತಾಪ ಸೂಚಿಸಿದ್ದಾರೆ. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ. ಸ್ಥಳೀಯ ಅಧಿಕಾರಿಗಳು ಸಂತ್ರಸ್ತರಿಗೆ ಸಾಧ್ಯ ಇರುವ ಎಲ್ಲಾ ಸಹಾಯವನ್ನು ನೀಡುವಂತೆ ಸೂಚಿಸಿದ್ದಾರೆ.

ಮೃತರ ಪ್ರತಿ ಸಂಬಂಧಿಕರಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ 2 ಲಕ್ಷ ರು. ಪರಿಹಾರ ನೀಡುವುದಾಗಿ ಮೋದಿ ಘೋಷಿಸಿದ್ದಾರೆ.

ವಿಶಾಖಪಟ್ಟಣಂನಲ್ಲಿರುವ ಉಕ್ಕಿನ ಕಾರ್ಖಾನೆಯಲ್ಲಿ ಅಗ್ನಿ ಅವಘಡ.

ನೊಣವಿನಕೆರೆ ಅಜ್ಜಯ್ಯನ ಕೃಪೆ, ಡಿಕೆಶಿ ಶಕ್ತಿ

• ಮರಿಲಿಂಗಗೌಡ ಮಾಲಿಪಾಟೀಲ್

ಭಾರತೀಯ ಪರಂಪರೆಯಲ್ಲಿ ಭಕ್ತಿಗಿರುವ ಮಹತ್ವ ಅತಿ ದೊಡ್ಡದು. ಭಕ್ತಿ ಕೇವಲ ಆಚರಣೆ ಮಾತ್ರ ಆಗಿರದೆ ಜೀವನದ ಮೌಲ್ಯಯುತ ಮಾರ್ಗವಾಗಿಯೂ ಪರಿಗಣಿಸಲ್ಪಟ್ಟಿದೆ. ಬದುಕಿನಲ್ಲಿ ವಿಶಿಷ್ಟ ಸಾಧನೆ ಮಾಡಿದ ವ್ಯಕ್ತಿಯ ಹಿಂದೆ ನಿಂತು ಆಶೀರ್ವದಿಸಿದ ಗುರು ಪರಂಪರೆ ಮತ್ತು ಗುರುಗಳ ಮೇಲೆ ಸಾಧಕರ ಭಕ್ತಿ ಇವೆರಡು ನಮ್ಮ ಪರಂಪರೆಯಲ್ಲಿ ಹಾಸು ಹೊಕ್ಕಾಗಿದೆ. ಚಂದ್ರಗುಪ್ತನ ಹಿಂದೆ ಒಬ್ಬ ಚಾಣಕ್ಯ, ಕೃಷ್ಣದೇವರಾಯನ ಹಿಂದೆ ಒಬ್ಬ ವ್ಯಾಸತೀರ್ಥರು, ಶಿವಾಜಿ ಮಹಾರಾಜರ ಹಿಂದೆ ಸಮರ್ಥ ರಾಮದಾಸರು ನಿಂತು ಹರಸಿದ್ದು ಮತ್ತು ಆ ಹಾರೈಕೆಗಳ ಫಲವಾಗಿ ಭಕ್ತನ ಜೀವಮಾನದಲ್ಲಿ ನಡೆಸಿದ ಮಹತ್ ಸಾಧನೆಗಳು ನಮ್ಮ ಇತಿಹಾಸದ ಪುಟಗಳಲ್ಲಿ ಸೇರಿ ಹೋಗಿವೆ.

ಪ್ರಸ್ತುತ ಕರ್ನಾಟಕದ ಮುಖ್ಯಮಂತ್ರಿ ಆಗಿರುವ ಡಿಕೆ ಶಿವಕುಮಾರ್ ಗುರು ಹಿರಿಯರೆಡೆಗಿನ ತಮ್ಮ ಭಕ್ತಿ ಭಾವ ಏನು ಎನ್ನುವುದನ್ನು ಸಾರ್ವಜನಿಕವಾಗಿ ನಿರೂಪಿಸಿದ್ದಾರೆ. ಅವರ ಬದುಕಿನ ನಿರ್ಣಾಯಕ ಸಂದರ್ಭಗಳಲ್ಲಿ ಅಜ್ಜಯ್ಯನ ಮಾರ್ಗದರ್ಶನ ಪಡೆದೇ ಮುಂದೆ ಹೆಜ್ಜೆ ಇಡುವುದಾಗಿ ಅವರ ನಡೆಗಳ ಮೂಲಕ ನಿರೂಪಿಸಿದ್ದಾರೆ. ವಿಧಾನಸೌಧದ ಮೆಟ್ಟಿಲುಗಳಿಗೆ ನಮಸ್ಕರಿಸಿ, ಕಚೇರಿಗೆ ಪೂಜೆ, ಕುರ್ಚಿಗೆ ನಮಸ್ಕಾರ ಮಾಡಿ, ತಾಯಿಯ ಆಶೀರ್ವಾದ ಸ್ವೀಕರಿಸಿ, ತಮ್ಮ ಕರ್ತವ್ಯ ಆರಂಭಿಸುವ ಮೂಲಕ ತಾನು ಭಾರತೀಯ ಪರಂಪರೆಯನ್ನು ಗೌರವಿಸಿ ಮುನ್ನಡೆಯುವುದಾಗಿ ಪ್ರಚುರಪಡಿಸಿದರು. ಡಿಕೆಶಿ ಅಧಿಕಾರ ಹಸ್ತಾಂತರ ಪ್ರಕ್ರಿಯೆ ನಡೆಯುತ್ತಿದ್ದಾಗ ಎಲ್ಲಿಯೂ ತುಟಿಪಿಟಿಕ್ ಎಂದಿರಲಿಲ್ಲ. 'ಮಾತು ಆಡಿದರೆ ಮುತ್ತು ಒಡೆದೀತು, ಆದ್ದರಿಂದ ಮೌನವಾಗಿರು' ಎಂಬ ಅಜ್ಜಯ್ಯನ ಸಲಹೆಯನ್ನು ಕಟ್ಟುನಿಟ್ಟಾಗಿ ಅನುಸರಿಸಿದ್ದರಿಂದಲೇ ಶಿವಕುಮಾರ್ ಮೌನಧಾರಣೆ ಮಾಡಿದ್ದು ಎಂಬ ಮಾತುಗಳು ಕೇಳಿಬಂದವು. ಅಜ್ಜಯ್ಯರ ಪ್ರಭಾವ ಅವರ ಮೇಲೆ ಎಷ್ಟು ಎಂಬುದು ಆಗಲೇ ಮನವರಿಕೆಯಾಗಿತ್ತು. ಮುಖ್ಯಮಂತ್ರಿಯಾಗಿ ಅಜ್ಜಯ್ಯನ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದಾಗ ರಾಜ್ಯದಾದ್ಯಂತ ಯಾರೀ ಅಜ್ಜಯ್ಯ ಎಂಬ ಕುತೂಹಲ ಮೂಡಿತು.

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನಲ್ಲಿರುವ ನೊಣವಿನಕೆರೆ ಮಠ ಅಜ್ಜಯ್ಯನವರ ಕಾರ್ಯಕ್ಷೇತ್ರ. ಪಂಚಪೀಠಗಳಲ್ಲಿ ಒಂದಾಗಿರುವ ಬಾಳೆಹೊನ್ನೂರಿನ ಶ್ರೀಮದ್ ರಂಭಾಪುರಿ ಪೀಠದ 119 ಜಗದ್ಗುರುಗಳಾದ ಶ್ರೀ ಸಾವಿರದ ಎಂಟನೆಯ ರಂಭಾಪುರಿ ವೀರ ಸಿಂಹಾಸನಾಧೀಶ್ವರ ಲಿಂಗೈಕ್ಯ ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಭಗವದ್ಪಾದರುಗಳು ಅವರೇ ಅಜ್ಜಯ್ಯರಾಗಿ ಡಿಕೆ ಶಿವಕುಮಾರ್ ಅವರಿಗೆ ಮಾರ್ಗದರ್ಶನ ಮಾಡುತ್ತಿರುವುದು.

ಈ ಹಿಂದೆ ಡಿಕೆ ಅವರ ತಂದೆಗೆ ಆರೋಗ್ಯದಲ್ಲಿ ಏರುಪೇರು ಆಗಿ ಆಸ್ಪತ್ರೆ ಸೇರಿದಾಗ, ಅಜ್ಜಯ್ಯನ ಮುಕ್ತಿಮಂದಿರ ಸನ್ನಿಧಾನಕ್ಕೆ ಹೋಗಿ ಬಿಲ್ವಪತ್ರೆ ಮತ್ತು ವಿಭೂತಿಯನ್ನು ತಂದೆಗೆ ನೀಡಿದ ನಂತರ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡು, ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದರಂತೆ. ಇದರಿಂದಾಗಿ ಡಿಕೆ ಅವರಿಗೆ ಅಜ್ಜಯ್ಯನ ಪ್ರಭಾವದ ಮೇಲೆ ನಂಬಿಕೆ ಬರುತ್ತದೆ. ಮುಂದೊಮ್ಮೆ ಅಜ್ಜಯ್ಯರ ಮುಕ್ತಿಮಂದಿರಕ್ಕೆ ಡಿಕೆಶಿ ಭೇಟಿ ನೀಡಿದಾಗ ಅವರ ಶಾಲಿಗೆ ಬೆಂಕಿ ತಗುಲುತ್ತದೆ. ಈ ವಿಷಯ ತಿಳಿದಾಗ ಅಜ್ಜಯ್ಯನವರು ನಿನಗೆ ಅಪಾಯವಿದೆ ಎನ್ನುತ್ತಾರೆ. ಇದಾದ ಕೆಲವೇ ತಿಂಗಳಲ್ಲಿ ಡಿಕೆಶಿ ಇಡಿ ಚಕ್ರವ್ಯೂಹಕ್ಕೆ ಸಿಲುಕಿ ಜೈಲು ಸೇರಬೇಕಾಯಿತು.

2023ರ ವಿಧಾನಸಭಾ ಚುನಾವಣೆಗಳಲ್ಲಿ 224 ವಿಧಾನಸಭಾ ಕ್ಷೇತ್ರಗಳಿಗೆ ಟಿಕೆಟ್ ಹಂಚಿಕೆ ಮಾಡಬೇಕಾದ ಸಂದರ್ಭದಲ್ಲಿ ಅಜ್ಜಯ್ಯ ನೀಡಿದ ಸಲಹೆಗಳನ್ನು ಪಾಲಿಸುವುದು ಡಿಕೆಶಿ ಅವರಿಗೆ ಅಸಾಧ್ಯವಾಯಿತು. ಚುನಾವಣೆ ಫಲಿತಾಂಶ ಬಂದಾಗ ಯಾರು ಸೋಲುತ್ತಾರೆ ಎಂದು ಅಜ್ಜಯ್ಯ ನುಡಿದಿದ್ದರೋ ಅವರು ಸೋತರಂತೆ. ಕುರುಡುಮಲೆ ವಿನಾಯಕನಿಗೆ ಪೂಜೆ ಸಲ್ಲಿಸಿ ಚುನಾವಣಾ ಸಮರ ಆರಂಭಿಸು ಎಂಬ ಸೂಚನೆಯಂತೆ ನಡೆದುಕೊಂಡು ಚುನಾವಣೆಯಲ್ಲಿ ಗೆದ್ದರಂತೆ. ರಾಜಕೀಯ ವಿಷಯಗಳಲ್ಲಿ ಮಾತ್ರವಲ್ಲದೆ, ಕೌಟುಂಬಿಕ ವಿಷಯಗಳಲ್ಲಿಯೂ ಅಜ್ಜಯ್ಯರ ಸೂಚನೆಯನ್ನು ಡಿಕೆ ಪಾಲಿಸುತ್ತಾರೆ. ಮುಖ್ಯಮಂತ್ರಿಯ ಕೊಠಡಿಯಲ್ಲಿಯೂ ಪ್ರತಿದಿನ ಅಜ್ಜಯ್ಯನ ದರ್ಶನ ಎಲ್ಲರಿಗೂ ಆಗುವಂತೆ ಮಾಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ, ಕೇಂದ್ರ ಸಚಿವ ವಿ ಸೋಮಣ್ಣ, ಮಾಜಿ ಪ್ರಧಾನಿ ದೇವೇಗೌಡ ಸಹ ಅಜ್ಜಯ್ಯನ ಭಕ್ತರೇ. ಈಗ ಡಿಕೆ ಅವರ ಮೂಲಕ ಅಜ್ಜಯ್ಯನ ಮಹಾತ್ಮೆ ಮನೆಮಾತಾಗಿದೆ. ರಾಜಕೀಯ ಜೀವನದಲ್ಲಿರುವ ಕೆಲವು ನಾಯಕರಿಗೆ ಆಧ್ಯಾತ್ಮಿಕತೆ ಹಾಗೂ ಭಕ್ತಿ ಮಾನಸಿಕ ಶಕ್ತಿ ಮತ್ತು ಧೈರ್ಯವನ್ನು ನೀಡುವ ಮೂಲ. ಡಿಕೆ ಅವರಿಗೆ ನೊಣವಿನಕರೆ ಅಜ್ಜಯ್ಯನವರ ಮೇಲೆ ಇರುವ ಭಕ್ತಿ ಅನೇಕ ಬಾರಿ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಈ ಭಕ್ತಿ ಅವರ ವೈಯಕ್ತಿಕ ನಂಬಿಕೆ ಮತ್ತು ಸಂಸ್ಕಾರಗಳ ಭಾಗವಾಗಿ ಕಾಣಿಸುತ್ತದೆ.

ನೊಣವಿನಕರೆ ಅಜ್ಜಯ್ಯರು ಕರ್ನಾಟಕದ ಜನಮನದಲ್ಲಿ ಅಪಾರ ಭಕ್ತಿಭಾವ ಪಡೆದಿರುವ ಸಂತ ವ್ಯಕ್ತಿತ್ವ. ಜನರು ಅವರನ್ನು ಶಾಂತಿ, ಧರ್ಮ, ಮಾನವೀಯತೆ ಮತ್ತು ದೈವೀ ಶಕ್ತಿಯ ಪ್ರತೀಕವಾಗಿ ಕಾಣುತ್ತಾರೆ. ಗ್ರಾಮೀಣ ಭಾಗಗಳಿಂದ ಹಿಡಿದು ನಗರ ಪ್ರದೇಶಗಳವರೆಗೆ ಅನೇಕ ಭಕ್ತರು ಅಜ್ಜಯ್ಯರ ದರ್ಶನ ಹಾಗೂ ಆಶೀರ್ವಾದಕ್ಕಾಗಿ ಭೇಟಿ ನೀಡುತ್ತಾರೆ.

ಡಿಕೆಶಿ ಹಲವು ಸಂದರ್ಭಗಳಲ್ಲಿ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿ ಆಶೀರ್ವಾದ ಪಡೆಯುವುದನ್ನು ಕಾಣಬಹುದು. ನೊಣವಿನಕರೆ ಅಜ್ಜಯ್ಯರ ಮೇಲಿನ ಅವರ ಭಕ್ತಿ ಕೇವಲ ಆಚರಣೆಯ ಮಟ್ಟದಲ್ಲೇ ಉಳಿಯದೇ, ಅವರಿಗೆ ಆತ್ಮವಿಶ್ವಾಸ ಮತ್ತು ಮನೋಬಲ ನೀಡುವ ಅಂಶವೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಡಿಕೆಶಿ ಅವರಿಗೆ ನೊಣವಿನಕರೆ ಅಜ್ಜಯ್ಯರ ಮೇಲಿರುವ ಭಕ್ತಿ ಅವರ ವೈಯಕ್ತಿಕ ನಂಬಿಕೆ, ಸಂಸ್ಕಾರ ಮತ್ತು ಆತ್ಮವಿಶ್ವಾಸದ ಪ್ರತೀಕ. ರಾಜಕೀಯದ ಒತ್ತಡದ ನಡುವೆ ದೈವಭಕ್ತಿ ಮಾನಸಿಕ ಬಲ ಮತ್ತು ಧೈರ್ಯ ನೀಡುವ ಶಕ್ತಿ. ಈ ಭಕ್ತಿ ಅವರ ಸಾರ್ವಜನಿಕ ಬದುಕಿನಲ್ಲಿ ಸಹ ಒಂದು ವಿಶಿಷ್ಟ ಗುರುತಿನ ಅಂಶವಾಗಿ ಕಾಣಿಸಿಕೊಂಡಿದೆ.



ನಾಲಿಗೆಯಲ್ಲಿ ಕರಗುವ ಚಾಕೊಲೇಟ್ ಅರಳುವ ಬಗೆ

• ಬೆಂ.ಮು. ಮಾರುತಿ, ಮಲ್ಲತ್ತಹಳ್ಳಿ

ಚಾಕೊಲೇಟ್ ತಯಾರಿಕೆಯು ಉಷ್ಣವಲಯದ ಹವಾಮಾನದಲ್ಲಿ ಬೆಳೆಯುವ ಕೋಕೋ ಮರದ ಬೀಜವಾದ ಕೋಕೋ ಬೀನ್ಸ್‌ನಿಂದ ಪ್ರಾರಂಭವಾಗುವ ಒಂದು ಆಕರ್ಷಕ ಪ್ರಕ್ರಿಯೆಯಾಗಿದೆ. ಕೊಯ್ಲು ಮಾಡಿದ ನಂತರ, ಬೀನ್ಸ್ ಅನ್ನು ಹಲವಾರು ದಿನಗಳವರೆಗೆ ಹುದುಗಿಸಲಾಗುತ್ತದೆ. ಇದು ಅವುಗಳ ಸುವಾಸನೆ, ಪರಿಮಳ ಮತ್ತು ಬಣ್ಣವನ್ನು ಅಭಿವೃದ್ಧಿಪಡಿಸುವ ನಿರ್ಣಾಯಕ ಹಂತವಾಗಿದೆ. ಹುದುಗುವಿಕೆಯ ನಂತರ, ಬೀನ್ಸ್ ಅನ್ನು ಒಣಗಿಸಲಾಗುತ್ತದೆ. ಸಾಮಾನ್ಯವಾಗಿ ಬಿಸಿಲಿನಲ್ಲಿ, ಅವುಗಳ ತೇವಾಂಶವನ್ನು ಕಡಿಮೆ ಮಾಡಲು. ಬೀನ್ಸ್ ಅನ್ನು ಮುಂದಿನ ಹಂತಕ್ಕೆ ತಯಾರಿಸಲು ಈ ಒಣಗಿಸುವ ಪ್ರಕ್ರಿಯೆಯು ಅತ್ಯಗತ್ಯ.

ಬೀನ್ಸ್ ಅನ್ನು ಹುರಿಯುವುದು ಅವುಗಳ ಪರಿಮಳ ಮತ್ತು ಬಣ್ಣವನ್ನು ಮತ್ತಷ್ಟು ಹೆಚ್ಚಿಸುವುದಲ್ಲದೆ, ಅವುಗಳ ಚಿಪ್ಪುಗಳನ್ನು ತೆಗೆದುಹಾಕಲು ಸುಲಭಗೊಳಿಸುತ್ತದೆ. ಒಳಗಿರುವ ನಿಬ್‌ಗಳನ್ನು ಬೇರ್ಪಡಿಸಲಾಗುತ್ತದೆ. ನಿಬ್‌ಗಳನ್ನು ಚಾಕೊಲೇಟ್ ಮದ್ಯ ಅಥವಾ ಕೋಕೋ ಮಾಸ್ ಎಂದು ಕರೆಯಲ್ಪಡುವ ಪೇಸ್ಟ್ ಆಗಿ ಪುಡಿ ಮಾಡಲಾಗುತ್ತದೆ. ಈ ಪೇಸ್ಟ್ ಎಲ್ಲಾ ಚಾಕೊಲೇಟ್ ಉತ್ಪನ್ನಗಳ ಅಡಿಪಾಯವಾಗಿದೆ. ರುಬ್ಬುವಾಗ, ನಿಬ್‌ಗಳು ಕೋಕೋ ಬೆಣ್ಣೆಯನ್ನು ಬಿಡುಗಡೆ ಮಾಡುತ್ತವೆ. ಇದು ಚಾಕೊಲೇಟ್‌ಗೆ ಅದರ ನಯವಾದ ವಿನ್ಯಾಸವನ್ನು ನೀಡುವ ನೈಸರ್ಗಿಕ ಕೊಬ್ಬು. ಅಪೇಕ್ಷಿತ ಅಂತಿಮ ಉತ್ಪನ್ನವನ್ನು ಅವಲಂಬಿಸಿ, ಈ ಚಾಕೊಲೇಟ್ ಮದ್ಯವನ್ನು ಕೋಕೋ ಪುಡಿಯನ್ನು ತಯಾರಿಸಲು ಮತ್ತಷ್ಟು ಸಂಸ್ಕರಿಸಬಹುದು ಅಥವಾ ಇತರ ಪದಾರ್ಥಗಳೊಂದಿಗೆ ಸಂಯೋಜಿಸಿ ವಿವಿಧ ರೀತಿಯ ಚಾಕೊಲೇಟ್ ತಯಾರಿಸಬಹುದು.

ಕೋಂಚಿಂಗ್ ಎನ್ನುವುದು ಚಾಕೊಲೇಟ್ ತಯಾರಿಕೆಯಲ್ಲಿ ಮತ್ತೊಂದು ನಿರ್ಣಾಯಕ ಹಂತ. ಇದು ಕೋಂಚಿಂಗ್ ಯಂತ್ರದ ಬಳಕೆಯ ಮೂಲಕ ಚಾಕೊಲೇಟ್ ಮದ್ಯವನ್ನು ನಿರಂತರವಾಗಿ ಮಿಶ್ರಣ ಮಾಡುವುದು ಮತ್ತು ಗಾಳಿ ಬೀಸುವುದನ್ನು ಒಳಗೊಂಡಿರುತ್ತದೆ. ಈ ಪ್ರಕ್ರಿಯೆಯು ಅಪೇಕ್ಷಿತ ವಿನ್ಯಾಸ ಮತ್ತು ಸುವಾಸನೆ ಮತ್ತು ಬಳಸುವ ಯಂತ್ರದ ಪ್ರಕಾರವನ್ನು ಅವಲಂಬಿಸಿ ಕೆಲವು ಗಂಟೆಗಳಿಂದ ಹಲವಾರು ದಿನಗಳವರೆಗೆ ತೆಗೆದುಕೊಳ್ಳಬಹುದು. ಕೋಂಚಿಂಗ್ ಚಾಕೊಲೇಟ್‌ನ ಸುವಾಸನೆ ಮತ್ತು ಏಕರೂಪತೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ ಮತ್ತು ಕೋಂಚಿಂಗ್‌ನ ತಾಪಮಾನ ಮತ್ತು ಅವಧಿಯನ್ನು ಎಚ್ಚರಿಕೆಯಿಂದ ನಿಯಂತ್ರಿಸಲಾಗುತ್ತದೆ. ಈ ಹಂತವು ಚಾಕೊಲೇಟ್ ಅನ್ನು ಧಾನ್ಯದ ಪೇಸ್ಟ್‌ನಿಂದ ರೇಷ್ಮೆಯಂತಹ, ನಿಮ್ಮ ಬಾಯಲ್ಲಿ ಕರಗುವ ಖಾದ್ಯವಾಗಿ ಪರಿವರ್ತಿಸುತ್ತದೆ.

ಮೊಬೈಲ್ ಇಲ್ಲದೆ ಮೂರು ಗಂಟೆ

• ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಕಳೆದ ವಾರ ತಿರುಪತಿಗೆ ಹೋದಾಗ ದೇವಸ್ಥಾನದ ಒಳಗೆ ಯಾವುದೇ ರೀತಿಯ ಮೊಬೈಲ್ ಎಲೆಕ್ಟ್ರಾನಿಕ್ ವಸ್ತುಗಳನ್ನು ಕಡ್ಡಾಯವಾಗಿ ಬಿಡುತ್ತಿರಲಿಲ್ಲ. ಬಹುತೇಕ ಈಗ ಎಲ್ಲಾ ದೇವಸ್ಥಾನಗಳಲ್ಲೂ ಈ ನಿಯಮ ಅನ್ವಯಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಮಕ್ಕಳಿಂದ ಹಿಡಿದು ವಯಸ್ಕರ ವರೆಗೆ ಮೊಬೈಲ್ ಗೀಳು ಅಂಟಿಕೊಂಡಿದೆ. ಅದೇ ರೀತಿ ನಾನು ಕೂಡಾ ಮೊಬೈಲ್ ಇಲ್ಲದೇ ಅಷ್ಟು ಹೊತ್ತು ಹೇಗಪ್ಪಾ ಕಾಲ ಕಳೆಯುವುದು ಅಂತ ಅನ್ನಿಸಿ ಹೇಗೋ ಮೊಬೈಲ್ ಬ್ಯಾಗ್‌ನಲ್ಲಿ ಇಟ್ಟು ಹೋದೆ. ಒಳಗೆ ಹೋದಾಕ್ಷಣ ಸುಮಾರು ಎರಡು ಗಂಟೆಗಳ ಬಳಿಕ ಒಂದು ವೇಟಿಂಗ್ ರೂಂನಲ್ಲಿ ಎಲ್ಲಾ ಭಕ್ತರನ್ನೂ ಕೂಡಿಹಾಕಿದರು. ಆ ವೇಟಿಂಗ್ ರೂಂ ನಲ್ಲಿ ಬರೋಬ್ಬರಿ ಮೂರು ಗಂಟೆ ಇದ್ದೆವು. ಆಗ ತುಂಬಾ ಖುಷಿಯಾದ ವಿಚಾರವೆಂದರೆ ಆ ಮೂರು ಗಂಟೆಗಳ ಕಾಲ ಅಲ್ಲಿದ್ದ ಜನರೆಲ್ಲಾ ಒಬ್ಬರಿಗೊಬ್ಬರು ಮಾತನಾಡಿಕೊಂಡು ತಮಾಷೆ ಮಾಡುತ್ತಾ ಕುಳಿತಿದ್ದರು. ಮೊಬೈಲ್, ಇಂಟರ್ನೆಟ್ ಸಂಪರ್ಕ ಇಲ್ಲದೆ ಎಲ್ಲರೂ ಮಾತನಾಡುತ್ತಿದ್ದ ದೃಶ್ಯ ಕಂಡು ನನಗೆ ತುಂಬಾ ಖುಷಿಯಾಯಿತು. ದೇವರ ದರ್ಶನ ಪಡೆಯುವವರೆಗೂ ಎಲ್ಲರೂ ಕುಟುಂಬದೊಂದಿಗೆ ಹರಟುತ್ತಾ ಖುಷಿಯ ಕ್ಷಣಗಳನ್ನು ಮೆಲುಕು ಹಾಕುತ್ತಾ ದೇವಸ್ಥಾನದಿಂದ ನೀಡುತ್ತಿದ್ದ ಪ್ರಸಾದವನ್ನು ಸ್ವೀಕರಿಸಿ ಆತ್ಮೀಯವಾಗಿ ಹಂಚಿಕೊಂಡು ತಿನ್ನುತ್ತಾ ಇದ್ದರು.

ಅಷ್ಟಕ್ಕೂ ದೇವಾಲಯಗಳೆಂದರೆ ಮನಸ್ಸಿಗೆ ಶಾಂತಿ ಕೊಡುವ ಶಾಂತಿ ಪೀಠಗಳು. ಅಲ್ಲಿ ಕೊಂಚ ಹೊತ್ತು ಕುಳಿತೆದ್ದು ಬಂದರೂ ಬಹುತೇಕರಿಗೆ ಮನಸ್ಸಿಗೆ ಸಮಾಧಾನ ದೊರೆಯುತ್ತದೆ. ದೇವರ ಬಳಿ ತಮ್ಮ ಅಹವಾಲು ಹೇಳಿಕೊಂಡು, ಧ್ಯಾನ ಮಾಡಿಕೊಂಡು ಬರುವಾಗ ಮನಸ್ಸಿನ ಯೋಚನೆಗಳೆಲ್ಲ ಸ್ಪಷ್ಟವಾಗುವ ಜೊತೆಗೆ, ಮನೋಬಲ ವೃದ್ಧಿಸುತ್ತದೆ. ದೇವಾಲಯಗಳ ಉದ್ದೇಶ ಕೂಡ ಇದೇ ಆಗಿದೆ. ನಂಬಿ ಬಂದ ಭಕ್ತರಿಗೆ ಸಮಾಧಾನ, ಶಾಂತಿ ನೀಡುವುದು.

ಜನರು ದೇವಸ್ಥಾನಕ್ಕೆ ಭೇಟಿ ನೀಡಲು ಮತ್ತೊಂದು ಪ್ರಮುಖ ಕಾರಣವೆಂದರೆ ತಮ್ಮ ಸುತ್ತಲೂ ಏನು ನಡೆಯುತ್ತಿದೆ ಎಂಬುದರ ಬಗ್ಗೆ ದೇವರಿಗೆ ದೂರು ನೀಡುವುದು ಮಾತ್ರವಲ್ಲ, ಪರಿಹಾರ ಮತ್ತು ಭರವಸೆಯ ಸಂಕೇತವನ್ನು ಪಡೆಯುವುದು. ಜೀವನದಲ್ಲಿ, ನಾವು ಸಮಸ್ಯೆಗಳಿಗೆ ಸಿಲುಕಿದಾಗ, ನಮ್ಮನ್ನು ನಿಜವಾಗಿಯೂ ನಂಬುವ ಮತ್ತು ನಮ್ಮನ್ನು ಎಂದಿಗೂ ಕೈ ಬಿಡದ ಯಾರಾದರೂ ನಮಗೆ ಯಾವಾಗಲೂ ಬೇಕು. ನಮ್ಮ ಸುತ್ತಲೂ ಬಹಳಷ್ಟು ಜನರು ಇರಬಹುದು, ಆದರೆ ಎಲ್ಲಕ್ಕಿಂತ ದೊಡ್ಡವನು ದೇವರು. ದೇವರು ಯಾವಾಗಲೂ ನಮ್ಮೊಂದಿಗಿದ್ದಾನೆ ಎಂಬ ಸತ್ಯವನ್ನು ನಾವು ತಿಳಿದಿರುವ ಕಾರಣ, ನಮ್ಮ ಕೆಟ್ಟ ದಿನಗಳಲ್ಲಿಯೂ ನಾವು ನಗುವ ಭರವಸೆಯನ್ನು ಪಡೆಯುತ್ತೇವೆ. ಆದರೆ, ಮೊಬೈಲ್ ಫೋನ್‌ಗಳು ಮನೆಯಲ್ಲಿ, ಕಚೇರಿಯಲ್ಲಿ ಸಾಲದೆಂಬಂತೆ ದೇವಾಲಯಗಳಲ್ಲಿ ಕೂಡಾ ಶಾಂತಿಯನ್ನು ಕದಡುವ ಕೆಲಸ ಮಾಡುತ್ತಿವೆ. ದೇವಸ್ಥಾನಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸಿರುವುದರಿಂದ ಭಕ್ತರು ನಿಜವಾಗಿಯೂ ಏಕಾಗ್ರ ಚಿತ್ತರಾಗಿ ಯೋಚಿಸಲು ಸಾಧ್ಯವಾಗುತ್ತದೆ. ದೇವರ ದರ್ಶನವನ್ನು ಮನತುಂಬಿ ಮಾಡಲು ಸಾಧ್ಯವಾಗುತ್ತದೆ. ಹೀಗಾಗಿ, ದೇವಸ್ಥಾನಗಳಲ್ಲಿ ಮೊಬೈಲ್ ಫೋನ್ ಬಳಕೆ ನಿಷೇಧ ನಿಯಮ ಸರಿಯಾಗಿಯೇ ಇದೆ ಎನ್ನಿಸಿತು.

ಈ ಜೀವನಕ್ಕೆ ಒಂದು ಧನ್ಯವಾದ

• ವಿಜಯಕುಮಾರ್ ಕಟ್ಟೆ

ಬೆಳಿಗ್ಗೆ ಎದ್ದು ದೇವರಿಗೆ ಕೈ ಮುಗಿದು ರೂಮ್‌ನಿಂದ ಹೊರಗೆ ಬಂದಾಗ, ದಿನದ ಮೊದಲ ಬೆಳಕು, ಜೊತೆಗೆ ತಣ್ಣನೆಯ ಗಾಳಿ ಕಿಟಕಿಯಿಂದ ಒಳಗೆ ಹೊಕ್ಕಾಗ ಆ ಒಂದು ಕ್ಷಣ ಎಷ್ಟು ಅಮೂಲ್ಯ ಎನಿಸಿತು. ಇಷ್ಟು ದಿನ ಬದುಕಿನ ಓಟದಲ್ಲೇ ಮುಳುಗಿದ್ದವನು ಎಂದಾದರೂ ಯೋಚಿಸಿದ್ದೇನೆಯೇ? ಅಂದರೆ ಈ ದಿನ ಮತ್ತೊಂದು ಹೊಸ ದಿನ ಬಂದಿದೆ. ಉಸಿರಾಡುತ್ತಿದ್ದೇನೆ, ಎದ್ದಿದ್ದೇನೆ, ಇನ್ನೊಂದು ದಿನ ನನ್ನದಾಗಿದೆ. ಇದಕ್ಕಿಂತ ದೊಡ್ಡ ಪುಣ್ಯ ಇನ್ನೇನಿದೆ?

ಹೆತ್ತು ಹೊತ್ತು ಸಾಕಿ ಸಲಹಿದ ತಂದೆ- ತಾಯಿ. ಅಮ್ಮನ ಮಮತೆ ಆರೈಕೆ, ಸರಿ ದಾರಿ ತೋರಿಸಿದ ಅಪ್ಪ. ಅಮ್ಮ ಮಾಡಿದ ಎಲ್ಲಾ ಅಡುಗೆಯ ಘಮ, ಕಷ್ಟದ ಸಮಯದಲ್ಲಿ ಹಾಕಿದ ಕೈತುತ್ತು, ಏನು ತಪ್ಪು ಮಾಡಿದರೂ ಶಿಕ್ಷಿಸಿ ಸರಿ ದಾರಿ ತೋರಿದ ಸಹನೆ, ಸಂಯಮ, ನಂಬಿಕೆ ಮತ್ತು ಆಶಾಭಾವ ಕಲಿಸಿದ ಅಮ್ಮ, ಅಪ್ಪ. ಇಂದು ಈ ಸ್ಥಿತಿಯಲ್ಲಿರುವುದಕ್ಕೆ ಕಾರಣಕರ್ತರು. ಇವರಿಗೆ ನನ್ನ ಉಸಿರಿರುವವರೆಗೂ ಅನಂತ ನಮಸ್ಕಾರಗಳನ್ನು ತಿಳಿಸುತ್ತ ಧನ್ಯವಾದಗಳು.

ಅಕ್ಕ, ತಮ್ಮಂದಿರ ಪ್ರೇಮ, ಸ್ನೇಹಿತರ ನಂಬಿಕೆ, ಗುರುಗಳ ಮಾರ್ಗದರ್ಶನ, ಇವೆಲ್ಲವೂ ಜೀವನದ ಬೆಳಕಿನ ದಾರಿಗಳಾಗಿವೆ. ಈ ಸಂಬಂಧಗಳು ಒಟ್ಟಾಗಿ ಬಾಳಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು. ಜೀವನದ ಸಂಗಾತಿಯಾಗಿ ಬಾಳಿನುದ್ದಕ್ಕೂ ಸಹಕಾರ ಕೊಟ್ಟು ಕಷ್ಟ ಸುಖಗಳಿಗೆ ಜೊತೆಯಾಗಿ ಮಕ್ಕಳ ನಗು, ಸಂಸಾರದಲ್ಲಿ ನೆಮ್ಮದಿಯ ಕ್ಷಣಗಳಿಗೆ ಸಾಕ್ಷಿಯಾಗಿ ಜೀವನವನ್ನು ಪವಿತ್ರವಾಗಿ ಮಾಡಿದ್ದಕ್ಕೆ ಸಂಗಾತಿಗೆ ಧನ್ಯವಾದಗಳು.

ಈ ಜೀವನವನ್ನು ಸಾಕಾರಗೊಳಿಸಿದ ಕನಸುಗಳು, ಗುರಿಗಳು..ಇದರಿಂದ ಬದುಕು ರೂಪುಗೊಂಡಿತು. ಇಂದು ಇರುವುದು, ಇಂದು ನೋಡುವುದು, ಇಂದು ಅನುಭವಿಸುವುದು ಎಲ್ಲವೂ ಈ ಜೀವನದ ಕೊಡುಗೆ. ಈ ಜೀವನವು ಕೊಟ್ಟಿರುವ ಪ್ರತಿ ಉಸಿರು, ಪ್ರತಿ ಕ್ಷಣ, ಪ್ರತಿ ಅನುಭವಕ್ಕೂ ನಾನು ಕೃತಜ್ಞನಾಗಿದ್ದೇನೆ. ಎಲ್ಲಾ ಕ್ಷಣಗಳು ಈ ಜೀವನದ ಅಮೂಲ್ಯ ಭಾಗಗಳಾಗಿವೆ. ಇವುಗಳಿಗೆಲ್ಲಾ ಅನಂತ ಧನ್ಯವಾದ.

ಮಳೆ, ಗಾಳಿ, ನೆಲದ ಸುವಾಸನೆ, ಸೂರ್ಯ, ಚಂದ್ರ, ಆಕಾಶ, ಭೂಮಿ, ಬೆಟ್ಟ ಗುಡ್ಡಗಳು, ಗಿಡ ಬಳ್ಳಿಗಳು, ಹೂವುಗಳು, ಹಣ್ಣುಗಳು, ಹಿರಿಯರು, ಕಿರಿಯರು, ಮಕ್ಕಳ ನಿಷ್ಕಲ್ಮಶ ನಗು, ರಾತ್ರಿ ಆಕಾಶದಲ್ಲಿ ಮಿನುಗುವ ನಕ್ಷತ್ರಗಳು ಇವೆಲ್ಲ ಜೀವನ ನಮಗೆ ನೀಡುವ ಸಣ್ಣ ಸಣ್ಣ ವರಗಳು. ಇವುಗಳು ನೀಡಿದ ಸಂತಸಕ್ಕೆ, ನೋಡುವ ಭಾಗ್ಯ ಪಡೆದಿದ್ದಕ್ಕೆ ಕೃತಜ್ಞತಾಪೂರ್ವಕ ಧನ್ಯವಾದಗಳು.

ಸುಖಕ್ಕೆ ಧನ್ಯವಾದ. ಕಷ್ಟಗಳಿಗೂ ಧನ್ಯವಾದ. ಏಕೆಂದರೆ ಅವು ನಮ್ಮನ್ನು ದಾರಿ ಅಡ್ಡಗೊಳಿಸಿ ಬೀಳಿಸಲಿಲ್ಲ. ಅದರ ಬದಲು ಗಟ್ಟಿಗೊಳಿಸಿದವು. ಬದುಕಿನ ಮೌಲ್ಯ ಅರ್ಥವಾಗಿದ್ದೇ ಕಷ್ಟದ ಮೂಲಕ. ಜೀವನ ಯಾವಾಗಲೂ ಒಂದೇ ಸಮನಾಗಿ ಸುಗಮವಾಗಿರುವುದಿಲ್ಲ. ನೋವು ಬರುತ್ತದೆ, ಕಷ್ಟಗಳು ಕಾಡುತ್ತವೆ, ಆದರೂ ಈ ಜೀವನ ನಮ್ಮದು. ಇದು ಅತ್ಯಂತ ಅಪರೂಪದ ಉಡುಗೊರೆ. ಈ ಎಲ್ಲ ಕ್ಷಣಗಳಿಗೆ, ಸಣ್ಣ ಸಂತೋಷಗಳಿಗೆ ಧನ್ಯವಾದ.

ಬದುಕಿನ ಎಲ್ಲ ಕ್ಷಣ ನಮ್ಮದು. ಇದನ್ನು ಸಂಪೂರ್ಣವಾಗಿ, ಅರ್ಥಪೂರ್ಣವಾಗಿ ಬದುಕುವುದೇ ಜೀವನಕ್ಕೆ ನಾವು ನೀಡಬಹುದಾದ ನಿಜವಾದ ಧನ್ಯವಾದ. ಈ ಜೀವನವು ಮುಗಿಯುವವರೆಗೂ ಪ್ರತಿ ದಿನವನ್ನು ಕೃತಜ್ಞತೆಯಿಂದ, ಪ್ರೇಮದಿಂದ, ಮತ್ತು ಪೂರ್ಣತೆಯಿಂದ ಜೀವಿಸುವುದೇ ನಾವು ಬದುಕಿಗೆ ತಿಳಿಸುವ ನಿಜವಾದ ಧನ್ಯವಾದ. ಜೀವನ ಇದೋ ನಿನಗೆ ಧನ್ಯವಾದ.

ಮನಸ್ಸಿನಾಳದಿಂದ ಒಮ್ಮೆ ಹೇಳೋಣ: ಬದುಕು ಒಂದು ಅಮೂಲ್ಯ ಕೊಡುಗೆ. ಅದನ್ನು ಕೃತಜ್ಞತೆಯಿಂದ ಸ್ವೀಕರಿಸೋಣ. ಈ ಜೀವನಕ್ಕೆ, ಈ ಉಸಿರಿಗೆ, ಈ ಅನುಭವಗಳಿಗೆ ಧನ್ಯವಾದಗಳು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಹಾಳಾಗು ಎನ್ನುವುದನ್ನು ಹೇಳುವ ನುಡಿಗಟ್ಟು (5)
6. ಈ ಆಶ್ವಾಸನೆಯ ನಡುವೆ ಮದುವೆಯ ಗಂಡು ತಿರುಗಿದ್ದಾನೆ (4)
7. ನೆಲ್ಲಿ ಗಿಡ ಮತ್ತದರ ಕಾಯಿ (4)
8. ಮಧುರವಾದ ಧ್ವನಿ (2)
9. ಹಾಲು, ಮೊಸರಿನ ಸಾರವತ್ತಾದ ಭಾಗವಿದು (2)
11. ಹಣ್ಣು, ಕಾಯಿ ಮುಂತಾದುವುಗಳ ದ್ರವ (2)
14. ವಿಶ್ರಾಂತಿಗಾಗಿ ಪಡೆದ ಬಿಡುವು (2)
16. ಮನ್ನಣೆಯನ್ನು ಅಥವಾ ಹೆಚ್ಚಿನ ಮೌಲ್ಯವನ್ನು ಹೊಂದಿರು (4)
18. ಹಣೆಯಲ್ಲಿ ಉದ್ದಕ್ಕೆ ಹಾಕುವ ನಾಮವು ಮೋಸಮಾಡುವುದನ್ನು ಹೇಳುತ್ತದೆ (4)
20. ಜೇನುತುಪ್ಪದೊಂದಿಗೆ ಆರಂಭವಾಗಿರುವ ಕೃಷ್ಣ (5)

ಮೇಲಿಂದ ಕೆಳಕ್ಕೆ

1. ಈ ಸೋಲು ಸಂಭವವೇ (4)
2. ಚಿತ್ತಕ್ಕೆ ಅರಿವಾಗುವಿಕೆ (5)
3. ಕೈ ಎನ್ನುವ ಮತ್ತೊಂದು ಪದ (2)
4. ಕೀಳುಮಟ್ಟದವನು, ದಾಸ (3)
5. ಪರಿಸರದಲ್ಲಿ ದೊರೆತ ಸಾಮಗ್ರಿ (4)
7. ಈ ಗೌರವದಲ್ಲಿ ಬೆಲೆಯೂ ಇದೆ (3)
10. ಬೆಳಕಿಗೆ ಅಡ್ಡ ಬಂದಾಗ ಉಂಟಾದ ಛಾಯೆ (3)
12. ಪತಿಯ ಸಾವಿನ ನಂತರ ಅವನ ಚಿತೆಗೇ ಹಾರಿ ಪ್ರಾಣ ಕಳೆದುಕೊಳ್ಳುತ್ತಿದ್ದ ಅನಿಷ್ಟ ಪದ್ಧತಿ (5)
13. ಪುಟ್ಟ ಮಕ್ಕಳು ಮಂಡಿಯೂರಿ ನಡೆಯುವುದು (4)
15. ವಾರದ ಆರಂಭದ ದಿನ (4)
17. ಅಮೆರಿಕಾದ ಹಿಂದಿನ ರಾಷ್ಟ್ರಪತಿಯೊಬ್ಬರು ಇಲ್ಲಿ ಅಸ್ತವ್ಯಸ್ತವಾಗಿ ಬಂದಿದ್ದಾರೆ (3)
19. ತಲೆಕೆಳಗಾಗಿ ನಿಂತಿರುವ ದಾರ (2)

ಸರಿಯುತ್ತರಗಳು

ಶೂನ್ಯದಿಂದ ಕೋಟಿಗಳ ಸಾಮ್ರಾಜ್ಯ: ಚೋಬಾನಿ ಮೊಸರಿನ ಯಶೋಗಾಥೆ

ಅದು 2005ನೇ ಇಸವಿ. ನ್ಯೂಯಾರ್ಕ್‌ನ ನ್ಯೂ ಬರ್ಲಿನ್‌ನಲ್ಲಿ ಕ್ರ್ಯಾಫ್ಟ್ ಫುಡ್ಸ್ ಸಂಸ್ಥೆಗೆ ಸೇರಿದ ಒಂದು ಹಳೆಯ ಮೊಸರು ಕಾರ್ಖಾನೆ ಮುಚ್ಚಿ ಹೋಗಿತ್ತು. ಮೊಸರು ಮಾರಾಟ ನಮಗೆ ಲಾಭದಾಯಕವಲ್ಲ ಎಂದು ನಿರ್ಧರಿಸಿ ಆ ಬೃಹತ್ ಕಂಪನಿ ಆ ಕಾರ್ಖಾನೆಯನ್ನು ಕೈಬಿಟ್ಟಿತ್ತು. ಆದರೆ, 33 ವರ್ಷದ ಕುರ್ದಿಶ್ ಮೂಲದ ವಲಸಿಗ ಹಮ್ದಿ ಉಲುಕಾಯಾ (Hamdi Ulukaya) ಅವರಿಗೆ ಆ ಪಾಳುಬಿದ್ದ ಕಟ್ಟಡದಲ್ಲಿ ಒಂದು ಹೊಸ ಭವಿಷ್ಯ ಕಾಣಿಸಿತು.

ಟರ್ಕಿಯ ಪರ್ವತ ಪ್ರದೇಶದ ಕುರುಬರ ಕುಟುಂಬದಲ್ಲಿ ಜನಿಸಿದ ಹಮ್ದಿಗೆ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲ, ಆಹಾರ ಉದ್ಯಮದ ಅನುಭವವೂ ಇರಲಿಲ್ಲ. ಆದರೆ, ಅಮೆರಿಕನ್ನರು ತಿನ್ನುತ್ತಿದ್ದ ಸಕ್ಕರೆ ಮಿಶ್ರಿತ, ತೆಳುವಾದ ಮೊಸರಿಗಿಂತ ತನ್ನ ತಾಯಿ ಮಾಡುತ್ತಿದ್ದ ಸಾಂಪ್ರದಾಯಿಕ, ಗಟ್ಟಿಯಾದ ಮೊಸರು ಎಷ್ಟೋ ಮೇಲು ಎಂಬ ಆತ್ಮವಿಶ್ವಾಸ ಅವರಿಗಿತ್ತು. ಬ್ಯಾಂಕಿನಿಂದ ಪಡೆದ 10 ಲಕ್ಷ ಡಾಲರ್ ಸಾಲದ ಹಣದಿಂದ ಅವರು ಆ ಮುಚ್ಚಿದ ಕಾರ್ಖಾನೆಯನ್ನು ಖರೀದಿಸಿದರು. ಕ್ರ್ಯಾಫ್ಟ್ ಸಂಸ್ಥೆಗೇ ಮಾಡಲಾಗದ್ದನ್ನು ನೀನೇನು ಮಾಡಲು ಸಾಧ್ಯ? ನೀನೊಬ್ಬ ಕುರುಬ, ನಿನಗೇನು ಗೊತ್ತು? ಎಂದು ಎಲ್ಲರೂ ನಕ್ಕರು. ಆದರೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಹಮ್ದಿ ಯಾರ ಮಾತನ್ನೂ ಕೇಳಲಿಲ್ಲ.

ಕಾರ್ಖಾನೆ ಖರೀದಿಸಿದ ತಕ್ಷಣ ಹಮ್ದಿ ಮಾಡಿದ ಮೊದಲ ಕೆಲಸ- ಹಿಂದೆ ಕೆಲಸ ಕಳೆದುಕೊಂಡಿದ್ದ ಐದು ಜನ ಸ್ಥಳೀಯ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಂಡಿದ್ದು. ಟರ್ಕಿಯಿಂದ ಒಬ್ಬ ಮೊಸರು ತಜ್ಞರನ್ನು ಕರೆಸಿ, ಸುಮಾರು 18 ತಿಂಗಳುಗಳ ಕಾಲ ಹಗಲು ರಾತ್ರಿ ಶ್ರಮಿಸಿ, ಯಾವುದೇ ರಾಸಾಯನಿಕವಿಲ್ಲದ ಸಾಂಪ್ರದಾಯಿಕ 'ಗ್ರೀಕ್ ಮೊಸರ'ನ್ನು (Greek Yogurt) ಸಿದ್ಧಪಡಿಸಿದರು. ಅದಕ್ಕೆ 'ಚೋಬಾನಿ' (Chobani) ಎಂದು ಹೆಸರಿಟ್ಟರು, ಅಂದರೆ ಕುರ್ದಿಶ್ ಭಾಷೆಯಲ್ಲಿ 'ಕುರುಬ' ಎಂದರ್ಥ.

ಅಕ್ಟೋಬರ್ 2007ರಲ್ಲಿ ಚೋಬಾನಿ ಮೊಸರಿನ ಮೊದಲ ಆರ್ಡರ್ ಮಾರುಕಟ್ಟೆಗೆ ಬಂದಿತು. ಯಾವುದೇ ದೊಡ್ಡ ಜಾಹೀರಾತು ಇಲ್ಲದಿದ್ದರೂ, ಅದರ ಅದ್ಭುತ ರುಚಿಯಿಂದಾಗಿ ಜನರ ಬಾಯಿಂದ ಬಾಯಿಗೆ ಹರಡಿ ಬೇಡಿಕೆ ಹೆಚ್ಚಾಯಿತು. ಆಗ ಮಾರುಕಟ್ಟೆಯ ದೈತ್ಯ ಕಂಪನಿಗಳಾದ ಡ್ಯಾನನ್ ಮತ್ತು ಯೋಪ್ಲೈಟ್‌ಗಳು ಚೋಬಾನಿಯನ್ನು ಹತ್ತಿಕ್ಕಲು ಕಾನೂನು ಸಮರ ಸಾರಿದವು. ಸೂಪರ್ ಮಾರ್ಕೆಟ್‌ಗಳಲ್ಲಿ ಜಾಗ ಸಿಗದಂತೆ ಮಾಡಲು ಯತ್ನಿಸಿದವು. ಆದರೆ ಗುಣಮಟ್ಟದ ಮುಂದೆ ಅವರ ಯಾವುದೇ ತಂತ್ರಗಳು ಫಲಿಸಲಿಲ್ಲ.

2011ರ ವೇಳೆಗೆ, ಚೋಬಾನಿ ಅಮೆರಿಕಾದ ಮೊಸರು ಮಾರುಕಟ್ಟೆಯ ಶೇಕಡಾ 17ರಷ್ಟು ಪಾಲನ್ನು ವಶಪಡಿಸಿಕೊಂಡಿತು. 2012ರಲ್ಲಿ ವಾರ್ಷಿಕ ಆದಾಯ 100 ಕೋಟಿ ಡಾಲರ್ ದಾಟಿತು. ಇದು ಗೂಗಲ್ ಮತ್ತು ಫೇಸ್ಬುಕ್‌ಗಿಂತಲೂ ವೇಗವಾಗಿ ಬೆಳೆದ ಬ್ರ್ಯಾಂಡ್ ಎನಿಸಿಕೊಂಡಿತು. ಹಮ್ದಿ ಉಲುಕಾಯಾ ಅವರ ಇಂದಿನ ನಿವ್ವಳ ಆಸ್ತಿ ಸುಮಾರು 1,100 ಕೋಟಿ ಡಾಲರ್.

ಹಣ ಗಳಿಸಿದ ಮೇಲೂ ಹಮ್ದಿ ತಮ್ಮ ಮಾನವೀಯತೆಯನ್ನು ಮರೆಯಲಿಲ್ಲ. 2016ರಲ್ಲಿ ಅವರು ತಮ್ಮ ಕಂಪನಿಯ ಶೇಕಡಾ 10ರಷ್ಟು ಪಾಲನ್ನು ತಮ್ಮ 2,000 ಕಾರ್ಮಿಕರಿಗೆ ಹಂಚಿದರು. ನಿರಾಶ್ರಿತರಿಗೆ ಸಹಾಯ ಮಾಡಲು 'ಟೆಂಟ್ ಪಾರ್ಟ್ನರ್‌ಶಿಪ್' ಸಂಸ್ಥೆಯನ್ನು ಸ್ಥಾಪಿಸಿದರು ಮತ್ತು ತಮ್ಮ ಸಂಪತ್ತಿನ ಬಹುಭಾಗವನ್ನು ದಾನ ಮಾಡುವುದಾಗಿ 'ದಿ ಗಿವಿಂಗ್ ಪ್ಲೆಡ್ಜ್' ಮೂಲಕ ಘೋಷಿಸಿದರು. ಮಾರುಕಟ್ಟೆ ತಜ್ಞರ ಅಭಿಪ್ರಾಯದ ಮೇಲೆ ನಡೆಯುವುದಿಲ್ಲ, ಬದಲಿಗೆ ಗ್ರಾಹಕರಿಗೆ ಬೇಕಾದ ಅತ್ಯುತ್ತಮ ಗುಣಮಟ್ಟವನ್ನು ನೀಡುವ ಧೈರ್ಯಶಾಲಿಗಳ, ಪ್ರಾಮಾಣಿಕರ ಮೇಲೆ ನಡೆಯುತ್ತದೆ. ನಮ್ಮ ಉದ್ಯಮಶೀಲತೆ ಮತ್ತು ಶ್ರಮದ ಮೇಲೆ ನಂಬಿಕೆಯಿದ್ದರೆ ಇಡೀ ಉದ್ಯಮವನ್ನೇ ಬದಲಾಯಿಸಬಹುದು ಎಂಬುದಕ್ಕೆ ಹಮ್ದಿ ಉಲುಕಾಯಾ ಅವರೇ ಜೀವಂತ ಉದಾಹರಣೆ. ಕೆಲವೊಮ್ಮೆ ಅನೇಕರು ಕೈಲಾಗದು ಎಂದು ಬಿಟ್ಟು ಹೋದ ಸ್ಥಳದಲ್ಲೇ ಮತ್ಯಾರೋ ಬಂದು ಎಲ್ಲರೂ ಮೂಗಿನ ಮೇಲೆ ಬೆರಳು ಇಡುವಂತೆ, ಸಾಮ್ರಾಜ್ಯವನ್ನು ಕಟ್ಟುತ್ತಾರೆ. ಇವೆಲ್ಲ ಒಂದು ದಿನದಲ್ಲಿ ಆಗುವ ಕೆಲಸವಲ್ಲ. ಆದರೆ ಆತ್ಮವಿಶ್ವಾಸ, ಆತ್ಮಸ್ಥೈರ್ಯ ಮತ್ತು ಛಲ ಬಿಡದೆ ಪ್ರಯತ್ನಿಸುವ, ಮತ್ತೆ ಮತ್ತೆ ಗುರಿಯೆಡೆಗೆ ಸಾಗುವ ಮನಸ್ಥಿತಿ ಇದ್ದಾಗ ಯಾವುದೂ ಅಸಾಧ್ಯವಲ್ಲ.

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಪ್ರಜ್ಞಾನಂದಗೆ ₹ 50 ಲಕ್ಷ ಬಹುಮಾನ

ಚೆನ್ನೈ: ಪ್ರತಿಷ್ಠಿತ ನಾರ್ವೆ ಚೆಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡು ತವರಿಗೆ ಮರಳಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರನ್ನು ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಸೋಮವಾರ ಭೇಟಿಯಾಗಿ ಸನ್ಮಾನಿಸಿದರು. ತಮಿಳು ನಾಡು ಸರಕಾರದ ಪರವಾಗಿ 50 ಲಕ್ಷ ರು. ನಗದು ಬಹುಮಾನವನ್ನು ನೀಡಿದರು. ಜೂನ್ 6ರಂದು ಓಸ್ಲೋದಲ್ಲಿ ನಡೆದ ಪ್ರತಿಷ್ಠಿತ ನಾರ್ವೆ ಚೆಸ್‌ನ ಅಂತಿಮ ಸುತ್ತಿನ ಪಂದ್ಯದಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ ಪ್ರಜ್ಞಾನಂದ, ಈ ಪ್ರಶಸ್ತಿ ಪಡೆದ ಭಾರತದ ಮೊದಲ ಆಟಗಾರ ಎಂಬ ಹಿರಿಮೆಗೆ ಪಾತ್ರರಾಗಿದ್ದರು. ಸನ್ಮಾನ ಸಮಾರಂಭದಲ್ಲಿ, ಸಿಎಂ ವಿಜಯ್ ಅವರು ಪ್ರಜ್ಞಾನಂದ ಜತೆ ಚೆಸ್ ಕೂಡ ಆಡಿ ಗಮನ ಸೆಳೆದರು. ಈ ವೇಳೆ ಪ್ರಜ್ಞಾನಂದ ಅವರ ತಾಯಿ ನಾಗಲಕ್ಷ್ಮಿ ಕೂಡ ಇದ್ದರು. ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯುಡಿ) ಮತ್ತು ಕ್ರೀಡಾ ಅಭಿವೃದ್ಧಿ ಸಚಿವ ಆಧವ್ ಅರ್ಜುನ ಕೂಡ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸಿಎಂ ವಿಜಯ್ ಅವರೊಂದಿಗಿನ ಭೇಟಿಯ ನಂತರ ಸ್ಥಳೀಯ ಮಾಧ್ಯಮಗಳೊಂದಿಗೆ ಮಾತನಾಡಿದ ಪ್ರಜ್ಞಾನಂದ, 'ಮುಖ್ಯಮಂತ್ರಿಯವರ ಚೆಸ್ ಕೌಶಲ್ಯ ನಿಜವಾಗಿಯೂ ಆಶ್ಚರ್ಯವಾಯಿತು' ಎಂದು ಹೇಳಿದ್ದಾರೆ.

ಆ್ಯಂಡ್ರ್ಯೂ ಫ್ಲಿಂಟಾಫ್ ಸಿಡ್ನಿ ಥಂಡರ್ ಕೋಚ್

ಸಿಡ್ನಿ: ಇಂಗ್ಲೆಂಡ್ ತಂಡದ ಮಾಜಿ ಆಲ್‌ರೌಂಡರ್ ಆ್ಯಂಡ್ರ್ಯೂ ಫ್ಲಿಂಟಾಫ್ ಬಿಗ್ ಬ್ಯಾಷ್ ಲೀಗ್‌ನ ಸಿಡ್ನಿ ಥಂಡರ್ ತಂಡದ ನೂತನ ಮುಖ್ಯ ಕೋಚ್ ಆಗಿ ನೇಮಕ ಗೊಂಡಿದ್ದಾರೆ. ಫ್ರಾಂಚೈಸಿ ಫ್ಲಿಂಟಾಫ್ ರೊಂದಿಗೆ ಎರಡು ವರ್ಷಗಳ ಒಪ್ಪಂದ ಮಾಡಿ ಕೊಂಡಿದೆ. ಈ ಹಿಂದೆ ಸಿಡ್ನಿ ಥಂಡರ್ ತಂಡದ ಕೋಚ್ ಆಗಿ ಟ್ರೆವರ್ ಬೇಲಿಸ್ ಕಾಣಿಸಿಕೊಂಡಿದ್ದರು, ಇದೀಗ ಆ ಸ್ಥಾನಕ್ಕೆ ಫ್ಲಿಂಟಾಫ್ ಆಯ್ಕೆಯಾಗಿದ್ದಾರೆ. ಈ ಹುದ್ದೆಗಾಗಿ ಆಸ್ಟ್ರೇಲಿಯಾದ ಮಾಜಿ ಆಟಗಾರರಾದ ಶೇನ್ ವಾಟ್ಸನ್, ಡಾನ್ ಕ್ರಿಶ್ಚಿಯನ್ ಅವರಂತಹ ಪ್ರಮುಖ ಹೆಸರುಗಳು ರೇಸ್‌ನಲ್ಲಿದ್ದವು. ಆದರೆ ಫ್ರಾಂಚೈಸಿಯು ಫ್ಲಿಂಟಾಫ್ ಅವರ ಆಕ್ರಮಣಕಾರಿ ಶೈಲಿ ಮತ್ತು ನಾಯಕತ್ವದ ಗುಣಗಳಿಗೆ ಮಣೆ ಹಾಕಿದೆ. ಫ್ಲಿಂಟಾಫ್ ಈಗಾಗಲೇ ದಿ ಹಂಡ್ರೆಡ್ ಲೀಗ್, ಇಂಗ್ಲೆಂಡ್ ಕಿರಿಯರ ತಂಡಗಳ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

ಆಫ್ಘನ್ ವಿರುದ್ಧ ಏಕೈಕ ಟೆಸ್ಟ್: ಚೊಚ್ಚಲ ಪಂದ್ಯದಲ್ಲೇ ಮಿಂಚಿದ ಸುತಾರ್

ಭಾರತಕ್ಕೆ ದಾಖಲೆ ಅಂತರದ ಜಯ

ಮುಲ್ಲನ್‌ಪುರ: ಸ್ಪಿನ್ನರ್‌ಗಳ ಅಮೋಘ ಪ್ರದರ್ಶನದ ನೆರವಿನಿಂದ ಅಫ್ಘಾನಿಸ್ತಾನ ವಿರುದ್ಧ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ಇನಿಂಗ್ಸ್ ಮತ್ತು 300 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ.

ಇದು ಭಾರತದ ಅತೀ ದೊಡ್ಡ ಟೆಸ್ಟ್ ಗೆಲುವಾಗಿದೆ. ಇದಕ್ಕೂ ಮುನ್ನ 2018 ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಇನಿಂಗ್ಸ್ ಮತ್ತು 272 ಅಂತರದ ಗೆಲುವು ಸಾಧಿಸಿತ್ತು. ಯುವ ಸ್ಪಿನ್ನರ್ ಮಾನವ್ ಸುತಾರ್ ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್ ಪಡೆದರೆ, ದ್ವಿತೀಯ ಇನಿಂಗ್ಸ್‌ನಲ್ಲಿ ಕುಲ್‌ದೀಪ್ ಯಾದವ್ 3 ಮತ್ತು ವಾಷಿಂಗ್ಟನ್ ಸುಂದರ್ 4 ವಿಕೆಟ್‌ಗಳನ್ನು ಪಡೆದು ಆಫ್ಘನ್ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.

ಸಂಕ್ಷಿಪ್ತ ಸ್ಕೋರ್

ಭಾರತ ಪ್ರ.ಇನಿಂಗ್ಸ್: 568/8 ಡಿಕ್ಲೇರ್ಡ್ (ರಾಹುಲ್ 100, ಗಿಲ್ 126, ಪಂತ್ 81, ಸುಂದರ್)
ಆಫ್ಘನ್ ಪ್ರ. ಇನಿಂಗ್ಸ್: 152 ಆಲ್ ಔಟ್ (ರಹಮತ್ ಶಾ 60, ಸುತಾರ್ 33 ರನ್‌ಗೆ 6 ವಿಕೆಟ್)
ಆಫ್ಘನ್ ದ್ವಿ. ಇನಿಂಗ್ಸ್: 112 ಆಲ್ ಔಟ್ (ಸೇದಿಕುಲ್ಲಾ ಅಟಲ್ 42, ಸುಂದರ್ 36 ರನ್‌ಗೆ 4 ವಿಕೆಟ್, ಕುಲ್ದೀಪ್ 30 ರನ್‌ಗೆ 3 ವಿಕೆಟ್)

ಭಾರತ ಮೊದಲ ಇನಿಂಗ್ಸ್‌ನಲ್ಲಿ 8 ವಿಕೆಟ್ ನಷ್ಟಕ್ಕೆ 564 ರನ್ ಕಲೆ ಹಾಕಿ ಭಾನುವಾರ ಇನಿಂಗ್ಸ್ ಡಿಕ್ಲೇರ್ ಘೋಷಿಸಿತ್ತು. ಗುರಿ ಬೆನ್ನಟ್ಟಿದ ಅಫ್ಘಾನಿಸ್ತಾನ ಭಾನುವಾರ ದಿನದಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 113 ರನ್ ಗಳಿಸಿತ್ತು.

ಸೋಮವಾರ ಮೂರನೇ ದಿನದಾಟ ಆರಂಭಿಸಿದ ಆಫ್ಘನ್ ತಂಡಕ್ಕೆ ಸ್ಪಿನ್ನರ್ ಮಾನವ್ ಸುತಾರ್ ಇನ್ನಿಲ್ಲದಂತೆ ಕಾಡಿದರು. ಅಂತಿಮವಾಗಿ ತಂಡ 152 ರನ್‌ಗೆ ಆಲೌಟ್ ಆಯಿತು. 412 ರನ್ ಮುನ್ನಡೆ ಪಡೆದ ಭಾರತ ಫಾಲೋ ಆನ್ ಹೇರಿತು. ದ್ವಿತೀಯ ಇನಿಂಗ್ಸ್‌ನಲ್ಲಿ ಆಫ್ಘನ್ ಬ್ಯಾಟಿಂಗ್ ಇನ್ನಷ್ಟು ಕಳಪೆ ಮಟ್ಟದಿಂದ ಕೂಡಿದ ಕಾರಣ 112 ರನ್‌ಗೆ ಅದು ಆಲೌಟ್ ಆಯಿತು.

ದ್ವಿತೀಯ ಇನಿಂಗ್ಸ್ ವೇಳೆ ಬ್ಯಾಟಿಂಗ್ ಹೋರಾಟ ನಡೆಸಿಲೆತ್ನಿಸಿದ ಆರಂಭಕಾರ ಸೇದಿಕುಲ್ಲಾ ಅಟಲ್ 42 ರನ್ ಬಾರಿಸಿದರು. ಅವರನ್ನು ಹೊರತುಪಡಿಸಿ ರಹಮಾನುಲ್ಲಾ ಗುರ್ಬಾಜ್ 24 ರನ್ ಗಳಿಸಿದರು. ಒಟ್ಟಾರೆಯಾಗಿ ಮೂರು ಮಂದಿ ಮಾತ್ರ ತಂಡದ ಪರ ಎರಡಂಕಿ ದಾಟಿದರು.

ಭಾನುವಾರ ಮೂರು ವಿಕೆಟ್ ಪಡೆದಿದ್ದ ಮಾನವ್ ಸುತಾರ್ 3ನೇ ದಿನ ದಾಟದಲ್ಲಿಯೂ ಮತ್ತೆ 3 ವಿಕೆಟ್ ಕಿತ್ತರು. 43 ರನ್ ಗಳಿಸಿ ಬ್ಯಾಟಿಂಗ್ ಕಾಯ್ದುಕೊಂಡಿದ್ದ ರಹ್ಮತ್ ಶಾ ಅರ್ಧಶತಕ ಪೂರ್ತಿಗೊಳಿಸಿದರು. 135 ಎಸೆತ ಎದುರಿಸಿದ ಅವರು, 60 ರನ್ ಬಾರಿಸಿದರು. ತಂಡದ ಪರ ಅವರದ್ದೇ ಅತ್ಯಧಿಕ ಗಳಿಕೆಯಾಗಿತ್ತು.

ಮೊದಲ ಇನಿಂಗ್ಸ್‌ನ ಬೌಲಿಂಗ್ ವೇಳೆ ನೈಜ ಸಾಮರ್ಥ್ಯ ತೋರುವಲ್ಲಿ ಎಡವಿದ್ದ ವಾಷಿಂಗ್ಟನ್ ಸುಂದರ್ ಮತ್ತು ಅನುಭವಿ ಕುಲ್‌ದೀಪ್ ಯಾದವ್ ದ್ವಿತೀಯ ಇನಿಂಗ್ಸ್‌ನಲ್ಲಿ ಸಂಘಟಿತ ಬೌಲಿಂಗ್ ದಾಳಿ ನಡೆಸಿದರು. ಸುತಾರ್ ಮತ್ತು ಸಿರಾಜ್ ತಲಾ ಒಂದೊಂದು ವಿಕೆಟ್ ಪಡೆದರು.

ಮಿಂಚಿದ ಸುತಾರ್: ಮಾನವ್ ಸುತಾರ್ ಪ್ರಥಮ ಇನಿಂಗ್ಸ್‌ನಲ್ಲಿ 6 ವಿಕೆಟ್ ಪಡೆಯುವ ಮೂಲಕ ಭಾರತದ ಪರ ಚೊಚ್ಚಲ ಟೆಸ್ಟ್ ಇನಿಂಗ್ಸ್‌ನಲ್ಲಿ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ತೋರಿದ ಎರಡನೇ ಭಾರತೀಯ ಆಟಗಾರ ಎನಿಸಿದರು.

1988ರಲ್ಲಿ ಚೆನ್ನೈನಲ್ಲಿ ನಡೆದಿದ್ದ ವೆಸ್ಟ್ ಇಂಡೀಸ್ ವಿರುದ್ಧ ನರೇಂದ್ರ ಹಿರ್ವಾನಿ 61 ರನ್ ನೀಡಿ 8 ವಿಕೆಟ್ ಗಳಿಸಿದ್ದು ದಾಖಲೆಯಾಗಿದೆ. ಸುತಾರ್ ಅವರು ಚೊಚ್ಚಲ ಟೆಸ್ಟ್ ಪಂದ್ಯದಲ್ಲೇ ಐದು ವಿಕೆಟ್ ಪಡೆದ 10ನೇ ಭಾರತೀಯ ಬೌಲರ್ ಮತ್ತು ಏಳನೇ ಸ್ಪಿನ್ನರ್ ಎನಿಸಿಕೊಂಡರು.

ಗೆಲುವಿನ ಸಂಭ್ರಮದಲ್ಲಿ ಭಾರತೀಯ ಆಟಗಾರರು.

ಫಿಫಾ ವಿಶ್ವಕಪ್: ಹೊಸ ನಿಯಮಗಳು ಹತ್ತಾರು

ಮೆಕ್ಸಿಕೋ: ಈ ಬಾರಿಯ ಫಿಫಾ ವಿಶ್ವಕಪ್ ಕೇವಲ ತಂಡಗಳ ಸಂಖ್ಯೆಯಿಂದ ಮಾತ್ರವಲ್ಲ, ಆಟದ ನಿಯಮಗಳಿಂದಲೂ ಜಾಗತಿಕವಾಗಿ ಗಮನ ಸೆಳೆಯುತ್ತಿದೆ. ಇಂಟರ್‌ನ್ಯಾಷನಲ್ ಫುಟ್ಬಾಲ್ ಅಸೋಸಿಯೇಷನ್ ಬೋರ್ಡ್ ಈ ಬಾರಿ ಹೊಸ ನಿಯಮಗಳಿಗೆ ಅನುಮೋದನೆ ನೀಡಿದೆ.

ಈ ಸಲ ವಿಡಿಯೋ ಅಸಿಸ್ಟೆಂಟ್ ರೆಫರಿ (ವಿಎಆರ್) ವ್ಯವಸ್ಥೆಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಮೈದಾನದಲ್ಲಿ ರೆಫರಿಗಳು ತಪ್ಪು ನಿರ್ಧಾರಗಳನ್ನು ತೆಗೆದುಕೊಂಡರೆ, ವಿಎಆರ್ ಹಸ್ತಕ್ಷೇಪ ಮಾಡಬಹುದಾಗಿದೆ. ರೆಫರಿ ತಪ್ಪಾಗಿ ಎರಡನೇ ಹಳದಿ ಕಾರ್ಡ್ ನೀಡಿ ಆಟಗಾರನನ್ನು ಹೊರಹಾಕುವುದನ್ನು ತಡೆಯಲು ವಿಎಆರ್ ಮರುಪರಿಶೀಲನೆ ನಡೆಸಬಹುದು, ಹಾಗೆಯೇ ಆಫ್ ಸೈಡ್ ಅಥವಾ ರೆಫರಿ ತಪ್ಪಿನಿಂದ ಎದುರಾಳಿ ತಂಡಕ್ಕೆ ಸಿಕ್ಕ ಕಾರ್ನರ್ ಕಿಕ್ ಅನ್ನು ರದ್ದುಗೊಳಿಸಬಹುದು, ಸೆಟ್-ಪೀಸ್ (ಫ್ರೀ-ಕಿಕ್ ಅಥವಾ ಕಾರ್ನರ್) ಆರಂಭವಾಗುವ ಮುನ್ನವೇ ಆಟಗಾರರು ಮಾಡುವ ಫೌಲ್‌ಗಳನ್ನು ವಿಎಆರ್ ಪತ್ತೆ ಹಚ್ಚಬಹುದಾಗಿದೆ.

ಆಟಗಾರರು ಮೈದಾನದಲ್ಲಿ ತೋರುವ ಅಸಭ್ಯ ವರ್ತನೆಯನ್ನು ತಡೆಗಟ್ಟಲು ಈ ಬಾರಿ ಬೇರೆ ನಿಯಮಗಳನ್ನು ಜಾರಿಗೆ ತರಲಾಗಿದೆ. ರೆಫರಿ ಅಥವಾ ಎದುರಾಳಿ ಆಟಗಾರರೊಂದಿಗೆ ವಾಗ್ವಾದ ನಡೆಸುವಾಗ ಯಾವುದೇ ಆಟಗಾರ ಕೈ ಅಥವಾ ಜರ್ಸಿಯಿಂದ ಬಾಯಿ ಮುಚ್ಚಿಕೊಳ್ಳುವಂತಿಲ್ಲ. ಜನಾಂಗೀಯ ಅಥವಾ ನಿಂದನಾತ್ಮಕ ಪದಗಳನ್ನು ಮರೆ ಮಾಚುವುದನ್ನು ತಡೆಯಲು ಈ ನಿಯಮವನ್ನು ತರಲಾಗಿದ್ದು, ಇದನ್ನು ಉಲ್ಲಂಘಿಸಿದರೆ ನೇರ ರೆಡ್‌ಕಾರ್ಡ್ ನೀಡಲಾಗುತ್ತದೆ. ಕೇವಲ ತಂಡದ ನಾಯಕ ಮಾತ್ರ ರೆಫರಿ ಬಳಿ ಬಂದು ನಿರ್ಧಾರಗಳನ್ನು ಪ್ರಶ್ನಿಸಬಹುದು, ಉಳಿದ ಆಟಗಾರರು ರೆಫರಿಯನ್ನು ಮುತ್ತುವರಿದರೆ ತಕ್ಷಣ ಹಳದಿ ಕಾರ್ಡ್ ನೀಡಲಾಗುತ್ತದೆ.

ಈ ಬಾರಿಯ ಫಿಫಾ ವಿಶ್ವಕಪ್ ನಡೆಯುತ್ತಿರುವುದು ಅಲ್ಲಿನ ಬೇಸಿಗೆ ಕಾಲದಲ್ಲಿ ಆಗಿರುವ ಕಾರಣ, ಕಡ್ಡಾಯ ಬ್ರೇಕ್ ನಿಯಮ ಜಾರಿಗೆ ತರಲಾಗಿದೆ. ಹವಾಮಾನ ಹೇಗಿದ್ದರೂ ಪಂದ್ಯದ ಪ್ರತೀ ಅರ್ಧದ 22ನೇ ನಿಮಿಷದಲ್ಲಿ ಆಟಗಾರರಿಗೆ 3 ನಿಮಿಷಗಳ ಕಡ್ಡಾಯ ಡ್ರಿಂಕ್ಸ್ ಬ್ರೇಕ್ ವಿರಾಮ ನೀಡಲಾಗುತ್ತದೆ. ಗಾಯದ ನೆಪದಲ್ಲಿ ಆಟವನ್ನು ನಿಲ್ಲಿಸುವ ಔಟ್‌ಫೀಲ್ಡ್ ಆಟಗಾರರು ಮೈದಾನದ ಹೊರಗೆ ಕನಿಷ್ಠ 60 ಸೆಕೆಂಡುಗಳ ಕಾಲ ಚಿಕಿತ್ಸೆ ಪಡೆಯಬೇಕು, ಆದರೆ ತಲೆಗೆ ಪೆಟ್ಟಾದಾಗ ಅಥವಾ ಗೋಲ್‌ಕೀಪರ್‌ಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ.

ಫಿಫಾ ವಿಶ್ವಕಪ್‌ಗಾಗಿ ಸಿದ್ಧಪಡಿಸಿದ ವಿಎಆರ್ ವ್ಯವಸ್ಥೆ ಪರಿಶೀಲಿಸುತ್ತಿರುವ ಅಧಿಕಾರಿಗಳು.

ಮುಂಬೈ ತೊರೆಯಲು ಸೂರ್ಯ ಸಿದ್ಧತೆ?

ಮುಂಬಯಿ: ಟೀಮ್ ಇಂಡಿಯಾದ ಟಿ20 ನಾಯಕತ್ವ ಕಳೆದುಕೊಂಡಿರುವ ಸೂರ್ಯಕುಮಾರ್ ಯಾದವ್ ಅವರು ಇದೀಗ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದಿಂದ ಹೊರಹೋಗಲಿದ್ದಾರೆ ಎಂಬ ಸುದ್ದಿಯೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಲಾರಂಭಿಸಿವೆ. ಇದಕ್ಕೆ ಪುಷ್ಠಿ ಎಂಬಂತೆ ಸೂರ್ಯಕುಮಾರ್ ಅವರ ಇನ್‌ಸ್ಟಾಗ್ರಾಮ್‌ನಲ್ಲಿ ಮುಂಬೈ ಇಂಡಿಯನ್ಸ್‌ನ ಎಲ್ಲ ಪೋಸ್ಟ್‌ಗಳು ಮಾಯವಾಗಿರುವುದು ಪ್ರಮುಖ ಕಾರಣ ಎನಿಸಿದೆ. ನೆಟ್ಟಿಗರು ಸೂರ್ಯಕುಮಾರ್ ಇನ್‌ಸ್ಟಾಗ್ರಾಮ್‌ನಲ್ಲಿ ಅನುಸರಿಸುತ್ತಿರುವ ಖಾತೆಗಳಲ್ಲಿ ಹುಡುಕಾಟ ನಡೆಸಿದಾಗ, ಮುಂಬೈ ಇಂಡಿಯನ್ಸ್ ಮತ್ತು ಹಾರ್ದಿಕ್ ಪಾಂಡ್ಯ ಅವರ ಖಾತೆಗಳು ಕಂಡುಬಂದಿಲ್ಲ. ಸೂರ್ಯಕುಮಾರ್ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹೊಂದಿದ್ದ ಮುಂಬೈ ತಂಡದ ಏಕೈಕ ಫೋಟೋವೆಂದರೆ ಭಾರತೀಯ ಕ್ರಿಕೆಟ್‌ನ ಇಬ್ಬರು ದೊಡ್ಡ ನಾಯಕರಾದ ರೋಹಿತ್ ಶರ್ಮಾ ಮತ್ತು ಎಂಎಸ್ ಧೋನಿ ಅವರೊಂದಿಗೆ ಕಾಣಿಸಿಕೊಂಡಿದ್ದ ಫೋಟೋ ಮಾತ್ರವಾಗಿದೆ.

ಬಾಂಗ್ಲಾ ಸರಣಿಗೆ ಆಸೀಸ್: ಜೋಶ್ ಇಂಗ್ಲಿಸ್ ಹಂಗಾಮಿ ನಾಯಕ

ಸಿಡ್ನಿ: ಬಾಂಗ್ಲಾದೇಶ ವಿರುದ್ಧದ ಮುಂಬರುವ ಏಕದಿನ ಸರಣಿಗೆ ಆಸ್ಟ್ರೇಲಿಯಾ ತಂಡವು ಟ್ರಾವಿಸ್ ಹೆಡ್ ಮತ್ತು ಮಿಚೆಲ್ ಮಾರ್ಷ್ ಅನುಪಸ್ಥಿತಿಯಲ್ಲಿ ಆಡಲಿದ್ದು, ಜೋಶ್ ಇಂಗ್ಲಿಸ್ ಹಂಗಾಮಿ ನಾಯಕರಾಗಿ ಆಯ್ಕೆಯಾಗಿದ್ದಾರೆ. ಪಾಕಿಸ್ತಾನ ವಿರುದ್ಧದ ಏಕದಿನ ಪಂದ್ಯಗಳಿಗೆ ಮಾತ್ರ ಆಯ್ಕೆಯಾಗಿದ್ದ ಆಲಿವರ್ ಪೀಕ್ ಮತ್ತು ಮ್ಯಾಟ್ ಶಾರ್ಟ್ ಅವರನ್ನು ಬಾಂಗ್ಲಾದೇಶ ಏಕದಿನ ಸರಣಿಗೆ ಸೇರಿಸಿಕೊಳ್ಳಲಾಗಿದೆ.

ಇಲ್ಲಿಯವರೆಗೆ ಟೆಸ್ಟ್ ಪಂದ್ಯಗಳಲ್ಲಿ ಮಾತ್ರ ಕಾಣಿಸಿಕೊಂಡಿರುವ ಆಫ್ ಸ್ಪಿನ್ನರ್ ಟಾಡ್ ಮರ್ಫಿ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಲಾಹೋರ್‌ನಲ್ಲಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ಮಂಡಿ ರಜ್ಜು ಗಾಯದಿಂದ ಬಳಲುತ್ತಿದ್ದ ಲೆಗ್ ಸ್ಪಿನ್ನರ್ ತನ್ವೀರ್ ಸಂಘ ಅವರ ಸ್ಥಾನವನ್ನು ಮರ್ಫಿ ತುಂಬಿದ್ದಾರೆ.

ರಾಷ್ಟ್ರೀಯ ಆಯ್ಕೆದಾರ ಟೋನಿ ಡೋಡೆಮೈಡ್ ಅವರ ಪ್ರಕಾರ, ಹೆಡ್ ಅವರನ್ನು ಆರಂಭದಲ್ಲಿ ಬಾಂಗ್ಲಾದೇಶ ವಿರುದ್ಧದ ಏಕದಿನ ಮತ್ತು ಟಿ20 ಎರಡಕ್ಕೂ ಆಯ್ಕೆ ಮಾಡಲಾಗಿತ್ತು ಆದರೆ ಅವರು ವೈಯಕ್ತಿಕ ಕಾರಣ ನೀಡಿ ಸರಣಿಯಿಂದ ಹಿಂದೆ ಸರಿಯುವುದಾಗಿ ಹೇಳಿದರು. ಮಾರ್ಷ್ ಅವರ ಪಾದದ ಗಾಯದಿಂದಾಗಿ ಅವರು ತಂಡದಿಂದ ಹೊರಗುಳಿದಿದ್ದಾರೆ, ಸಮಯಕ್ಕೆ ಚೇತರಿಸಿಕೊಳ್ಳಲಿಲ್ಲ, ಆದಾಗ್ಯೂ ಅವರು ಟಿ20ಗಳಿಗೆ ತಯಾರಿ ನಡೆಸಲು ಢಾಕಾದಲ್ಲಿ ತಂಡವನ್ನು ಸೇರಲಿದ್ದಾರೆ ಎಂದಿದ್ದಾರೆ.

ರಿಲೇ ಮೆರೆಡಿತ್ ಮತ್ತು ಬಿಲ್ಲಿ ಸ್ಟಾನ್ಲೇಕ್ ಬದಲಿಗೆ ಬೆನ್ ದ್ವಾರಶುಯಿಸ್ ಮತ್ತು ಕ್ಸೇವಿಯರ್ ಬಾರ್ಟ್ಲೆಟ್ ಕೂಡ ತಂಡವನ್ನು ಸೇರುತ್ತಾರೆ. ಮೆರೆಡಿತ್ ಟಿ20ಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮಿಚೆಲ್ ಸ್ಟಾರ್ಕ್ ಮತ್ತು ಜೋಶ್ ಹೇಜಲ್‌ವುಡ್ ಅವರ ಅನುಪಸ್ಥಿತಿಯಲ್ಲಿ, ಅನುಭವದ ಕೊರತೆಯನ್ನು ಹೊಂದಿದೆ.

ಟಾಕೀಸ್

ಪ್ರೇಮದ ಊರಲ್ಲಿ ಮಧುರಗಾನ

ಕನ್ನಡ ಚಿತ್ರರಂಗದಲ್ಲಿ ಅಮ್ಮನ ಕುರಿತು ಸಾಕಷ್ಟು ಹಾಡುಗಳು ಬಂದಿವೆ. ಆದ್ರೆ ಅಪ್ಪನ ಪ್ರೀತಿಯನ್ನು ಸಂಭ್ರಮಿಸುವ ಹೊಸ ಹಾಡು ಸಿನಿಮಾಪ್ರೇಮಿಗಳನ್ನು ಸೆಳೆಯುತ್ತಿದೆ. ಅದುವೇ ಅವ್ವನಂತ ಅಪ್ಪನಿವನು. ಮ್ಯೂಸಿಕಲ್ ಲವ್ ಸ್ಟೋರಿ ಕಥಾಹಂದರ ಹೊಂದಿರುವ ಪ್ರೇಮದ ಊರಲ್ಲಿ ಸಿನಿಮಾತಂಡ ಇದೀಗ ಅಪ್ಪನ ಕುರಿತಾದದ ಚೆಂದದ ಹಾಡನ್ನು ಬಿಡುಗಡೆ ಮಾಡಿದೆ.

ನಿರ್ದೇಶಕ ಮನೋಜ್ ಕುಮಾರ್ ಕ್ಯಾಚಿ ಮ್ಯಾಚಿ ಪದ ಪೋಣಿಸಿ ಅಪ್ಪನ ಶ್ರಮವನ್ನು ವರ್ಣಿಸಿದ್ದಾರೆ. ಸಿದ್ಧಾರ್ಥ್ ಸುಂದರ್ ಹಾಡಿಗೆ ಧ್ವನಿಯಾಗಿದ್ದು, ಸುನಾದ್ ಗೌತಮ್ ಸಂಗೀತ ಸಂಯೋಜಿಸಿದ್ದಾರೆ. ಅವ್ವನಂತ ಅಪ್ಪನಿವನು ಗೀತೆಯಲ್ಲಿ ಅಪ್ಪನಾಗಿ ರಂಗಾಯಣ ರಘು ಹಾಗೂ ಮಗನಾಗಿ ಶ್ರೀರಾಮ್ ನಟಿಸಿದ್ದಾರೆ. ರಂಗಾಯಣ ರಘು ಕೂಡ ಹಾಡಿಗೆ ಹೆಜ್ಜೆ ಹಾಕಿರುವುದು ವಿಶೇಷ.

ಪ್ರೇಮದ ಊರಲ್ಲಿ ಸಿನಿಮಾದಲ್ಲಿ ಶ್ರೀರಾಮ್ ನಾಯಕನಾಗಿ ನಟಿಸಿದ್ದು, ನಟಿಯರಾದ ತಪಸ್ವಿನಿ ಹಾಗೂ ರಮಿಕಾ ಜತೆಯಾಗಿದ್ದಾರೆ. ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ಮನೋಜ್ ಕುಮಾರ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ವೆನಿಲ್ಲಾ ಎಂಟರ್‌ಟೇನ್‌ಮೆಂಟ್, ಜಾನಕಮ್ಮ ಪ್ರೊಡಕ್ಷನ್‌ನಲ್ಲಿ ಮಮತಾ ದೇವೇಂದ್ರ, ಪ್ರಶಾಂತ್ ಹಾಗೂ ರಮೇಶ್ ನಿರ್ಮಾಣ ಮಾಡಿದ್ದಾರೆ. ಸುನಾದ ಗೌತಮ್ ಸಂಗೀತ ನಿರ್ದೇಶನ, ರಾಜ್ಕಾಂತ್ ಎಸ್.ಕೆ. ಛಾಯಾಚಿತ್ರಗ್ರಹಣ, ಹರ್ಷಿತ್ ಪ್ರಭು ಸಂಕಲನ ಚಿತ್ರಕ್ಕಿದೆ.

ಟಾಕ್ಸಿಕ್ ಮೇಕಿಂಗ್ ಝಲಕ್

ಟಾಕ್ಸಿಕ್ ಆರಂಭದಿಂದಲೂ ಸಖತ್ ಸದ್ದು ಮಾಡುತ್ತಿದೆ. ಗೀತು ಮೋಹನ್ ದಾಸ್ ನಿರ್ದೇಶನದ ಟಾಕ್ಸಿಕ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿ ಮೂಡಿಬರುತ್ತಿದ್ದು ಹೊಸ ದಾಖಲೆ ಬರೆಯುವ ನಿರೀಕ್ಷೆ ಮೂಡಿ ಸಿದೆ. ನಿರ್ದೇಶಕಿ ಗೀತು ಮೋಹನ್ ದಾಸ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಈ ಪ್ರಯುಕ್ತ ಟಾಕ್ಸಿಕ್ ಚಿತ್ರತಂಡ ಸಿನುಮಾದ ಮೇಕಿಂಗ್ ಝಲಕ್ ಹಂಚಿ ಕೊಂಡಿದೆ. ಸಿನಿಮಾ ಶೂಟಿಂಗ್‌ನಲ್ಲಿನ ಮೇಕಿಂಗ್ ವೀಡಿಯೊಸ್ ಗಮನ ಸೆಳೆಯುತ್ತಿದೆ. ಸಿಮಾದ ಸಾರಥಿ ಗೀತು ಮೋಹನ್ ದಾಸ್ ಶೂಟಿಂಗ್ ಅಖಾಡದಲ್ಲಿ ಎಷ್ಟು ಆಕ್ಟೀವ್ ಆಗಿ ದ್ದಾರೆ ಎಂಬುದು ಈ ವೀಡಿಯೊದಲ್ಲಿ ತಿಳಿಯುತ್ತದೆ. ಯಶ್ ಅಂತೆಯೇ ಗೀತು ಮೋಹನ್ ದಾಸ್ ಕೂಡ ಸಿನಿಮಾದ ಕೇಂದ್ರ ಬಿಂದುವಾಗಿದ್ದಾರೆ. ಟಾಕ್ಸಿಕ್ ತಾರಾಗಣದ ಮೂಲಕವೂ ಗಮಮಸೆಳೆಯುತ್ತಿದೆ. ಈಗಾಗಲೇ ಸಿನಿಮಾದ ಒಂದೊಂದೇ ಪಾತ್ರದ ಪರಿಚಯ ಮಾಡಿರುವ ಚಿತ್ರತಂಡ ಸಿನಿಮಾದ ಬಗ್ಗೆ ಕುತೂಹಲ ದುಪ್ಪಟ್ಟು ಮಾಡಿದೆ. ಕಿಯಾರಾ ಅಡ್ವಾಣಿ, ನಯನತಾರಾ, ಹುಮಾ ಖುರೇಷಿ, ತಾರಾ ಸುತಾರಿಯಾ, ರುಕ್ಮಿಣಿ ವಸಂತಗ ಹೀಗೆ ಎಲ್ಲಾ ಪಾತ್ರಗಳು ಗಮನಸೆಳೆದಿವೆ. ಆ ಬಳಿಕ ಟೀಸರ್ ಬಿಡುಗಡೆ ಮಾಡಿದ ಚಿತ್ರತಂಡದ ಸಿನಿಪ್ರಿಯರಿಗೆ ಭರ್ಜರಿ ಉಡುಗೊರೆ ನೀಡಿತು. ಯಶ್, ರಾಯನ ಅವತಾರದಲ್ಲಿ ಕಾಣಿಸಿಕೊಂಡು ಗಮನಸೆಳೆದರು. ಟಾಕ್ಸಿಕ್ ಆಗಸ್ಟ್ ವೇಳೆಗೆ ತೆರೆಗೆ ಬರಲಿದೆ.

ಅಂಬರ ಗುಡ್ಡದಲ್ಲಿ ಚಿಣ್ಣರ ಚಿಲಿಪಿಲಿ

ಚಂದನವನದಲ್ಲಿ ಅಪರೂಪಕ್ಕೆ ಎಂಬಂತೆ ಮಕ್ಕಳ ಸಿನಿಮಾಗಳು ಮೂಡಿಬರುತ್ತಿವೆ. ಅಂತೆಯೇ ಈಗ ಮಕ್ಕಳ ಗುಡ್ಡ ಸಿನಿಮಾ ನಿರ್ಮಾಣವಾಗಿದ್ದು, ಹೊಸ ತಂಡವೊಂದು ಮಕ್ಕಳ ಸಿನಿಮಾ ಮೂಲಕ ಸಿನಿಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದ್ದಾರೆ. ಅಂಬರ ಗುಡ್ಡ ಶೀರ್ಷಿಕೆಯಲ್ಲಿ ಸಿನಿಮಾ ಬಿಡುಗಡೆಯಾಗಲಿದೆ. ವಿಷ್ಣುತೇಜ ಕಥೆ ಬರೆದು ಸಿನಿಮಾ ನಿರ್ದೇಶನ ಮಾಡಿದ್ದಾರೆ.

ಸದ್ಯ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಅಂಬರ ಗುಡ್ಡಕ್ಕೆ ಪ್ರವಾಸಕ್ಕೆಂದು ಹೋಗುವ ಮಕ್ಕಳು ಏನೆಲ್ಲ ಸವಾಲುಗಳನ್ನು ಎದಿರಿಸುತ್ತಾರೆ ಹಾಗೂ ಏನೆಲ್ಲ ಕಷ್ಟಗಳು ಎದುರಾಗುತ್ತೆ ಎನ್ನುವುದನ್ನು ಟ್ರೇಲರ್ ನಲ್ಲಿ ಕಟ್ಟಿಕೊಡಲಾಗಿದೆ.

ವಿಷ್ಣು ತೇಜ ನಿರ್ದೇಶನದ ಜತೆಗೆ ಪ್ರಮುಖ ಪಾತ್ರದಲ್ಲಿಯೂ ಕಾಣಿಸಿಕೊಂಡಿದ್ದು, ನಿರ್ಮಾಣದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಉಳಿದಂತೆ ಅದ್ಭುತ ಪ್ರತಿಭೆಯ ಮಕ್ಕಳು ಅಂಬರ ಗುಡ್ಡ ಸಿನಿಮಾದಲ್ಲಿ ನಟಿಸಿದ್ದಾರೆ. ತನಿಷಾ ಗೌಡ, ಖುಷಿ ಗೌಡ, ಗೀತಾ, ಚಂದ್ರು, ಗಣೇಶ ಸೇರಿದಂತೆ ಹಲವು ತಾರಾಗಣದಲ್ಲಿದ್ದಾರೆ.

ಮೊದಲ ಬಾರಿಗೆ ಸಿನಿಮಾದಲ್ಲಿ ನಟಿಸಿದ್ದೇವೆ. ಜತೆಗೆ ಕಾಡಿನಲ್ಲಿ ಶೂಟಿಂಗ್ ಮಾಡುವಾಗ ತುಂಬಾ ಕಷ್ಟವಾಗಿತ್ತು, ತುಂಬಾ ಮಳೆ ಸುರಿಯುತ್ತಿತ್ತು ಎಂದು ಮಕ್ಕಳು ಸಿನಿಮಾದ ಬಗ್ಗೆ ಸಂತಸದಿಂದ ನುಡಿದರು.

ಎಲ್ಲಾ ಮಕ್ಕಳನ್ನು ಒಟ್ಟಿಗೆ ಸೇರಿಸಿ ಶೂಟಿಂಗ್ ಮಾಡಿರುವುದು ಸಾಹಸವೇ ಆಗಿತ್ತು. ಮಕ್ಕಳನ್ನು ನಿಭಾಯಿಸುವುದು ಕಷ್ಟಕರವಾಗಿತ್ತು. ಒಬ್ಬರು ಒಂದು ರೀತಿಯ ತರ್ಲೆ, ತುಂಟಾಟ ಮಾಡುತ್ತಿದ್ದರು. ಶೂಟಿಂಗ್ ಮಾಡುವಾಗ ಮಗಳಿಗೆ ಹಾವು ಕಚ್ಚಿತ್ತು. ಬಳಿಕ ಚಿಕಿತ್ಸೆ ಕೊಡಿಸಿ ಮತ್ತೆ ಶೂಟಿಂಗ್ ಮಾಡಿ ಮುಗಿಸಿದೆವು. ಈಗ ರಿಲೀಸ್‌ಗೆ ರೆಡಿಯಾಗಿದ್ದೇವೆ ಎಂದು ನಿರ್ದೇಶಕ ವಿಷ್ಣು ತೇಜ ಹೇಳಿದರು. ಆಕಾಶ್ ಪರ್ವ ಸಂಗೀತ ನಿರ್ದೇಶನ, ದೀಪಕ್ ಕುಮಾರ್ ಛಾಯಾಗ್ರಹಣವಿದೆ ಈ ಚಿತ್ರಕ್ಕಿದೆ. ಕೊಲ್ಲೂರು ಮೂಕಾಂಬಿಕೆ ಫಾರೆಸ್ಟ್ ಕುಂದಾಪುರ, ಶಿವಮೊಗ್ಗ, ಕೊಡಚಾದ್ರಿ, ಗೋಕರ್ಣ ಸುತ್ತ ಮುತ್ತ ಶೂಟಿಂಗ್ ನಡೆಸಲಾಗಿದೆ.

ಬಾಲನ್ ದಿ ಬಾಯ್ ಟ್ರೇಲರ್ ರಿಲೀಸ್

ಕೆವಿಎನ್ ಸಾಲು ಸಾಲು ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿದೆ. ಅದರಲ್ಲಿ ಮಲೆಯಾಳಂನ ಬಾಲನ್ ದಿ ಬಾಯ್ಸ್ ಸಿನಿಮಾವೂ ಒಂದು. ಈ ಹಿಂದೆ ಮಂಜುಮ್ಮೆಲ್ ಬಾಯ್ಸ್ ಸಿನಿಮಾ ನಿರ್ದೇಶನ ಮಾಡಿದ್ದ ಚಿದಂಬರಂ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಬಾಲನ್ ದಿ ಬಾಯ್ ಸಸ್ಪೆನ್ಸ್, ಥ್ರಿಲ್ಲರ್, ಎಮೋಷನ್ಸ್ ಅಂಶಗಳನ್ನು ಒಳ ಗೊಂಡಿದೆ. ಈ ಚಿತ್ರವನ್ನು ಕೆವಿಎನ್ ಅಂತಾರಾಷ್ಟ್ರೀಯ ವೇದಿಕೆಯಾದ ಕಾನ್ಸ್ ಚಲನ ಚಿತ್ರೋತ್ಸವಕ್ಕೆ ತೆಗೆದುಕೊಂಡು ಹೋಗಿದೆ. ಇತ್ತೀಚಿನ ಈ ಸಿನಿಮೋತ್ಸವದಲ್ಲಿ ಬಾಲನ್ ದಿ ಬಾಯ್ಸ್ ಚಿತ್ರ ಯಶಸ್ವಿ ಯಾಗಿ ಪ್ರದರ್ಶನಗೊಂಡಿದೆ. ಓರ್ವ ಬಾಲಕನ ಸುತ್ತ ಸಾಗುವ ಕಥೆಗೆ ಸಸ್ಪೆನ್ಸ್, ಥ್ರಿಲ್ ಅಂಶಗಳನ್ನು ಬೆರೆಸಿ ಕಟ್ಟಿಕೊಡಲಾಗಿದೆ. ಮಲೆಯಾಳಂ, ಕನ್ನಡ, ತೆಲುಗು ಹಾಗೂ ತಮಿಳು ಭಾಷೆಯಲ್ಲಿ ಟ್ರೇಲರ್ ಬಿಡುಗಡೆ ಮಾಡಲಾಗಿದೆ. ಈ ಚಿತ್ರವು ಮಲೆಯಾಳ, ಹಿಂದಿ, ತೆಲುಗು, ತಮಿಳು ಹಾಗೂ ಕನ್ನಡದಲ್ಲಿ ಇದೇ 19ರಂದು ತೆರೆಗೆ ಬರಲಿದೆ.